ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಒರಿಯಾ ಕಾದಂಬರಿ

ಮಣ್ಣಿನ ಮನುಷ್ಯ

ಕಾಲಿಂದೀಚರಣ ಪಾಣಿಗ್ರಾಹಿ

ಅನುವಾದಕರು

ಗೌರೀಶ ಕಾಯ್ಕಿಣಿ



ಮಣ್ಣಿನ ಮನುಷ್ಯ

ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಒರಿಯಾ ಕಾದಂಬರಿ

ಮಣ್ಣಿನ ಮನುಷ್ಯ

ಕಾಲಿಂದೀಚರಣ ಪಾಣಿಗ್ರಾಹಿ

ಅನುವಾದಕರು
ಗೌರೀಶ ಕಾಯ್ಕಿಣಿ

ಸಾಹಿತ್ಯ ಅಕಾದೆಮಿ

Mannina Manushya : Kannada translation by Gourish Kaikini of Kalindicharan Panigrahi's award-winning Oriya novel *Matir Manish*, Sahitya Akademi, 2024, Rs.180/-

ಕೃತಿ ಸ್ವಾಮ್ಯ	: © ಸಾಹಿತ್ಯ ಅಕಾದೆಮಿ 2024	© Copyright	: Sahitya Akademi 2024
ಲೇಖಕರು	: ಕಾಲಿಂದೀಚರಣ ಪಾಣಿಗ್ರಾಹಿ	Author	: Kalindicharan Panigrahi
ಅನುವಾದಕರು	: ಗೌರೀಶ ಕಾಯ್ಕಿಣಿ	Translator	: Gourish Kaikini
ಪ್ರಕಾರ	: ಕಾದಂಬರಿ	Genre	: Novel
ಪ್ರಕಟಣೆ	: ಸಾಹಿತ್ಯ ಅಕಾದೆಮಿ	Published by	: Sahitya Akademi
ಮೊದಲ ಮುದ್ರಣ	: 1962	First Edition	: 1962
ಎರಡನೇ ಮುದ್ರಣ	: 2024	Second Edition	: 2024

ISBN : 978-93-6183-778-4

ಬೆಲೆ : ನೂರ ಎಂಭತ್ತು ರೂಪಾಯಿಗಳು

ಸಾಹಿತ್ಯ ಅಕಾದೆಮಿ

ಮುಖ್ಯ ಕಛೇರಿ : ರವೀಂದ್ರ ಭವನ, 35, ಫಿರೋಜಶಾಹ ರಸ್ತೆ, ನವದೆಹಲಿ 110 001
secretary@sahitya-akademi.gov.in, 011-2338 6626 / 27 / 28

ಮಾರಾಟ ವಿಭಾಗ : 'ಸ್ವಾತಿ', ಮಂದಿರ ಮಾರ್ಗ, ನವದೆಹಲಿ 110 001
sales@sahitya-akademi.gov.in, 011-2374 5297 / 2336 4204

ಕೋಲ್ಕತ್ತ : 4, ಡಿ.ಎಲ್.ಖಾನ್ ರಸ್ತೆ, ಕೋಲ್ಕತ್ತ 700 025
rs.rok@sahitya-akademi.gov.in, 033-2419 1683 / 2419 1706

ಚೆನ್ನೈ : 443, ಗುಣ ಕಾಂಪ್ಲೆಕ್ಸ್, ಅಣ್ಣಾಸಾಲೈ, ತೇನಾಂಪೇಟ್ಟೈ, ಚೆನ್ನೈ 600 018
chennaioffice@sahitya-akademi.gov.in, 044-2431 1741 / 2435 4815

ಮುಂಬೈ : 172, ಮುಂಬೈ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬೈ 400 014
rs.rom@sahitya-akademi.gov.in, 022-22413 5744 / 2413 1948

ಬೆಂಗಳೂರು : ಕಲಾಗ್ರಾಮದ ಎದುರು, ಹಳೆ ವರ್ತುಲ ರಸ್ತೆ, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಬೆಂಗಳೂರು 560 056
rs.rob@sahitya-akademi.gov.in, 080-2224 5152 / 2213 0870

Coverpage : Sowmya Kalyankar

Typeset : Neethu Graphics, Bengaluru | Printing : Keerthi Printers, Bengaluru

Website:http://www.sahitya-akademi.gov.in

ಉಪೋದ್ಘಾತ

ಶ್ರೀ ಕಾಲಿಂದೀಚರಣ ಪಾಣಿಗ್ರಾಹಿಯವರು ಬರೆದ ಈ "ಮಾಟಿರ ಮಾಣಿಸ" ("ಮಣ್ಣಿನ ಮನುಷ್ಯ") ಎಂಬ ಪುಸ್ತಕವು ಹಳ್ಳಿಯ ಬಾಳಿನ ಚಿತ್ರವನ್ನು ಕೊಡುತ್ತದೆ. ಅಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಬಹುಮಟ್ಟಿಗೆ ಪರಿಮಿತಿ ಹಾಕಿದ್ದರೂ ಮನುಷ್ಯ –ಮನುಷ್ಯರ ನಡುವಿನ ಹೆಚ್ಚಿನ ಕೋಮಲ ಹಾಗೂ ಉತ್ತಮ ಸಂಬಂಧ ಬಾಂಧವ್ಯಗಳು ಇನ್ನೂ ಉಳಿದಿರುತ್ತವೆ. ಈ ಪುಸ್ತಕ ಕೆಲವು ವರ್ಷಗಳ ಹಿಂದೆಯೇ ಬರೆಯಲ್ಪಟ್ಟಿತು; ಆಗ ಗಾಂಧೀಜಿಯವರ ನೇತೃತ್ವದಲ್ಲಿ ಗ್ರಾಮಜೀವನವನ್ನು ಆದರ್ಶರೂಪವಾಗಿ ನೋಡಲಾಗುತ್ತಿತ್ತು. ಅಂಥ ಜೀವನವೇ ಸಾಧಾರಣ ಧರ್ಮವಾಗುವುದೆಂಬ ಆಶೆಗಳನ್ನೂ ಉಂಟುಮಾಡಲಾಗಿತ್ತು. ಆದರೆ ಪರಿಸ್ಥಿತಿಯ ಒತ್ತಡದಡಿಗೆ ಆ ಜೀವನವು, ಆದರ್ಶವಾಗಿ ಭಾವಿಸಿದ್ದು, ಈಗ ವೇಗದಿಂದ ಬದಲಾಗುತ್ತಿದೆ; ನಾಗರೀಕರಣವು ಇಂದಿನ ಸರ್ವಸಾಧಾರಣ ಧರ್ಮವಾಗಿದೆ. ಆದಾಗ್ಯೂ ಶ್ರೀ ಪಾಣಿಗ್ರಾಹಿಯವರ ಕಾದಂಬರಿಯು, ಒಡಿಸ್ಸಾದ ಹಳ್ಳಿಗಳಲ್ಲಿಯ ಕೌಟುಂಬಿಕ ಜೀವನವನ್ನು ಅರಿತುಕೊಂಡ ಸಮಾಧಾನವನ್ನು ಕೊಡಬಲ್ಲದು. ಅಲ್ಲದೆ ಭಾರತೀಯ ಜೀವನದಲ್ಲಿ ಅವಿಭಕ್ತ ಕುಟುಂಬವು ಈವರೆಗು ಕಾಪಾಡಿಕೊಂಡು ಬಂದ ಹೆಚ್ಚಿನ ಕೋಮಲ ಮತ್ತು ಉತ್ತಮ ಮಾನವ್ಯದ ಗುಣಗಳ ಕುರಿತು ಸಹಾನುಭೂತಿ ಮತ್ತು ಆದರದ ಭಾವನೆಗಳನ್ನು ಜಾಗೃತಗೊಳಿಸಬಹುದು,

ಶ್ರೀ ಕಾಲಿಂದೀಚರಣ ಪಾಣಿಗ್ರಾಹಿಯವರು ಲೇಖಕರ ಆಧುನಿಕ ಪೀಳಿಗೆಗೆ ಸೇರಿದವರು. ಈ ಪೀಳಿಗೆಯವರು ಸಾಂಪ್ರದಾಯಿಕ ಬದುಕಿನಿಂದ ಸಿಡಿದು ನಿಂತು ಜೀವನದ ವಾಸ್ತವತೆಗಳನ್ನು ಯಥಾರ್ಥವಾಗಿ ಇದ್ದಕ್ಕಿದ್ದಂತೆ ಚಿತ್ರಿಸಲು ಹೊರಟವರು. ಒರಿಯಾ ಸಾಹಿತ್ಯ ಪ್ರಪಂಚದಲ್ಲಿ ಶ್ರೀ ಕಾಲಿಂದೀಚರಣರನ್ನು ಕವಿಯೆಂದು ಕಾದಂಬರಿಕಾರರೆಂದು ಉನ್ನತ ಭಾವನೆಯಿಂದ ಮಿಗಿಲಾದ ಮೆಚ್ಚುಗೆಯಿಂದ ನೋಡಲಾಗುತ್ತದೆ. ಆದ್ದರಿಂದ ಅವರ ಸುಪ್ರಸಿದ್ಧ ಕಾದಂಬರಿಯನ್ನು ಅನ್ಯ ಭಾರತೀಯ ಭಾಷೆಗಳಲ್ಲಿ ಅನುವಾದಿಸಲು ಸಾಹಿತ್ಯ ಅಕೆಡಮಿಯವರು ಆರಿಸಿದ್ದು ತೀರ ಯಥೋಚಿತವೇ ಆಗಿದೆ. ಈ ಪುಸ್ತಕವೂ ಈ ಮೂಲಕ ಈ ಗ್ರಂಥಕರ್ತನೂ ಈಗ ಹೆಚ್ಚು ವಿಸ್ತಾರವಾದ ವಲಯಕ್ಕೆ ಪರಿಚಿತವಾಗುವಂತಾಯಿತು ಮತ್ತು ನನ್ನ

ಭರವಸೆಯೇನೆಂದರೆ, ಒಂದು ಭಾರತೀಯ ಭಾಷೆಯಿಂದ ಇತರ ಭಾಷೆಗಳಲ್ಲಿ ಹೆಚ್ಚು ಹೆಚ್ಚು ಲೇಖನಗಳು ಅನುವಾದಿತವಾದಷ್ಟೂ ದೇಶದ ಭಾವನಾತ್ಮಕ ಐಕ್ಯವು ಹೆಚ್ಚಾಗುವುದು. ಏಕೆಂದರೆ ಭಾರತದ ಆದ್ಯಂತ ಭಾಷೆಗಳ ಭೇದವು ಎಷ್ಟೇ ಇದ್ದರೂ ಜೀವನವು ಏಕರೂಪವಾಗಿದೆಯೆಂಬ ಜ್ಞಾನವು ಒಡಮೂಡುವದು,

ಸಾವಿರಗಟ್ಟಲೆ ಕನ್ನಡ ಓದುಗರ ಹೃದಯದಲ್ಲಿ ಈ "ಮಾಟಿರ ಮಾಣಿಸ" ("ಮಣ್ಣಿನ ಮನುಷ್ಯ") ಕಾದಂಬರಿಯು ಒಂದು ಸಂವಾದೀ ತಂತಿಯನ್ನು ಮೀಟುವದೆಂದು ಆಶಿಸುತ್ತೇನೆ.

ಡಾ. ಹರೇಕೃಷ್ಣ ಮೆಹತಾಬ

ಆಭಾರ

"ಮಾಟೀರ ಮಾಣುಷ" ಮೂಲ ಉಡಿಯಾ ಭಾಷೆಯಲ್ಲಿ ಬರೆದು ಇಪ್ಪತ್ತೈದು ವರ್ಷಗಳು ಸಂದುವು. ಪೂರೀ ಜಿಲ್ಲೆಯ ಡೆಲಾಂಬ ಎಂಬ ಹಳ್ಳಿಯ ಒಂದು ಕೃಷಿ ಕುಲದ ಅಣ್ಣತಮ್ಮಂದಿರ ವ್ಯಾಜ್ಯ ಯಾವ ರೀತಿ ಪರಿಹಾರ ಪಡೆಯಿತು ಎಂಬುದನ್ನು ಅಣ್ಣನ ಬಾಯಿಯಿಂದಲೇ ಕೇಳಿದಾಗ ಈ ಚಿಕ್ಕ ಕಾದಂಬರಿ ಬರೆಯುವ ಪ್ರೇರಣೆ ನನಗೆ ದೊರೆಯಿತು. ಇದು ಈ ಲೇಖನದ ಮೊತ್ತ ಮೊದಲಿನ ದೊಡ್ಡ ಕಥಾರಚನೆ. ಗಾಂಧೀ ದರ್ಶನದ ಮೇಲೆ ಇದು ನಿಂತಿದೆ. ಈ ಪುಸ್ತಕ ಪ್ರಕಾಶಿತವಾದ ಕೂಡಲೇ ಆ ಕಾಲಕ್ಕೆ ಇದಕ್ಕೆ ಒಳ್ಳೆ ಸ್ವಾಗತ ದೊರಕಿತು. ಜತೆಗೆ, ಉಡಿಯಾ ಭಾಷೆಯಲ್ಲಿ ಇದರ ಹದಿನಾಲ್ಕು ಆವೃತ್ತಿಗಳು ಹೊರಟುವು. ಪ್ರಕಟವಾದಂದಿನಿಂದಲೂ ಈ ಕಾದಂಬರಿ ಮ್ಯಾಟ್ರಿಕ್‌ನಿಂದ ಎಂ.ಎ ವರೆಗೆ ಪರೀಕ್ಷೆಗಳಿಗೆ ಪಠ್ಯಪುಸ್ತಕವೆಂದು ಆಯಲ್ಪಟ್ಟಿತು. ನಾಟಕದ ರೂಪದಲ್ಲಿಯೂ ರಂಗಭೂಮಿಯಲ್ಲಿ ಇದನ್ನು ಆಡಲಾಯಿತು. ಕಾವ್ಯದ ರೂಪದಲ್ಲಿಯೂ ಇದು ಈಗ ಅಚ್ಚಿನಲ್ಲಿದೆ.

ಈ ಕಾದಂಬರಿಯ ಮೊದಲನೆಯ ಆವೃತ್ತಿಯು ಹೊರಟ ಏಳು ವರ್ಷಗಳ ನಂತರ ಶ್ರೀಮತಿ ಸರಸ್ವತಿ ಪಾಣಿಗ್ರಾಹಿ ಇವರು ಇದರ ಹಿಂದೀ ಅನುವಾದ ಮಾಡಿದರು. ಆದರೆ ಹದಿನೆಂಟು ವರ್ಷಗಳ ತನಕವೂ ಅದಕ್ಕೆ ಮುದ್ರಣವನ್ನು ಕಾಣುವ ಸೌಭಾಗ್ಯ ಸಿಗಲಿಲ್ಲ. ಈ ಅನುವಾದ ಓದಿ ಶ್ರೀ ಬದಂತ ಆನಂದ ಕೌಸಲ್ಯಾಯನರು "ಎರಡು ಮಾತು" ಬರೆದುಕೊಡುವ ಕೃಪೆ ಮಾಡಿದ್ದಾರೆ.

"ಸಾಹಿತ್ಯ ಅಕಾದೆಮಿ"ಯ ಪರವಾಗಿ "ಮಾಟೀರ ಮಾಣುಷ"ದ ಹಿಂದೀ ಅನುವಾದ ಪ್ರಕಾಶಿತವಾಗುವದು ನಿಶ್ಚಯವಾದಾಗ ಇನ್ನೊಂದು ಸಂಗತಿ ಗೊತ್ತಾಯಿತು. ಅದೇನೆಂದರೆ ೧೯೪೨ರ ಚಳುವಳಿಯ ಸಮಯ ಬ್ರಹ್ಮಪುರ ಜೈಲಿನಲ್ಲಿ ಇದ್ದ ಉತ್ಕಲ ಪ್ರಾಂತೀಯ ರಾಷ್ಟ್ರಭಾಷಾ ಪ್ರಚಾರ ಸಭೆಯ ಸಂಚಾಲಕ, ಪಂಡಿತ ಅನಸೂಯಾ ಪ್ರಸಾದ ಪಾಠಕ ಇವರ ಸಹಾಯದಿಂದ ಉಡಿಯಾ ಭಾಷೆಯ ಪ್ರಸಿದ್ಧ ಸಾಹಿತಿಗಳೂ "ಡಗರ" ಮಾಸಪತ್ರಿಕೆಯ ಸಂಪಾದಕರೂ ಆದ ಶ್ರೀ ನಿತ್ಯಾನಂದ ಮಹಾಪಾತ್ರ ಇವರೂ ಇದರ ಇನ್ನೊಂದು ಅನುವಾದ ಮಾಡಿದ್ದಾರೆ! ಆಮೇಲೆ ಇಬ್ಬರೂ ಪರಿಶ್ರಮ ಪಟ್ಟು

ಲೇಖಕನ ಸಮಕ್ಷಮವೇ ಅದನ್ನು ಓದಿ ಮೂಲ ಪ್ರತಿಗೆ ಹೊಂದಿಸಿಕೊಂಡು ತಿದ್ದಲಾಯಿತು.

ರಾಷ್ಟ್ರಭಾಷೆಯು ಹಿಂದೀಯ ವಾಚಕರ ಇದುರಿಗೆ ಇದನ್ನು ಸಾದರ ಪಡಿಸುವದರಲ್ಲಿ ಸಹಕಾರವಿತ್ತ ಮಹಾನುಭಾವರ ಕುರಿತು ನನ್ನ ಹಾರ್ದಿಕ ಕೃತಜ್ಞತೆಯನ್ನು ಪ್ರಕಟಿಸುತ್ತೇನೆ.

ಕಾಲಿಂದೀಚರಣ ಪಾಣಿಗ್ರಾಹಿ

೧

ದಿನಬೆಳಗೂ ಮೂಡಿ ಮುಳುಗುವ ಸೂರ್ಯನಂತೆಯೇ ಕೋಟಿ ಕೋಟಿ ಸೌರಮಂಡಳಗಳು ಈ ವಿಶ್ವದಲ್ಲಿ ಮೂಡುತ್ತವೆ, ಮುಳುಗುತ್ತವೆ. ಒಬ್ಬ ಸೂರ್ಯನ ಸುತ್ತಲೂ ಲಕ್ಷಾಂತರ ಗ್ರಹಗಳೂ ಉಪಗ್ರಹಗಳೂ ತಿರುಗುತ್ತವೆ. ಬೊಗರಿಯಾಟದ ರಿಂಗಣ ಹಾಕುತ್ತವೆ; ಹಗಲಿರುಳು, ವರ್ಷ, ತಿಂಗಳು ಮತ್ತು ಋತುಗಳ ಚಕ್ರವನ್ನು ಹೊರಳಿಸುತ್ತ ಉರುಳಿಸುತ್ತ ಸಾಗಿವೆ. ಅವುಗಳ ನಡುವೆ ತಿಲ ಮಾತ್ರವೇ ನಿಂತಂತಿದೆ ಈ ನಮ್ಮ ಭೂಮಿತಾಯಿ. ಈ ವಿಶಾಲ ಪುರಾತನ ಭೂಮಿಗೋಲದ ಮೇಲೆ ನಮ್ಮ ಭರತ ವರ್ಷವಾದರೂ ಎಷ್ಟು ಚಿಕ್ಕದಾಗಿದೆ! ಅದರೊಳಗೂ ಒಡಿಸ್ಸಾ, ಅಲ್ಲಿಯೂ ಆ ಸೀಮೆಗೆ ಒಳಪಟ್ಟ ಕಟಕ ಜಿಲ್ಲೆಯ ವಿರೂಪಾ ನದೀ ತೀರದ "ಪಧಾನ ಪಾಡಾ" ಎಂಬ ಊರು—ಅತಿ ಚಿಕ್ಕ ಯಕಃಶ್ಚಿತ ಜನವಸತಿ ಅದು! ಅದೇ ಊರಿನಲ್ಲಿದೆ ಶಾಮಪಧಾನನ ಆ ಚಿಕ್ಕ ಗುಡಿಸಲಮನೆ. ಈ ವಿಶ್ವಬ್ರಹ್ಮಾಂಡದಲ್ಲಿ ಅವನ ಗುಡಿಸಲಿನ ಅಸ್ತಿತ್ವವೇನು? ಅದೊಂದು ಅಣುವೋ, ಪರಮಾಣುವೋ—ಯಾರು ಹೇಳಬಲ್ಲರು?

ಆ ನೆಲದಲ್ಲಿ ಮೊತ್ತ ಮೊದಲಿಗೆ ಕಾಲಿಟ್ಟವರ ಹೆಸರು—ಕುರುಹು ಕೂಡ ಇಂದು ಉಳಿದಿಲ್ಲ. ಆ ಮಣ್ಣಿನಲ್ಲಿ ಎಲ್ಲಕ್ಕೂ ಮೊದಲು ಬಂದು ಯಾರು ಬೀಜ ಬಿತ್ತಿದರೊ? ಯಾರು ಅದರ ಫಲ ಉಂಡರೋ? ಆ ವಿರೂಪಾ ನದಿ ಮತ್ತು ಈ ಸೂರ್ಯ ಚಂದ್ರರೇ ಹೇಳಬಲ್ಲರೇನೋ! ಆದರೆ ಇಂದಿಗೂ ಆ ಮಣ್ಣು ಕಾಳಿನ ತೆನೆ ಮತ್ತು ಕಾಶ ಕುಸುಮಗಳೊಂದಿಗೆ ನಕ್ಕು ನಲಿಯುತ್ತದೆ. ಅದೇ ನೆಲ ಇಂದು ಜನರ ಕಲಕಲದಿಂದ ಕಳಕಳಿಸಿ ಜೀವಗೊಂಡು ನಿಂತಿದೆ. ಅದರ ಧೂಳಿಯಲ್ಲಿ ಅದೆಷ್ಟು ಮಕ್ಕಳು ಆಟವಾಡಿದ್ದುಂಟು! ಆ ಶಾಮಪಧಾನ, ಅವನ ತಂದೆ ಅವನ ಅಜ್ಜ, ಹಿಂದಿನ ಏಳು ಪೀಳಿಗೆ! ವಿರೂಪಾ ನದಿಯ ತೀರದಲ್ಲಿ ಹಬ್ಬ ಹುಣ್ಣಿಮೆಗೆ ಊರ ಹೆಣ್ಣು ಮಕ್ಕಳ ಹಿಗ್ಗಿನ ಹಾಡುಗಳು ಮೊಳಗುತ್ತವೆ. ಇತ್ತ ಊರ ಹೆಣಗಳು ಚಿತೆಗಳಲ್ಲಿ ಹೊತ್ತಿ ಉರಿಯುತ್ತಿದ್ದರೆ, ಅತ್ತ ಸೂತಕದಲ್ಲಿ ಸ್ನಾನಕ್ಕಾಗಿ ಬಂದ ವಿಧವೆಯರ ವಿಕಲ ವಿಲಾಪದಿಂದ ವಿರೂಪಾ ನದಿಯ ಒಣ ಮಳಲೂ ತೊಯ್ದು ತಣ್ಣಗಾಗಿರುತ್ತದೆ. ಇದೆಲ್ಲ ಎಂದಿನಿಂದ ನಡೆದಿದೆಯೋ ಯಾರಿಗೆ ಗೊತ್ತು?

ಶಾಮಪಧಾನನ ಪೂರ್ವಜರಲ್ಲಿ ಯಾರು ಪಧಾನ ಪಾಡಾ ಗ್ರಾಮದಲ್ಲಿ ಮೊದಲಿಗೆ ಬಂದು ನೆಲೆಸಿದ್ದರೆಂಬ ಇತಿಹಾಸ ಸರಿಯಾಗಿ ಗೊತ್ತಿಲ್ಲ. ಎಷ್ಟೋ ರಾಜ್ಯಗಳು—

ಹಿಂದೂ, ಮುಸ್ಲಿಮ್ ಮರಾಠಾ ಮುಂತಾದ ಎಷ್ಟೋ ರಾಜವಂಶಗಳು—ನಾಶ ಹೊಂದಿದವು. ಈ ಪ್ರಪಂಚದಲ್ಲಿ ಇಸ್ಲಾಮ, ಬೌದ್ಧ, ಕ್ರೈಸ್ತ ಇತ್ಯಾದಿ ಎಷ್ಟೋ ಧರ್ಮಗಳ ತೆರೆಗಳು ತೇಲೇರಿ ಬಂದವು, ಉರುಳಿಯೂ ಹೋದವು. ಆದರೆ ಪ್ರಧಾನ ಪಾಡಾಗ್ರಾಮ ಯಾತರ ಕುರುಹನ್ನೂ ತನ್ನಲ್ಲಿ ಇಟ್ಟುಕೊಳ್ಳಲಿಲ್ಲ. ಈ ಹಳ್ಳಿ ಯುಗಾಂತರಗಳಿಂದ ಬಾಗಿ ಬಿದ್ದಿರುವ ಹುಲ್ಲು ಕಡ್ಡಿಯಂತಿದೆ. ಬಿರುಗಾಳಿ, ಸಿಡಿ ಮಳೆಗಳ ಹೊಡೆತಕ್ಕೆ ದೊಡ್ಡ ದೊಡ್ಡ ಮರಗಳೂ ಉರುಳಿ ಬೀಳುತ್ತವೆ. ಆದರೆ ಈ ಹುಲ್ಲಿನ ವರೆಗೆ ಅಂಥ ಸಿಡಿಲು-ಸುಂಟರ ಗಾಳಿಗಳ ಸುದ್ದಿಯ ಸದ್ದೂ ಸೋಂಕುವದಿಲ್ಲ. ಶಾಮಪಧಾನನ ಮಣ್ಣಿನ ಗುಡಿಸಲೂ ಹಾಗೆಯೇ. ಯಾವ ರಾಜನ ಕಾಲದಲ್ಲಿಯೂ ಆ ಮನೆಯ ಮೆಟ್ಟಿಲುಗಳನ್ನು ಕಲ್ಲು-ಗಚ್ಚುಗಳಿಂದ ಕಟ್ಟಿಸಿದ್ದಿಲ್ಲ. ಯಾರ ಅರಸೊತ್ತಿಗೆಯಲ್ಲಿಯೂ ಅವನ ವಂಶಜರು ಮನೆಯಲ್ಲಿ "ನಾಚು-ಬಜಾವಣೆ"ಗಳ ಷೋಕಿನಲ್ಲಿ ನೂರಾರು ರೂಪಾಯಿ ತೂರಿರಲಿಲ್ಲ. ಹಾಗೆಯೇ ಸಾಹುಕಾರಿಕೆಯಲ್ಲಿ ಸಾವಿರ—ಎರಡು ಸಾವಿರದ ದೊಡ್ಡ ಮೊತ್ತಗಳನ್ನೂ ಗಳಿಸಿ ರಾಶಿ ಹಾಕಿದ್ದಿಲ್ಲ.

ಪಧಾನ ಪಾಡಾದ ಎಲ್ಲ ರೂಢಿ ಸಂಪ್ರದಾಯಗಳು ಅನಾದಿ ಕಾಲದಿಂದಲೂ ಆ ಹೊಸ ಹೂ ಬಿಟ್ಟ ಮರದ ಕೆಳಗೆ ನಿಂತ ಹವಳದ ಕಲ್ಲಿನ "ಮಂಗಲಾ" ಅಮ್ಮನವರ ಅಡಿಯನ್ನೇ ಮೊರೆಹೊಕ್ಕು ರೂಪಗೊಂಡಿವೆ. ಊರಿಗೆ ಮೈಲೀಬೇನೆ ಬಂದರೂ ಅದೇ ಮಂಗಳಮ್ಮ; ಲಗ್ನ ಕಾರ್ಯಗಳ ಶುಭ-ಶೋಭನಗಳಿಗೂ, ಗೌರೀ ಪೂಜೆಯ ಮಂಗಲ ಕಲಶಕ್ಕೂ ಅದೇ ಮಂಗಳಮ್ಮ; ಯಾರೊಬ್ಬನ ಮರಕ್ಕೆ ಕಾಯಿ ಬಿಡಲಿಲ್ಲ, ಯಾರೊಬ್ಬರ ಕೂಸು ಯಾವಾಗಲೂ ಕಾಯಿಲೆ, ಯಾರಿಗೋ ಯಾವದೋ ಕನಸು ಬಿತ್ತು, ಯಾವನದೋ ಹಿತ್ತಲಲ್ಲಿ ಬಾಳೆಯ ಗಿಡ ಬೆಳೆಯಿತು ಅಥವಾ ತುಪ್ಪಹೀರೆಯ ಬಳ್ಳಿ ಚಿಗುರಿತು—ಇಂಥವೆಲ್ಲವುಗಳ ಕ್ಷೇಮ ಸಮಾಚಾರವನ್ನು ಅದೇ ಮಂಗಳಮ್ಮ ತಲೆ ತಲಾಂತರಗಳಿಂದಲೂ ನೋಡಿಕೊಳ್ಳುತ್ತ ಬಂದಿದ್ದಾಳೆ. ಕಮ್ಮೆಣ್ಣೆ ಕುಂಕುಮಗಳು ಆಕೆಯ ಮೈ ತುಂಬ ಬಳಿಯಲಾಗಿದ್ದು ಈಗ ಆ ವಿಗ್ರಹದ ಯಾವದೇ ಭಾಗವು ಬರಿದಾಗಿ ಉಳಿದಿಲ್ಲ.

ಏನೇ ಇರಲಿ, ಈ ಹಳೆಯ ಪ್ರಧಾನ ಪಾಡಾದಂಥ ಚಿಕ್ಕ ಸಾಧಾರಣ ಜನವಸತಿಯ ಊರಿನ ಮನೆಗಳಲ್ಲಿ ಶಾಮಪಧಾನನ ಮನೆ ಎಲ್ಲಕ್ಕೂ ಹೆಸರಾದದ್ದು. ಅದಕ್ಕೆ ಕಲ್ಲಿನ ಮೆಟ್ಟಲಾಗಲಿ, ಇಟ್ಟಂಗಿಯ ಗೋಡೆಯಾಗಲಿ ಇಲ್ಲದಿದ್ದರೇನು?

ತಲೆಮಾರಿನಿಂದ ತಲೆಮಾರಿಗೆ ಬಂದ ಈ ಮನೆ ಎಷ್ಟೋ ಸಲ ಬಿದ್ದುದುಂಟು. ಒಮ್ಮೆ ಕಟ್ಟಿದರೆ ಹತ್ತು ವರ್ಷ ಕಾಲ ಅದು ಬಾಳಿದರೇ ಹೆಚ್ಚು, ಕೆಸರಿನ ಗೋಡೆ, ಹುಲ್ಲಿನ ಚಪ್ಪರ, ಮಳೆಗಾಳಿಗಳ ಹೊಡೆತವನ್ನು ಎಷ್ಟೆಂದು ತಡೆಯಬಲ್ಲವು?

ಶಾಮಪಧಾನ ತನ್ನ ತಂದೆ ತಾತಂದಿರನ್ನು ನೋಡಿದ್ದಾನೆ. ಅವರು ಭಾರಿ ಗಟ್ಟಿಮುಟ್ಟಾದ ಜಟ್ಟಿಗ ಆಳಾಗಿದ್ದರು. ಒಂದೊಮ್ಮೆ ಮನೆ ಕುಸಿದು ಬಿದ್ದರೂ ಅವರು ಹಗಲೆಲ್ಲ ಮಣ್ಣು ನೆನೆಹಾಕಿ ಅದರ ಗುಂಡುಗಳ ಮೇಲೆ ಗುಂಡುಗಳನ್ನು ಏರಿಸಿ ಸಾಲಾಗಿ ಹೇರಿಟ್ಟು ಎವೆಯಿಕ್ಕುವದರೊಳಗೆ ಹೊಸ ಮನೆ ಕಟ್ಟಿಕೊಳ್ಳುತ್ತಿದ್ದರು. ಈ ರೀತಿ ಅದು ಒಂದು ಹತ್ತು ವರ್ಷ ತಾಳುತ್ತಿತ್ತು. ಶಾಮ ಪದಾನನೂ ತನ್ನ ಕಾಲದಲ್ಲಿ ಇಂತಹದೇ ಕೆಲಸವನ್ನು ತನ್ನ ಎರಡೂ ಕೈಗಳಿಂದ ಸಾಕಷ್ಟು ಮಾಡಿದ್ದುಂಟು. ಅವನ ಜೀವಮಾನದಲ್ಲಿಯೇ ಆ ಮನೆ ಮೂರು ಬಾರಿ ಕುಸಿದು ಬಿದ್ದು ಮೂರು ಬಾರಿ ಕಟ್ಟಲಾಗಿದೆ.

ಆ ಮನೆ ದೊಡ್ಡದಿತ್ತೆಂದಲ್ಲ, ಆ ಮನೆತನಕ್ಕೆ ದೊಡ್ಡಸ್ತಿಕೆಯಿತ್ತೆಂಬ ಕಾರಣ ಶಾವಪಧಾನನ ಮನೆ ಪ್ರಧಾನ ಪಾಡಾದ ಸುತ್ತುಮುತ್ತಿನ ಜನಕ್ಕೆಲ್ಲ ಪರಿಚಿತವಿತ್ತು. ಊರಲ್ಲಿ ಭಟ್ಟ-ಭಿಕ್ಷುಕರು ಬಂದರೆ ಜನ ಶಾಮಪಧಾನನ ಮನೆಯನ್ನು ತೋರಿಸಿ ಕೊಡುತ್ತಿದ್ದರು. ಊರಿನ ಒಳಗೆ ಇಲ್ಲವೇ ಹೊರಗೆ ಜಗಳ ವ್ಯಾಜ್ಯಗಳೇನಾದರೂ ಎದ್ದರೆ ಶಾಮಪಧಾನನಿಗೇ ಕರೆ ಹೋಗಬೇಕು. ಯಾರೊಬ್ಬರ ಮನೆಯಲ್ಲಿ ಮದುವೆ-ಮುಂಜಿಯ ಬಗ್ಗೆ ಸರಕು-ಸಾಮಾನುಗಳ ಪಟ್ಟಿ ಮಾಡುವದಿದ್ದರೆ ಅವನೇ ಬೇಕು. ಶಾಮಪಧಾನನ ಓದು-ಬರೆಹ ಭಾಗವತ ಪಾಠ ದಾಟಿ ಮುಂದೆ ಹೋಗಿದ್ದಿಲ್ಲ. ಅವನಿಗೆ ಕಾಯಿದೆಯ ಜಂಜಾಟ ಗೊತ್ತಿದ್ದಿಲ್ಲ. ಗಿಡ ಮೂಲಿಕೆ ಮದ್ದು ಮಾಟ ಮುಂತಾದದ್ದೇನೂ ಆತ ಅರಿತವನಲ್ಲ. ಲೆಕ್ಕಪತ್ರದಲ್ಲಿಯೂ ಆತ ಪಾರಂಗತನಲ್ಲ. ಆದಾಗ್ಯೂ ಎಲ್ಲ ಕೆಲಸಗಳಲ್ಲಿ ಅವನಿಂದ ನೆರವು ಸಿಗುತ್ತಿತ್ತು. ಮಧ್ಯರಾತ್ರಿಗೆ ಎಲ್ಲಿಂದಲೋ ನಿಧಿ ವೈದ್ಯರನ್ನು ಕರೆತರುವದಿದೆ, ಮದ್ದಿನ ಗಿಡ ಮೂಲಿಕೆಯೇನೋ ಹೇಗೋ ತರಬೇಕಾಗಿದೆ. ಎಲ್ಲೋ ದಿಬ್ಬಣದ ವಾಲಗದವರ ಊಟ ಉಪಚಾರದ ವ್ಯವಸ್ಥೆ ಮಾಡಿಕೊಡುವದಿದೆ.—ಇಂಥ ಒಂದಲ್ಲ ಒಂದು ಯೋಚನೆಯ ತಂದ್ರಿಯಲ್ಲಿಯೇ ಶಾಮಪಧಾನ ಯಾವಾಗಲೂ ಗುಂಗಾಗಿರುತ್ತಿದ್ದನು. ಇನ್ನು ಇದರಲ್ಲಿ ಆದಾಯವೆ?... ಬಿಡಿಕಾಸಿನಷ್ಟೂ ಇಲ್ಲ. ಅಲ್ಲದೆ ಇಂಥ ಸಂಗತಿಗಳಲ್ಲಿ ಆತ ಆದಾಯದ ಮೋರೆ ನೋಡುವವನೇ? ಛೇ, ಛೇ, ಅವನಿಗೇನು ಹೊಟ್ಟೆ ತುಂಬ ಕೂಳಿಗೆ ಗತಿಯಿಲ್ಲದೆ ಹೋಗಿದೆಯೇ? ಯಾರಾದರೂ ಸಂಕಟದಲ್ಲಿ ಸಿಲುಕಿ ಬಿದ್ದು ಶಾಮಪಧಾನನನ್ನು ಕರೆಯದಿದ್ದರೆ ಆತ ತಾನೇ ಅಲ್ಲಿಗೆ ಓಡಿಹೋಗಿ ವಿಚಾರಿಸುವನು: "ಏನು ಈ ಶಾಮಪಧಾನ ಸತ್ತುಹೋದನೇ? ಅವನ ಮನೆಯ ಪಕ್ಕದಲ್ಲಿಯೇ ಇಂಥದೊಂದು ಒದಗಿದರೂ ಅವನಿಗೆ ಒಂದಿಷ್ಟು ಗೊತ್ತಾಗಬಾರದೆಂದರೇನು?"

ಊರಲ್ಲಿ ಇಬ್ಬಣಗಳಾಗಿ ದಂಗೆ-ದೊಂಬಿ ಏಳುತ್ತಿವೆ. ಒಬ್ಬರೊಬ್ಬರ ತಲೆಹೊಡೆತ, ಕೋರ್ಟು ವ್ಯವಹಾರಗಳಿಂದ ಎರಡೂ ಮನೆಗಳು ಹಾಳಾಗಿ ಹೋಗುತ್ತಲಿವೆ. ಶಾಮಪಧಾನ

ಅವರ ನಡುವೆ ನುಗ್ಗಿ ಒಬ್ಬರ ಕೈ ಇನ್ನೊಬ್ಬರ ಕಾಲು ಹಿಡಿದು ಅನ್ನ ನೀರು ಮುಟ್ಟದೆ ಮುಂಜಾವಿನಿಂದ ಸಂಜೆಯವರೆಗೂ ಅಲ್ಲಿ ಕೂತಿರುತ್ತಾನೆ, "ಈ ಶಾಮಪಧಾನ ಸತ್ತ ಮೇಲೆ ಬೇಕಾದವರು ಬೇಕಾದಂತೆ ನಡೆಯಲಿ. ಆ ಮೇಲೆ ಬೇಕಾದರೆ ಜಗಳಾಡಲಿ, ವ್ಯಾಜ್ಯ ಹೂಡಲಿ. ಇವನ ಜೀವವಿರುವನಕ ಮಾತ್ರ ಈ ಊರಲ್ಲಿ ಹಾಗೆ ಏನೂ ಆಗಲು ಬಿಡಲಿಕ್ಕಿಲ್ಲ" ಎನ್ನುತ್ತಾನೆ.

"ಯಾಕೆ? ಎಷ್ಟು ದಿನ ಬಂದೀತು—ಈ ವ್ಯಾಜ್ಯ, ವ್ಯವಹಾರ; ನಮ್ಮ ಅಪ್ಪ ಅಜ್ಜರೆಲ್ಲ ಏಳು ತಲೆಮಾರು ಈ ಮಣ್ಣು ತೋಡಿ ಜಗಳ ವ್ಯಾಜ್ಯ ಮಾಡಿ ಹೊರಟೆದ್ದು ಹೋದರು. ಆದರೂ ಈ ನೆಲ ಹಿಂದಿದ್ದಂತೆ ಈಗಲೂ ಇದೆ. ಒಂದು ಎಕರೆಗೆ ಎರಡು ಎಕರೆ ಆಗಲಿಲ್ಲ. ಇನ್ನು ನಾವೂ ಹೀಗೆಯೇ ಹೊರಟುಹೋಗುತ್ತೇವೆ. ನಮ್ಮ ಮಕ್ಕಳು-ಮೊಮ್ಮಕ್ಕಳೂ ನಮ್ಮ ಹಿಂದೆಯೇ ಹೊರಟರೂ ಈ ಹೊಲ-ಹಕ್ಕಲು ಹೀಗೇ ಹಿಂದೆ ಉಳಿಯುವದು. ವಿರೂಪೆಯ ಮಳಲಲ್ಲಿ ಇದೇ ರೀತಿ ಒಡೆದ ಗಡಿಗೆಗಳ ಒಂದೆರಡು ಓಡು, ಅರೆಬರೆ ಉರಿದು ಕತ್ತಿದ ಒಂದೆರಡು ಕೊರಡು ಇವಿಷ್ಟೇ ಹಿಂದೆ ಉಳಿಯುವವು. ಅದೂ ನೆರೆ-ನೆಗುಸು ಬಂದುಬಿಟ್ಟರಂತೂ ಸರಿ—ಎಲ್ಲ ಸಫಾಯ ಶುದ್ಧ. ಯಾರ ಹೆಸರೂ ಗುರುತೂ ಉಳಿಯುವಂತಿಲ್ಲ. ನೋಡಿ!" ಈ ಮಾತಿನ ಮುಂದೆ ಜಗಳವೇ?

ಶಾಮಪಧಾನ ಹೊಟ್ಟೆಯೊಳಗೊಂದು ಬಾಯಿಯೊಳಗೆ ಒಂದು ಮಾಡುವ ಆಸಾಮಿಯಲ್ಲ. ರಾಜಪುತ್ರನೇ ಬೇಕಾದರೆ ಬರಲಿ, ತನಗೆ ಸರಿಕಂಡದ್ದನ್ನು ಹಿಂದೆ ಮುಂದೆ ನೋಡದೆ ಅವನ ಮುಖಾಮುಖಿ ಸ್ಪಷ್ಟ ಹೇಳಿ ಬಿಡುವವನೇ. ಅದರೆ ನಾಳೆ ಆ ಹೇಳಿಸಿಕೊಂಡವನ ಹೆಣ ಹೊರುವುದಕ್ಕೆ ತನ್ನ ಹೆಗಲೇ ಮೊದಲು ಮುಂದೆ ಮಾಡುವವನು. ಅವನ ಹೆಂಡತಿಗೆ ಬಾಣಂತಿ ಬೇನೆ ಆರಂಭವಾಗಿದ್ದರೆ ತಾನೇ ಆ ಊರು ಈ ಊರು ಓಡಾಡಿ ಮದ್ದು ಮೂಲಿಕೆ ಹುಡುಕಿ ತರುವವನು ಶಾಮಪಧಾನ. ಈ ಕಾರಣದಿಂದಲೇ ಊರಿನ ಎಲ್ಲಕ್ಕೆಲ್ಲ ಮಂದಿಗೆ ಶಾಮಪಧಾನನ ಮಾತೆಂದರೆ ಆ ಮಂಗಳಮ್ಮನ ಮುಡಿ ಪ್ರಸಾದದಂತೆ. ಇಪ್ಪತ್ತೈದು ತಲೆ ಒಂದು ಮಾತು ಆಡುತ್ತಿರಲಿ. ಶಾಮಪಧಾನ ಬೇರೊಂದನ್ನೇ ಆಡಲಿ ಮುಗಿಯಿತು. ಅವನ ಮಾತೇ ಕೊನೆಗೆ ನಿಲ್ಲುವದು, ಅವನು ಆಡಿದ್ದೇ ಕೊನೆಗೆ ಆಗುವುದು.

ಶಾಮಪಧಾನ ಯಾರ ಕೈ ಹಿಡಿದಿದ್ದನೋ ಆಕೆಯೂ ಬಹಳ ಒಳ್ಳೆಯ ಹೆಣ್ಣು. ಒಬ್ಬ ಸಂಭಾವಿತ ಒಕ್ಕಲಿಗನ ಮಗಳು. ಆಕೆಯ ಮನಸ್ಸು ಖೊಟ್ಟಿಯಲ್ಲ. ನೆರೆಹೊರೆಯವರಿಗೆ ಯಾವುದೇ ವಸ್ತು ಬೇಕಾದರೆ ಅವರು ನೇರವಾಗಿ ಶಾಮಪಧಾನನ ಮನೆಗೆ ಓಡುತ್ತಿದ್ದರು. ಮನೆಯೊಳಗೆ ಏನೂ ಇರದಿದ್ದರೂ ಆ ಹೆಂಗಸು ಗಡಿಗೆ, ಮಡಕೆ ಬಳಚಿ ಒಂದುಮಾಡಿ ಎಲ್ಲಿಂದಾದರೂ ಒಂದು ಅರ್ಧಸೇರು ಕಾಳೋ ಕಡ್ಡಿಯೋ ಆ ಬೇಡಲು ಬಂದವರ ಉಡಿಯಲ್ಲಿ ಹಾಕಿಯೇ ಬಿಡುತ್ತಿದ್ದಳು. ಬಂದವರನ್ನು ಬರಿಗೈಯಿಂದ ಹಿಂದಿರುಗಲು ಬಿಡುತ್ತಿದ್ದಿಲ್ಲ. ಅವರನ್ನು ಸಂತೋಷಪಡಿಸಿಯೇ

ಕಳುಹಿಸಬೇಕು. "ಅಯ್ಯೋ ಮಗಳೇ, ಮನೆಯಲ್ಲಿ ನನ್ನದೇನೂ ಇರದಿದ್ದರೇನಾಯಿತು? ನಾನು ನಿಮ್ಮ ಮಕ್ಕಳು ಮರಿ ನೋಡಿದರಲ್ಲವೇ ನಮ್ಮ ಮಕ್ಕಳು ಮರಿಗಳನ್ನು ಮುಂದೆ ಯಾರಾದರೂ ನೋಡಿಕೊಳ್ಳುವವರು? " ಎನ್ನುವಳು ಶಾಮಪಧಾನನ ಮನೆ ನಡೆಸಲು ಬಂದ ಆ ಹೆಣ್ಣು.

ಊರಲ್ಲಿ ತವರಿಗೆ ಬಂದ ಹೆಣ್ಣು ಮಕ್ಕಳಲ್ಲೆಲ್ಲ ಶಾಮಪಧಾನನ ಮನೆಯಾಕೆಯ ಮನೆವಾಳ್ತೆಯ ವಿಷಯ, ಪುರಾಣ ಕಥೆ ಕೇಳಿ ನಡೆಯುವಂತೆ ಚರ್ಚೆ ನಡೆಯುತ್ತಿತ್ತು. "ಪಧಾನನ ಮುದಿ ಹೆಂಡತಿ ಆ ಹಳೆ ಮುತ್ತೈದೆ ಸುಮಂಗಲಿಯಾಗಲಮ್ಮ! ಅವಳ ಸಂಸಾರವೇ ಸಂಸಾರ. ಅಂಥ ಚಿಕ್ಕ ಮನೆಯೊಳಗೂ ಎಂಥ ಅಚ್ಚುಕಟ್ಟು—ಗಡಿಗೆ-ಮಡಕೆ, ಪಾತ್ರೆ—ಪಗಡೆ, ತಟ್ಟೆ–ಬಟ್ಟಲು, ಹೇಗೆ ಒಪ್ಪಾಗಿ-ಓರಣವಾಗಿ ಇಟ್ಟಾಳೆ—ಒಂದರಲ್ಲಿ ಹುರಿಗಾಳು, ಒಂದರಲ್ಲಿ ಸತ್ತೂ ಹಿಟ್ಟು*, ಒಂದರಲ್ಲಿ ಹೆಸರು, ಒಂದರಲ್ಲಿ ಎಳ್ಳು, ಇನ್ನೊಂದರಲ್ಲಿ ನುಚ್ಚು, ಮತ್ತೊಂದರಲ್ಲಿ ನವಣೆ—ಬತ್ತಿದ ಬಡಕಲು ಆಕಳು ಹಾಲಾದರೂ ಎಷ್ಟು ಹಿಂಡಬೇಕು? ಆದರೂ ಅದರಲ್ಲೇ ಉಳಿತಾಯ ಮಾಡಿ ಮೊಸರು ಹೆಪ್ಪು ಹಾಕಿ ಬೆಣ್ಣೆ ತೆಗೆದು ಪುಟ್ಟ ದೊನ್ನೆಯಲ್ಲಿ ತೊಟಕು ತೊಟಕು ತುಪ್ಪ ಸೋಸಿ ಇಡುತ್ತಾಳೆ—ನೆಂಟರಿಷ್ಟರು ಒಳ್ಳೇಮಂದಿ ಮನೆಗೆ ಬಂದರೆ ಅವರಿಗೆ ಬಡಿಸಲಿಕ್ಕೆ!"

"ಇಂಥ ಹಳೆಕಾಲದ ಜನ ಈಗಿನ ದಿನಮಾನದಲ್ಲಿ ನೋಡಲಿಕ್ಕೂ ಅಪರೂಪ, ಅವಳ ಇಬ್ಬರು ಸೊಸೆಯಂದಿರು ಮಲಗಿರುತ್ತಾರೆ ಸುಸ್ತಾಗಿ. ಪಾಪ, ಹಣ್ಣು ಮುದುಕಿ ನಸುಕಿಗೂ ಮುಂಚೆ ಎದ್ದು ಮನೆ-ಅಂಗಳ, ಉಡುಗಿ-ಸಾರಣೆಕಾರಣೆ ಮಾಡಿ ಹೀಗೆ ಮುದ್ದಾಗಿ ಇಡುತ್ತಾಳೆ. ಬರೆ ನೆಲದ ಮೇಲೇ ಅನ್ನ-ಬೆಲ್ಲ ಅದನ್ನು ಹೆಕ್ಕಿ ತಿಂದರೂ ಹೇಸಿಗೆ ಅನಿಸಲಿಕ್ಕಿಲ್ಲವ್ವಾ" ಶರದೂಳ ತಾಯಿ ಅನುಮೋದಿಸುತ್ತಾಳೆ.

ಅದಕ್ಕೆ ಸೇವಂತಿಯ ಸಮರ್ಥನೆ ಹೀಗೆ : "ಇಷ್ಟೇ ಅಲ್ಲ, ದನ ತಿನ್ನುವಷ್ಟು ಮಾವಿನ ಕಾಯಿಯ ಹಂಗಾಮು ಆಗಿತ್ತಲ್ಲ? ಆ ವರ್ಷದಿಂದಲೂ ಈ ಮುದುಕಿ ಉಪ್ಪಿನಕಾಯಿ ಮಾಡಿ ಇಡುತ್ತಾ ಬಂದಿದ್ದಾಳೆ.—ಅದೆಷ್ಟು ರುಚಿ? ಒಂದು ಹುಂಡು ನಾಲಗೆಗೆ ಇಟ್ಟರೂ ಸಾಕು, ಬಾಳಂತಿಯ ಬಾಯಿಯ ಅರುಚಿಯೂ ಮಾಯವಾಗಿ ಮಟ ಮಟ ಅನ್ನ ಹೊಟ್ಟೆಗೆ ಹೋಗುತ್ತದೆ!"

ಆ ಮುದುಕಿ ಎಷ್ಟೊಂದು ದೇವತೆಗಳನ್ನು ಪೂಜಿಸಿ ವ್ರತ-ಉಪವಾಸ ಪಾಲಿಸಿ ಇಬ್ಬರೇ ಹುಡುಗರನ್ನು ಪಡೆದಿದ್ದಾಳೆ. ಒಬ್ಬ ಬರಜೂ, ಇನ್ನೊಬ್ಬ ಛಕಡೀ. ಆದರೆ ಮುದುಕಿ ಯಾರನ್ನೂ ಹೆಸರೆತ್ತಿ ಕರೆಯುವದಿಲ್ಲ. ಹಿರಿಯನನ್ನು ಆಕೆ ಮಮತೆಯಿಂದ

---

*ಉತ್ತರ ಭಾರತದಲ್ಲಿ ತುಗರಿ, ಹೆಸರು ಮತ್ತು ಕಡಲೆಬೇಳೆಗಳನ್ನು ತುಸು ಹುರಿದು ಬೀಸಿ ಬೆರೆಸಿ ಇಡುತ್ತಾರೆ. ಅದನ್ನೇ ಬೆಲ್ಲದೊಂದಿಗೆ ಮುದ್ದೆಮಾಡಿ ಅಥವಾ ಬೇರೆ ಬಗೆಯಾಗಿ ತಿನ್ನುತ್ತಾರೆ, ಅದೇ ಸತ್ತೂ ಹಿಟ್ಟು.

ಕರೆಯುವದು "ಅತ್ತೆಮುಕ್ಕ" ಎಂತ ಮತ್ತು ಕಿರಿಯವನನ್ನು ಕರೆಯುವ ಮುದ್ದಿನ ಹೆಸರು "ಮಳ್ಳ."

ಮಕ್ಕಳನ್ನು ನೋಡುವ ಕಣ್ಣಿನಿಂದ ಮುದುಕಿ ಸೊಸೆಯಂದಿರನ್ನು ನೋಡುವುದಿಲ್ಲ. ಹೆಣ್ಣು ಜನ್ಮ—ತೀರ ಹೇಸಿಗೆ, ತೊಳಲಾಟದ್ದು, ಗೋಳಾಟದ್ದು, ಪೆಟ್ಟು ತಿನ್ನುವದು, ಬಯ್ಯು ಬಿರುನುಡಿಗಳನ್ನು ಕೇಳಿಕೊಳ್ಳುವದು, ಎಲ್ಲವನ್ನೂ ನುಂಗಿಕೊಂಡು ಸುಮ್ಮನೇ ಬಿದ್ದಿರುವದು-ಇದೇ ಹೆಣ್ಣಿನ ಬದುಕು. ಹೆಣ್ಣಿಗೇಕೆ ಊಟ-ಉಡಿಗೆಗಳ ಬಡಿವಾರ. ತನ್ನ ಗಂಡ ಮತ್ತು ಮಕ್ಕಳುಮರಿಗಳಿಗೋಸ್ಕರವೇ ಬದಕುವದು ಅವರ ಬಾಳು. ಅದೇ ಅವರ ಸುಖ, ಅದೇ ಅದರ ಶುಭಾಶುಭ. ಹೆಣ್ಣಿನ ಜನ್ಮದಲ್ಲಿ ಸುಖದ ಶೋಧವೂ ಇಲ್ಲ; ಭೋಗದ ಅಭಿಲಾಷೆಯೂ ಇಲ್ಲ.

ಮುದುಕಿಯೂ ತನ್ನ ಬದುಕಿನಲ್ಲಿ ಇದನ್ನೇ ಭೋಗಿಸುತ್ತ ಬಂದಿದ್ದಾಳೆ. ಎಷ್ಟು ಪಾಪಗಳ ಫಲವಾಗಿ ಈ ಹೆಣ್ಣು ಜನ್ಮ ದೊರೆಯುತ್ತದೆಯೋ! ಮುದುಕಿ ಅದರ ನೆಲೆಯನ್ನು ಮುಟ್ಟಲಾರಳು. ಇಬ್ಬರು ಸೊಸೆಗಳಲ್ಲಿ ಕಚ್ಚಾಟ ಆರಂಭವಾದಾಗ ಮುದುಕಿ ಅನ್ನುತ್ತಾಳೆ-"ಅಯ್ಯೋ ಮಗೂ, ಹೆಣ್ಣು ಜನ್ಮ ಕಡು ಪಾಪಿ ಜನ್ಮ. ಜಗಳವಾಡಿದರೆ, ಕಲಹ ಮಾಡಿದರೆ ಮನೆಯಲ್ಲಿ ಒಡಕು ಬೀಳುವುದು ಖಂಡಿತ. ಇದೇನು ನಿಮಗೆ ಕಾಣುವದಿಲ್ಲವೇ? ಅಣ್ಣ ತಮ್ಮಂದಿರೇನು ತನ್ನೊಳಗೆ ಹೀಗೆ ಜಗಳ ಮಾಡುತ್ತಾರೆಯೇ? ಮನೆಯೇನು ನಿಮ್ಮಿಬ್ಬರದೇ? ಅವರದೂ ಅಲ್ಲವೇ?"

ಹೀಗೆ ಆಗೊಮ್ಮೆ ಈಗೊಮ್ಮೆ ಒಂದಲ್ಲ ಒಂದು ಇಂಥ ಮಾತು ಆಡಿದ ಹೊರತು ಆ ಸೊಸೆಯಂದಿರಿಬ್ಬರೂ ಕೂಡಿ ಕಲೆತು ಬಾಳುವದು ಹೇಗೆ? ಒಬ್ಬಳು ಹೊಳೆಯಿಂದ ಬಂದರೆ ಇನ್ನೊಬ್ಬಳು ಹಳ್ಳದಿಂದ. ಬರಜೂ ಮತ್ತು ಭಕಡೀ ಒಂದೇ ಹೊಟ್ಟೆಯೊಳಗಿಂದ ಬಂದವರು; ಅವರ ಈ ಹೆಂಡಿರೇನು ಒಂದೇ ಗಿಡದ ತೊಪ್ಪಲೇ? ಒಬ್ಬಳ ಮಾತು ಒಬ್ಬಳು ಕೇಳಲಿಕ್ಕೆ!

ಆದರೂ ಮುದುಕಿ ಊರಿನ ಬೇರೆ ಅತ್ತೆಯರಂತೆ ಸೊಸೆಯರನ್ನು ಕಾಡುತ್ತಿದ್ದಿಲ್ಲ. ಪರರ ಮನೆಯ ಕನ್ನೆಯರು—ಅವರು ಉಂಡರೋ, ಎಣ್ಣೆ ಎರೆದುಕೊಂಡರೋ —ಇವೆಲ್ಲಾ ಮುದುಕಿ ನೋಡಿಕೊಳ್ಳದೆ ಮತ್ತಾರು ನೋಡಬೇಕು? ಆದರೆ ಆ ಮಾತ್ರಕ್ಕೆ ಅವರು ತನ್ನ ಹುಡುಗರಿಗಿಂತ—ಬರಜೂ ಭಕಡಿಯರಿಗಿಂತ—ಮಿಗಿಲಲ್ಲ. ಗಾದೆಯೇ ಇದೆ ನೋಡಿ: "ಮೊದಲು ಮಗ, ಆಮೇಲೆ ಮನೆಯ ದೇವರು" ಆದ್ದರಿಂದಲೇ ನಸುಕಿಗೆದ್ದು ಸಂತೆಗೆ ಹೊರಟ ಬರಜೂಗೆ ಗಂಜಿಯ ತಳಿ ಹೊಟ್ಟೆ ತುಂಬ ಬಡಿಸಿದರೋ ಇಲ್ಲವೋ ಎಲ್ಲೋ ಅಲೆದಾಡಿ ಬಂದ ಭಕಡೀ ಜಳಕಕ್ಕೆ ಎರಡು ಬಾರಿ ಎಣ್ಣೆ ಬೇಡಿದಾಗಲೂ, ಯಾರೂ ಅವನ ಮುಂದೆ ಎಣ್ಣೆಯ ಗಿಂಡಿ ಇಟ್ಟರೋ ಇಲ್ಲವೋ —ಎಂದೆಲ್ಲ ಮುದುಕಿ ಜಾಗ್ರತೆಯಾಗಿ ನೋಡಿಕೊಳ್ಳುತ್ತಿದ್ದಳು. ಸೊಸೆಯರು ತಮ್ಮ

ಗಂಡಂದಿರ ಆರೈಕೆ ಸರಿಯಾಗಿ ಮಾಡದಿದ್ದರೆ ಆ ತಾಯಿ ಸಿಡಿಲಾಗಿ ಬಿಡುತ್ತಿದ್ದಳು. "ಸರಿ ನೀವೇನು ಮತ್ತೆ ನನ್ನ ಒಳಿತು ಮಾಡಲಿಕ್ಕೆ ಬಂದೀರಿ? ನಿಮಗೆಲ್ಲ ಈ ಮನೆಯ ಯಜಮಾನತಿಯಾಗಿ ಮಾಡಲೇ ತಂದಿದ್ದೇನು?"

ಇಬ್ಬರು ಸೊಸೆಯರಲ್ಲಿ ಕಿರಿಯವಳು ಮುದುಕಿಯ ಮಾತಿಗೆ ತುಸು ಹೆಚ್ಚು ಗಮನ ಕೊಡುತ್ತಿದ್ದಳು—ಮತ್ತೇನಲ್ಲ, ಆಕೆ ತುಸು ಕಿರಿಯಳಿದ್ದಳೆಂಬ ಮಾತ್ರಕ್ಕೇ. ಪ್ರಪಂಚದಲ್ಲಿ ಕಿರಿಯರಿದ್ದವರ ಮೇಲೆ, ಕಸುವು ಕಡಿಮೆಯಿದ್ದವರ ಮೇಲೆ ಮಂದಿ ತುಸು ಹೆಚ್ಚು ಮರುಕ ತೋರಿಸುತ್ತಾರೆ. ಇದೇ ಮೂಲಕ ಕಿರಿಯ ಸೊಸೆ ಮಿಂದಳೋ ಹೇಗೆ, ಹೆಳಲು ಇಕ್ಕಿಕೊಂಡಳೋ ಏನು—ಎಂದು ಮುದುಕಿ ಮತ್ತೆ ಮತ್ತೆ ವಿಚಾರಿಸುತ್ತಿದ್ದಳು. ಆದರೆ ಹಿರಿಯ ಸೊಸೆಗೆ ಇದೆಲ್ಲ ಕಣ್ಣು ಉರಿಯಾಗಿತ್ತು. ನಾಲ್ಕು ಮಕ್ಕಳ ತಾಯಿಯಾದುದರಿಂದಲೋ ಏನೋ ಅವಳ ಕಾಲು ನೆಲಕ್ಕೇ ಇದ್ದಿಲ್ಲ. ಅತ್ತೆ, ಮಾವ, ಗಂಡ ಎಲ್ಲರೂ ತನಗೆ ಬಹಳ ಮುದ್ದು ಮಾಡಬೇಕೆಂದು ಆಕೆ ಅಪೇಕ್ಷಿಸುತ್ತಿದ್ದಳು. ಮುದುಕಿ ಕಿರಿ ಸೊಸೆಗೆ "ಬಾರಮ್ಮ ಒಮ್ಮೆ, ನಿನ್ನ ಕೂದಲು ನೋಡು ಹೇಗೆ ಕೆದರಿಕೊಂಡು ಭುರು ಭುರು ಹಾರಾಡುತ್ತವೆ? ಮೂರು ದಿನಗಳಿಂದ ಎಣ್ಣೆನೇ ಹಚ್ಚಿಲ್ಲವೇನೇ? ಇಲ್ಲಿ ಕೊಡು, ನಾ ಬಾಚುತ್ತೇನೆ" ಎಂದರೆ ಸರಿ, ಹಿರಿಯ ಸೊಸೆ ಮೋರೆ ಗಂಟಿಕ್ಕಿ ಗೊಣಗಾಡುತ್ತಿದ್ದಳು. "ಸೈ ಸೈ ಇನ್ನೂ ಚಿಕ್ಕ ಬಾಲೆ ಬಿಡ್ರಿ—ಹೀಗೆಲ್ಲ ಇವಳ ಆರೈಕೆ ಮಾಡುತ್ತ ಇರಿ!" ಆಗ ಮುದುಕಿ "ಏನೇ ಖಂಡಾಯತರ ಮನೆಯ ಮಗಳೇ,* ನಾ ನಿನ್ನ ಬಗ್ಗೆ ಏನೇನೂ ಮಾಡಿದ್ದೇ ಇಲ್ಲ, ನೋಡಿದ್ದೇ ಇಲ್ಲ. ಅಲ್ಲವೇನೇ? ನಿನ್ನ ಆತ್ಮವನ್ನೇ ಕೇಳಿಕೋ!" ಒಂದು ಮುಗುಳು ನಗೆಯಾಡುವಳು.

"ನಾನು ಹೇಳಿ ಕೇಳಿ ಬಡವಿ, ಬಡವರ ಮನೆಯ ಮಗಳು. ನನಗೆ ಯಾರು ಏನು ಮಾಡುವರು? ನೋಡುವರು?"—ಎಂದೆಲ್ಲ ಏನೇನೋ ರೇಗಾಡುತ್ತ ಹಿರಿ ಸೊಸೆ ತನ್ನ ಕೆಲಸಕ್ಕೆ ತೊಡಗುತ್ತಿದ್ದಳು. ಅದಕ್ಕೆ ಅತ್ತೆ, "ಅಯ್ಯೋ ಇದೆಂಥ ಹೊಟ್ಟೆಕಿಚ್ಚಿನ ಹೆಣ್ಣೆ! ನನ್ನ ಈ ಪುಟ್ಟ ಸೊಸೆ ಮನೆಗೆ ಬಂದಂದಿನಿಂದ ಒಂದು ದಿನವಾದರೂ ಕೇಳಿದಳೇ ಇವಳು,—'ತಂಗೀ ತಿಂದೆಯಾ, ಉಂಡೆಯಾ'—ಎಂದು? ಮಂಡೆ ಜಡೆಗಟ್ಟಿ ಜಿಡುಕಾಗಿಬಿಟ್ಟದೆ. ಆಗೆಲ್ಲೋ 'ಹೆಳಲು ಬಾಚುತ್ತೇನೆ ಇತ್ತ ಬಾ' ಎಂದೂ ನಾನು ಹೇಳಬಾರದೇ? ನೀನು ಮಾತು ಮಾತಿಗೂ ಮೋರೆ ಪರಚುವ ಹೆಂಗಸು ನೋಡು!"

ಬಾಲಕ್ಕೆ ಗಾರುಡಿಗನ ಕೈ ಸೋಂಕಿದೊಡನೆ ಹಾವು ಹೆಡೆಯೆತ್ತುವುದಿಲ್ಲವೇ? ಹಾಗೆ, ಅತ್ತೆಯ ಮಾತಿಗೆ ಹಿರಿಯ ಸೊಸೆ ಉರಿದೆದ್ದು ಮುರಿದು ಬಿದ್ದು ಇದಿರುತ್ತರ

---

*ಹಿಂದೀ ಪ್ರದೇಶದಲ್ಲಿ ಸಾಮಾನ್ಯವಾಗಿ ಸೊಸೆಯನ್ನು ಅವಳ ತವರಿನ ಮಗಳೆಂದು, ಇಂಥ ಮಗಳ ತಾಯಿಯೆಂದು ಅಥವಾ ಇಂಥವರ ಸೊಸೆಯೆಂದು ಕರೆಯುವುದು ವಾಡಿಕೆ, "ಖಂಡಾಯತ" ಒಂದು ಕುಲದ ಹೆಸರು.

ಕೊಡುತ್ತಿದ್ದಳು. "ಅಯ್ಯೋ, ನನ್ನ ಪುಟ್ಟ ಸೊಸೇss! ನನ್ನ 'ಹೋರಾ' 'ಸೋನಾ'ರಿಗಿಂತ ಚಿಕ್ಕ ಮುದ್ದು ಮಣಿಯೇ ಇವಳು? ಇವಳು ತಿಳಿಯಬಹುದು, ನಾನಿನ್ನೂ ಹಾಲುಣ್ಣುವ ಹಸುಳೆಯೆಂದು. ನನ್ನ ಕಂದಮ್ಮಗಳು ಹಸಿವೆಯ ಕಿಚ್ಚಿಗೆ ಕಳವಳಪಡುತ್ತ ಬಿದ್ದಾಗ ಒಂದು ದಿನವಾದರೂ ಅವರ ಗಂಜಿಗಾಗಿ ಒಂದು ಹಿಡಿ ಅಕ್ಕಿ ಬೇಯಿಸಿ ಕೊಡುವ ಬುದ್ಧಿ ಯಾರಿಗಾದರೂ ಬಂದದ್ದುಂಟೇ? ಒಂದಿಷ್ಟು ಗಂಜಿಯ ಅಗಳು ಹಿಂಡಿ ಯಾರಾದರೂ ಬಿಡಿಸಿದ್ದುಂಟೇ ? ನನಗೇನು ಬಂದಿದೆ, ಬೇರೆಯವರ ಆರೈಕೆ ಆರೋಗಣೆ ನಾ ಮಾಡಲಿಕ್ಕೆ?"

"ಅವ್ವಯ್ಯಾ, ತಂಗಿಯ ಜತೆಗೆ ತಕರಾರು ಮಾಡುತ್ತೀಯೇಕವ್ವಾ? ನೀನು ಕಲಿಸಿದಂತೆ ಆಕೆ ಕಲಿಯುವಳಲ್ಲವೇ?"

"ಹಾಂ, ಹಾಂ, ನನ್ನ ಮಾತೇ ಕಲಿಯಲಿಕ್ಕೆ ಮಂದಿ ನನ್ನ ಮುಖಾನೇ ನೋಡುತ್ತಿರುತ್ತಾರೆ ! ನೀವೇ ಏಕೆ ಕಲಿಸುವುದಿಲ್ಲ? ನಿಮ್ಮ ಮಾತೂ ಆಕೆ ಎಷ್ಟೋ ಸಲ ಕೇಳಿ ಆಗಿದೆ."

ಇದಕ್ಕೆ ಅತ್ತೆ ಒಡಂಬಡಿಸುವ ದನಿಯಲ್ಲಿ: "ನಿನ್ನನ್ನು ಕಲಿಸಿ ಕಲಿಸಿ ಸುಧಾರಿಸಿ ಆಯ್ತು. ಮತ್ತೆ ಈಗ ಆಕೆಯನ್ನು ಕಲಿಸಿ ಏನುಮಾಡಲಿ? ನಿನ್ನ ಮನಬಂದಂತೆ ಮಾಡವ್ವಾ. ನನಗೆ ನನ್ನ ತರಕಾರಿ ಓಳಿಗಳಿವೆ, ಮಾವಿನ ಮರವೂ ಇದೆ ಹಿತ್ತಲಲ್ಲಿ. ನನಗಾಗಿ ನಾನು ಏನಾದರೂ ಮಾಡಿದ್ದುಂಟೇ ಮಗೂ?"

ಆ ಹಿತ್ತಲ ತರಕಾರಿಯ ಓಳಿ ಮುದುಕಿಗೆ ಹಳೆ ಪುರಾಣದ ಹೊತ್ತಿಗೆಯಂತಿತ್ತು —ಸಂಜೆ ಮುಂಜಾವು ಯಾವಾಗ ನೋಡಿದರೂ ಆಕೆ ತರಕಾರಿಗೆ ನೀರೆರೆಯುತ್ತ ಆರೈಕೆ ಮಾಡುತ್ತ ಇರುತ್ತಿದ್ದಳು. ಮೊಮ್ಮಕ್ಕಳೊಂದಿಗೆ ಹರಟೆ ಕೊಚ್ಚುವದು, ಇಬ್ಬರೂ ಸೊಸೆಗಳ ಮೇಲೆ ಯಜಮಾನಿಕೆ ನಡೆಯಿಸುವದು, ಮತ್ತು ತರಕಾರಿ ಹೆಕ್ಕುವದು—ಹೆಚ್ಚುವದು—ಇವುಗಳ ಹೊರತು ಮುದುಕಿಗೆ ಸಂಸಾರದಲ್ಲಿ ಬೇರೆ ಕೆಲಸವೇ ಇದ್ದಿಲ್ಲ.

ಆದರೂ ಮುದುಕಿಯ ಮೇಲಾಳಿಕೆಯ ಕೆಲಪಾಲು ಹಿರಿಯ ಸೊಸೆಯ ಕೈಗೆ ಬಂದುಬಿಟ್ಟಿತ್ತು. ಮನೆಗೆ ಬರಹೋಗುವವರನ್ನು, ತರ ಒಯ್ಯುವದನ್ನು ಕೊಡಕೊಳ್ಳುವದನ್ನು ಆಕೆಯೇ ಎಲ್ಲ ನೋಡಿಕೊಳ್ಳುತ್ತಿದ್ದಳು. ಇದೂ ಅಲ್ಲದೆ ತನ್ನ ಯಜಮಾನಿಕೆ ಕಿರಿಸೊಸೆಯ ಮೇಲೆಯೂ ನಡೆಯಿಸತೊಡಗಿದ್ದಳು. ಕಿರಿಯ ಸೊಸೆ ಅತ್ತೆಯೊಂದಿಗೆ ಮಾತಾಡುತ್ತಿದ್ದಿಲ್ಲ. ಸಿಡಿಮಿಡಿಯಾಗುತ್ತ ಅತ್ತೆಯನ್ನು ಕರೆಯುತ್ತಿದ್ದಳು. ಸೊಟ್ಟಚರ್ಯೆ ಮಾಡುತ್ತಿದ್ದಳು. ಕೈಗೆಕ್ಕೈ ತಿಕ್ಕಿಕೊಳ್ಳುತ್ತಿದ್ದಳು. ಆದರೆ ಎಲ್ಲವನ್ನೂ ತೆಪ್ಪಗೆ ಕೇಳಿಕೊಳ್ಳುತ್ತಿದ್ದಳು.

ದನ–ಪಶು ಮಾತಾಡಲಾರವು. ಕಿವುಡರೂ ಮೂಕರೂ ಮಾತಾಡಲಾರರು. ಆದ್ದರಿಂದ ಜನ ಅವರಿಗೇನೂ ತಿಳಿಯುವದೇ ಇಲ್ಲವೆಂದು ಭಾವಿಸುವದುಂಟು.

ಏಕೆಂದರೆ ವಿನಾಕಾರಣ ಅಂಥವರು ತಿನ್ನುವ ಪೆಟ್ಟು ಎಷ್ಟು? ಆದಾಗ್ಯೂ ಅವರು ಪಿಟ್ಟೆನ್ನುವದಿಲ್ಲ, ತುಟಿ ಬಿಚ್ಚುವದಿಲ್ಲ. ಎಂಥ ಅಮಾನುಷತೆ ಇದು! ಆದರೂ ಬಾಯಿ ತೆರೆಯುವಂತಿಲ್ಲ. ಬಡ ಕಿರಿ ಸೊಸೆಯ ಅವಸ್ಥೆಯೂ ಹಾಗೆಯೇ ಇತ್ತು. ಆಕೆ ಎಲ್ಲವನ್ನೂ ಸುಮ್ಮನೆ ಸದ್ದಿಲ್ಲದೆ ಕೇಳಿಕೊಳ್ಳುತ್ತಿದ್ದಳು. ಅವಳ ಪರವಾಗಿ, ಅವಳ ಪಕ್ಷ ಹೊತ್ತು ಯಾರೂ ಏನೂ ಆಡುತ್ತಿದ್ದರೆ ಅದು ಮುದಿ ಅತ್ತೆಯೇ. ಆದರೆ ಅತ್ತೆ ಹೇಳಿ ಕೇಳಿ ಮುದುಕಿ. ಮನೆಯ ವಾರ್ತೆ ಎಲ್ಲಿಯತನಕ ಎಷ್ಟೆಂದು ನೋಡಿಕೊಂಡಾಳು? ಆದರೂ ಮನೆ ಆಕೆಯದೇ ಇತ್ತು. ಇಬ್ಬರೂ ಸೊಸೆಯಂದಿರ ಜಗಳದಿಂದ ಮನೆ ಒಡೆಯಬಾರದು—ಈ ವಿಚಾರ ಆಕೆಯೇ ಮಾಡಬೇಕಿತ್ತು. ಇದರಿಂದ ನಡುನಡುವೆ ಮುದುಕಿಯ ಮನಸ್ಸು ಕದಡಿ ಕೆಟ್ಟು ಹೋಗುತ್ತಿತ್ತು.

~*~*~*~

೨

"ಒಂದು ಮುಂಜಾನೆಯಿಂದ ಇಷ್ಟು ಕಾಳು ಬಿಸಿಲಿಗೆ ಹರಗಿ ಬಿದ್ದಿದೆ. ಆದರೆ ಅವನ್ನಿಷ್ಟು ಮರಳಿಸಲಿಕ್ಕೆ ಯಾರ ಕೈಕಾಲು ಕದಲುವದಿಲ್ಲ! ಯಾಕೆ? ನಾನೊಬ್ಬಳೇ ತಿನ್ನುವಾಕೆಯೇ? ಇನ್ನಾರಿಗೂ ಈ ಕೆಲಸ ಬರುವುದೇ ಇಲ್ಲವೇ? ಛೀ, ಛೀ; ಮಾತುಮಾತಿಗೂ ಅದೇ —ಹಿಸೆ ಪಾಲು ಹಂಚುವ ವಿಚಾರ. ಮೆಟ್ಟು ಮೆಟ್ಟಿಗೂ ಅದೇ ಮನೆಮುರುಕು ಪಂಚಾಯತಿ."

"ಹೌದು, ನಿಮ್ಮದು ಮತ್ತೆ ಬೇರೆ ಏನು ವಿಚಾರ? ಕಾಳು-ಕಡಿ ನಾನು ಗೇರುತ್ತೇನೆ, ಮೆರೆಯುತ್ತೇನೆ. ಮತ್ತೆ ನಾನೇ ಮನೆಮುರುಕಳು. ಎಲ್ಲ ತಪ್ಪು ನನ್ನದೇss. ಉಳಿದವರೆಲ್ಲ ಪರಮಪಾವನ ಶ್ರೀ ತುಲಸೀದಲಗಳೇss!"

"ಉಳಿದವರು" ಅಂದರೆ ಮತ್ತಾರೂ ಅಲ್ಲ—ಅದೇ ಕಿರಿಸೊಸೆ. ಅವಳೊಬ್ಬ ಸರಬರಾಜುಗಾರನ ಒಬ್ಬಂಟಿ ಮಗಳು. ತುಸು ಮುದ್ದಿನಲ್ಲಿಯೇ ಬೆಳೆದವಳು. ಮಾವನ ಮನೆಗೆ ಬರುವಾಗ ಆಕೆ ತಂದ ವಸ್ತು ಒಡವೆ ನೋಡಿಯೇ ನೆರೆ ಕರೆಯವರು ಕಣ್ಣು ಬಿಟ್ಟಿದ್ದರು. ಕೇರಿಯ ಹೆಣ್ಣು ಮಕ್ಕಳು ತಮ್ಮತಮ್ಮ ತವರನ್ನು ಹಳಿಯ ಹತ್ತಿದ್ದರು. ಸೊಸೆಯಂದಿರಿಗೆಲ್ಲ ಒಳಒಳಗೇ ನಾಚುವಂತೆ ಆಗಿತ್ತು. ಅತ್ತೆಯವರು ಒಮ್ಮೆ ಸೊಸೆಯಂದಿರನ್ನು ಗದ್ದರಿಸುತ್ತಿದ್ದರೆ ಒಮ್ಮೆ ಅದನ್ನೇ—ಪಧಾನರ ಕಿರಿಸೊಸೆಯ ಮಾತನ್ನೇ—ಎತ್ತಿ ದೂರಾಡುತ್ತಿದ್ದರು: "ಅಯ್ಯೋ ನೀನು ಕುಲಗೆಟ್ಟವರ ಮಗಳು. ನೀನೇನು ತಂದೀ? ಆ ಪಧಾನರ ಸೊಸೆಯ ಹಾಂಗೆ ನೀನೇನು ವಂಕಿ, ನಾಗಮುರಿಗೆ, ನತ್ತು, ಬುಗುಡಿ, ಬುಲಾಕು, ಕಡಗ, ಕುಡುಕು ತಂದು ನಮ್ಮ ಮನೆ ತುಂಬಿಟ್ಟಿದ್ದಿಯೇನು? ಇಷ್ಟೆಲ್ಲ ಬಿಂಕ-ಬಡಿವಾರ ಮಾಡಲಿಕ್ಕೆ?"

ಯಾರೂ ಏನೂ ಹೇಳದ ಹೊರತು ಕಿರಿಸೊಸೆ ತಾನಾಗಿಯೇ ಯಾವದೇ ಕೆಲಸಕ್ಕೆ ಕೈ ಹಾಕುತ್ತಿದ್ದಿಲ್ಲ. ಎಲ್ಲರೊಂದಿಗೇ ಸೆಟೆದುಕೊಂಡೇ ಮೈ ಕದ್ದೇ ನಡೆಯುತ್ತಿದ್ದಳು. ಇದೀಗ ಹೊಚ್ಚ ಹೊಸತೇನಲ್ಲ ಮನೆಗೆ ಬಂದವಳು. ಅತ್ತೆ ಮಾವಂದಿರು ಕಣ್ಣೆದುರು ಇದ್ದಾರೆ. ಅವರೆದುರು ಹೊರಗೆ ಬೀಳುವದು ಹೇಗೆ? ಯಾರೊಂದಿಗೂ ಮಾತಾಡುವದು ಹೇಗೆ?

ಅತ್ತೆಯೂ ಈಗ ಹಿರಿಯ ಸೊಸೆಯ ಮಾತಿಗೆ ಬಾಯಿಕೊಟ್ಟು ಹೆಚ್ಚು ಮಾತಾಡುತ್ತಿದ್ದಿಲ್ಲ. ಮಾತು ಬೆಳೆಸುವದರಿಂದ ಏನು ಬಂತು? ಆದರೂ

ನ್ಯಾಯವೆಂಬುದೊಂದು ಇದೆಯಲ್ಲ. ನಿಜ ಹೇಳುವದಾದರೆ ಆಕೆಯೊಬ್ಬಳೇ ಎಲ್ಲ ನೋಡಿಕೊಂಡು, ಮಾಡಿಕೊಂಡು ಹೋಗುವಾಕೆ. ಈಕೆ ಹೊಸ ಸೊಸೆ. ನವವಧುವಾಗಿ ಕೂತವಳು. ಒಂದು ಕಡ್ಡಿ ಇತ್ತಿಂದತ್ತ ಎತ್ತಿಡುವವಳಲ್ಲ.

ಅತ್ತೆ ಕೂಗಿದಳು: "ತುಸು ಇತ್ತ ಬಾರಮ್ಮಾ, ನೇತ್ರೂ. ಹಾರಾಳಿಗೆ "ಉಬಟಣೆ" ಹಚ್ಚಿ ಕೊಡುತ್ತೇನೆ. ನೀನು ತುಸು ಕಾಲಿನಿಂದ ಈ ಕಾಳಿಷ್ಟು ಹರಡಿ ಬಿಡು."

ಹಿರಿಯ ಸೊಸೆ ಮುಗುಳುನಗೆ ಬೀರುತ್ತ ಶಾಂತ ದನಿಯಲ್ಲಿ ಅಂದಳು. "ಇನ್ನೂ ಮೆಲ್ಲಗೆ, ಇನ್ನೂ ಮಿದುವಾಗಿ ಕರೆಯಿರಲ್ಲ ಕಿರಿ ಸೊಸೆಯನ್ನು?"

ಕಿರಿಯ ಸೊಸೆಯ ಹೆಸರು ನೇತ್ರಮಣಿ. ನೇತ್ರಮಣಿ ಮುಖ ಉಬ್ಬಿಸಿಕೊಂಡು ಬಂದು ಕಾಳು ಹರಡಿಹೋದಳು. ಅತ್ತೆಯ ಎದುರಿಗೆ ಮತ್ತೇನು ಮಾಡ್ಯಾಳು? ಅತ್ತೆ ಮೊಮ್ಮಗಳ ಮೈಗೆ ಉಬಟಣೆ ಹಚ್ಚಿ ಆದಮೇಲೆ ಹಿತ್ತಲ ಕಡೆಗೆ ಹೋದಳು. ಆಗ ಹಿರಿಸೊಸೆಯತ್ತ ಬೆರಳು ಮಾಡಿ ಕಿರಿಸೊಸೆ ಅಂದಳು: "ಅಹಾ! ನನ್ನ ಹೆಸರಮೇಲೆ ಎಷ್ಟೆಲ್ಲ ಚರ್ಚೆ ಆಗುತ್ತಿದೆ! ನಾನೇನು ಯಾರದಾದರೂ ತಿನ್ನುತ್ತೇನೆಯೇ?— ಉಣ್ಣುತ್ತೇನೆಯೇ? ನನ್ನ ಮೇಲೆ ಬರೆ ಎಳೆಯಲಿಕ್ಕೆ ಎಲ್ಲರೂ ಎಲ್ಲ ಹೊತ್ತೂ ತಯಾರು! ಅದೇಕೆ?"

ಹಿರಿಯ ಸೊಸೆ ಚಟ್ಟನೆ ಹೋಗಿ ಅತ್ತೆಯನ್ನು ಕರೆದು ತಂದಳು, "ಬನ್ನಿರಿಲ್ಲಿ, ಕೇಳಿ. ನೋಡಿ ನಿಮ್ಮ ಈ ಗುಣಸುಂದರಿ ಸೊಸೆಯ ಮಾತನ್ನು. ಆಕೆ, ಪಾಪ, ಯಾರ ಕೇಡನ್ನೂ ಬಯಸುವವಳೇ ಅಲ್ಲ."

"ಸುಮ್ಮನಿರು, ಸುಮ್ಮನಿರು ನೇತ್ರೂs" ಅತ್ತೆ ಬಂದು ಹೇಳಿದಳು: "ಹೇಳಿ ಕೇಳಿ ಇವಳು ನಿನ್ನ ಅಕ್ಕ, ಹಿರಿಯಳು. ಇವಳ ಇದುರಿಗೆ ಇಂಥ ಮಾತು ಹೇಳುವದಲ್ಲ. ಹಿರಿಯಕ್ಕನ ಮಾತಿಗೆ ಹೀಗೆ ಬಾಯಿ ಕೊಡುವದೇ?"

ಕಿರಿಸೊಸೆ ಅಲ್ಲಿ ಏನೋ ಸುಮ್ಮನಾದಳು. ಆದರೆ ಛಕಡಿಯ ಮುಂದೆ ಮಾತಿಗೆ ಮಾತು ಕಟ್ಟಿ ಕೂಡಿಸಿ, ಕಡ್ಡಿ ಇದ್ದದ್ದು ಗುಡ್ಡ ಮಾಡಿ ಎಲ್ಲ ಸಂಗತಿ ದೂರಿಕೊಂಡಳು. ಅದಕ್ಕೆ ಉಪ್ಪು ಕಾರವನ್ನು ತುಂಬ ಹಚ್ಚಿದಳು. ಒಳಒಳಗೇ ಹೊತ್ತಿ ಹೊಗೆಯಾಡುವ ಬೆಂಕಿ ಒಂದಲ್ಲ ಒಂದು ದಿನ ಉರಿದೇಳುವದೇ ಸರಿ. ಅದನ್ನು ಎಷ್ಟು ಕಾಲ ಹತ್ತಿಕ್ಕಲು ಬರುತ್ತದೆ?

ಛಕಡಿ ಸೊಗಸುಗಾರ. ಹೆಗಲಮೇಲೆ ಬಣ್ಣದ ಪಂಚೆ. ಕಿವಿಯಲ್ಲಿ ದಕ್ಷಿಣ ದೇಶದವಂಥ ಬಾವಲಿಗಳು. ಹಲ್ಲಿಗೆ ಚಿನ್ನದ ಕಟ್ಟು ಹಾಕಿಕೊಂಡ ಆತ ಊರೆಲ್ಲ ಅಲೆದು ಹೋದಲ್ಲೆಲ್ಲ ತನ್ನದೇ ಓಲಗ ಕಟ್ಟುವ ಭೂಪ. ಬೆಳ್ಳಿಯ ಗುಂಡಿ ಏರಿಸಿದ ಚಂಚಿಯನ್ನು ಬಗಲಲ್ಲಿ ಒತ್ತಿಕೊಂಡು, ಬಿಳಿಯಂಗಿಯ ಮೇಲೆ ಕಪ್ಪು ವಾಸ್ಕೋಟು

ತೊಟ್ಟು, ಕಲಕತ್ತೆಯಿಂದ ಬರುವ ಗೆಳೆಯರೊಂದಿಗೆ ನಾಚು ತಮಾಷೆಗಳನ್ನು ನೋಡಲು ಹೋಗುತ್ತಾನೆ. ಊಟದ ಹೊತ್ತಿಗೆ ಸರಿಯಾಗಿ ಮನೆ ಸೇರುತ್ತಾನೆ. ಊಟಕ್ಕೆ ಬಡಿಸುವದರಲ್ಲಿ ತುಸು ತಡವಾದರೆ ತೀರೇ ಹೋಯಿತು. ಅನ್ನದ ಬೊಡ್ಡೆಯನ್ನೇ ಒಡೆದು ಹಾಕುತ್ತಾನೆ! ಮುದಿ ಶಾಮಪಧಾನನೋ—"ಹುಡುಗ ಇನ್ನೂ ಚಿಕ್ಕವ. ಆದ್ದರಿಂದ ಇಷ್ಟು ಪುಂಡನಿದ್ದಾನೆ. ಕತ್ತಿಗೆ ನೊಗ ಕೂತಿತೆಂದರೆ ಆಗ ತಗ್ಗಿ ನಡೆಯಬಹುದು" ಎಂದು ಆತ ಭಾವಿಸುತ್ತಾನೆ. ಬಾಗಿಲ ಕಟ್ಟೆಯ ಹತ್ತಿರ ಅವನ ಸದ್ದು ಕೇಳುತ್ತಲೇ ಮನೆಯ ಮುದುಕರು ಸೊಸೆಯಂದಿರಿಗೆ ಎಚ್ಚರಿಕೆ ಕೊಡುತ್ತಾರೆ; "ಈ ಪುಂಡ ಬಂದುಬಿಟ್ಟ. ಲಗೂನೆ ಅವನ ತಿಂಡಿ ತಿನಿಸು ಏನಾದರೂ ಮಾಡಿ ಕೊಡಿರಿ. ಇಲ್ಲವಾದರೆ ಮನೆತುಂಬ ಗಲಾಟೆ ಎಬ್ಬಿಸಿ ಬಿಟ್ಟಾನು."

ಆ ದಿನ ಸೋನಾ–ಜಡಿಯಲ್ಲಿ ಜಾತ್ರೆ ಇತ್ತು—ಬಲು ದೊಡ್ಡ ಜಾತ್ರೆ. ಜಾತ್ರೆಗೆ ಹೋದ ಭಕಡಿ ಜೂಜಾಡಿದ. ಉಯ್ಯಾಲೆ ತೂಗಿದ. 'ರಾಮಲೀಲಾ' ಬಯಲಾಟ ನೋಡಿದ. ಮತ್ತೆ ನಡುರಾತ್ರೆಗೆ ಮನೆಗೆ ಮರಳಿದ. ಮಿಕ್ಕ ದಿನವೆಲ್ಲ ಪಧಾನನ ಮನೆಯ ಚಿಕ್ಕ ಮಕ್ಕಳು ಸಂಜೆಯಾಗುತ್ತಲೆ ನಿದ್ದೆ ಹೋಗುತ್ತಿದ್ದವು. ಆದರೆ ಅವು ಕಣ್ಣು ಮುಚ್ಚದೆ ಕಣ್ಣಿಟ್ಟು ಕೂತಿದ್ದವು—ಚಿಗಪ್ಪ ಜಾತ್ರೆಯಿಂದ ಏನೇನು ತರುವನೋ ಎಂದು. ಅವುಗಳಲ್ಲಿ ತೀರ ಚಿಕ್ಕ ಹುಡುಗ ಮಾತ್ರ ಮಲಗಿ ಬಿಟ್ಟಿದ್ದ. ಆದರೂ ತಾಯಿ ಅಕ್ಕಂದಿರಿಗೆ ಹೇಳಿಯೇ ಮಲಗಿದ್ದ. "ಚಿಗಪ್ಪ ಬರುತ್ತಲೇ ನನ್ನನ್ನು ಲಗು ಎಬ್ಬಿಸಬೇಕು" ಎಂದು. ಮುದುಕನೂ ಹಿರಿಯ ಮಗನೂ ಊಟಮಾಡಿ ಮಲಗಿದ್ದರು. ಮುದುಕಿ ಕಿರಿ ಮಗನಿಗಾಗಿ ದಾರಿ ಕಾಯುತ್ತ ಕೂತಿದ್ದಳು. ಆತ ಬಂದನಂತರವೇ ಆಕೆ ಉಣ್ಣುವವಳು. ಅತ್ತೆ ಉಣ್ಣದೇ ತಾವು ಉಣ್ಣುವದು ಹೇಗೆ?—ಎಂದು ಇಬ್ಬರೂ ಸೊಸೆಯರು ತಾವು ಹಸಿದೇ ಉಳಿದರು. ಸೋನಾ ಮತ್ತು ಹಾರಾ ಅಜ್ಜಿಯ ಬಳಿಯಲ್ಲಿ ಕೂತು ಕತೆ ಕೇಳುತ್ತಿದ್ದರು:

> **"ಪುಟ್ಟ ಕೆರೆ ಪುಟ್ಟ ಕೆರೆ**
> **ಪುಟ್ಟ ಕೆರೆಗೆ ನೀರು**
> **ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠ ಭ್ರಾತ ದೊರೆ**
> **ಅವನ ಮಡದಿ ರಾಣಿ**
> **ಕನಕಪುರಕೆ ರಾಜಽ**
> **ನಮ್ಮ ಸ್ವಾಽಽಮೀಽ"**

"ಅಮ್ಮಾ, ಓಽಽಅಮ್ಮಾ!" ಹೊರಗೆ ದೂರಿಂದಲೇ ಭಕಡಿಯ ಕೂಗು ಕೇಳಿಬಂತು.

"ಅಕೋ ನಮ್ಮ ಉಂಡಾಡಿ ಬಂದುಬಿಟ್ಟ" ಎಂದು ಮುದುಕಿ ಲಗು ಬಗೆಯಿಂದ ಬಾಗಿಲು ತೆರೆಯಲು ಎದ್ದಳು. ಹಾರಾ ಸೋನಾ ಇಬ್ಬರೂ ಮುದುಕಿಯ ಬೆನ್ನಿಗೆ ಓಡಿದರು—ಚಿಗಪ್ಪ ಏನು ತಂದಿದ್ದಾನೆ ನೋಡೋಣವೆಂದು ಎಲ್ಲಕ್ಕೂ ಕಿರಿಯತಂಗಿ ತಮ್ಮನನ್ನು ಎಬ್ಬಿಸಲು ಓಡಿದಳು.

ಭಕಡಿ ಉಂಡಿ, ಅಳ್ಳು (ಹೊದ್ಲು), ಎಲೆ-ಅಡಿಕೆ, ಬಟಾಟೆ, ಉಳ್ಳಾಗಡ್ಡೆ ಮುಂತಾದ ಜೀನಸು ಖರೀದಿ ಮಾಡಿ ತಂದಿದ್ದಾನೆ. ಮುದುಕಿ ಮೊದಲು ಮಕ್ಕಳ ಕೈಗೆ ಸ್ವಲ್ಪ ಸ್ವಲ್ಪ ಅಳ್ಳು ಮತ್ತು ಉಂಡೆ ಇರಿಸುತ್ತಾಳೆ. ಆದರೆ ಅಷ್ಟಕ್ಕೇ ಮಕ್ಕಳ ಮನಸ್ಸು ಮೆಚ್ಚಿಗೆಯಾಗುವದುಂಟೇ? ಎಲ್ಲರೂ ದುರುದುರುನೆ ದಿಟ್ಟಿಸುತ್ತಿದ್ದರು. ಚಿಗಪ್ಪ ಮತ್ತೇನು ತಂದಿದ್ದಾನೆಂದು ಪುಟ್ಟತಮ್ಮನೂ ಕಣ್ಣು ಉಜ್ಜಿಕೊಳ್ಳುತ್ತ ಎದ್ದು ಬಂದು ಚಿಗಪ್ಪನ ಹತ್ತಿರ ಒತ್ತಿ ಕೂತನು.

ಚಿಗಪ್ಪ ದೊಡ್ಡಸ್ತಿಕೆಯ ದನಿಯಲ್ಲಿ ಆಡಿದ: "ಮತ್ತೇನೋ ಪೋರಾ; ಉಂಡಿ ತಿಂದಾಯಿತು. ಮತ್ತೇಕೆ ಎಚ್ಚರಾಗಿರೋದು? ನಡೆಯಿರಿ, ಹೋಗಿ ಮಲಗಿಕೊಳ್ಳಿ." ಆದರೆ ಆ ಪೋರರು (ತುಂಟರು) ಅವನನ್ನು ಬಿಟ್ಟರಲ್ಲವೇ? ಅವರಿಗೆ ಗೊತ್ತು, ಕಾಕಾ (ಚಿಗಪ್ಪ) ತಮಗಾಗಿ ಒಂದು ಆಟಗೆಯೋ, ಗೊಂಬೆಯೋ ತಂದೇ ತಂದಾನೆಂದು. ಆದರೆ ಯಾರೂ ಬಾಯಿ ಬಿಚ್ಚುತ್ತಿದ್ದಿಲ್ಲ. ಇದೇ ಹೊತ್ತಿಗೆ ಕಾಕನ ಜೇಬಿನಿಂದ ಒಂದು ಕೆಂಪು ಜೀನಸು ಹೊರಬಿತ್ತು. ನಾಲ್ಕೂ ಮಕ್ಕಳ ಲುಬ್ಧಮುಗ್ಧ ಕಣ್ಣುಗಳು ಆ ಕಡೆಗೆ ನಟ್ಟವು. ಚಿಗಪ್ಪ ಆ ಕೆಂಪು ವಸ್ತುವನ್ನು ಬೆಳಕಿನಲ್ಲಿ ಎತ್ತಿ ತೋರಿಸಿದ. ಪುಟ್ಟದೊಂದು ಗೊಂಬೆ ಹಂಸದಂತಹದು. ಎಲಾ ಇದೇನು? ಇದು ಒತ್ತಿದೊಡನೆ ಕೂಂ, ಕೂಂ, ಮಾಡುತ್ತದಲ್ಲ! "ಯಾರಿಗೆ ಬೇಕು, ಯಾರಿಗೆ ಬೇಕು" ಎನ್ನುತ್ತ ಚಿಗಪ್ಪ ಆ ಗೊಂಬೆಯನ್ನು ಮೇಲಕ್ಕೆತ್ತಿದನು. ಆಗ ನಾಲ್ಕೂ ಬಾಲಕರ ಎಂಟೂ ಕೈಗಳು ಅದರ ಕಡೆಗೆ ಚಾಚಿ ಬೀಸಿ ನೆಗೆದಾಡಿದವು. ನಾಲ್ಕೂ ಬಾಯಿಗಳಿಂದ ಒಮ್ಮೆಲೆ ಒಂದೇ ಮಾತು ಹೊರಟಿತು: "ಕಾಕಾ, ನನಗೆ, ನನಗೆ, ನನಗೆ...," ಆದರೆ ಆ ಗೊಂಬೆ ಸಿಕ್ಕಿದ್ದು ಎಲ್ಲಕ್ಕೂ ಕಿರಿಯ ತಮ್ಮನಿಗೆ. ಅನಂತರ ಕಾಕಾನ ಜೇಬಿನಿಂದ, ಗಂಟಿನಿಂದ ಮೆಲ್ಲ ಮೆಲ್ಲನೆ ಹೊರ ಬಿದ್ದವು—ಒಂದು ಸ್ವರದ ಪೆಟ್ಟಿಗೆ, ಒಂದು ಪೀಪಿ, ಒಂದು ಚರಖೀ. ಮಕ್ಕಳಲ್ಲಿ ಒಬ್ಬ ಸ್ವರದ ಪೆಟ್ಟಿಗೆಗಾಗಿ, ಇನ್ನೊಬ್ಬ ಗೊಂಬೆಗಾಗಿ ಅಳತೊಡಗಿದ. ಆ ಅಳುವಿನ ಆಕ್ರೋಶದ ನಡುವೆ ಮತ್ತೊಬ್ಬ ಪೋರ ಪೀಪಿ ಊದಿದ. ಆ ಪೀಪಿಯ ಚೀತ್ಕಾರಕ್ಕೆ ಮನೆಯೇ ಗಡುಚಿಕ್ಕಿತು.

ಮುದಿ ಶಾಮಪಧಾನನ ನಿದ್ದೆ ಹರಿಯಿತು. ಆತ ಸಿಟ್ಟಿಗೆದ್ದು ಕೂಗಿದ. "ಮನೆಯೊಳಗೆ ಕಾಲಿಟ್ಟಿದ್ದೇ ತಡ, ಕ್ಯಾಂ ಕ್ಯಾಂ ಕೂಗಾಡುವದರಲ್ಲಿ ತೊಡಗಿಬಿಟ್ಟ. ಕಾಲಿ ಮಾಟಿಗೆ (ಟಾಟಾನಗರಕ್ಕೆ) ಹೋಗು ; ಇಲ್ಲವೇ ಕಲಕತ್ತೆಗೆ ಹೋಗು. ಮನಬಂದಲ್ಲಿ ಹೊರಟು ಹೋಗಿಬಿಡು. ಸಾಕು ನೋಡಿಬಿಟ್ಟೆ. ಇವ ಕಲಕತ್ತೆಗೆ ಹೋದ ಹಾಗೆಯೇ; ಮತ್ತು ಗಳಿಸಿ ನನ್ನ ಹೊಟ್ಟೆ ಹೊರೆದ ಹಾಗೆಯೇ!"

ಬಡ ಭಕಡೀ ಕಲಕತ್ತೆಯ ಮಂದಿಯ ತಲೆಯ ಬೈತಲೆ, ಕಬ್ಬಿಣ ಪೆಟ್ಟಿಗೆಯಲ್ಲಿ ಇಟ್ಟ ದೀಪ—ಇವೆಲ್ಲ ನೋಡಿ ತಾನು ದೇಶಾಂತರಕ್ಕೆ ಹೋಗುತ್ತೇನೆಂದು ಎಷ್ಟು ಸಲ ತಂದೆಯ ಹತ್ತಿರ ಪ್ರಸ್ತಾಪವೆತ್ತಿದ್ದಾನೋ ಹೇಳಿ ತೀರದು. ತಂದೆ ಅನ್ನುತ್ತಿದ್ದ: "ಅಲ್ಲೋ,

ಊರ ಮಣ್ಣಿಗೇನು ವಾಸನೆಯಿಲ್ಲವೋ? ಅಪ್ಪನ ತಲೆ ಎಣ್ಣೆ ಹಚ್ಚದೆ ಬೋಳಿಸಿದೆ; ಈ ಮಗನ ಹಣೆಯ ಕ್ರಾಪು ನೋಡಿ. ಅಪ್ಪ ಅಜ್ಜ ಏಳು ತಲೆಮಾರು ಈ ರೀತಿ ಕಳೆದದ್ದಾಯಿತು. ನೀನು ಮತ್ತೆ ಹೆಚ್ಚು ಗಳಿಸಿ ಕಲ್ಲಿದ್ದಲ್ಲಿ ಬೆಳದಿಂಗಳು ಅರಳಿಸುವಂಥವ!" ಭಕಡಿ ಎಲ್ಲಿಯಾದರೂ ಏನಾದರೂ ತಪ್ಪಿದರೆ ಸರಿ. ತಂದೆ ಇದೇ ಮಾತಿನ ಜಪಮಾಲೆ ಹಿಡಿಯುತ್ತಿದ್ದ!

ಊಟ ಮುಗಿಸಿ ಭಕಡಿ ಮಲಗುವ ಕೋಣೆಗೆ ಹೋದ. ಮಲಗುವ ಕೋಣೆ ಒಂದು ಚಿಕ್ಕ ಕೊಠಡಿ. ಅದರ ಅರೆವಾಸಿ ಜಾಗ ದೊಡ್ಡಕ್ಕಿ ತುಂಬಿಟ್ಟ ಮಣ್ಣು ಪೀಪಾಯಿಗಳಿಂದ ತುಂಬಿದೆ, ಒಂದು ಮಂಚವೂ ಇಲ್ಲ. ಕೆಳಗೆ ನೆಲಕ್ಕೆ ಚಾಪೆಯೊಂದು ಹಾಸಿ ಅದರಮೇಲೆ ಹರಕು ಚಿಂದಿಗಳ ಗುದಡಿ (ಕೌದಿ)ಯಿಂದ ಹಾಸಿಗೆ ಸಿದ್ಧವಾಗಿದೆ. ಗೋಡೆಯ ಒಂದು ಕಿಡಿಯಲ್ಲಿ ಎಣ್ಣೆಯ ಬತ್ತಿಯೊಂದು ಉರಿಯುತ್ತದೆ. ಅದರ ಕೆಳಗಡೆಗೆ ಎಣ್ಣೆಯ ಕಿಟ್ಟು ದಟ್ಟವಾಗಿ ಕೂತಿದೆ. ಮೇಲ್ಗಡೆಗೆ ಬತ್ತಿಯ ಜ್ಯೋತಿಯಿಂದ ಕಪ್ಪಿಟ್ಟ ಮಾಡಿನಿಂದ ಕೆಳಗೆ ಜೋಲಾಡುತ್ತಿವೆ, ಕಾಳಿನ ತೆನೆಗಳ ಎರಡು ಗೊಂಚಲು. ಅತ್ತಿತ್ತ ಗೋಡೆಗುಂಟ ಎದ್ದಿವೆ ವರಲೆಯ (ಗೆದ್ದಲಿಯ) ಒಂದೆರಡು ಬಳ್ಳಿಗಳು. ಒಂದು ಬದಿಗೆ ಎರಡು ಶಿಕ್ಕೆ*ಗಳು ತೂಗುತ್ತಿವೆ. ಶಿಕ್ಕೆಗಳ ಮೇಲೆ ಒಂದೊಂದು ಗಡಿಗೆ. ಗಡಿಗೆಯ ಬಾಯಿ ದೊಡ್ಡ ಹಣತೆಯಿಂದ ಮುಚ್ಚಿದ್ದು. ಮುದಿ ಪಧಾನನ ಹೆಂಡತಿ ಒಂದೊಂದರಲ್ಲಿ ಒಂದೊಂದು ಬಗೆಯ ಕಾಳುಕಡಿ ಎಲ್ಲ ಸಂಗ್ರಹಸಿ ಇಟ್ಟಿದ್ದಾಳೆ. ಕೆಳಗೆ ಒಂದು ಬೆತ್ತದ ಪೀಠಾರೆ. ಇನ್ನೊಂದು ಪಿಠಾರೆ ಮಾವಿನ ಹಲಗೆಯಿಂದ ಮಾಡಿದ್ದು. ಒಂದು ನಾಗುಂದಿಗೆಯ ಮೇಲೆ ಇಟ್ಟಿದೆ. ಎಲೆಗೆ ಸುಣ್ಣ ಹಚ್ಚಿದ ಮೇಲೆ ಆ ಬೆರಳು ಪಿಠಾರಿಗೆ ಒರಿಸಿ ಒರಿಸಿ ಆ ಪೆಟ್ಟಿಗೆ ಅಲ್ಲಲ್ಲಿ ಕಲೆಗೊಂಡಿದೆ.

ಗೋಡೆಯ ಸಂದಿನಲ್ಲಿ ಜೇಡಿನ ಜಾಳಿಗೆ ಹಬ್ಬಿದೆ. ಮೇಲೆ ಒಂದೆರಡು ತೊಗಲು ಬಾವಲಿ ರೆಕ್ಕೆ ಫಡಫಡಿಸುತ್ತ ಒಳಹೊರಗೆ ಹಾರಾಡುತ್ತಿವೆ. ಸೊಳ್ಳೆ ಹುಳಗಳ ಅಶನಾರ್ಥಿಯಾಗಿ ಮಣ್ಣ ಪೀಪಾಯಿಗಳ ಬುಡಕ್ಕೆ ಇಲಿಗಳು ಚಿಂವ್ ಚಿಂವ್ ಎಂದು ಮಣ್ಣು ಅಗೆಯುತ್ತಿವೆ. ಸಾಮಾನ್ಯವಾಗಿ ಆ ಇಡೀ ಮನೆ ಸಾಮಾನು ಇಡಲಿಕ್ಕೆ, ದನಕರು ಕಟ್ಟಲಿಕ್ಕೇ ಆಗಿತ್ತು. ಅವು ಮನೆಮಂದಿಯ ಮೇಲೆ ಕನಿಕರಪಟ್ಟುಕೊಂಡು ಅವರಿಗುಳಿಯಲು ನಾಲ್ಕು ಮೊಳ ಸ್ಥಳ ಬಿಟ್ಟುಕೊಟ್ಟಿವೆ. ಭಕಡಿಯ ಮಲಗುವ ಕೋಣೆಗಿಂತಲೂ ಮುದುಕ ಶಾಮಪಧಾನನೂ, ಬರಜುವೂ ಬಳಸುವ ಕೋಣೆಗಳು ಇನ್ನೂ ಗತಿಗೆಟ್ಟವು. ಭಕಡಿಯ ಕೋಣೆಯಲ್ಲೋ ರಾಧಾಕೃಷ್ಣರ ಒಂದೆರಡು ತಸಬೀರುಗಳಾದರೂ ತೂಗುತ್ತಿವೆ. ಅವರ ಮನೆಯ ಒಂದು ಮೂಲೆಗೆ ಹೆಗ್ಗಣ

---

*ಗಡಿಗೆ ಪಾತ್ರೆಗಳನ್ನು ತೂಗಿಡಲಿಕ್ಕೆ ಮಾಡಿದ ಸಣಬಿನ ಅಟ್ಟಣಿಗೆ.

ಅಗೆದು ಹಾಕಿದ ಮಣ್ಣು, ಇನ್ನೊಂದು ಮೂಲೆಗೆ ತೊಗಲು ಬಾವಲಿಗಳ ಪಿಟ್ಟ ದಿನದಿನವೂ ರಾಶಿಯಾಗುತ್ತ ಹೋಗುವದೇ, ಮತ್ತು ದಿನವೂ ಅವುಗಳ "ಸಫಾಯಿ" ನಡೆಯುವದೇ.

ಬಡ ಭಕಡಿಯ ಹಣೆಯಲ್ಲಿ ಇದೇ ಮನೆ ಬರೆದಿದೆ. ಏನು ಮಾಡ್ಯಾನು? ಮನೆಯ ಗಳಿಕೆ-ಬಳಿಕೆಯ ಹೊಣೆಯಲ್ಲ ಅಪ್ಪ ಅಣ್ಣ ಹೊತ್ತಿದ್ದಾರೆ. ಇವನನ್ನು ಯಾರು ಕೇಳುವವರು ? ಮಾಟವಾದ ಒಂದು ಲಾಂದ್ರು ತರಲಾರ; ಒಂದು ಪೆಟ್ಟಿಗೆ ಟ್ರಂಕು ಕೊಳ್ಳಲಾರ. ಮುದಿ ತಂದೆಯಂತೂ ಎಲ್ಲ ಮನೋರಥಗಳನ್ನೂ ಮುರಿದೊಗೆಯುವನು. ದೇಶಾಂತರಕ್ಕೆ ಹೋಗಿ ಭಕಡಿ ಹೆರವರ ಚಾಕರಿ ಮಾಡುವದು ಅವನಿಗೆ ಒಪ್ಪಿಗೆ ಇಲ್ಲ. ಅಣ್ಣನು ತಮ್ಮನ ಪರವಾಗಿ ಮಾತೆತ್ತುವದಿಲ್ಲ. ಅಪ್ಪ ಅಣ್ಣ ಇಬ್ಬರ ಮೇಲೂ ಭಕಡಿಯ ಮನಸ್ಸು ಒಳಗೊಳಗೇ ರೊಚ್ಚಿಗೇಳುತ್ತದೆ.

ಕಾಲ ಸರಪಳಿ ಕೈ ಬಳೆಗಳನ್ನು ಘಿಲಿ ಘಿಲಿಸುತ್ತ ಭಕಡಿಯ ಹೆಂಡತಿ ನೇತ್ರಮಣಿ ಮನೆಗೆಲಸದಿಂದ ಬಿಡುಗಡೆ ಹೊಂದಿ ಮಲಗುವ ಕೋಣೆಗೆ ಬಂದಳು. ಆಕೆ ಭಕಡಿಯ ಕಡೆಗೆ ನೋಡಲೂ ಇಲ್ಲ. ಏನೂ ಮಾತಾಡಲೂ ಇಲ್ಲ. ಬಾಗಿಲ ಬಳಿಯಲ್ಲಿಯೇ ಸೀರೆಯ ಸೆರಗನ್ನೇ ಹಾಸಿಕೊಂಡು ಅಡ್ಡಾದಳು, ಭಕಡಿ ತಿಳಿದ-ಇಂದೇನೋ ಜಗಳ ಆಗಿರಲೇಬೇಕು.

ನಗುತ್ತಲೇ ಆತ ಕೇಳಿದ: "ಲೇ ಏನು, ಈ ಹೊತ್ತು ಏನಾಯಿತು? ಮನೆಯಾಕೆ ಉತ್ತರಿಸಲೇ ಇಲ್ಲ. ಭಕಡಿ ಹೆಂಡತಿಯ ಕೈ ಹಿಡಿದು ಒಡಂಬಡಿಸ ತೊಡಗಿದ. ಹೆಂಡತಿ ಕೈಕುಡುಗಿ ನುಡಿದಳು: "ನಡೆಯಿರಿ ಆಚೆಗೆ, ಈ ಎಲ್ಲ ವಯ್ಯಾರ, ಬಿನ್ನಾಣ ನಿಮ್ಮ ಅಣ್ಣ ಅತ್ತಿಗೆ ಮತ್ತು ಅವರ ಮಕ್ಕಳಿಗೆ ಕಾಣಿಸಿರಿ."

"ಅರೇ, ಇದೇನು? ಮಾತಿಲ್ಲ ಕತೆಯಿಲ್ಲ. ಆದದ್ದಾದರೂ ಏನು?"

"ಏನು ಹೇಳಲಿ? ಒಂದು ಮುಷ್ಟಿ ಕಾಳು ಒಣಗಿಸಲಿಕ್ಕೆ ಯಾರದೇನು ಕೈ ಸೇದುಹೋಗುತ್ತದೆ? ಮಂದಿಯ ಹೊಟ್ಟೆ ಉರಿಯುತ್ತದೆ, ಯಾಕಂತೀರಿ? ಯಾವ ಮುಂಡೆಯ ಯಾವ ಗಂಟು ನುಂಗಿದ್ದೇನೆ ನಾನು? ಬೆಂಕಿ ಬೀಳಲಿ ಅವರಿಗೆ. ನನಗೆ ಎಲ್ಲರೂ ಯಾಕೆ ಆಡಿಕೊಳ್ಳಬೇಕು."

"ಯಾಕೆ? ನೀನಾದರೂ ಅವರಂತೆಯೇ ತಿರುಗಿ ಆಡುವುದಿಲ್ಲವೇಕೆ? ಮಾತಿಗೆ ನಾಲ್ಕು ಮಾತು?"

"ನಾನೇನು ಆಡಲಿ? ನಾ ಆಡಿದರೆ ಮನೆಯವರೆಲ್ಲ ನನ್ನ ನಾಲಗೆ ಕೊಯ್ಯಲಿಕ್ಕೆ ಓಡಿಬಂದಾರು. ನಿಮ್ಮಿಂದಲೇ ಏನೂ ಮಾತನಾಡಲು ಆಗುವದಿಲ್ಲ. ಅಂಥಲ್ಲಿ ನನ್ನ ಕೈಯಾದರೂ ಯಾಕೆ ಹಿಡಿದಿರಿ?"

ಭಕಡಿ "ಅಭೂತಪುರಿ" ಅಡಕತ್ತರಿಯಿಂದ ಕರಕರನೆ ಅಡಿಕೆ ಕತ್ತರಿಸುತ್ತ ನುಣ್ಣಗೆ ನುಡಿದ: "ಎಲ್ಲಾ, ಅವಳ್ಯಾರು? ಮತ್ತೆ ಈ ಮನೆಯಲ್ಲಿ? ನಾಪಿತಳೋ*? ನೀರು ಹೊರುವಾಕೆಯೋ? ಈ ಮನೆಯೇನು ಅವಳದೇ ಆಗಿ ಬಿಟ್ಟಿತೇ? ಅವಳು ಹೇಗೋ ಹಾಗೆಯೇ ನೀನೂ. ನಿನಗೆ ಮಾತನಾಡುವವಳು ಆಕೆ ತಾನು ಯಾರೆಂದು ತಿಳಿದಿದ್ದಾಳೆ?"

ಕಿರಿಸೊಸೆ ಮೋರೆ ಗಂಟಿಕ್ಕಿ ಅಂದಳು: ಕಣ್ಣಾರೆ ಕಂಡು ಮೂಗಿಟ್ಟು ಮೂಸಿಯೂ ನೀವು ತಿಳಿದುಕೊಂಡಿದ್ದೇನು? ಇಪ್ಪತ್ತು ಬಗೆಯ ಮಾತಿಗೆ ಮಾತಿಲ್ಲದಂತೆ ಬಾಯಿ ಕಟ್ಟುತ್ತಾಳೆ ಆ ಗಯ್ಯಾಳಿ. ಇದು ನೀವು ಕೇಳಿಯೂ ಕೇಳಿದ್ದೀರಿ, ಕಿವಿಯಾರೆ, ಮತ್ತೆ ಕೇಳಿರಿ ಏನಾಯಿತೂ ಅಂತ."

"ಎಲಾ ಇವಳ, ಮೊದಲು ಸರಿಯಾಗಿ ಉತ್ತರ ಕೊಡು. ಆಮೇಲೆ ನಾವೇನು ಮಾಡುತ್ತೇವೆಂದು ನೋಡುವಿಯಂತೆ."

"ಸರಿ, ನಿಮಗೆ ಗೊತ್ತೇ ಇದೆ. ನಾ ನಿಮಗೆ ಎಷ್ಟು ಸಲ ಹೇಳಿಲ್ಲ. ಅವಳ ಮಕ್ಕಳಿಗೆ ಮುದ್ದು ಮಾಡಬೇಡಿರಿ, ಮಾತಾಡಿಸಬೇಡಿರಿ..."

"ಎಲೇ ಹೆಣ್ಣೇss, ಮುದುಕ ಹಣ ಕೊಟ್ಟಿದ್ದ ಅವರಿಗೋಸ್ಕರ ಆಟಿಗೆ ಮಿಠಾಯಿ ತರಲಿಕ್ಕೆ. ನಾನೇನು ನನ್ನ ಕೈಯಿಂದ ಖರ್ಚುಮಾಡಿದ್ದನೇ?"

"ಅದೇಕ ನೀವು ತರಬೇಕು? ಊರಿಂದ ಇನ್ಯಾರೂ ಜಾತ್ರೆ ನೋಡಲು ಹೋಗಿದ್ದೆ ಇಲ್ಲವೇ?"

"ಮನೆಯ ಮನುಷ್ಯನೇ ಒಬ್ಬ ಹೋಗುವಾಗ ಪರರ ಕೈಗೆ ಯಾರು ದುಡ್ಡು ಕೊಡುತ್ತಾರೆ?"

ಭಕಡಿ ಯಾವ ಸಂಕೋಚವೂ ಇಲ್ಲದೆ ಇದೆಲ್ಲ ಸುಳ್ಳು-ಸೆಟೆ ಆಡಿ ಹೋದ. ಹೆಣ್ಣಿನ ಜಾತಿ ಅಲ್ಲವೆ? ಸುಳ್ಳು ಆಡದೆ ಅವಳಿಗೆ ತಿಳಿಯುವುದು ಹೇಗೆ? ಅಣ್ಣ ಅತ್ತಿಗೆ ವೈರಿಗಳೇ ಆಗಿರಲಿ ಈ ಮಕ್ಕಳ ದೋಷವೇನು? ಬಡ ಭಕಡಿ ಮಾಡುವುದಾದರೂ ಏನು? ಎಷ್ಟೇ ಪರಕೀಯರೆಂದು ಭಾವಿಸಿದರೂ ಭಕಡಿಯ ಎದೆ ಆ ಮಕ್ಕಳಿಗಾಗಿ ಏಕೆ ಕಳವಳಗೊಳ್ಳುತ್ತಿತ್ತೋ ಗೊತ್ತಿಲ್ಲ. ಅಂತೆಯೇ ಆತ ತನ್ನ ಮನೆಯಾಕೆಯಿಂದ ಕದ್ದು ಮುಚ್ಚಿ ಆ ಮಕ್ಕಳಿಗೆ ಮುದ್ದು ಮಾಡುತ್ತಿದ್ದ. ಬಚ್ಚಿಟ್ಟು ಗುಟ್ಟಾಗಿ ಅವರಿಗೆ ತಿಂಡಿ ತಿನಿಸು ಕೊಡುತ್ತಿದ್ದ. ಜತೆಗೆ ಎಚ್ಚರಿಕೆಯನ್ನೂ ಕೊಡುತ್ತಿದ್ದ—"ನೋಡಿರಿ ಚಿಗವ್ವಿಗೆ ಹೇಳಿದಿರಾದರೆ ಜೋಕೆ, ಮತ್ತೆ ಏನೂ ಎಂದೂ ಕೊಡಲಿಕ್ಕಿಲ್ಲ."

---

*ಉತ್ತರ ಭಾರತದಲ್ಲಿ ಅದೂ ಹಿಂದೀ ಪ್ರದೇಶದಲ್ಲಿ ನಾಪಿತರಿಗೆ ಕೌಟುಂಬಿಕ ವ್ಯವಹಾರಗಳಲ್ಲಿ ಮಹತ್ವ ಹೆಚ್ಚು. ಮದುವೆ ಗಿದುವೆ ಗೊತ್ತು ಮಾಡಲು ನಾಪಿತನೇ ಹೋಗಬೇಕು.

೩

ಬಾಳು ಮತ್ತು ಸಾವು! ಎಚ್ಚರ ಮತ್ತು ಕನಸು! ಇವೆರಡೂ ಪ್ರಪಂಚಗಳು ಪ್ರತ್ಯೇಕ, ಬೇರೆಬೇರೆ. ಆದರೂ ಇವೆರಡರ ನಡುವೆ ಅಂತರವಿಲ್ಲ; ಎರಡೂ ಒಂದನ್ನೊಂದು ಅಂಟಿಕೊಂಡಿವೆ. ಹತ್ತಿರ ಹತ್ತಿರ ಕೂಡಿವೆ. ಒಂದರ ಮೇಲೆ ಮನುಷ್ಯ ತನ್ನ ದರ್ಪ, ತನ್ನ ಸತ್ತೆ ಸ್ಥಾಪಿಸುತ್ತಾನೆ. ಇನ್ನೊಂದರ ಇದಿರು ಅವನ ಬುದ್ಧಿ ಸತ್ತು ಬಿದ್ದಂತೆಯೇ. ಮನೆ–ಮನೆಯಾಕೆ, ಮಕ್ಕಳು–ಮರಿಗಳು ಎಲ್ಲವನ್ನೂ ಬಿಟ್ಟು ಮನುಷ್ಯ ಬಾಳಿನಿಂದ ಸಾವಿನ ಬಳಿಗೆ ಸಾಗುತ್ತಾನೆ. ಇದರಿಂದ ಬಿಡುಗಡೆ ಹೊಂದುವುದು ಯಾರ ವಶದ ಮಾತೂ ಅಲ್ಲ. ಧಿಃಕಾರವಿರಲಿ, ಮನುಷ್ಯನಿಗೆ ಆತ ಬರೇ ಎರಡು ಕಾಸಿನ ಪ್ರಾಣಿ!

ಬರಜೂ ಪಧಾನನ ಮನೆಯ ಮೇಲೆ ಇಂದು ಸಾವಿನ "ಸುಗ್ರೀವಾಜ್ಞೆ" ಜಾರಿಯಾಗಿದೆ. ಮೊದಲು ಮುದುಕಿಯದು,–ಒಳಿತೇ ಸರಿ. ಹಳತು ಹೊಸತಾದೀತೇ? ಹಣ್ಣು ಕೂದಲು ಕಪ್ಪಾದೀತೇ? ಹೀಗೆಯೇ ಬಿದ್ದಿರುವದೇಕೆ? ಇಬ್ಬರು ಸೊಸೆಯಂದಿರು ಕೈಕಾಲು ಒತ್ತುತ್ತಾರೆ. ಮೊಮ್ಮಗ–ಮೊಮ್ಮಗಳು ತಲೆ ಒತ್ತುತ್ತಾರೆ. ಭಕಡಿ ಹತ್ತಿರ ಕೂತು ಭಾಗವತ ಓದಿ ಹೇಳುತ್ತಾನೆ.

ದೀಪ ಮಬ್ಬು ಮಬ್ಬಾಗಿ ಮಿಣಿ ಮಿಣಿ ಉರಿಯುತ್ತದೆ. ಅರೆ ಮನೆಗೆ ಬೆಳಕು, ಅರೆ ಮನೆಗೆ ಕತ್ತಲೆ. ಜೀವನ ಜ್ಯೋತಿಯ ಎಣ್ಣೆ ಸಂದುಹೋದಮೇಲೆ ಅದೂ ಇದೇ ರೀತಿ ಮಿಣಿ ಮಿಣಿ ಮಿಣುಕುತ್ತದೆ. ದೀಪ ಇದ್ದಕ್ಕಿದ್ದಂತೆಯೇ ಭುಗಿ ಭುಗಿಲೆನ್ನಿಸಿತು. ಮನೆಯ ಗೋಡೆಯ ಮೇಲೆ ಉದ್ದನ್ನ ಬೆಳಕು ಕುಣಿದಾಡ ಹತ್ತಿತು. ಮುದುಕಿಯ ದಿನ ತೀರಿತು.

ಮೊಮ್ಮಕ್ಕಳು, ಮಕ್ಕಳು, ಸೊಸೆಯಂದಿರು, ಯಜಮಾನ, ಸಂಸಾರ ಎಲ್ಲರೂ ಎಲ್ಲವೂ ಹಿಂದೇ ಉಳಿದು ಹೋದವು. ಮನೆ ಹಿತ್ತಲು, ಹಸಿರು ವಾಣಿಯ ಓಳಿಗಳು ಹಿಂದೆಯೇ ಉಳಿದವು. ಮಾಯಾ ಪಾಶ, ಮೋಹದ ಹುರಿ, ಹರಿದು ಹೋಯಿತು, ಮುದುಕಿ ತೀರಿಹೋದಳು. ಆ ಚಿಕ್ಕ ಪಧಾನ ವಾಡೆಯ ವಠಾರದ ಮೇಲೆ ಮೂಲೆಗಳಲ್ಲಿ ಈ ಸಮಾಚಾರ ಹಬ್ಬಲಿಕ್ಕೆ ವಿಲಂಬವಾಗಲಿಲ್ಲ. ಮಂದಿ ಅನ್ನ ತೊಡಗಿದರು. "ಮುದುಕಿ ಇದ್ದಾಳೆ. ಅಷ್ಟು ಪುಣ್ಯಾತಗಿತ್ತಿ. ಇಲ್ಲವಾದರೆ ಅವಳಿಗೆ ಕೈತುಂಬ ಬಳೆ, ನರೆಗೂದಲಲ್ಲಿಯೂ ಬೈತಲೆ ತುಂಬಿ ಕುಂಕುಮ ಮತ್ತು ಸಾಯಲು ಏಕಾದಶಿ ಸಿಗುತ್ತಿತ್ತೆ?" ಎಂದು.

ಮುದುಕಿ ಸತ್ತಾಗ ಶಾಮಪಧಾನ ಅತ್ತದ್ದು ಯಾರೂ ನೋಡಲಿಲ್ಲ. ಹೆಣದ ಹಿಂದೆ ತುಸು ದೂರದ ತನಕ ಹೋಗಿ ಹೊದ್ಲು ಚೆಲ್ಲಿ ಆತ ಹಿಂದಿರುಗಿದ. ಆತ ಆಡಿಕೊಳ್ಳುತ್ತಿದ್ದ: "ನಾನೂ ಇನ್ನೆಷ್ಟು ದಿನ? ಒಂದು ವರ್ಷ ಆರು ತಿಂಗಳಿಗಿಂತ ಹೆಚ್ಚು ಕಾಲವಿಲ್ಲ. ಮುದುಕಿಯಿಂದ ಅಗಲಿ ಅವಳನ್ನು ಬಿಟ್ಟು ಈ ಪರದೇಶದಲ್ಲಿ ಇನ್ನೆಷ್ಟು ದಿನ ಉಳಿಯಬಲ್ಲೆ?"

ಮುದುಕಿ ಹೊರಟುಹೋದಳು. ಲೋಕ ಎಲ್ಲಿಯೂ ಏನೂ ಬದಲಾಗಲಿಲ್ಲ—ಒಂದು ಕಣದಷ್ಟೂ ಆಗಲಿಲ್ಲ. ದಿನನಿತ್ಯದ ಸೂರ್ಯನ ಸುತ್ತಲೂ ನಮ್ಮ ಆ ಪುರಾತನ ಪೃಥ್ವಿ ಅದೇ ಗತಿಯಿಂದ ಸುತ್ತುತ್ತಿತ್ತು. ವಿರೂಪಾನದಿಯಲ್ಲಿ ಹಾಗೆಯೇ ಎಂದಿನಂತೆಯೇ ಪ್ರವಾಹ ಹರಿಯುತ್ತಿತ್ತು. ಒಂದು ಕ್ಷಣಕಾಲವೂ ಅದಕ್ಕೆ ಅಡೆತಡೆ ಇಲ್ಲ. ಪಧಾನವಾಡೆ ವಠಾರದ ಹೊಲ-ತೋಟ, ಸಂಪತ್ತು-ಸಂಪಾದನೆ, ಗಿಡ-ಮರ, ಹಿತ್ತಿಲು_ಹಕ್ಕಲು ಎಲ್ಲವೂ ಹಾಗೇ ಇದ್ದವು.

ಶಾಮಪಧಾನ ಬರಜೂನನ್ನು ಕರೆದು ಹೇಳಿದ: "ಮಗನೇ, ಈಗ ನಾನೂ ಕೆಲವೇ ದಿನಗಳ ಅತಿಥಿ. ಈ ಸಮಯಕ್ಕೆ ನೀನು ಚಾಕರಿಯ ಬೆನ್ನಿಗೆ ಬಿದ್ದು ಇಪ್ಪತ್ತು ಕಡೆಗೆ ಓಡಾಡಿದರೆ ಯಾವಾಗ ಏನಾದೀತೆಂಬ ನೇಮವಿಲ್ಲ. ಒಂದು ವೇಳೆ ಕೊನೆಯ ಗಳಿಗೆಗೆ ನೀನು ನೋಡಲೂ ಸಿಗಲಿಕ್ಕಿಲ್ಲ ನನಗೆ."

ಬರಜೂ ವಿಶೇಷ ಓದು ಕಲಿತವನಲ್ಲ. ಊರ ಶಾಲೆಯಲ್ಲಿ ಎಷ್ಟು ಕಲಿತನೋ ಅಷ್ಟರ ಮೇಲೆಯೇ ಜಮೀನದಾರರ ಕರಣಿಕ, ವಕೀಲನ ಕಾರಕೂನ. ಇಲ್ಲವೇ ಗ್ರಾಮಸ್ಥರಲ್ಲಿ ಊರ ವಿಶ್ವಸ್ಥರಲ್ಲಿ ಒಬ್ಬ—ಇದಕ್ಕಿಂತ ಹೆಚ್ಚಿನ ಪದವಿ ಅವನಿಗೆ ಸಿಗುತ್ತಿದ್ದಿಲ್ಲ. ಒಂದೆರಡು ಕಡೆಗೆ ಗುಮಾಸ್ತೆಯ ಕೆಲಸ ನೋಡಿದ ನಂತರ ಈಗ "ಬಂದೋಬಸ್ತಿನ ಮುಕ್ತಾರಿ" (ಪಾರುಪತ್ಯಗಾರ) ಆಗಿದ್ದಾನೆ. ತಂದೆ ಎಷ್ಟೋ ಸಲ ಹೇಳಿದ: ಈ ಚಾಕರಿ ಬಿಡಲಿಕ್ಕೆ; "ಈ ಗಳಿಕೆಯ ಜರೂರಿ ಏನು? ದೊಡ್ಡವರು ಚಿಕ್ಕವರು ಎಲ್ಲರೂ ಇದ್ದಾರೆ. ಅಲ್ಲದೆ ಬಡಿವಾರವೇಕೆ? ಮಣ್ಣು ತೋಡುತ್ತ ತಂದೆ, ತಾತ—ಏಳು ತಲೆಮಾರು ಸಂದುಹೋದವು. ನೇಗಿಲ ಹಿಡಿಕೆ ಬಿಟ್ಟು ಲೆಕ್ಕಣಿಕೆ ಹಿಡಿದರೇನು ಈಗ ಸ್ವರ್ಗ ಗೆಲ್ಲುವದಿದೆಯೇ?"

ಬರಜೂಗೂ ಈಗ ಗೊತ್ತಾಗಿದೆ—ಒಬ್ಬರ ಚಾಕರಿ ಮಾಡುತ್ತಿರುವಾಗ ಅವರ ಅಂಗಾಲು ನೆಕ್ಕುತ್ತ ನೆಕ್ಕುತ್ತ, ಇನ್ನೊಬ್ಬರ ತಲೆಯ ಮೇಲೆ ಕಾಲು ಊರುವುದೂ "ದೊಡ್ಡ ಮನುಷ್ಯ"ನೆನಿಸಿಕೊಂಡು ಮೆರೆದಾಡುವದೂ ಎಂಥ ನಾಚಿಕೆಗೇಡಿತನವೆಂದು. ಮನೆ-ಮನೆತನ, ಮಕ್ಕಳು ಮರಿ ಬೇರೆ ಮತ್ತೆ ಇದ್ದೇ ಇವೆ. ಮನುಷ್ಯ ಮಾಡುವುದೆಲ್ಲ ಅದಕ್ಕಾಗಿಯೇ ಮತ್ತೆ! ತಂದೆ ಚಾಕರಿ ಬಿಡಲಿಕ್ಕೆ ಹೇಳಿದಾಗೆಲ್ಲ "ಹೂ ಬಿಡುತ್ತೇನೆ" ಎಂದು ಆತ ಆ ಮಾತು ತಪ್ಪಿಸಿಕೊಳ್ಳುತ್ತಾನೆ. ಚಾಕರಿ ಎನ್ನುವುದು ತಾಳೆಯ ಮರದ

ನೆಳಲಿನಂತೆ—ಈಗ ಇದೆ. ಒಂದು ಗಳಿಗೆಯಾಚೆಗೆ ಇಲ್ಲವೆಂಬಂತೆ. ಅದರ ಆಸರಕ್ಕೆ ಯಾರು ಕೂತಾರು? ತಂದೆಯೊಂದಿಗೆ ತರ್ಕಮಾಡುತ್ತ ಬರಜೂ ಅಂದ: "ಬಿಟ್ಟು ಕೊಡುವದು ಒಂದು ಕ್ಷಣದ ಕೆಲಸ. ಆದರೆ ಮಾಡುವುದನ್ನು ಒಳ್ಳೇ ವಿಚಾರ-ವಿವೇಕಮಾಡಿ ಮಾಡಬೇಕು. ಈಗ ಚಾಕರಿ ಬಿಟ್ಟರೆ ಪ್ರತಿ ವರ್ಷ ಒಂದು ಒಂದರೆ ಪಾಲು ಎಕರೆ ಹೊಲ ಖರೀದಿ ಮಾಡುತ್ತ ಬಂದಿದ್ದೇವೆ. ಅದು ಕಟ್ಟಾದೀತು."

ಮಗನ ಡಾಂಭಿಕತನ ಕಂಡು ಮುದಿ ಪಧಾನ ನಕ್ಕು ಬಿಟ್ಟ: "ಎಲೋ ಹುಚ್ಚಾ, ಹಣ ಕೂಡಿಹಾಕುವದು, ಧನಸಂಗ್ರಹ ಒಂದು ಹುಚ್ಚಾಟವೇ! ಕೇಳಿಲ್ಲವೇ ಲೋಕದ ಗಾದೆ—'ಸುಪುತ್ರನಿರೆ ಧನಸಂಚಯವೇಕೆ? ಕುಪುತ್ರನಿರೆ ಧನಸಂಚಯವೇಕೆ?' ಧನವನ್ನೆಂದಿಗೂ ಸಂಚಯಮಾಡಕೂಡದು."

"ಬಂಡವಾಳ ಒಟ್ಟುಗೂಡಿಸಿಡುವದೇನು ಪಾಪವೇ?"

"ಬರೇ ಪಾಪ ಮಾತ್ರವಲ್ಲ; ಅದು ಭಾರಿ ದೊಡ್ಡ ಅಪರಾಧ. ಧನ ಸಂಚಯ ಮಾಡುವದು ಕೇವಲ ಕಳವು ಮತ್ತು ದರೋಡೆ. ನೋಡಲಿಲ್ಲವೇ? ನಮ್ಮದೇ ಕೇರಿಯ ಆ ಹರಿಮಿಶ್ರನನ್ನು? ಎಷ್ಟೆಲ್ಲ ವಿಧವೆಯರ ಮತ್ತು ಮಕ್ಕಳಿಲ್ಲದವರ ಗಂಟಲು ಹಿಚುಕಿ, ಗಂಟು ಒಟ್ಟು ಹಾಕಿರುತ್ತಾನೆ. ಅದೇನು ಆಸ್ತಿಯೇ? ಅದು ಶೋಕಾವೇಗದ ಕಾವಿನ ನಿಟ್ಟುಸಿರು-ಲೋಕವನ್ನೇ ಸುಟ್ಟು ಸೂರೆ ಮಾಡೀತು! ಉರಿಸಿ ಬೂದಿ ಹಾರಿಸಿಬಿಟ್ಟೀತು! ನಿನ್ನ ಪಾರುಪತ್ಯಗಾರಿಕೆಯ ದುಡ್ಡು, ಚಾಕರಿಯ ದುಡ್ಡು—ಇವೆಲ್ಲ ಇದೇ ತಾಪದ ಪಾಪದ ಪಿಂಡದ ದ್ರವ್ಯ. ಎಲ್ಲಿ ಯಾರ ಗಂಟಲಲ್ಲಿ ಇಳಿಯುವದೋ ಅಲ್ಲಿ ಅವರ ಕತೆ ಮುಗಿಸಿಯೇ ಬಿಡುವದು."

ಊರ ವಿಶ್ವಸ್ತ (ಪಂಚ)—ಇವನಿಗೇ "ಅಮೀನ"ನೆಂದು ಕರೆಯುವರು—ನಾಗಿದ್ದುದರ ಸಂಬಳದ ಹೊರತು ಹೆಚ್ಚಿನದೇನೂ ಬರಜೂನ ಕೈಗೆ ಸೇರುತ್ತಿದ್ದಿಲ್ಲ. ಮಂದಿಯೆಲ್ಲ ಆಶ್ಚರ್ಯದಿಂದ ಹೇಳುತ್ತಿದ್ದರು: "ಲಂಕೆಯಲ್ಲಿ ರಾಮನಾಮ, ಅಮೀನನಾಗಿ ಲಂಚ ತಿನ್ನದಿರುವದು ಇವೆರಡೂ ಮಾತು ಯಾರ ಕೇಳಿಕೆಗೂ ಬಂದವುಗಳಲ್ಲ, ಇಂದು ಕಣ್ಣಾರೆ ಕಂಡಂತಾಯಿತು."

ನಿಜವಾಗಿಯೂ ಬರಜೂ ಒಳ್ಳೇ ಗಟ್ಟಿಗನಾದ ಆಸಾಮಿ. ಆತ ಯಾರಿಂದಲೂ ಯಾವ ಕಾಲಕ್ಕೂ ಒಂದು ಬದನೆಕಾಯಿಯನ್ನು ಕೂಡಾ ಬಯಸಿದವನೇ ಅಲ್ಲ. ಯಾವದೇ ಊರಿನಲ್ಲಿ ತನ್ನ ಊಟದ ಸೀದಾ ಸಾಮಗ್ರಿಯ ಹಕ್ಕು ಸ್ಥಾಪಿಸಿದ್ದೂ ಇಲ್ಲ.

ಆತ ಅಭಿಮಾನದಿಂದ ಹೇಳಿದ: "ಚಾಕರಿ ಮಾಡುತ್ತ ಲಂಚ ತಿನ್ನುವವನಿಗೆ ಅದು ಅಪರಾಧವಾದೀತು. ಆದರೆ ತನ್ನ ಸಂಬಳದ ಹೊರತು ಒಂದು ಪೈ ಕೂಡ ಬಯಸದಿದ್ದವನ ಚಾಕರಿಯೂ ಅಪರಾಧವೇ ಏನು? ಅಂಥವನ ಪಾಡೇನು?"

"ಹೌದಪ್ಪ, ನನಗೆಲ್ಲ ಗೊತ್ತು. ಚಾಕರಿ ಮಾಡುತ್ತೀ. ಸಂಬಳ ಪಡೆಯುತ್ತೀ. ಮತ್ತೆ ಲಂಚ ಮಾತ್ರ ತಿನ್ನುವದಿಲ್ಲ! ಅಲ್ಲೋ, ಈ ಸಂಬಳ ನಿನಗೆ ಕೊಡುವವನು ಯಾರು? ನಿನ್ನ ಪೂರ್ವಜರು ಬಿಟ್ಟು ಹೋಗಿದ್ದರೇನು ಈ ಸಂಬಳ? ಸಂಬಳ ಸಂಬಳವೇ. ಸಿರಿವಂತ ಸಿರಿವಂತನೇ. ರಾಯರು ರಾಯರೇ. ಯಾರ ಹಣದ ಮೇಲೆ ಇದೆಲ್ಲ ಬಡಿವಾರ? ಇದೇ, ಮಿಕಿಮಿಕಿ ಮೋರೆ ನೋಡುವ ಬಡವರ ದುಡ್ಡಿನಿಂದಲೇ ಇದೆಲ್ಲ ರಾಯರ ದೊಡ್ಡಸ್ತನದ ಧಿಮಾಕು! ಈ ಸಿರಿವಂತಿಕೆ, ದೊಡ್ಡಸ್ತಿಕೆ ಯಾರ—ಯಾತರ ಬಲದ ಮೇಲೆ? ಒಂದು ಹೊತ್ತು ಉಂಡು, ಮೂರೂ ಹೊತ್ತು ಉಪವಾಸ ಉಳಿಯುವಂಥವರ ಬಲದಿಂದಲೇ ತಾನೇ? ಯಂತ್ರ–ಗಿರಣಿ, ರೈಲು–ಹಡಗ, ಕಟ್ಟಡ –ಕಾರಖಾನೆ—ಇವೆಲ್ಲ ಹೇಗೆ ಉಂಟಾದವು? ನಮ್ಮ ಬಡವರ ನೆತ್ತರ ಹಿಂಡಿ ಇವುಗಳ ಬುನಾದಿ ಹಾಕುತ್ತಾರೋ; ಒಬ್ಬೊಬ್ಬ ಶ್ರೀಮಂತ ಬಾಬು, ರೊಕ್ಕಪ್ಪರಾಯ ಉಂಟುಮಾಡುತ್ತಾನೋ?" ಮುದಿ ಪಧಾನನ ಕಣ್ಣುಗಳೆರಡೂ ಕೆಂಪೇರಿದವು. ಎದೆ ಉಬ್ಬಿಬಂದಿತು: ಆತ ಜಗತ್ತಿನ ಬಡವರ, ಪೀಡಿತರ, ದಲಿತರ ಪರವಾಗಿ ಇಡೀ ವಿಶ್ವದ ಇದುರಿಗೆ ಉಚ್ಚವಾಗಿ ದನಿಯೇರಿಸಿದ್ದನು.

ಬರಜೂನ ನೆತ್ತರ ಕುದಿದು ಉಕ್ಕಿತು. ತಂದೆಯಿಂದ ಇನ್ನೂ ಒಂದೆರಡು ಮಾತು ಕೇಳುವದಕ್ಕಾಗಿಯೇ ಆತ ಆಡಿದ: "ಹಾಗಾದರೆ ಈ ಸಿರಿವಂತ, ಸಿಪಾಯಿ, ವಕೀಲ ಮುಂತಾದ ದೊಡ್ಡ ಮಂದಿ ನಮಗೆ ಒಳಿತೇನೂ ಮಾಡಲಾರರೇ?"

"ಹೋ, ಹೋ. ಏಕೆ ಮಾಡಲಾರರು? ಎಷ್ಟೆಲ್ಲ ಕಳ್ಳಕಾಕರಿಂದ, ಕಿಸೆ ಕತ್ತರಿಸುವವರಿಂದ, ಕೊರಳು ಹಿಚುಕುವವರಿಂದ, ತಲೆಹೊಡಕರಿಂದ, ತಿಜೋರಿ ಒಡಕರಿಂದ ನಮ್ಮನ್ನು ಉಳಿಸುತ್ತಾರಲ್ಲ! ಯಾರಾದರೂ ಪಾಪ ಮಾಡಿದರೆ ಅದಕ್ಕೆ ಯೋಗ್ಯ ಶಿಕ್ಷೆ ಕೊಡಲಾಗುತ್ತದೆ. ಯಾರಾದರೂ ಜಬರಿನಿಂದ ಇನ್ನೊಬ್ಬರ ಹೊಲದಲ್ಲಿ ನೇಗಿಲು ನಡೆಯಿಸಿದರೆ ಕೋರ್ಟಿನಲ್ಲಿ ಅದರ ನಿರ್ಣಯವಾಗುತ್ತದೆ. ಆದರೆ ಈ ಕಳ್ಳ-ಕಾಕ–ಕೊಳ್ಳೆಗಾರರು ನಮ್ಮ ಜನರೊಳಗಿಂದಲೇ ಬಂದವರಲ್ಲ! ನಾವು ನಮ್ಮವರು ಪಾಪಿಗಳಾಗಿದ್ದುದರಿಂದ ದೋಷಿಗಳಾಗುವದರಿಂದಲೇ ಈ ಜನ—ಈ ವಕೀಲ, ಕಾರಕೂನ, ಸಿರಿವಂತ, ಅಮಲದಾರ, ಸಿಪಾಯಿ, ಪಟ್ಟೆವಾಲ ಮುಂತಾದವರೆಲ್ಲ-ಉಂಟಾಗುತ್ತಾರೆ! ನಾವೇ ಅವರನ್ನು ಉಂಟುಮಾಡುತ್ತೇವೆ. ಇದರಿಂದಲೇ ನಾನು ಅನ್ನುವದು—ಇವರೆಲ್ಲ ನಮ್ಮದೇ ಕರ್ಮದ ಫಲ, ಪಾಪಗಳ ಅಭಿಶಾಪ—ಹೊರತು ಬೇರೆ ಏನೂ ಅಲ್ಲ. ನಮ್ಮ ಪಾಪ ಹೆಚ್ಚು ಹೆಚ್ಚು ಆದಹಾಗೆ ವಕೀಲರ ಮತ್ತು ಸರಕಾರಿ ನೌಕರರ ಸಂಖ್ಯೆಯೂ ಬೆಳೆಯುತ್ತದೆ. ನಾವು ಒಳಿತಾಗಿದ್ದರೆ ಈ ಅಧಿಕಾರಿಗಳ ಹಾಗೂ ಪೋಲೀಸರ ಅಗತ್ಯ ಯಾಕೆ ಬೀಳುತ್ತದೆ? ಇಷ್ಟೆಲ್ಲ ಸೆರೆಮನೆಗಳು ಯಾಕೆ ಬೇಕಿದ್ದುವು? ಇಷ್ಟೆಲ್ಲ ಕೆಂಪು ಪಗಡಿಯವರು ಏನು ಮಾಡುತ್ತಿದ್ದರು?"

"ಹಾಗಾದರೆ ಪುಣ್ಯ ಬೆಳೆಯುವದು ಹೇಗೆ? ನಾವು ಹಿಂದೆ ಹೇಗೆ ಹೊಲ ಹೂಡುತ್ತ ಇದ್ದೆವೋ, ಬೀಜ ಬಿತ್ತುತ್ತ ಇದ್ದೆವೋ ಹಾಗೆಯೇ ಮಾಡುತ್ತ ಇದ್ದು ಬಿಟ್ಟರೆ ದೊಡ್ಡ ದೊಡ್ಡ ಆಸಾಮಿ ನಮ್ಮನ್ನು ಗಾಣದಲ್ಲಿ ಹಿಡಿದು ಹಿಂಡಿ ಒಗೆಯದಿದ್ದರೆ ಇನ್ನಾರನ್ನು ಒಗೆದಾರು?" ಬರಜೂ ಕೇಳಿದ.

ಮುದುಕ ನಗುತ್ತ ನುಡಿದ: "ಧನ-ದೌಲತ್ತಿನಿಂದ ಎಲ್ಲವನ್ನೂ ಕೊಂಡುಕೊಳ್ಳಲು ಬರುತ್ತದೆ, ಆದರೆ ಪುಣ್ಯವನ್ನು ಮಾತ್ರವಲ್ಲ. ರೂಪಾಯಿಯಿಂದ ತಿಕೀಟು ಪಡೆದು ವೈಕುಂಠಕ್ಕೆ ಹೋಗುವ ಉಪಾಯ ನನಗೆ ತೋಚುವದೇ ಇಲ್ಲ. ಮನುಷ್ಯತ್ವವೇ ಪುಣ್ಯವನ್ನು ಕೊಂಡುಕೊಳ್ಳಬಲ್ಲುದು. ತಮ್ಮಾ, ಎಲ್ಲಿ ಮನುಷ್ಯತ್ವಕ್ಕೆ ಎಷ್ಟು ಕೊರತೆಯೇ ಅಲ್ಲಿ ಅಷ್ಟು ಪಾಪ ಹೆಚ್ಚಾಗಿದೆಯೆನ್ನಬೇಕು."

ಈ ಮಾತೇನೋ ಸತ್ಯವೆನಿಸಿತು. ಬರಲೂ ತನಗೆ ನೆನಪಿದ್ದ ಮಟ್ಟಿಗೆ—ಇದೇ ಸಂಗತಿ ನೋಡುತ್ತ ಬಂದಿದ್ದಾನೆ—ಚಾಕರಿ ಮಾಡುತ್ತಿದ್ದಂತೆ ಮನುಷ್ಯತ್ವ ಮೆಲ್ಲಮೆಲ್ಲನೆ ನಷ್ಟವಾಗುತ್ತದೆ. ಚಂದ್ರನನ್ನು ರಾಹು ನುಂಗುವಂತೆ ಮನುಷ್ಯನ ಒಳಗಿನ ಕಾಳರಕ್ಕಸನು ಮನುಷ್ಯನನ್ನು ನುಂಗಿಬಿಡುತ್ತಾನೆ. ಬಡವರು ದಿನಗೂಲಿಗೆ ದುಡಿದು ಹೊಟ್ಟೆ ಹೊರಕೊಳ್ಳುವವರು ಲೋಕದಲ್ಲಿ ಯಾವ ಕೆಲಸ ಮಾಡುವುದಿಲ್ಲ? ಲೋಕದ ಅತಿದೊಡ್ಡ ಎಲ್ಲಕ್ಕೂ ಮಿಗಿಲಾದ ಆವಶ್ಯಕತೆ ಅನ್ನ ಮತ್ತು ವಸ್ತ್ರ. ಇದನ್ನು ಪೂರೈಸುವವರು ಯಾರು? ಅದೇ ಬಡವನೇ ತಾನೇ? ಮನುಷ್ಯ ತಾನು ಹವೆಯಿಂದಲೇ ಉಸಿರಾಡಿ ಬದುಕುತ್ತೇನೆಂಬುದನ್ನು ಮಾತ್ರ ಮರೆತುಬಿಡುತ್ತಾನೆ. ಅದೇ ರೀತಿ ಲೋಕ ಬಡಕೂಲಿಕಾರ—ಕೆಲಸಗಾರರನ್ನು ಹಿಂಡಿ ಹೀರಿ ಬದುಕುತ್ತಿದೆಯೆಂಬುದನ್ನು ಯಾರೂ ನೆನೆಯುವದಿಲ್ಲ.

ಬರಜೂ ನಿಶ್ಚಯ ಮಾಡಿಯೇ ಬಿಟ್ಟ—ಇನ್ನು ಚಾಕರಿ ಬಿಟ್ಟು ಕೊಡಬೇಕು. ಮಣ್ಣು ಅಗಿಯುವುದೇ ಅವನ ಕಸಬು. ಏಳು ತಲೆಮಾರಿನ ಪುರಾತನ ಹೊರೆಯನ್ನು ಆತ ಸಾಗಿಸಿದರೆ ಯಾವ ಗೌರವ ಕಳೆದು ಹೋದೀತು?

ಮುದಿ ಪಧಾನ ಹೇಳಿದಂತೆಯೇ ಆಯಿತು. ಮುದುಕಿ ಸತ್ತು ವರ್ಷ ಮುಗಿಯುವದರೊಳಗೇ ಮುದುಕನಿಗೂ ಸಾವಿನ ಕಟ್ಟಪ್ಪಣೆ ಬಂದು ಮುಟ್ಟಿತು. ಮುದುಕ ಅಪ್ಪಣೆ ಪಡೆದು ನಗುತ್ತಲೇ ನುಡಿದ. "ಅಯ್ಯಾ ಮಗೂ, ನನ್ನ ಕೆಲಸ ಮುಗಿಯಿತು. ಇನ್ನು ನೀವಾಯಿತು, ನಿಮ್ಮ ಕೆಲಸವಾಯಿತು. ಹಾಂ ಒಂದು ಮಾತು. ನೀವು ಇರುವವರು ಇಬ್ಬರೇ, ಅಣ್ಣ ತಮ್ಮಂದಿರು, ಗದ್ದೆಗಳ ನಡುವೆ ಗಡಿಯ ಮೇರೆ ಎದ್ದು ನಿಲ್ಲದಿರಲಿ; ಅಂಗಳದಲ್ಲಿ ಗೋಡೆ ಏಳದಿರಲಿ; ಮನೆಯಲ್ಲಿ ಎರಡು ಒಲೆಗಳು ಉರಿಯದಂತೆ ನೀನು ನೋಡಿಕೊಳ್ಳಬೇಕು."

ಹಿರಿಸೊಸೆ ಮಕ್ಕಳಿಗೆ ಹೇಳಿಕೊಟ್ಟಳು; ಅವರು ಹೋಗಿ ಮುದುಕನ ಹತ್ತಿರ ಹಟಮಾಡ ಹತ್ತಿದರು: "ಅಜ್ಜಾ, ನಮ್ಮ ಬಗ್ಗೆ ಎಲ್ಲಿ ಏನು ಇಟ್ಟಿದ್ದೀ?" ಮುದುಕ ಎರಡು

ಸಲ ಕಣ್ಣು ತೆರೆದ. ಕಣ್ಣು ಬಿಟ್ಟು ಪಿಳಿಪಿಳಿ ನೋಡಿದ—ಯಾರನ್ನೋ ಹುಡುಕುತ್ತಿರುವಂತೆ. ಮತ್ತೆ ಎವೆಗಳು ಮುಚ್ಚಿಕೊಂಡವು. ಹಿರಿ ಮೊಮ್ಮಗಳು 'ಹಾರಾ' ದೊಡ್ಡ ದನಿಯಲ್ಲಿ ಕೂಗಿದಳು. "ಅಜ್ಜಾ, ನಮ್ಮ ಬಗ್ಗೆ ಏನು ಇಟ್ಟಿದ್ದೀ" ಮುದುಕ ಮತ್ತೆ ಕಣ್ಣು ಬಿಟ್ಟು ನೋಡಿದ. ಈ ದಿನ ಬಲು ದೂರದಿಂದ ಬಂದಿತೋ ಎಂಬಂತೆ. ಛಕಡೀ ಮುದುಕನ ಕೈಹಿಡಿದು, ಹಿಡಿದಿದ್ದ. ಆತ ಮುದುಕನಿಗೆ ತಿಳಿಸಿ ಹೇಳಲು ಉಭಯ ಭಾಷಿ (ದುಭಾಷಿ)ಯ ಪಾತ್ರ ವಹಿಸಿದ. ಪ್ರಪಂಚದ ಮುದುಕರು ಹಣ ಒಟ್ಟು ಹಾಕುತ್ತಾರೆ—ಕೊನೆಯ ಗಳಿಗೆಗೆ ಮಕ್ಕಳು-ಮೊಮ್ಮಕ್ಕಳಿಗೆ ಕೊಟ್ಟು ಹೋಗಲಿಕ್ಕೆ. ಮುದಿ ಪ್ರಧಾನ ಬಿಟ್ಟಿದ್ದುದೇನು? ಆತ ಮೇಲಕ್ಕೆ ಬೆರಳೆತ್ತಿ ತೋರಿಸಿ ಮುಗುಳು ನಗೆ ನಗುತ್ತ ಪಿಸುಗುಟ್ಟಿದನು. "ನಿಮ್ಮ ಬಗ್ಗೆ ಇದೇ ಧರ್ಮ, ಧರ್ಮ."

ಕಣ್ಣು ಮುಚ್ಚಿದವು. ಮತ್ತೆ ತೆರೆಯಲೇ ಇಲ್ಲ. ಸೊಸೆ, ಮಗ, ಮೊಮ್ಮಗಳು ಎಲ್ಲರೂ ಅಳತೊಡಗಿದರು. ಮನೆ ತುಂಬ ಕಲ್ಲೋಲವಾಯಿತು. ಬರಜೂ ಶವದ ಹತ್ತಿರದಿಂದ ಎದ್ದು ಬಂದಾಗ ಅವನ ಕಣ್ಣಿನಿಂದ ನಾಲ್ಕು ಹನಿಗಳು ತೊಟಕಿದವು. ಪಂಚೆಯಿಂದ ಕಣ್ಣು ಒರಿಸಿಕೊಂಡು ಆತ ತಂದೆಯ ಅಂತ್ಯೇಷ್ಠಿಯ ಕ್ರಿಯಾಕರ್ಮಕ್ಕೆ ತೊಡಗಿದ. ಕುಟುಂಬದವರನ್ನು ಸಂತೈಸಹತ್ತಿದ. "ಅಳುವಿರೇಕೆ? ಬಾಳು, ಸಾವು ಇದೇ ಸಂಸಾರದ ಕ್ರಮ."

ಮುದಿ ಪಧಾನ ತೀರಿಕೊಂಡ ಸಮಾಚಾರ ಮಾತು ಮಾತಿನಲ್ಲಿ ಸುತ್ತುಮುತ್ತು ಹಬ್ಬಿತು. ಎಲ್ಲರ ಮನೆಗಳೂ ಇಂದು ತಬ್ಬಲಿ ಆದಂತೆ ಅನಿಸಿತು. ಆಹಾ! ಮನುಷ್ಯ ಸಾವಿರದಲ್ಲಿ ಒಬ್ಬಾತ, ಅಲ್ಲ; ಲಕ್ಷಗಟ್ಟಲೆಯರಲ್ಲಿ ಒಬ್ಬನೇ ಲಕ್ಷಣವಂತ. ಏಳು ಗೇಣು ನೆಲ ಎಲ್ಲರೂ ಪಡೆದೇ ಬಂದಿರುತ್ತಾರೆ. ಯಾರೂ ತಾಮ್ರದ ಕಾಸು ಕೂಡ ತಲೆಯಮೇಲೆ ಹೇರಿಕೊಂಡು ಬಂದವರಿಲ್ಲ. ಆದರೆ ಇದೇ ಮಣ್ಣಿನಿಂದ ಚಿನ್ನ ಬೆಳೆಯುತ್ತದೆ. ಈ ಮಣ್ಣಿನಿಂದಲೇ ಆತ ಚಿನ್ನದ ಕಡಗದಂತಾದ. ಎಲ್ಲರೂ ಅನ್ನುತ್ತಾರೆ: "ಶರಣನನ್ನು ಮರಣದಲ್ಲಿ ತಿಳಿಯಬೇಕು." "ಪ್ರಾಣಿಯ ಒಳಿತು ಕೆಡಕು ಕೊನೆಯ ವೇಳೆಗೇ ಕಂಡುಬರುವುದು."

ಬರಜೂ ಒಳ್ಳೇ ಪ್ರಾಮಾಣಿಕ ಮನುಷ್ಯನಿದ್ದ. ಈ ಮಾತು ಊರ ಎಲ್ಲ ಜನ ತಿಳಿದಿದ್ದರು. ಆದ್ದರಿಂದ ಶಾಮಪಧಾನ ಸತ್ತ ಮೇಲೆ ಮಂದಿ ಆಡಿಕೊಳ್ಳಹತ್ತಿದರು : "ಅಪ್ಪನ ಹೆಸರು ಮಗನೇ ಉಳಿಸಬಲ್ಲ. ಸವಾರನ ಮಗ ಕೊಂಚವಾದರೂ ಕುದುರೆಯನ್ನೇರದೆ ಇರುವದುಂಟೆ?"

ಬರಜೂ ದೊಡ್ಡ ತಂದೆಯ ದೊಡ್ಡ ಮಗನಿದ್ದಂತೆ ಮೈ ಕಟ್ಟಿನಿಂದಲೂ ಒಳ್ಳೇ ಉದ್ದ-ಅಗಲ ಹರೆಯದಾಳು. ತಲೆಗೆ ಮುಂಡಾಸು ಸುತ್ತಿ, ನಸುಕು ಹರಿಯುವಾಗಿನಿಂದ ಸಂಜೆ ನೆರಳು ಮರಳುವನಕ ಹೊಲ-ಗದ್ದೆ, ತೋಟ-ಹಿತ್ತಲು, ನಾಲ್ಕು ಕಡೆಗೆ ಸುತ್ತಾಡಿ

ನೋಡಿಕೊಳ್ಳುತ್ತಿದ್ದ. ಮನೆಗೆ ಮರಳಿದವನೇ ಅಂಗಾಲಿಗೆ ಎಣ್ಣೆ ತಿಕ್ಕಿಕೊಂಡು ನಿದ್ದೆ ಹೋಗುತ್ತಿದ್ದ. ತಂದೆ ಹೇಳಿದ್ದ :

"ತಲೆಗೆ ರುಮಾಲು ಕಾಲಿಗೆ ಎಣ್ಣೆ
ವೈದ್ಯನೊಂದಿಗೆ ಬಾರದು ಬವಣೆ!"

ನಿಜವಾಗಿಯೂ ಬರಜೂಗೆ ತಲೆಶೂಲಿಯಾದದ್ದು ಯಾರಿಗೂ ಗೊತ್ತೇ ಇಲ್ಲ. ಸೆಕೆ ಚಳಿ ಮಳೆ ಪ್ರತಿ ಋತುಮಾನಕ್ಕೂ ಆತ ಒಂದೇ ರೀತಿ ಹೊಲಗದ್ದೆಗಳ ಗೆಯ್ಮೆ ಮುಗಿಸಿಯೇ ಮನೆಗೆ ಬರುತ್ತಿದ್ದ. ಅವನು "ಹೆಗಲು ನೊಗ?"*ಕ್ಕೆ ಜೋತು ಹಾಕಿ ಹೊತ್ತು ತರುವ ಧಾನ್ಯದ ಹೊರೆಗಳನ್ನು ಇಬ್ಬರು ಆಳು ಒಟ್ಟಾಗಿ ನೆಲದಿಂದ ನೆಗುವದು (ಎತ್ತುವದು) ಕಷ್ಟವಾಗುತ್ತಿತ್ತು. ಆತ ನೀರು ಸೇದಲಿಕ್ಕೆ ನಿಂತರೆ ಜತೆಗೆ ಜಗ್ಗುವ ನಾಲ್ಕು ಆಳು ಸೋತುಹೋಗುತ್ತಿದ್ದರು. ಆದರೆ ಆತ ಮಾತ್ರ ಹಾಗೆಯೇ ರಾಟೆ ಹಿಡಿದು ಕಂಬದಂತೆ ನಿಂತೇ ಇರುತ್ತಿದ್ದ.

ಅವನ ಪ್ರಾಮಾಣಿಕತೆ ಹಾಗೂ ಸತ್ಯವಂತಿಕೆಗಾಗಿಯೇ ಮಂದಿ ಅವನಲ್ಲಿ ಹೆಚ್ಚಿನ ಆದರವಿಟ್ಟಿದ್ದರು. ಯಾರದಾದರೂ ಚಿನ್ನದ ಸಲಿಕೆಯೇ ಬಿದ್ದಿರಲಿ, ಆತ ಅತ್ತ ಕಡೆಗೆ ಕಣ್ಣು ಹಾಯಿಸಲೇ ಆರನು. ಒಬ್ಬನ ಒಡಕು ಕಾಸು ತನ್ನ ಹತ್ತಿರ ಇದ್ದರೆ ಅದನ್ನು ಆತ ತಾನೇ ಕೇಳಿನೋಡಿ ಆತನಿಗೆ ಕೊಟ್ಟು ಬಿಡುತ್ತಿದ್ದನು. ಯಾರ ಒಂದು ದುಡ್ಡು-ದಮಡಿಯನ್ನೂ ಆತ ತಿಂದವನಲ್ಲ. ಆದ್ದರಿಂದ ಊರಮಂದಿ ಹೇಳುತ್ತಿದ್ದರು: "ಬರಜೂನ ಹಣಕ್ಕೆ ಆತಂಕವಿಲ್ಲ. ಜಗನ್ನಾಥ ದೇವರ ರಥವಾದರೂ ಒಂದು ವೇಳೆ ಅಡ್ಡ ಹಾಯಬಹುದು, ಆದರೆ ಬರಜೂ ಪಧಾನನ ಮಾತು ಬಾಯಿಯಿಂದ ಒಮ್ಮೆ ಹೊರಟಿತೆಂದರೆ ಸರಿ, ಪ್ರಾಣವೇ ಬೇಕಾದರೆ ಹೋಗಲಿ, ಆ ಮಾತು ಹಾಗೆಯೇ ತಡೆಯುವದು ತಾಳುವದು, ಶಾಶ್ವತ ನಿಲ್ಲುವದು."

ಇವೆಲ್ಲ ಸಂಗತಿಗಳು ಹೀಗೆ ಇದ್ದರೂ ಬರಬೂನ ಹೆಂಡತಿ ಅವನಿಗೆ ಒಪ್ಪುವಂಥವಳಿದ್ದಿಲ್ಲ. ಮಾತುಮಾತಿಗೆ ಜಗಳ ಹೂಡುವಂಥವಳು. ನಾಲ್ಕು ಮಕ್ಕಳ ತಾಯಿ ಆದ್ದರಿಂದ ಆಕೆ ಹೆಜ್ಜೆ ನೆಲಕ್ಕೆ ಊರುತ್ತಿದ್ದಿಲ್ಲ. ಎಲ್ಲರಿಂದಲೂ ಮನ್ನಣೆ ಪಡೆಯುವ ಹವ್ಯಾಸ ಆಕೆಯದು. ಇದರಿಂದ ಬರಜೂ ಮತ್ತು ಅವನ ಹೆಂಡತಿ ಇವರಿಬ್ಬರಲ್ಲಿ ಆಗಾಗ್ಗೆ ಮನಸ್ಸು ಕೆಡುತ್ತಿತ್ತು.

ಆದರೆ ಹೀಗೆ ಕೂಟ-ಕಾಟ, ಅನುನಯ-ವಿನಯಗಳಿಗಾಗಿ ಬರಜೂಗೆ ಅವಕಾಶವೆಲ್ಲಿಯದು? ಮನೆವಾರ್ತೆಯತ್ತ ಲಕ್ಷ್ಯ ಪೂರೈಸಲು ಅವನಿಗೆ ದಿನದಲ್ಲಿ ಒಂದು

---

*ಒಂದು ಉದ್ದ ದಂಡಿಗೆಗೆ ಆಚೆ-ಈಚೆ ಒಜ್ಜೆ ತೂಗಬಿಟ್ಟು ನಡುವೆ ಆ ಭಾರಕ್ಕೆ ಹೆಗಲು ಕೊಟ್ಟು ಹೊರುವದು.

ಗಳಿಗೆಯೂ ಅನುವು ಸಿಗುತ್ತಿದ್ದಿಲ್ಲ. ರಾತ್ರಿಯಾಗುತ್ತಲೇ ಸ್ವಲ್ಪ ಉಂಡು ಆತ ಮಲಗಿ ಬಿಡುತ್ತಿದ್ದ. ಹಿರಿಸೊಸೆ ಒಳಮನೆಯ ಕೆಲಸ ಬೊಗಸೆಗಳನ್ನೆಲ್ಲ ನೀಗಿಸಿ ತನ್ನ ಯಜಮಾನರ ಕಾಲು ಒತ್ತಲಿಕ್ಕೆ ಕೂಡ್ರುತ್ತಿದ್ದಳು. ಬರಜೂನ ನಿದ್ದೆ ಹರಿದಾಗೆಲ್ಲ ಆಕೆ ಕಿರಿಸೊಸೆ ಹಾಗೂ ಭಕಡಿಯ ಕುರಿತು ಉರಿದು ಉರಿದು ಮಾತಾಡುತ್ತಿದ್ದಳು. "ಅತ್ತೆ-ಮಾವಂದಿರು ಇದ್ದಾಗ ಎಲ್ಲ ಮಾತೂ ಒತ್ತಿ ಹತ್ತಿಕ್ಕಬೇಕಾಗಿತ್ತು. ಈಗ ಎಲ್ಲರ ಬಾಯಿಯೂ ಬಿಚ್ಚ ಹತ್ತಿದೆ. ಈ ಕೋತಿಯಂಥ ಹುಡುಗ ನನಗೆ ಬಯ್ದಾಡುತ್ತಾನೆ! ಯಾಕೆ? ನನಗೆ ಆಡುವವನು ನೀನು ಯಾರು? ಹುಲಿಯ ಗವಿಯಲ್ಲಿ ಹುಲ್ಲೆಯ ಹುಡುಗಾಟ! ಈಗಾಗಲೇ ಗೂಳಿಯಾಗಿ ಕೊಬ್ಬಿರುವಿ! ಆದರೆ ಒಂದು ದಿನವಾದರೂ ಹೊಲಮನೆಯ ಕೆಲಸ ನೋಡಿಕೊಂಡದ್ದುಂಟೇ?—ದನಗಳೆಲ್ಲ ಪೈರು ತಿಂದು ಹೋದವು. ಹೊಲಗಳೆಲ್ಲ ಹಾಳುಗೆಡುತ್ತವೆಂದು ಇವರೊಬ್ಬರೇ ಪ್ರತಿಯೊಂದು ಕೆಲಸಕ್ಕೂ ಓಡಾಡಿ ಒಣಗಿ ಕಡ್ಡಿಯಾಗಬೇಕು! ಈ ಕಟ್ಟೆ ಆ ಚಿಟ್ಟೆ ಅಲೆದಾಡುತ್ತಿ! ಊಟ ಬಡಿಸುವ ಹೊತ್ತಿಗೆ ಮನೆಯ ಮೆಟ್ಟಿಲು ಹತ್ತುತ್ತೀ—ಎರಡೂ ಹೊತ್ತು! ಇಷ್ಟಾದರೂ ನಾನೇ ಉಪದ್ವ್ಯಾಪಿಯೆನ್ನುತ್ತೀ! ಅದೇ ನಿನ್ನ ಹೆಂಡತಿ ಒಂದು ಹುಲ್ಲಿನ ಎಸಳನ್ನು ಕೂಡ ಸೀಳುವುದಿಲ್ಲ. ಅಕ್ಕಿ ಒಲೆಯೇರುವದು ಹೇಗೆಂಬುವದನ್ನು ಅರಿತವಳಲ್ಲ. ಆದರೆ ಬಾಯಿಬಡಾಯಿಯ ಹೊತ್ತಿಗೆ ಗಂಡ ಹೆಂಡತಿ ಇಬ್ಬರೂ ಹುಲಿಯಂತೆ ಏರಿ ಬರುತ್ತಾರೆ. ಆಕೆ....ಡೆ, ಬಂಜೆಯೆಂದು ಕರೆಯುವಳು. ಮತ್ತು ಆತ ಉಪದ್ವ್ಯಾಪಿ ಪೀಡೆಯೆಂದು! ಇರಲಿ, ನಾನೇನು ಕಂಗೆಟ್ಟ ಭಿಕಾರಿಯೇ?—ಬಾಗಿ ಬಾಗಿಲಿಗೆ ಒದೆತ ತಿನ್ನುವಾಕಿಯೇ? ನನ್ನವರೂ ಯಾರು ಇದ್ದಾರೊ ಇಲ್ಲವೋ?"

ಆದರೆ ಬರಜೂ ಯಾವಾಗಿನಿಂದ ಗೊರಕೆ ಹೊಡೆಯಲು ಆರಂಭಿಸಿದನೋ ಗೊತ್ತಾಗುತ್ತಿದ್ದಿಲ್ಲ. ಹಿರಿಸೊಸೆ ಬಡಬಡಿಸಿ ನಿರಾಶಳಾಗುತ್ತಿದ್ದಳು.

ಭಾಗವತದ ಅಧ್ಯಾಯ ಪಾರ್ವತಿ ಕೇಳದಿದ್ದರೇನಾಯಿತು? ಶುಕದೇವನು ಎಲ್ಲವನ್ನೂ ಕೇಳಿಕೊಳ್ಳುತ್ತಿದ್ದನು. "ಕಿರಿಸೊಸೆ ಗೋಡೆಗೆ ಕಿವಿಯಂಟಿಸಿ ಎಲ್ಲವನ್ನೂ ಕೇಳಿಕೊಳ್ಳುತ್ತಿದ್ದಳು." ಮತ್ತು ಭಕಡಿಯ ಹತ್ತಿರ ಹೋಗಿ ಹೇಳುತಿದ್ದಳು: "ಅಣ್ಣಯ್ಯ, ಅಣ್ಣಯ್ಯ ಎಂದು ಹೇಳುತ್ತಿದ್ದಿರಲ್ಲವೇ? ಈಗ ನೋಡಿ ಅವರು ತಮ್ಮ ಹೆಂಡತಿಯ ಬದಿಗಾಗದೇ ನಿಮ್ಮವರಾಗುವರೇ? ಹೆಂಡತಿ ಎಷ್ಟೆಲ್ಲ ಉಪ್ಪು ಕಾರ, ಸುಳ್ಳು ಸಟೆ ಬೆರೆಸಿ ಹೇಳಿಕೊಡುತ್ತಿದ್ದಾಳೆ. ಅದಕ್ಕೆ ಅವಳ ಆ ಗಂಡ ಏನೆನ್ನುತಾನೆ ಗೊತ್ತೆ? 'ಮನೆಗೆಲಸವೆಲ್ಲ ಆಕೆಯೇ ಏಕೆ ಮಾಡಬಾರದು? ಒಬ್ಬರು ಕೂತಲ್ಲಿಯೇ ಕೂತು ಉಣ್ಣುವದಾದರೂ ಏಕೆ?' ಅವರೇನು ನನಗೆ ತಣ್ಣಗೆ ಕೂಡ್ರಿಸಿ ಉಣಿಸುತ್ತಾರೆಯೇ? ಕಾಳು ಕೇರುವದರಿಂದ ಹಿಡಿದು ಅನ್ನ ಬೇಯಿಸಿ ಉಣಬಡಿಸುವತನಕ ಎಲ್ಲ ಕೆಲಸ ಯಾರು ಮಾಡುತ್ತಾರೆ? ನನಗೇನು ಬಿದ್ದಿದೆ? ಅವಳು ಹೇಗೆ ಮಾಡುತ್ತಾಳೋ ನಾನು ನೋಡುತ್ತೇನೆ."

ಭಕಡಿಗೆ ಅರ್ಥವೇ ಆಗುವದಿಲ್ಲ, ಇವೆಲ್ಲ ಮಾತು ಪೂರಾ ಸಟೆಯೋ ಸತ್ಯವೋ? —ಎಂದು. ತನ್ನ ಅಣ್ಣ ಹೊರಗಿನ ಜನ ಹೇಳುವಂತೆ ಒಳಗಿನಿಂದ ಇಲ್ಲವೇ? ಹರಿಮಿಶ್ರರು ಹೇಳಿದ್ದೇ ನಿಜ, ಕೇವಲ ಹೊರತೋರಿಕೆಗೆ ಬರಜೂನ ಮಾತು ಸವಿ.

ಹರಿಮಿಶ್ರ ಊರ ಪಂಚಾಯಿತಿ ಕಮಿಟಿಯ ಅಧ್ಯಕ. ಜನ ಬರಜೂನನ್ನು ಪ್ರೀತಿಸುವದು ಅವನ ಕಣ್ಣಿನ ಕಸ. ಆದ್ದರಿಂದ ಆತ ಮಾತು ಮಾತಿಗೂ ಬರಜೂನ ಕುರಿತು ಅಪಚಾರ ಮಾಡುತ್ತಾ ತಿರುಗುತ್ತಾನೆ. ಭಕಡಿ ಅಣ್ಣನ ನಿಂದೆಯನ್ನು ಇತ್ತ ಮನೆಯಾಕೆಯಿಂದ, ಅತ್ತ ಹರಿಮಿಶ್ರನಿಂದ ಕೇಳುತ್ತಿರುತ್ತಾನೆ. ಆದರೆ ಅಣ್ಣನ ಇದುರಿಗೆ ಅವನ ಬಾಯಿ ತೆರೆಯುವದೇ ಇಲ್ಲ.

ಅಣ್ಣ ಅವನಿಗಿಂತ ಬಹಳ ಹಿರಿಯ, ವಯಸ್ಸಿನಲ್ಲಿ—ಹತ್ತು ವರ್ಷಕ್ಕೂ ಹೆಚ್ಚು. ನೆರೆಹೊರೆಯ ಹಳ್ಳಿಗರಿಗೆಲ್ಲ "ಇದು ಬರಜೂ ಪಧಾನನ ಮನೆ"ಯೆಂದೇ ಗೊತ್ತು; ಇಲ್ಲಿ ಭಕಡಿಯ ಹೆಸರು ಕೂಡ ಇಲ್ಲ. ತಂದೆ ತೀರಿಕೊಂಡ ಮೇಲೆ ತನ್ನನ್ನು ಎಲ್ಲೆಡೆಗೂ ತುಚ್ಛನಾಗಿ ಎಣಿಸುತ್ತಾರೆಂದು ಕಡೆಗಣಿಸುತ್ತಾರೆಂದು ಭಕಡಿ ಮನಗಂಡನು. ಮೇಲೆ ಮತ್ತೆ ಚುಚ್ಚು ಮಾತು ಆಡಲಿಕ್ಕೆ ಇತ್ತ ಗೃಹಿಣಿಯೂ ಪ್ರತಿಸಲ ಸಜ್ಜಾಗಿ ಕೂತಿರುತ್ತಿದ್ದಳು.

ಕೆಲ ಸಲ ಇಸ್ಪೀಟು ಆಡಿಕೊಂಡು ಭಕಡಿ ಮನೆಗೆ ಮರಳಿದಾಗ ಹಾಲು ತೀರಿಹೋಗಿರುತ್ತಿತ್ತು. ಇದು ಅವನ ಹೆಂಡತಿಗೆ ವಿಪರೀತ ನೋವು ಉಂಟು ಮಾಡುತ್ತಿತ್ತು. "ನನ್ನವರೇನು ಹತ್ತಿಪ್ಪತ್ತು ಮಂದಿಯ ಬಳಗದವರೇ? ಇರುವವರೇ ಒಬ್ಬರು. ಆದರೆ ಅವರಿಗೂ ಮನ ಮೆಚ್ಚುವಂತೆ ತಿನ್ನಲು ಉಣ್ಣಲು ಸಿಗುವದಿಲ್ಲ. ಏನೂ ಬೇಕಾಗಿಲ್ಲ. ನಾನು ಇಲ್ಲಿ ಉಳಿದು ಮಾಡಲೇನು? ನೀವು ನಿಮ್ಮ ಅಣ್ಣ ಅತ್ತಿಗೆ, ಅವರ ಮಕ್ಕಳನ್ನು ಕಟ್ಟಿಕೊಂಡು ಬೇಕಾದರೆ ಇಲ್ಲಿಯೇ ಇರಿ. ನನಗೆ ನನ್ನ ತವರುಮನೆ ಇದೆ. ಅಲ್ಲಿ ನಾಲ್ಕೈದು ಹೊರಗಿನ ಮಂದಿಯೇ ಉಣ್ಣುತ್ತಾರೆ. ಅಲ್ಲೇನು ನನ್ನ ಹೊಟ್ಟೆ ಹೊರಲಿಕ್ಕಿಲ್ಲವೇ?"

ಮೊದಮೊದಲು ಇವೆಲ್ಲ ಮಾತುಗಳು ಭಕಡಿಗೆ ಕೆಡುಕೆನಿಸುತ್ತಿದ್ದವು. ಆದರೆ ಕ್ರಮೇಣ ಇವೆಲ್ಲವೂ ಸಹ್ಯವಾಗಿಬಿಟ್ಟವು. ಹೀಗೆ ಎಲ್ಲಿಯ ತನಕ ಸುಮ್ಮನೇ ಬಿದ್ದಿರಬೇಕು? ನಾಥ ಖಟೋಹಿ, ಹಾಲು ಸಾಹು ಇತ್ತೀಚೆಗೆ ತಮ್ಮ ಅಣ್ಣಂದಿರಿಂದ ಬೇರೆ ಆಗಿಬಿಟ್ಟಿದ್ದಾರೆ. ಅವರದೇನು ನಿರ್ವಾಹ ಆಗುವದಿಲ್ಲವೇ? ಅವರಂತೂ ತಿರುಗಿ ಚೆನ್ನಾಗಿಯೇ ಇದ್ದಾರೆ. ಅಂಗಡಿ ನಡೆಯಿಸಿ ನಾಲ್ಕು ದುಡ್ಡು ಕೈಗೆ ಹತ್ತಿದಾಗ ಈಗೆಲ್ಲ ಅವರು ಸರಿಯಾಗಿ ಬಿಟ್ಟಿದ್ದಾರೆ. ಅಣ್ಣಂದಿರ ಸಂಗಡವೇ ಉಳಿದು ಅವರಿಗೆ ಏನಾಗುವದಿತ್ತು? ಆದರೂ ಬೇರೆ ಉಳಿಯುವದು ಹೇಗೆ ಆದೀತು? ಈ ಮಾತು ಮೊದಲು ಎತ್ತುವದು ಯಾರು?

~*~*~*~

೪

ನಾಲ್ಕು ನಿಟ್ಟಿನಲ್ಲಿ ಹಚ್ಚ ಹಸಿರು ಹೊಲಗಳು. ನೆತ್ತಿಯ ಮೇಲೆ ಆಶ್ವಿಜದ ನೀಲಿ ನೀಲಿ ಆಕಾಶ. ರಣಗುಡುವ ಬಿಸಿಲು ಬೇರೆ. ನೆತ್ತಿಯೇ ಒಡೆದು ಹೋಳಾಗುವಂತೆ ಅನಿಸುತ್ತದೆ. ನಡುನಡುವೆ ಮೋಡಗಳ ಗುಂಪುಗಳು ಚಿಕ್ಕವಾದರೂ ಎದೆ ಸೆಟೆದುಕೊಂಡು ಪಡೆಗಳು ಬರುವಂತೆ ಸೂರ್ಯನ ಇದುರಿನಿಂದ ಸಾಗಿ ಹೋಗುತ್ತವೆ. ಇದರಿಂದ ಅವುಗಳ ನೆಳಲು ಹೊಲದಿಂದ ಹೊಲಕ್ಕೆ ಕುಣಿಯುತ್ತ ಗುದುಕುತ್ತ ಹಾಯುತ್ತವೆ, ದೂರ, ಬಲುದೂರ. ಮರಗಳ ದಟ್ಟಣಿಯಲ್ಲಿ ಎಷ್ಟು ಊರುಗಳು ಮರೆಯಾಗಿವೆಯೋ! ಗಾಳಿ ಬೀಸುತ್ತದೆ—ನಿಲ್ಲುತ್ತದೆ. ಕಳಿವೆಗಳ ಗದೆಗಳಲ್ಲಿ ಅದರ ಗತಿಯ ಗುರುತು ಮೂಡುತ್ತದೆ. ಆ ಆಕಾಶ ಎಷ್ಟು ಎತ್ತರ, ಎಷ್ಟು ನೀಲಿ—ಕೆಳಗೆ ಚಾಚಿದ ನೆಲದ ಮೇಲೆ! ಮನುಷ್ಯನ ಕೈಯಿಂದಲೇ ಆದ ಈ ಕೃತಿಗಳನ್ನು ಕಂಡು ಆಕಾಶವು ಆಶ್ಚರ್ಯಭರದಲ್ಲಿ ಕಣ್ಣು ಬಿಡುತ್ತದೆ! ಈ ಸೊಬಗಿನ ನಡುವೆ ಹೊಲಗದ್ದೆಗಳ ನಡುನಡುವೆ ಕಪ್ಪು ಕಪ್ಪಾದ ಪಶುಗಳು ಪ್ರಾಣಿಗಳು ಒಂದಲ್ಲ ಒಂದು ಚಟುವಟಿಕೆಯಲ್ಲಿ ತೊಡಗಿರುತ್ತವೆ. ಎಲ್ಲಿಯೋ ಒಂದು ಹಿಂಡು ಬಕಪಕ್ಷಿಗಳು ಇನ್ನೆಲ್ಲಿಯೋ ಒಂದು ಹಿಂಡಿ ಗಿಳಿಗಳು ಹೊಲದಿಂದ ಹೊಲಕ್ಕೆ ಮತ್ತೆ ಅಲ್ಲಿಂದ ಹಾರಿ ಹತ್ತಿರದ ಊರೊಳಗೆ ಮಾಯವಾಗುತ್ತವೆ. ಆದರೆ ಪೈರಿನ ಸಸಿಗಳ ಕೆಳಗೆ ಜೋಲುವ ಕರಿಕರಿ ಕೀಟಗಳಿಗೆ ಬೇರೆ ಯಾವ ಕಡೆಗೂ ಕಣ್ಣಿಲ್ಲ. ಆದರೆ ಅವೂ ಈ ಹೊಲ ಗದ್ದೆಗಳಂತೆಯೇ, ಹಕ್ಕಿಗಳಂತೆಯೇ, ಈ ಸೂರ್ಯ ಈ ಆಕಾಶಗಳಂತೆಯೇ ಚಿರಪರಿಚಿತವಾದವು. ಸೆಕೆಯೇನು? ಮಳೆಯೇನು? ಚಳಿಯೇನು? ಇಬ್ಬನಿಯೇನು? ನಾಲ್ಕೂ ಋತುಗಳಲ್ಲಿ ಮುನ್ನೂರೈವತ್ತೈದು ದಿನಗಳೂ ಒಂದೇ ರೀತಿ ಸರಿದು ಹೋಗುತ್ತವೆ. ಯುಗಯುಗಗಳು ಮುಗಿದು ಹೋಗಿವೆ. ಈ ಹೊತ್ತಿನ ವರೆಗೂ ಆ ಮೈಗಳಿಗೆ ಬರಿಮೈ ಮುಚ್ಚಿಕೊಳ್ಳಲಿಕ್ಕೆ ಒಂದು ಅಂಗಿ ಸಿಗಲಿಲ್ಲ. ಆರು ಮೊಳದ ಧೋತರ ಎಂಟು ಮೊಳದ್ದಾಗಲಿಲ್ಲ. ಆದರೇನು? ಅವರು ಪಶುಗಳಲ್ಲ; ಬರೇ ಮಣ್ಣಿನ ಗೊಂಬೆಗಳು. ಅವರ ಸೊತ್ತು—ಹುಟ್ಟಿನಿಂದ ಸಾವಿನ ವರೆಗೂ—ಮಣ್ಣಿನಲ್ಲಿಯೇ ಉಂಟಾಯಿತು. ಈ ಮಣ್ಣಿನಲ್ಲಿಯೇ ಅವರು ಕೂತರು, ಎದ್ದರು, ಬಿದ್ದರು, ಮಲಗಿದರು. ಮಣ್ಣಿನಲ್ಲಿಯೇ ಮನೆ ಕಟ್ಟಿದರು. ಮಣ್ಣು ಅಗಿದು ಹೊಟ್ಟೆ ಹೊರಕೊಂಡರು—ಈ ನೆಲದ ಹುಳಗಳು, ಮಣ್ಣಿನ ಮೂರ್ತಿಗಳು.

ಈ ಹುಳುಗಳಲ್ಲಿ ಬರಜೂ ಪಧಾನನೂ ಒಬ್ಬ. ಸೊಂಟಕ್ಕೆ ಒಂದು ಮಾಸಿದ ಪಂಚೆ ಸುತ್ತಿಕೊಂಡು ತಲೆಗೊಂದು ಮುಂಡಾಸು ಬಿಗಿದು ಗದ್ದೆಯಲ್ಲಿ ಸಸಿಗಳ ಕೆಳಗೆ

ಮೊಣಕಾಲೂರಿ ಕೂತಿದ್ದಾನೆ. ಯುಗಗಳ ಹಿಂದೆ ಯುಗಗಳು ಸಂದುವು. ಅದೆಷ್ಟು ಬರಜೂರು ಕೆಸರು ತುಳಿದು ತುಳಿದು, ಬೆನ್ನ ಮೇಲೆ ಬಿಸಿಲು ತಾಳಿ ಮನುಷ್ಯ ಕೋಟಿಗಾಗಿ ಅನ್ನ ಉಂಟು ಮಾಡುತ್ತಿರುವವರು. ಆಶೆ ಇಲ್ಲ, ಭಾಷೆ ಇಲ್ಲ. ಕಣ್ಣಿದ್ದೂ ಕಾಣಲಾರದೆ, ಕಿವಿಯಿದ್ದೂ ಕೇಳಲಾರದೆ, ನಾಲಗೆ ಇದ್ದೂ ಅವರು ಮಾತನಾಡದೆ ಹೋಗುವವರು. ತಮ್ಮ ದುಃಖ ತಾವೇ ಅರಿಯರು. ತಮ್ಮ ಮನಸ್ಸಿನ ಮಾತು ತಾವೇ ಒಡೆದು ಹೇಳಲಾರರು. ಕೇವಲ ದನದೊಂದಿಗೆ ಅವರು ದನ. ಕಾರಣವಿದ್ದೊ ಇಲ್ಲದೆಯೋ ಬೆನ್ನಮೇಲೆ ಏಟು ಬೀಳಲಿ, ಬೈಗಳು—ಫಜೀತಿ ಪಾಲಿಗೆ ಬರಲಿ, ಮೂರೂ ಹೊತ್ತು ಜಮೀನದಾರನ ಪಾರುಪತ್ಯಗಾರನು ಕೂಳಿಗೆ ಕೊಡಲಿ ಬಿಡಲಿ —ಯಾರಿಂದಲೂ ಯಾವ ದೂರೂ ಇರುವದಿಲ್ಲ.

ಚಕ್ಕಿ ಬೀಸುವ ಜದು ಬರಜೂನ ನೆರೆಯಲ್ಲಿಯೇ ವಾಸಿಸುವ ಆಪ್ತ. ಪಕ್ಕದ ಗದ್ದೆಯಲ್ಲಿ ಹುಲ್ಲು ನೋಡಿಕೊಳ್ಳುತ್ತ ಇದ್ದಾನೆ—ಇವನಂತೆಯೇ ಮಂಡಿಯೂರಿ ಕೂತು. ಇಬ್ಬರ ನಡುವೆಯೂ ಹರಟೆ ನಡೆಯುತ್ತಿದೆ. ಬೇರೆ ರೈತರೂ ತಮ್ಮ ತಮ್ಮ ಮನೆ-ಮಾರು, ಗದ್ದೆ-ಗೆಮ್ಮೆಗಳ ಕುರಿತು ಅಲ್ಲಲ್ಲಿ ಹರಟುತ್ತಿದ್ದಾರೆ.

“ಬರಜಣ್ಣಾ, ಎಲ್ಲ ನಸೀಬದ ಆಟ ನೋಡು. ಕಳೆದ ವರ್ಷ ಒಂದೆರಡು ಬಿಘೆ ಹೊಲದಲ್ಲಿ ಕಬ್ಬು ಒಳ್ಳೇ ಬೆಳೆದಿತ್ತು. ಆದರೆ ಈ ಸಲ ಸಸಿಗಳೆಲ್ಲ ಸೊರಗಿ ಸುಕ್ಕಾಗಿ ಹೋಗಿವೆ. ಮಾಡಿದ ಖರ್ಚು ಹುಟ್ಟಿದರೇ ದೊಡ್ಡ ಪುಣ್ಯ!”

“ಅದು ನಮ್ಮ ಕೈಯ ಮಾತೇ? ನಾವೂ ಒಕ್ಕಲು. ಕೈಲಾದಷ್ಟು ಕಷ್ಟ ಮಾಡುವದು. ಆಗದಿದ್ದ ಮೇಲೆ ನಮ್ಮ ಕೈ ಏನು ನಡೆಯುವದು?”

“ಇವೆಲ್ಲ ಸಂಗತಿ ಕೈಯೊಳಗಿನವೇನು? ಕರ್ಮವೇ ನಮ್ಮ ಸ್ವಾಮಿ. ಕರ್ಮದಲ್ಲಿಯೇ ಪಡೆದಿಲ್ಲವಾದರೆ ಯಾರು ಏನುಕೊಡುವರು? ಮಕ್ಕಳ ಆರೋಗ್ಯ ಕೆಟ್ಟಿತು, ದೆವ್ವ ದೇವರುಗಳ ಹರಕೆ ಹೊತ್ತು; ಮತ್ತೆ ಮಂಗಲಾ ಮಾತೆಯ ಪೂಜೆ ಹೇಳಿಕೊಳ್ಳುವದರಲ್ಲಿ ಏನೇನು ಮಾಡಿಲ್ಲ—ಬಿಟ್ಟಿಲ್ಲ? ಆದರೆ ಯಾರೊಬ್ಬರೂ ಕಾಪಾಡಿದರೇ? ಎಲ್ಲವೂ ವ್ಯರ್ಥ. ಕರ್ಮ ಒಂದೇ ಮಿಗಿಲು, ಮೇಲು. ಆ ಹುಡುಗ ಇಂದು ಬದುಕಿದ್ದರೆ ಯಾವ ಚಿಂತೆಯೂ ಇರುತ್ತಿದ್ದಿಲ್ಲ. ಆತ ಆರು ತಿಂಗಳ ಕಾಲ ಕಲಕತ್ತೆಗೆ ಹೋಗಿ ಬಂದರೆ, ಆ ಜಾಗ ನಾಯಿ ಕೊಟ್ಟ ಕಾಳಿನ ಸಾಲವೂ ಉಳಿಯುತ್ತಿದ್ದಿಲ್ಲ. ಮಿಶ್ರಮಹಾಶಯರ ಋಣವೂ ತೀರುತ್ತಿತ್ತು,

“ಅಲ್ಲ ಮನುಷ್ಯ ಯೋಚನೆ ಮಾಡುವುದೆಲ್ಲ ಕೈಗೂಡಿ ಬರುತ್ತಿದ್ದರೆ”—

“ಹೌದಣ್ಣಾ, ಸತ್ಯ ಹೇಳಿದೆ ನೋಡು ನೀನು. ಮನುಷ್ಯನ ಯೋಚನೆಯೆಲ್ಲ ಸುಳ್ಳು, ಏನೂ ಅಲ್ಲ, ಕರ್ಮವೇ ಮುಖ್ಯ. ಮಣ್ಣಿದ್ದದ್ದು ಚಿನ್ನ; ಚಿನ್ನ ಇದ್ದದ್ದು ಮಣ್ಣು—ಎಲ್ಲ ಅದೇ ಮಾಡಿಸುತ್ತದೆ.”

"ಬರಜೂ ನಸು ನಕ್ಕು ನುಡಿದ : "ನಮ್ಮ ಕಣ್ಣೆದುರಿಗೇ ನೋಡಲ್ಲ—ಈ ಹರಿಮಿಶ್ರನ ಮನೆ. ಅವನ ಕರ್ಮ ಎಷ್ಟು ಚೆನ್ನಾಗಿದೆ."

"ಹೌದಣ್ಣಾ, ಪ್ರಪಂಚದಲ್ಲಿ ಧರ್ಮ ಇದೆ ಎಂದು ಮತ್ತೇಕೆ ಹೇಳುವಿ? ಧರ್ಮ ಇದ್ದರೆ ಅದು ಬರೇ ಗೀತೆ—ರಾಮಾಯಣಗಳಲ್ಲಿ. ಹರಿಮಿಶ್ರನಂಥ ಬ್ರಾಹ್ಮಣ ಎಷ್ಟು ಮನೆಗಳನ್ನು ಹಾಳುಮಾಡುತ್ತಾ ಇಲ್ಲ; ಎಷ್ಟು ಮಂದಿಯ ಗಂಟಲು ಹಿಚುಕುತ್ತಾ ಇಲ್ಲ! ಆದರೆ ಅದೇ ಆ ದಿನ ಊರ ಬಂದೋಬಸ್ತಿನ ಅಮಲದಾರರ ಮುಂದೆ ಆತ ಗಂಗೋದಕ ಮತ್ತು ತುಲಸಿ ಪತ್ರ ಕೈಯಲ್ಲಿ ಎತ್ತಿ ಹಿಡಿದು ಆಣೆ ಹೊತ್ತು;—ಮತ್ತೆ ಆ ಮನೆಯ ಎಲ್ಲ ಆಸ್ತಿ-ಪಾಸ್ತಿ ಪಂಚರ ಪರಾಂಬರಿಕೆಯಲ್ಲಿಯೇ ಮುಖಾ ಮುಖಾ ಕಬ್ಜಾ ಪಡೆದುಕೊಂಡ. ಹೇಗೆ ಎದೆ ಸೆಟೆದುಕೊಂಡು ಬೆಂಕಿ ನುಂಗಿ ಅರಗಿಸಿಕೊಳ್ಳುವ ಆಸಾಮಿ ನೋಡು ಆ ಹರಿಮಿಶ್ರ. ಮುಂದೆ ನೋಡುತ್ತೀಯಲ್ಲ; ಧನ—ಜನ ಏನು ಕಡಮೆ ಅವನಿಗೆ? ಅದನ್ನು ನೋಡಿ, ಅವನನ್ನು ನೋಡಿ ಯಾರು ಅಂದಾರು ಪ್ರಪಂಚದಲ್ಲಿ ಧರ್ಮ ಇದೆಯೆಂದು?"

ಬರಜೂ ಪಧಾನನ ಮೈ ಅಡಿಯಿಂದ ಮುಡಿಯವರೆಗೂ ನಡುಗಿತು. ಧರ್ಮ ಇಲ್ಲವೇ ಇಲ್ಲ ಅಂದರೇನು? ಕೇವಲ ಅಧರ್ಮ-ಅನ್ಯಾಯ-ಪಾಪ ಇದೇ ತುಂಬಿದೆಯೇ ಲೋಕದಲ್ಲಿ? ಮನುಷ್ಯನ ಈ ಜಾತಿ ಕೇವಲ ಇವುಗಳ ಮೇಲೆಯೇ ಬದುಕಿ ನಿಂತಿದೆಯೇ? ಜನ ಹೇಳುವುದುಂಟು—ವನ ಮನುಷ್ಯರಲ್ಲಿ ಹೆಚ್ಚು ಬಲಿಷ್ಠನಿದ್ದವನು ತನ್ನ ಹೆಣ್ಣು—ಹಸುಗೂಸುಗಳನ್ನೂ, ಬೇರೆ ಹತ್ತೆಂಟು ಕಸುವಿಲ್ಲದ ಬಳಗದವರನ್ನೂ ಕೊಂದು ತಿಂದು ಬಿಡುತ್ತಾನಂತೆ. ಬಾವುಗವೂ ತನ್ನ ಮರಿಗಳನ್ನು ಹುಡುಕಿಕೊಂಡು ಹಿಡಿದು ಕೊಂದು ತಿಂದುಬಿಡುವದುಂಟು. ಮನುಷ್ಯನೂ ಅದೇ ರೀತಿ, ಅಕ್ಕಪಕ್ಕದ, ನೆರೆಹೊರೆಯ ನಾಲ್ಕೈದು ಮಂದಿಯನ್ನು ಕೊಂದು ಹಾಕುವುದರಿಂದಲೇ ತಾನು ಬದುಕುತ್ತಾನೆ. ಧನದಿಂದಲೂ ಬುದ್ಧಿಯಿಂದಲೂ, ಬಲದಿಂದಲೂ ಇತರರಿಗಿಂತ ಯಾರೊಬ್ಬನು ತುಸು ಹೆಚ್ಚಿನವನಾದರೆ ಸರಿ. ಆತ ತನ್ನ ಹತ್ತಿರದ ಬಡವರಲ್ಲಿ, ಬಲಹೀನರಲ್ಲಿ ಹತ್ತೆಂಟು ಮುಂದಿಯನ್ನಾದರೂ ಸುಲಿದು ತಿಂದು ಜೀರ್ಣ ಮಾಡಿಕೊಳ್ಳದೆ ಕೊಲೆಗಡಕತನ ನಡೆಯಿಸದೆ ದೊಡ್ಡವನಾಗುವದುಂಟೇ? ಅಂದರೇನು? ಮನುಷ್ಯನೆಂಬ ಪ್ರಾಣಿ ಹೀಗೆಯೇ ಇರುವವನೇ?

> "ಅನ್ನದಲ್ಲಿ ಒಳಿತು ಕೆಡಕು ಎಂಬುದಿಲ್ಲವೇನು?
> ಎಲ್ಲಿ ಎಂತು ಅಂತೆ ದೊರೆವುದಣ್ಣಾ ತಿಳಿ ಇದನ್ನು"

—ಭಾಗವತದ ಈ ವಾಣಿ ಮನುಷ್ಯನ ಕುರಿತೇ ಅಲ್ಲವೇ? ಅಧರ್ಮಕ್ಕಾಗಿ ರಾಮಾಯಣ-ಮಹಾಭಾರತಗಳು ಉಂಟಾದವೇ? ಅಧರ್ಮಕ್ಕಾಗಿ ಭೂಮಿ ಒಡೆದು ಇಬ್ಭಾಗವಾಗಿತ್ತೆ? ಅದೆಲ್ಲ ಮನುಷ್ಯ ಜಾತಿಯ ಇತಿಹಾಸವೇ ಅಲ್ಲವೇ?

ಬರಜೂ ಕೂಗಿ ಹೇಳಿದ : “ಧರ್ಮ ಇದೆ, ಇದೆ. ಧರ್ಮ ಇದ್ದೇ ಇದೆ. ನಾವು ಪಾಪಿಗಳಾದ ಮಾತ್ರಕ್ಕೆ ಧರ್ಮವೇ ಎದ್ದು ಹೋದೀತೇ? ನಾವು ಅವರಿವರಿಗೆ ಹೆಸರಿಡುವದೇಕೆ? ನಾವು ಸ್ವತಃ ದೋಷಿಗಳೆಂದು ಸಿದ್ಧ. ಧರ್ಮ ಕಾರ್ಯಕ್ಕಾಗಿ ಒಂದು ಪುಟ್ಟ ಇಣಚಿ (ಅಳಿಲು) ಸೇತುವೆಯ ಮೇಲೆ ಮಣ್ಣು ಹಾಕಿತು. ಕೆಲವು ಮಂಗಗಳು ಹೋಗಿ ಅದರ ಬುನಾದಿಯ ಬಿರುಕಿನಲ್ಲಿ ತಮ್ಮ ತಲೆಯನ್ನಿಟ್ಟವು. ನೂರಾರು ರಾಜ-ಮಹಾರಾಜರು ಮನೆ ಮಾರು, ಮಕ್ಕಳು-ಮರಿಗಳ ಮೋಹ ತೊರೆದು ನೆತ್ತರು ಹರಿಸಿದರು. ನಾವೇನು ಮಾಡುತ್ತಿದ್ದೇವೆ? ನಮ್ಮಲ್ಲಿಯೋ?—ಮನೆ-ಮನೆಗೂ ಮೂರಾಬಟ್ಟೆ. ತಂದೆ-ಮಕ್ಕಳಲ್ಲಿ; ಅಣ್ಣ-ತಮ್ಮಂದಿರಲ್ಲಿ; ಗಂಡ-ಹೆಂಡಿರಲ್ಲಿ ಕಲಹ ಕಚ್ಚಾಟ. ತಮ್ಮ ತಮ್ಮೊಳಗೇ ಮನಸ್ಸು ಎರಕವಿಲ್ಲ. ಈ ಅವಸ್ಥೆಯಲ್ಲಿ ಹರಿಮಿಶ್ರನಂತಹ ಮನುಷ್ಯ ನಮ್ಮ-ನಿಮ್ಮ ನಡುವೆ ತಂಟೆ ಉಂಟುಮಾಡಿ ಮಂಗನ ಪಾಲಿನ ಧೂರ್ತ ನ್ಯಾಯದಂತೆ ನಡುನಡುವೆ ತಾನೇ ನುಂಗುತ್ತ ನುಂಗುತ್ತ ಕೊನೆಗೆ ಎಲ್ಲವನ್ನೂ ಅರಗಿಸಿಕೊಂಡು ಹೋದರೆ ಅದೇನು ಕೇವಲ ಅವನದೇ ದೋಷವೇ? ನಾವೆಲ್ಲ ಬರೇ ಒಣ ತುಲಸಿಯ ಬರಲುಗಳೇ? ಮಂಗಲಾ ಮಾತೆಯಾದರೂ ನಾವು ತಲೆ ತಗ್ಗಿಸಿದ ಮಾತ್ರಕ್ಕೆ ನಮ್ಮನ್ನು ದಾನವರಿದ್ದವರನ್ನು ದೇವತೆಗಳನ್ನಾಗಿ ಮಾಡಲಾರಳು. ಹೆರವರ ನಿಂದೆ ನಾವು ಮಾಡುತ್ತೇವೆ. ಆದರೆ ನಮ್ಮಲ್ಲೇನು ಮನುಷ್ಯತ್ವ ಮೂಲದಲ್ಲಿ ಉಳಿದಿದೆ?”

“ಅಲ್ಲ ಅಣ್ಣಾ, ಹಾಗಲ್ಲ; ಮಿಕ್ಕುದೆಲ್ಲ ಒಂದು ಕಡೆ; ಕರ್ಮ ಇಲ್ಲವೇ ದೈವ ಒಂದು ಕಡೆ. ಮಿಶ್ರನ ದೈವವೋ ಕರ್ಮವೋ ಉಚ್ಚವಿದೆ, ಉಗ್ರವಿದೆ. ಅವನೇ ಊರ ಸಾವುಕಾರ. ಅವನೇ ಹಿರಿಯ ಜಮೀನುದಾರ. ಅವನೇ ದೊಡ್ಡ ದೊರೆ. ಪೋಲೀಸರು, ಅಮಲದಾರರು, ಗ್ರಾಮಸ್ಥರು—ಎಲ್ಲ ಅವನದೇ ಮುಷ್ಟಿಯಲಿ—ಇದೆಲ್ಲ ಕರ್ಮದ್ದೇ ಕರಾಮತ್ತು! ಅಣ್ಣಾ, ಕರ್ಮ-ಕರ್ಮ ಉಚ್ಚವಿಲ್ಲವಾದರೆ ಏನು ತಾನೇ ಆಗಬಲ್ಲುದು?”

“ಹೌದಪ್ಪಾ, ನೀನು ಆಡಿದ್ದು ನಿಜ. ಭಾಗ್ಯವೇ ಸರ್ವಸ್ವ. ಒಂದು ಮಳೆ ಆಗದಿದ್ದರೆ ನೋಡು. ಕಬ್ಬಿನ ಹಕ್ಕಲಿಗೆ ಹಕ್ಕಲೇ ಹಾಳುಬಿದ್ದು ಹೋಗುತ್ತದೆ. ಇದಕ್ಕೆ ಒಂದು ರೀತಿ ಕರ್ಮ ಇಲ್ಲವೇ ದೈವವೆನ್ನಬಹುದು. ಆದರೆ ನಮ್ಮ ನಿಮ್ಮ ನಡುವೆ ಜಗಳ ಹೂಡಿಸಿ, ವ್ಯಾಜ್ಯ ಮಾಡಿಸಿ ನಿಮ್ಮ ಭೂಮಿ ನಮ್ಮ ದುಡಿಮೆ ಇವುಗಳ ಲಾಭ ದೋಚಿಕೊಳ್ಳುವ ಧೂರ್ತನು ಯಾರು? ಹರಿಮಿಶ್ರನೇ ಅಲ್ಲವೇ? ಅವನಿಂದಲೇ ಉಂಟಾದರು—ಪಂಚರು, ಪೋಲೀಸರು, ಅಮಲದಾರರು, ಕರಣಿಕರು. ನಾವು ನಡುನೀರಿನ ಸೆಳವಿಗೆ ಬಳಿದು ಹೋಗ ಹತ್ತಿದೆವು. ಮತ್ತು ಈ ಜನರೆಲ್ಲ ದಂಡೆಗೆ ನಿಂತು ಮೋಜು ನೋಡತೊಡಗಿದರು. ಇದಾಯಿತು ಬೇರೆ ಮಾತು. ಇಲ್ಲ, ನಮ್ಮ ಕರ್ಮವೆಂಬುದು ಬೇರೆ. ಏನೂ ಅಲ್ಲ— ಅದೇ ಹರಿಮಿಶ್ರನೇ, ತಿಳಿಯಿತೇ?”

ಸ್ವಲ್ಪ ದೂರದಲ್ಲಿ ಒಂದು ಬಂಡಿ ಎಣ್ಣೆ ಇಲ್ಲದ ಗಾಲಿಗಳ ಕಿರ್ ಕಿರ್ ರಾಗಾಲಾಪನೆಯೊಂದಿಗೆ ಮೆಲ್ಲಮೆಲ್ಲಗೆ ಸಾಗುತ್ತಿತ್ತು. ಗಾಡಿಕಾರನ "ಹುರ್‌ರ್‌ss" ಎಂಬ ದನಿಯೂ ಅವನ ಚಾಟಿಯ ಏಟಿನ "ಸಟಪಟ್" ಸದ್ದೂ ನಡುನಡುವೆ ಕೇಳಿಬರುತ್ತಿತ್ತು.

ಜದು ಅಂದ : "ತಿಳಿಯಿತಪ್ಪಾ, ಎಲ್ಲ ತಿಳಿಯಿತು ಬಿಡು. ಆದರೂ ನೀನಾಡುವ ಮಾತು ಚುಚ್ಚುತ್ತದೆ. ಹರಿಮಿಶ್ರ ಕೆಟ್ಟವನೆಂಬುವದು ನಿಜವೇ ಆದರೆ ಈ ಸರಕಾರ–ಅಮಲದಾರರು–ವಕೀಲರು–ಮುನಸೀಫರು–ಇವರೆಲ್ಲ ನಮ್ಮದೇನೂ ಒಳಿತು ಮಾಡುವುದಿಲ್ಲವೇ?"

"ಅದು ಅವರ ಮರ್ಜಿ. ಒಳಿತು ಮಾಡಿದರೆ ಅದು ನಮ್ಮ ಭಾಗ್ಯ. ಸರಿ. ಕೆಡುಕು ಮಾಡಿದರೆ ನಮ್ಮ ಭಾಗ್ಯ ಖೊಟ್ಟಿ. ಸಾಮಾನ್ಯವಾಗಿ ನಾವು ಕೆಟ್ಟವರಾದ್ದರಿಂದಲೇ ಇವರೆಲ್ಲ ಉಂಟಾಗಿದ್ದಾರೆ."

"ಹೌದಣ್ಣಾ, ನೀನು ಅಂದದ್ದೇ ನಿಜ. ಸಾವಿರಕ್ಕೆ ಒಂದು ಆಡಿದಿ ನೀನು. ಲೋಕ ಕೆಟ್ಟಿದ್ದರಿಂದಲೇ ಇವರೆಲ್ಲ ಹೀಗಾಗಿದ್ದಾರೆ. ಎಲ್ಲಿ ಎಲ್ಲರೂ ಕಳ್ಳರೋ ಅಲ್ಲಿ ಒಬ್ಬಿಬ್ಬ ಸಾಧುವಾದರೆ ಅವನಿಗೆಲ್ಲಿ ಸ್ಥಾನ?"

"ಒಂದಕ್ಕೆ ಒಂದು ಕೂಡಿಯೇ ನೂರು ಆಗುವದು. ಒಬ್ಬ ಒಳ್ಳೆಯವನಿದ್ದರೆ ಆತ ಇತರ ಒಳ್ಳೆಯವರನ್ನು ಹುಡುಕಿಕೊಂಡು ಕೂಡುತ್ತಾನೆ. ಮತ್ತು ಇನ್ನು ಹತ್ತಿಪ್ಪತ್ತು ಜನರನ್ನು ಒಳ್ಳೆಯವರನ್ನಾಗಿ ಮಾಡುತ್ತಾನೆ. ಹೂವು ಅರಳುವುದು ಒಂದೇ ಕಡೆಗೆ; ಆದರೆ ನಾಲ್ಕೂ ದಿಕ್ಕಿಗೆ ಅದರ ಪರಿಮಳ ಹರಡುತ್ತದೆ. ಯಾವ ಹೂವಿಗೆ ಎಷ್ಟು ಗಂಧವೋ ಅಷ್ಟು ದೂರ ಅದು ಹಬ್ಬುತ್ತದೆ."

ಬಂಡಿಯ ಕಿರ್‌ಕಿರ್ ಸದ್ದು ಮೆಲ್ಲಮೆಲ್ಲಗೆ ದೂರ—ಬಲುದೂರ ಉರುಳಿ ಹೋಯಿತು—ಜತೆಗೆ ಗಾಡಿಕಾರನ "ಹುರ್‌ರ್‌ss" ಎಂಬ ಕೂಗೂ, ಎತ್ತಿನ ಬೆನ್ನಿಗೆ ಬೀಳುವ ಚಾಟಿಯೇಟಿನ ಸಪ್ಪಳ—ಜತೆಗೆ ನಡುನಡುವೆ ಯಾವದೋ ಒಂದು ಹಾಡಿನ ಸೊಲ್ಲು:

"ಬಂಗಾರದ ತೋಳ ಬಂದೀ ತಳಕೆ
ಚಪ್ಪರ–ರೇಶಿಮೆ ರವಕೆ–ಹುರ್‌ರ್‌ss"

ಅತ್ತ ಒಂದು ಕೂಸಿಗೆ ತಂಗಳನ್ನು ತಿನ್ನಲು ಕೊಟ್ಟು ಇನ್ನೊಂದಕ್ಕೆ ಬೇರೊಂದು ತಿಂಡಿ ಇಟ್ಟು ಹಿರಿಯ ಸೊಸೆ ಹಲ್ಲುಜ್ಜುವ ಕಡ್ಡಿ ಜಗಿಯುತ್ತ ಕೆರೆಯ ಕಡೆಗೆ ಹೋಗ ಹತ್ತಿದಳು. ಅತ್ತೆ ಸತ್ತಂದಿನಿಂದ ಇಬ್ಬರೂ ಸೊಸೆಯಂದಿರಲ್ಲಿ ಏನೂ ಕೂಡಿ ಬರುತ್ತಿದ್ದಿಲ್ಲ. ಒಬ್ಬಳು ಇನ್ನೊಬ್ಬಳ ಯಾವ ಮಾತನ್ನೂ ಸಹಿಸುತ್ತಿದ್ದಿಲ್ಲ. ಒಬ್ಬಳು ಒಂದು ಆಡಿದರೆ ಇನ್ನೊಬ್ಬಳು ತಿರುಬಾಣ ಬಿಟ್ಟಂತೆ ಇದಿರುತ್ತರ ಕೊಡುತ್ತಿದ್ದಳು.

ಮನೆಯ ಕೆಲಸ-ಬೊಗಸೆಗಳ ಪಾಲು ಆಗಿಬಿಟ್ಟಿತ್ತು. ಹಾಲು ಹಿಂಡುವದೂ, ಕೊಟ್ಟಿಗೆ ಉಡುಗುವದೂ, ಬೆರಣಿ ಬಡಿಯುವದೂ, ಕಾಳು-ಕಡಿ ಗೇರುವದೂ—ಮುಂತಾದುವೆಲ್ಲ ಕಿರಿಯ ಸೊಸೆಯ ಕೆಲಸ. ಒಬ್ಬಳು ಇನ್ನೊಬ್ಬಳಿಗೆ ಯಾವ ಕೆಲಸದಲ್ಲಿಯೂ ನೆರವಾಗುತ್ತಿದ್ದಿಲ್ಲ. ಹಿರಿಯ ಸೊಸೆ ಒಂದು ದಿನವೂ ಕಾಳು-ಕಡಿ ಬಿಸಲಿಗೆ ಹರಗುತ್ತಿದ್ದಿಲ್ಲವಾದರೆ, ಕಿರಿಯ ಸೊಸೆ ತಪ್ಪಿಯೂ ಒಲೆಯಲ್ಲಿ ಬೆಂಕಿ ಸರಿಮಾಡುತ್ತಿದ್ದಿಲ್ಲ.

ಹಿರಿಯ ಸೊಸೆ ಹಲ್ಲುಜ್ಜಿಕೊಳ್ಳುತ್ತ ಹೊಂಡದ ಅಂಚಿಗೆ ಬಂದಳು. ಅದೇ ಸುಮಾರಿಗೆ ಅವಳ ಓರಿಗೆಯ ಒಡನಾಡಿ ಹೆಂಗಸರೂ ಅಲ್ಲಿ ಬಂದು ನೆರೆಯ ಹತ್ತಿದರು. ಮಣಿಯ ತಾಯಿ* ಒಂದು ಹಿಡಿ ಮಳಲು ತಂದು ತನ್ನ ಹಿತ್ತಾಳೆಯ ಪಾತ್ರೆ ತಿಕ್ಕುತ್ತ ಅಂದಳು: "ಓ ಹಾರಾಳ ಅಮ್ಮಾ, ನಿನಗೇಕೆ ಇಂದು ಇಷ್ಟು ತಡಪಾಯ್ತೇ!"

"ಏನು ಮಾಡಲಿ? ಉಬಟಣೆ ಅರೆದು, ಮಸಾಲೆ ಬೀಸಿ, ದೊಡ್ಡ ಕೂಸಿಗೆ ಗಂಜಿ ಬಡಿಸಿ, ಚಿಕ್ಕ ಇಬ್ಬರ ಬೊಗಸೆಗೆ ಸ್ವಲ್ಪ ಮುಂಡಕ್ಕಿ ಹಾಕಿ ಬರುವನಕ—"

"ಏಕೆ, ನಿನ್ನ ತಂಗಿ ನಿನ್ನ ಮಕ್ಕಳ ತಿನಿಸು-ಕುಡಿಸುವ ಕೆಲಸ ನೋಡಿಕೊಳ್ಳಲಾರಳೇ?" ಮಣಿಯ ತಾಯಿ ಒತ್ತಿ ಒತ್ತಿ ಕೇಳಿದಳು.

"ಅಯ್ಯೋss, ಅವಳು ದೊಡ್ಡವರ ಮನೆಯ ಹೆಣ್ಣಲ್ಲವೇ? ನನ್ನ ಮಕ್ಕಳು ಅವಳಿಗೆ ಗೊಡ್ಡಾಗಿ ಕಾಣುತ್ತವೆ. ಆ ರಾಜಾ-ರಾಣಿ ಇಬ್ಬರೇ ಒಟ್ಟಾಗಿ ಮನೆಯೊಳಗೆ ಏನೇನೋ ಘಡಘಡಿಸುತ್ತಿದ್ದರೆ ಇತ್ತ ಅನ್ನ ಮುದ್ದಿಯಾಗಿ ಹೋದರೂ ಈ ಕಡೆಯ ನೊಣ ಆ ಕಡೆ ಹಾರಲಿಕ್ಕಿಲ್ಲ. ಕೂಗಿ ಕೂಗಿ ನಮ್ಮ ಗಂಟಲು ಬತ್ತಿ ಹೋದರೂ ಸರಿಯೇ."

ಆಗ ಶರದಳ ತಾಯಿ ತನ್ನ ಹಲ್ಲುಜ್ಜಿಕೊಂಡು ಕುಂಚದಿಂದ ಬುಲಾಕು ಉಜ್ಜಿ ಸ್ವಚ್ಛ ಮಾಡುತ್ತ ಹೇಳಿದಳು : "ಛೇ ಛೇ, ಇನ್ನೂ ಆಕೆ ಎಳೆ ಹರೆಯದ ಮೊದಲಗಿತ್ತಿಯೋ, ಹೀಗೆ ಗಂಡನ ಸಂಗಡವೇ ಕೂತಿರಲಿಕ್ಕೆ? ಬರಜೂನ ತಾಯಿ ಬದುಕಿದ್ದರೆ ಆಕೆ ಇದನ್ನೆಲ್ಲ ಮೆಚ್ಚುತ್ತಿದ್ದಳೇ?"

ಹಾರಾಳ ತಾಯಿ ಅಂದಳು : "ಇಷ್ಟೇ ಅಲ್ಲ ಅಕ್ಕಾ; ಅಲ್ಲಿ ಅಣ್ಣ-ನಮ್ಮ ಯಜಮಾನರು-ಬಾಗಿಲಲ್ಲಿ ನಿಂತಿದ್ದರೂ ಈ ತಮ್ಮ ಮತ್ತು ಅವನ ಈ ಹೆಂಡತಿ ಮನೆಯೊಳಗೆ ನಗೆ-ಚೇಷ್ಟೆ ನಡೆಸುತ್ತಲೇ ಇರುತ್ತಾರೆ. ಕೇಳಿದವರ್‍ಯಾರೂ ಅಂದಾರು : 'ಇದೇನು ಬಸವೇರ ಮನೆಯೇ' ಎಂದು."

ಪಂಡೆಯ ಹೆಂಡತಿ ನಾಡೀ, ಸೂರ್ಯನಿಗೆ ಬೊಗಸೆ ನೀರು ಎತ್ತಿ ಚೆಲ್ಲುತ್ತ ಅಂದಳು : "ಕಲಿಯುಗವಮ್ಮಾ ಇದು ಕಲಿಯುಗ. ಇಲ್ಲಿ ಏನೆಲ್ಲ ಹೊಸ ಹೊಸ

---

*ಉತ್ತರ ಭಾರತದಲ್ಲಿ ಅದೂ ಹಿಂದೀ ಭಾಷಿಕರಲ್ಲಿ ಮಕ್ಕಳಾದ ಹೆಂಗಸರಿಗೆ "ಇಂಥವನ-ಇಂಥವಳ" ತಾಯಿ ಎಂದೇ ಕರೆಯುವುದು ವಾಡಿಕೆ.

ಮಾತು ಕೇಳಬೇಕು; ಹೊಸ ಸಂಗತಿ ನೋಡಬೇಕು. ನಾನು ಮೂವತ್ತು ವರ್ಷದ ಪ್ರಾಯದವರೆಗೆ ಹೊರಬಾಗಿಲ ಚೌಕಟ್ಟು ಕೂಡ ನೋಡಿದ್ದಿಲ್ಲ. ನಮ್ಮ ಯಜಮಾನರ ಮೋರೆಯನ್ನೂ ನೋಡಿದ್ದಿಲ್ಲ. ಆದರೆ ಈಗ ಹೀಗೆ ಭಾವನವರ ಇದುರಿಗೆ—ಛೀ, ಛೀ—ಈ ಮಾತು ನಾಲಗೆಯ ಮೇಲೆ ತರಲೂ ಕೂಡ ಆಗದು."

ಕಿರಿಯ ಸೊಸೆ ಮನೆಯ ಒಳಗಿಂದ ಕಿವಿಹಚ್ಚಿ ಇದೆಲ್ಲ ಕೇಳಿದಳು. ಮತ್ತು ಸದ್ದಿಲ್ಲದ ಹೆಜ್ಜೆಗಳಿಂದ ಮನೆಯ ಹಿಂಗಡೆಯ ಕಿಡಕಿಯ ತನಕ ಹೋಗಿ ಅಲ್ಲಿಂದ ಎಲ್ಲವನ್ನೂ ಇನ್ನೂ ನಿಚ್ಚಳವಾಗಿ ಕೇಳಿಕೊಂಡಳು. ಭಕಡಿ ಮನೆಗೆ ಬಂದೊಡನೆ ತಾನು ಕೇಳಿದ್ದೆಲ್ಲ ಅವನೆದುರಿಗೆ ಹೇಳಿದಳು. ಜತೆಗೆ ಏನು ಕೇಳಿದ್ದಿಲ್ಲವೋ ಅದನ್ನೂ ಹೇಳಿಬಿಟ್ಟಳು. ಭಕಡಿ ಏನು ಮಾಡ್ಯಾನು? ಅಣ್ಣನ ಇದುರು ಆಡಲು ಅವನಿಗೆ ಸಾಹಸವಿದ್ದಿಲ್ಲ.

ಈಗ ಹಿರಿ-ಕಿರಿಯ ಸೊಸೆಯರಿಬ್ಬರೂ ಒಬ್ಬರಿಗೊಬ್ಬರು ಮುಖಾಮುಖಾ ಇದಿರಾದರು. ಅತ್ತೆ ಮಾವಂದಿರು ಈಗಂತೂ ಇದ್ದಿಲ್ಲ. ಈಗ ಯಾರಿಗೂ ಯಾರೂ ಹೆಚ್ಚಿದ್ದಿಲ್ಲ, ಕಡಿಮೆ ಇದ್ದಿಲ್ಲ—ಎಲ್ಲರ ಎತ್ತರ ಒಂದೇ—ಮೂರೂವರೆ ಮೊಳ. ಯಾರು ಯಾರನ್ನು ಮನ್ನಿಸಬೇಕು? ಹಂಗಿಸಬೇಕು? ಯಾರು ಯಾರಿಗೆ ಕೇಳಬೇಕು? ಕೂತರೆ ಎದ್ದರೆ ಬಯ್ಗುಳ ಬೊಗಳಾಟ. ಮಾತು ಮಾತಿಗೆ ತಂಟೆ-ತಕರಾರು. ವಾದ-ವ್ಯಾಜ್ಯ, ಕಲಹ-ಕಚ್ಚಾಟ.

ಹಿರಿಯ ಸೊಸೆ ಕೂತಿದ್ದಾಳೆ. ಕಿರಿಯ ಸೊಸೆ ಅಲ್ಲಿಂದ ಹಾಯ್ದಳು. ತಪ್ಪಿ ಅವಳ ಪಾದಕ್ಕೆ ಇವಳ ಕಾಲು ತಟ್ಟಿತು. "ಹರಿ, ಹರಿ!" ಎಂದು ತಂಗಿ ಹೋಗುತ್ತಿರುವಾಗಲೇ, ಹಿರಿಸೊಸೆ ಗದರಿಸಿದಳು. "ಮಂದಿ ಕಣ್ಣಿಗೆ ಕಾಣುವದೇ ಇಲ್ಲವೇ? ಹೋಗುತ್ತ ಹೋಗುತ್ತ ಒದ್ದು ಹೋಗುತ್ತೀಯಾ?"

ಸಿಡಿಮಿಡಿಯಾಗಿ ಕಿರಿಸೊಸೆ ಗರ್ಜಿಸುವಳು : "ಮಂದಿಗೇನು ಬೇರೆ ಎಲ್ಲೂ ಕೂಡ್ರಲು ಸ್ಥಳವೇ ಇಲ್ಲವೇ? ಬರಹೋಗುವ ದಾರಿಯಲ್ಲಿಯೇ ಕಾಲು ಚಾಚಬೇಕೇ?"

"ಏನು ನಿನ್ನ ಸೊಕ್ಕೇ? ಲತ್ತೆಯಂತೂ ಬಿಗಿದಿ. ಮೇಲೆ ಮತ್ತೆ ಅದನ್ನೇ ಸರಿಯೆಂದು ಸಾಧಿಸುವೆಯಾ?"

ಕಿರಿಯ ಸೊಸೆಯೂ ಅಬ್ಬರದಿಂದಲೇ ಇದಿರುತ್ತರ ಕೊಟ್ಟಳು : "ಸಾಧಿಸದೇ ಏನು? ಯಾರ ಬಿಸಾತು? ಯಾರದೇನು ನಾನು ತಿನ್ನುವದಿಲ್ಲ-ಹಾಗೆಲ್ಲ ಹೆದರಲಿಕ್ಕೆ."

ಮಾತಿಗೆ ಮಾತು ಹತ್ತಿ ಚಕಮಕಿ ಕಿಡಿ ಹೊತ್ತಿ ಬಿರಿನುಡಿಗಳೂ ಅಪಶಬ್ದಗಳೂ ಹೊರಟು ಹಾರಾಡ ಹತ್ತಿದವು. ಅವು ಅಂತಿಂಥವಲ್ಲ, ಅವುಗಳಿಗೆ ಶಬ್ದಕೋಶಗಳೇ ಸೋತು ಬರಿದಾಗಬೇಕು!

ಬರಜೂ ಭಕಡೀ ಮನೆಗೆ ಬಂದರು—ಬರಜೂ ಹೊಲ-ಹಕ್ಕಲುಗಳ ಗೈಮೆ ಮುಗಿಸಿ; ಭಕಡೀ ಎರಡು ಹರದಾರಿ ದೂರದಲ್ಲಿ ನಡೆದ ಯಾವುದೋ ತಮಾಷೆಗಾರರ ಕುಣಿತ ನೋಡಿಕೊಂಡು ಇಬ್ಬರೂ ಮನೆ ಹೊಕ್ಕಮೇಲೆ ಈ ಜಗಳದ ವಿಷಯ ಕೇಳಿದರು. ಒಬ್ಬ ಕಿರಿಯಸೊಸೆಯೇ ತಪ್ಪಿತಸ್ಥಳೆಂದು ತೀರ್ಮಾನಿಸಿದ; ಇನ್ನೊಬ್ಬ ಅತ್ತಿಗೆಯದೇ ಅಪರಾಧವೆಂದ. ಎಲ್ಲವನ್ನೂ ಕೇಳಿದ ಭಕಡಿ ಆಡಿದ : "ಭಲೇ ಹೆಣ್ಣೇ, ಹೀಗೆಯೇ ಮಾತಿಗೆ ಮಾತು ಬೆಳೆಸುತ್ತಿರು. ಅಂದರೆ ನಮ್ಮದೇ ಗೆಲುವು" ಆದರೆ ಆ ಹೆಣ್ಣಿನ ರೂಪವೇ ಬೇರೆ ಇತ್ತು. ಆಕೆ ಮೋರೆ ಸೊಟ್ಟ ಮಾಡಿ ಅಂದಳು : "ಈ ಸೋಗಲಾಡಿತನ ಸಾಕು. ಒಂದು ಮುಷ್ಟಿ ಕೂಳಿಗಾಗಿ ಈ ಬಿಕ್ಕೆ ಬೇಡುವದರಿಂದ ಇಂಥ ಉರಿಸುಡುವ ಹಾಳುಮಾತು ಏಕೆ ಕೇಳಿಕೊಂಡೇನು ನಾನು? ಎರಡು ತುತ್ತು ಉಣ್ಣಲು ನಾಲ್ಕು ಮೊಳ ಉಡಲು ನನಗೇನು ಹಕ್ಕೇ ಇಲ್ಲವೇ?"

ಹಕ್ಕು ಇದೆಯೋ ಇಲ್ಲವೋ ಆಕೆಗೆ ಗೊತ್ತಿದ್ದಿಲ್ಲ. ಗೊತ್ತಿದ್ದರೆ ಅದು ಭಕಡಿಗೇ ಗೊತ್ತು. ಆದರೆ ಭಕಡಿಗೂ ಗೊತ್ತಿರಲಿಲ್ಲ. ಯಾವ ಬಯಲಲ್ಲಿ ಎಷ್ಟು ಹೊಲ ಗದ್ದೆ ಇವೆಯೆಂಬುದು ಆತ ತಿಳಿಹೇಳುತ್ತಿದ್ದ : "ಒಳ್ಳೇದು, ಸ್ವಲ್ಪ ತಡೆ ನೋಡೋಣ. ಮೊದಲು ಅಣ್ಣ ಏನೆನ್ನುವರೋ ನೋಡೋಣ." ಇದಕ್ಕೆ ಕಿರಿಯ ಸೊಸೆ ಕಿಡಿಕಿಡಿಯಾಗಿ ಉರಿ ಕಾರಿದಳು. "ಕಟ್ಟಿಕೊಳ್ಳಿರಿ ನಿಮ್ಮ ಅಣ್ಣನನ್ನು. ನಿಮ್ಮ ಅಣ್ಣ, ಅತ್ತಿಗೆ ಅವರ ಮಕ್ಕಳು ಇವರನ್ನು ಅಪ್ಪಿಕೊಂಡು ಬಿದ್ದಿರಿ. ನನ್ನ ಬಗ್ಗೆ ಆದರೂ ಒಂದು ಬೇರೆ ಒಲೆ ಹಾಕಿಸಿಕೊಡಿರಿ."

ಮನೆಯಲ್ಲಿ ಬರಜೂ ಕೇವಲ ಕಿರಿಸೊಸೆಯದೇ ಎಲ್ಲ ದೋಷ ಕೇಳುತ್ತಿದ್ದ. ಈಗ ಅವನಿಗೆ ತಿಳಿದು ಬಂತು. ಪ್ರತಿಯೊಂದರಲ್ಲಿಯೂ ಸುಮ್ಮನಿದ್ದರೆ ಸಾಗುವಂತಿಲ್ಲ. ಹೆಂಡತಿಗೆ ಬುದ್ಧಿ ಹೇಳಿ ಹೇಳಿ ಆತ ಸೋತು ಹೋದ. ಯಾತರಿಂದಲೂ ಯಾವ ಪರಿಣಾಮವೂ ಒದಗಿ ಬರಲಿಲ್ಲ. ವಿಶ್ವ ನಡೆಯುವದೇ ವಿಶ್ವಾಸದಮೇಲೆ. ಆ ವಿಶ್ವಾಸವೇ ಒಮ್ಮೆ ಕಳೆದುಹೋಯಿತೆಂದರೆ ಅಣ್ಣ, ತಮ್ಮ, ತಂದೆ, ಮಕ್ಕಳು, ಗಂಡ, ಹೆಂಡತಿ, ರಾಜ, ಪ್ರಜೆ ಇವರಲ್ಲಿ ಯಾವ ಸಂಬಂಧವೂ ಉಳಿಯಲಿಕ್ಕಿಲ್ಲ. ಇಲ್ಲಿ ಹಿರಿ ಕಿರಿ ಸೊಸೆಯರ ನಡುವೆ ವಿಶ್ವಾಸ ಇದ್ದದ್ದೇ ಇಲ್ಲ. ಅಂದಮೇಲೆ ಅಣ್ಣ ತಮ್ಮಂದಿರ ನಡುವೆ ಅದು ಹೇಗೆ ಇರಬೇಕಿತ್ತೋ ಅದಕ್ಕೂ ಕಡಿಮೆ ಕಡಿಮೆ ಆಗುತ್ತ ಹೋಯಿತು.

ಬರಜೂ ತನ್ನ ಹೆಂಡತಿಯನ್ನು ಪರಿಪರಿಯಿಂದ ಒಡಂಬಡಿಸಿ ಬುದ್ಧಿ ಹೇಳಿ ಕೊನೆಗೂ ಹೇಳಿದ : "ನಿನ್ನ ಈ ರಣರಗಳೆಯಿಂದ, ಒದರಾಟದಿಂದ ನಸುಕಿನಿಂದ ಸಂಜೆಯವರೆಗೆ ಮನೆಯಲ್ಲಿ ಉಳಿಯಲಾಗುವುದಿಲ್ಲ. ಈಗ ಅದೂ ಮೀರಿದರೆ ರಾತ್ರೆಗೂ ಬರುವದು ಕಟ್ಟುಮಾಡಬೇಕಾದೀತು ನಾನು!"

ಹಿರಿಯ ಸೊಸೆ ಜಗತ್ತಿನಲ್ಲಿ ಎಲ್ಲಕ್ಕೂ ಹೆಚ್ಚು ಹೆದರುವದೆಂದರೆ ಬರಜೂನಿಗೇ. ಆತ ಲಹರಿಯ ಮನುಷ್ಯ. ತಲೆಯಲ್ಲಿ ಬಂದದ್ದು ಮಾಡೇ ಬಿಡುವ ಹಟ ಆತನದು. ನಡುವೆ ನೊಣ ಕೂಡ ಹಾರಲು ಬಿಡುತ್ತಿದ್ದಿಲ್ಲ. ಯಾರ ಪ್ರಾಣವೂ ಬೇಕಾದರೆ ವಿಲಿವಿಲಿಯಾಗಿ ಹೋಗುತ್ತಿರಲಿ, ಕಣ್ಣೆತ್ತಿ ಆ ಕಡೆಗೆ ಆತ ನೋಡಿದವನೇ ಅಲ್ಲ, ಹಟಕ್ಕೆ ಬಿದ್ದನೆಂದರೆ. ಇಂಥ ಮನುಷ್ಯ ಆ ಹಿರಿಯ ಸೊಸೆಯ ಹಣೆಯ ಕುಂಕುಮದ ಧನಿಯಾಗಿದ್ದ. ಯಾರೂ ಎಲ್ಲೂ ಗಂಡ ಹೆಂಡಿರು ಜತೆಗೂಡಿ ಬಾಳುವದಿಲ್ಲವೇ? ಇದೇ ಭಕಡಿಯನ್ನೇ ನೋಡಿರಿ. ಮೋಜು ಮಜಾ ಹೊಡೆಯಲಿಕ್ಕೆ ಆತನಿಗೆ ಇಂಥದೇ ದಿನವೆಂಬುದು ಬೇಡ. ಇಂದು "ಚೂಡಾ," ನಾಳೆ "ಜಿಲೇಬಿ", ನಾಡಿದ್ದು ಹೆಂಡತಿಗಾಗಿ ಜರತಾರಿ ಅಂಚಿನ ಸೀರೆ. ಆದರೆ ಈ ಮನುಷ್ಯ; ಹೇಳಿ ಹೇಳಿ ಬಾಯಿ ಸೋತು ಹೋದರೂ ಒಳಿತಿರಲಿ, ಕೆಡಕಿರಲಿ ಒಂದು ವಸ್ತು ತರುವವನಲ್ಲ. ಮಾಡುವವನಲ್ಲ. ನೂರಿನ್ನೂರು ರೂಪಾಯಿ ಜೂಜಿನಲ್ಲಿ ಕಳಕೊಂಡಂತೆ ಜೋಲುಮೋರೆ ಹಾಕಿ ಕೂರುತ್ತಾನೆ. ಇದಕ್ಕೂ ಮೀರಿ ಇಂಥ ಹಟಮಾರಿ! ಹೇಳಿ ಪ್ರಯೋಜನವಿಲ್ಲ. ಅಯ್ಯೋ ನನ್ನ ಹಣೆಯೇ ಒಡೆದಿದೆ ಎಂದು ಮರುಗುವಳು ಬರಜೂನ ಹೆಂಡತಿ.

ಆಗ ಆಕೆ ಒಮ್ಮೆಲೆ ಗಾಬರಿಯಾಗಿ ಅಂದಳು : "ನೀವು ಅದೊಂದೇ ಹೆದರಿಕೆಯ ಮಾತು ಇಟ್ಟುಕೊಂಡಿದ್ದೀರಿ. ಮಕ್ಕಳು ಮರಿ ಗೋಳಾಡಿಸಿ ಹೊರಟು ಹೋಗುವೆನೆಂದು! ಈ ಚಾಳಿ ಯಾವಾಗ ಹೋಗುವದೊ ದೇವರೇ ಬಲ್ಲ."

ಬರಜೂ ಕೊಡುವ ಸಲಹೆ, ಹೇಳುವ ಅಭಿಪ್ರಾಯ ಹೆಂಡತಿಗೆ ಶುದ್ಧ ಅಸಂಭವ ಕೋಟಿಯದಾಗಿ ಕಾಣುತ್ತಿತ್ತು. ಬರಜೂ ಎಲ್ಲವನ್ನೂ ಅರಿತುಕೊಳ್ಳುತ್ತಿದ್ದನು. ಆದರೆ ಅರಿತುಕೊಂಡಮೇಲೆ ತನ್ನ ಹೆಂಡತಿಯದೇ ದೋಷವೆನ್ನುತ್ತಿದ್ದನು. "ನೀನು ಹಿರಿಯಕ್ಕ. ನಿನ್ನ ವರ್ತನೆ ಹೇಗೋ ಹಾಗೆಯೇ ಕಿರಿಯ ಸೊಸೆಗೆ ನಡೆಯಲು ಒತ್ತಾಯವಾಗುತ್ತದೆ. ಎಲ್ಲ ತಕರಾರಿನ ಮೂಲ ನೀನೇ ಇರುವಿ. ನೀನೇ ಮನೆಗೆ ಮೊದಲು ಬಂದವಳು. ಎಂದೋ ಮನೆಯ ಸೊಸೆಯಾಗಿ ಕೂತವಳು. ಮನೆವಾರ್ತೆ ಒಳಿತು ಕೆಡಕು ಎಲ್ಲ ನೋಡಿ ತಿಳಿದವಳಾಗಿರುವಿ. ಎಲ್ಲ ತಪ್ಪು ತೊಡಕುಗಳಿಗೆ ನೀನೇ ಮೊದಲು ದೋಷಿ!"

ಆಗ ಹೆಂಡತಿ ಮೋರೆ ಗಂಟಿಕ್ಕಿ ಅನ್ನುವಳು : "ಹಾಂ, ಹಾಂ, ನನ್ನ ಮಾತು ಕೇಳಲಿಕ್ಕೆ ಆಕೆ ಕಿವಿ ಆಕಳಿಸಿಯೇ ಕೂತಿದ್ದಾಳೆ ಅಲ್ಲವೇ? ನನ್ನಂತೆ ನಡೆಯಲಿಕ್ಕೆ ಆಕೆ ಒಂಟಿಕಾಲಮೇಲೆ ಸಿದ್ಧ!"

ಆಗ ಗಂಡ ಹೇಳುವನು : "ಆಕೆ ಮನ್ನಿಸದಿದ್ದರೆ ಮಾತು ಕೇಳದಿದ್ದರೆ ಅದರ ದೋಷ ಅವಳಿಗೆ ಅಲ್ಲ, ನಿನಗೆ. ಏಕೆಂದರೆ ನೀನೇ ಹಿರಿಯವಳು. ನಿನ್ನ ಬುದ್ಧಿ ಆಕೆಯದಕ್ಕಿಂತ ತೀಕ್ಷ್ಣ. ಅಲ್ಲದೆ ಆಕೆಗಿಂತ ನೀನು ಹೆಚ್ಚು ತಿಳಿದವಳು. ಅನುಭವಪಟ್ಟವಳು."

ಎರಡು ಹನಿ ಕಣ್ಣೀರು ತೊಟಕಿಸುತ್ತ ಹಾರಾಳ ತಾಯಿ ಹೇಳಿದಳು : "ನೀವು, ನಿಮ್ಮ ತಮ್ಮ, ತಮ್ಮನ ಹೆಂಡತಿ—ಇವರ ಪಕ್ಷ ಹೊತ್ತು ಆಡದೇ ಏನು ನನ್ನ ವತಿಯಿಂದ ಆಡಲು ಬಂದವರೇ? ನಾನು ಏಳು ಜನ್ಮದ ವೈರಿಯಾಗಿಬಿಟ್ಟಿದ್ದೇನಲ್ಲ!"

ಬರಜೂ ಎಷ್ಟೆಲ್ಲ ಬುದ್ಧಿ ಹೇಳಿದ. ಪುರಾಣೇತಿಹಾಸಗಳಿಂದ ಎಷ್ಟೆಲ್ಲ ಒಳ್ಳೊಳ್ಳೇ ಕಥೆಗಳನ್ನು ಕೇಳಿಸಿದ. ಆದರೆ ಏನೂ ಉಪಯೋಗವಾಗಲಿಲ್ಲ. ಆ ಹೆಣ್ಣು ತಿಳಿದುಕೊಳ್ಳಲೇ ಇಲ್ಲ.

ಈಗ ಭಕಡಿಯ ಮನಸ್ಸು ತನ್ನ ಮನೆ—ಮಾರಿನಲ್ಲಿ ಮತ್ತು ತನ್ನಲ್ಲಿ ತಲ್ಲೀನವಾಗಿ ಬಿಟ್ಟಿದೆ. ತಾನು ತನ್ನ ಹೆಂಡತಿ ಇವೆರಡರ ಹೊರಗೆ ಅವನಿಗೆ ಪ್ರಪಂಚದಲ್ಲಿ ತನ್ನವರೆಂಬುವವರು ಯಾರೂ ಕಂಡುಬರುತ್ತಿದ್ದಿಲ್ಲ. ಅಣ್ಣ-ಅತ್ತಿಗೆ ಅವರ ಮಕ್ಕಳು ಎಲ್ಲರೂ ಅವನಿಂದ ದೂರವಾಗುತ್ತಿದ್ದಂತೆ ತೋರುತ್ತಿತ್ತು. ಅವರಿಂದ ಅವನು ಬೇರೆಯಾಗುತ್ತಿದ್ದನು. ಅಣ್ಣನೆದುರಿಗೆ ಆತ ತಲೆಯೆತ್ತಿ ಸೆಟೆದು ನಿಲ್ಲುತ್ತಿದ್ದಿಲ್ಲ, ನಡೆಯುತ್ತಿದ್ದಿಲ್ಲ. ಆ ಅಣ್ಣನೂ ಅವನಿಗೆ ಒಮ್ಮೆಯಾದರೂ : "ಲೋ ಭಕಡೀ, ಹೊಲಕ್ಕೆ ಹೋಗಿ ಸ್ವಲ್ಪ ಧಾನ್ಯ ಒಕ್ಕು" ಎಂದು ಹೇಳಿದ್ದಿಲ್ಲ. ಇನ್ನು ಈ ಅಣ್ಣನ ಭಯ—[illegible] ಅವನಿಗೆ ಉಳಿದಿದ್ದಿಲ್ಲ. ಕ್ಷೇತ್ರ-ಜಾತ್ರೆಗಳಿಂದ ಮರಳುವಾಗ ಅವನು ಈಗ [illegible] ಮಕ್ಕಳಿಗಾಗಿ ಹಿಂದಿನಂತೆ ಮಿಠಾಯಿ, ಗುಡಿ-ಗೊಂಬೆ ಆಟಿಗೆಗಳನ್ನೇನೂ ತರುತ್ತಿ[illegible] ಏಕೆಂದರೆ ನೇತ್ರಮಣಿ ಅದನ್ನು ನೋಡಿದರೆ ಮೂರು ಮೂರು ದಿನ ಮಾತಾಡುತ್ತಿ[illegible] ಆದರೆ ಆ ಮಕ್ಕಳು ಮಾತ್ರ ಅವನಿಗೆ ಮುತ್ತಿಗೆ ಹಾಕಿ ಕೇಳುತ್ತಿದ್ದವು : "ಕಾಕಾ, [illegible] ಬಗ್ಗೆ ಏನು ತಂದೆ?" ಆಗ ಅವನ ಮನಸ್ಸು ಒಂದು ಕ್ಷಣಕಾಲ ಅದೇಕೋ ಕಸಿವಿಸಿಯಾಗುತ್ತಿತ್ತು—ಮುದಿ ತಾಯಿ ಬದುಕಿದ್ದಾಗಿನ ನೆನಪು ಒತ್ತಿ ಬಂದು ಮನಸ್ಸು ನೊಂದುಕೊಳ್ಳುತ್ತಿತ್ತು—ಆ ದಿನ ಹೋದವೆಲ್ಲಿ? ಬರಿಗೈಯಿಂದ ಬಂದದಕ್ಕೆ ಮಕ್ಕಳನ್ನು ತೊಡೆಯ ಮೇಲೆ ಎತ್ತಿಕೊಂಡು ಒಡಂಬಡಿಸಬೇಕೆಂದು ಮನಸ್ಸಿಗೆ ತವಕ. ಆದರೆ ಅಬ್ಬಬ್ಬ! ಆಚೆಯ ಕೋಣೆಯಲ್ಲಿ ಕೂತು ನೇತ್ರಮಣಿ ಕಣ್ಣಿಟ್ಟು ನೋಡುತ್ತಿದ್ದಳು. ಅವಳು—ಜೀವಂತ ಬಿಟ್ಟಾಳೇ ಆಮೇಲೆ?

ಹಾರಾ, ಸೋನಾ ಬರಜೂನ ಇಬ್ಬರು ಹುಡುಗಿಯರು. ಹೇಳಿ ಕೇಳಿ ರೈತನ ಹುಡುಗಿಯರು. ಮದುವೆಯ ಪ್ರಾಯ ಆಗಿದೆ. ಇನ್ನೆಷ್ಟು ದಿನ ಈ ಮನೆಯ ಋಣ ಅವರಿಗೆ?

ಹಿರಿಯ ಹುಡುಗಿ ಹಾರಾಳ ಮದುವೆ ಇತ್ತು. ಅವಳ ತಾಯಿಯ ಕಾಲು ನೆಲಕ್ಕೇ ಊರುತ್ತಿದ್ದಿಲ್ಲ. ಎಲ್ಲಿ ವಡೆ, ಎಲ್ಲಿ ಬೇಳೆ, ಎಲ್ಲಿ ಬಾಚಣಿಗೆ, ಎಲ್ಲಿ ಕರಡಿಗೆ ಹುಡುಕಿ ಹುಡುಕಿ ಸರಿಮಾಡಿ ಸಜ್ಜುಮಾಡಿ ಇಡಲು ಆಕೆಗೆ ಹಗಲೂ ಇರುಳೂ ಸಾಲುತ್ತಿದ್ದಿಲ್ಲ. ಕಿರಿಯ ಸೊಸೆಗೆ ಮಕ್ಕಳು-ಮರಿ ಇಲ್ಲ. ಆಕೆ ಇದೆಲ್ಲ ನೋಡಲಾರಳು. ಲಹರಿ ಬಂದರೆ

ಬಂದು ಅಷ್ಟು ಅತ್ತಿತ್ತ ನೋಡಿಕೊಳ್ಳುವಳು. ಅಸೂಯೆಯಿಂದ ಉರಿದೇಳುತ್ತಿದ್ದಳು. ಯಾತರಲ್ಲಿಯೂ ಮನಸ್ಸಿಲ್ಲ. ಹಿರಿಯ ಸೊಸೆ ಒಮ್ಮೊಮ್ಮೆ "ತಂಗೀ, ಆ ಕಾಯಿ ಸ್ವಲ್ಪ ಕೆರೆದು ಕೊಡು. ಈ ತರಕಾರಿ ತುಸು ಹೆಚ್ಚಿ ಕೊಡು" ಎಂದು ಹೇಳಿ ತನ್ನ ಕೆಲಸದಲ್ಲಿ ತೊಡಗಿಬಿಡುತ್ತಿದ್ದಳು. ಕಿರಿಯ ಸೊಸೆಯ ಮೈಗೆ ಈ ಮಾತು ಸೂಜಿಯಂತೆ ಚುಚ್ಚುತ್ತಿದ್ದುವು. ಅವಳಿಗೇನು ಬಿದ್ದಿದೆ, ಪರರಿಗಾಗಿ ಮೈ ಪರಚಿಕೊಳ್ಳಲು?

"ಕಿರಿ ಸೊಸೆ ಭಕಡಿಗೆ ಆರಂಭದಲ್ಲಿಯೇ ಎಚ್ಚರಿಕೆ ಕೊಟ್ಟು ಇಟ್ಟಿದ್ದಳು : ಜೋಕೆ, ಅಣ್ಣ-ಅತ್ತಿಗೆಯ ಮುದ್ದುಮಣಿ ಆಗುವಿರಾದರೆ ನನ್ನ ಹತ್ತಿರ ಬರಲೇಬೇಡಿ!" ಪಾಪ, ಅವನು ಮಾಡುವನಾದರೂ ಏನು? ಆದಷ್ಟು ಏನೂ ಆಡದೆ ಕೇಳದೆ ಸುಮ್ಮನಿರುತ್ತಿದ್ದ. ಆದರೆ ಒಮ್ಮೆ ಎಣ್ಣೆ ಖರೀದಿ ಮಾಡುವದಿತ್ತು, ಪುರೋಹಿತರಿಗೆ ದಕ್ಷಿಣೆ ಕೊಡುವದಿತ್ತು —ಎಂದಾಗ ಹೆಂಡತಿಯ ಕಣ್ಣು ತಪ್ಪಿಸಿ ಹೊರಗೆ ಅಲ್ಲಲ್ಲಿ ತುಸು ನೋಡಿಕೊಂಡು ಒಳಗೆ ಬರುತ್ತಲೇ ತೆಪ್ಪಗೆ ನಿಂತುಬಿಡುತ್ತಿದ್ದ—ತನಗೇನೂ ಗೊತ್ತೇ ಇಲ್ಲ, ತಾನು ಆ ಗೋಜಿನವನೇ ಅಲ್ಲವೆಂಬಂತೆ! ಆದರೂ ಅವನಿಗೆ ಕ್ಷೇಮವಿದ್ದಿಲ್ಲ. ಹೆಂಡತಿ ಇದುರಿಗೆ ಬಂದಾಗಲೆಲ್ಲ ಹೆಡೆ ಎತ್ತಿ ನಿಂತ ನಾಗಿಣಿಯೇ ಆಗಿ ಕಾಣುತ್ತಿದ್ದಳು. ಮಲಗುವ ಕೋಣೆಗೆ ಕಾಲಿಟ್ಟ ಕೂಡಲೆ ನೇತ್ರಮಣಿ ಕಟ್ಟಪ್ಪಣೆ ಕೊಡುತ್ತಿದ್ದಳು : "ಮನೆಯೊಳಗೇ ಹೊಕ್ಕು ಬಿದ್ದಿರುವದಿಲ್ಲವೇಕೆ? ಹೊರಗೆ ಹೋಗಿ ಏಕೆ ಇಷ್ಟೆಲ್ಲ ಯಜಮಾನಿಕೆ ತೋರಿಸುತ್ತೀರಿ?" ಬಡ ಭಕಡಿಯ ಕೈಮೀರಿದ ಮಾತಾಗಿತ್ತು ಇದು. ಮನೆಯಲ್ಲಿ ಮದುವೆ. ಬೆಕ್ಕಿನ ಮರಿಯೂ ಬಾಲ ಅರಳಿಸಿ ಪುಟಿದಾಡುವ ಹೊತ್ತು. ಆದರೆ ಆತನಿಗೋ—ಮನದೊಳಗೆ ತುಸು ಹಿಗ್ಗಲಿಕ್ಕೂ ಪ್ರತಿಬಂಧ!

ಹಾರಾಳ ಮದುವೆ ಒಳ್ಳೇ ವಿಜೃಂಭಣೆಯಿಂದಲೇ ನೆರವೇರಿತು. ಆ ಬಾಲೆ ನಖಶಿಖಾಂತ ಅಲಂಕೃತಳಾಗಿದ್ದಾಳೆ. ಮನೆ ತುಂಬ ಉಣತಿನ್ನುವ ಹಿಗ್ಗೇ ಹಿಗ್ಗು. ಆದಷ್ಟರ ಮಟ್ಟಿಗೂ ಬರಜೂ ತನ್ನ ಶಕ್ತ್ಯನುಸಾರವಾಗಿಯೇ ಮದುವೆಗೆ ವೆಚ್ಚಮಾಡಿದ್ದಾನೆ. ಆದರೆ ಅದಕ್ಕೂ ಹೆಚ್ಚಿನ ಖರ್ಚು ವರಪಕ್ಷದಿಂದಲೇ ನಡೆಯಿತು. ಏನೇನು ನೋಡಬೇಕೆನ್ನುವಿರಿ?—ಬ್ರಹ್ಮಾಪುರದ ಜರತಾರಿ, ಚಿನ್ನದ ಗುಂಡುಸರ, ಚಿನ್ನದ ಕೇತಕೀ ಯಾವದರಲ್ಲಿಯೂ ಕುಂದು ಇದ್ದಿಲ್ಲ.

ಮದುವೆಯಲ್ಲಿ ಎಲ್ಲರೂ ತಿಂದುಂಡು ತೇಗಿ—ತೂಕಡಿಸಿ ಸುಖಿಯಾಗಿದ್ದರು. ಪಂಡೆಯ ಹೆಂಡತಿ ನಾಡಿ ಮತ್ತು ಶರದೂಳ ತಾಯಿ ಕಿರಿಸೊಸೆಯ ಬಳಿಗೆ ಬಂದು ಎಲೆ-ಅಡಿಕೆ ಮೆಲ್ಲಲಿಕ್ಕೆ ಕೂತರು. ಶರದೂಳ ತಾಯಿ ಅಂದಳು : "ತಂಗೀ, ಎಲ್ಲಿ? ನಿನ್ನ ಹೊಸ ಜವಳಿ ಎಲ್ಲಿದೆ?" ಇದಕ್ಕೆ ಕಿರಿಸೊಸೆ ಮೂಗು ಮುರಿದಳು : "ನನ್ನ ಬಗ್ಗೆ ಏನು ಹೊಸ ಜವಳಿ? ಹೊಸ ಬಟ್ಟೆ? ನನ್ನ ಮದುವೆ-ಗಿದುವೆ ಆಗುವದೇನು ಇದೆಯೆ?"

"ಸೈ, ಸೈ. ಮದುವೆಯ ಮಾತೇನು ಬಂತು? ಮನೆಯಲ್ಲಿ ಮದುವೆ ನಡೆದಿದೆಯಲ್ಲ! ವಾದ್ಯದವರು, ಕೆಲಸದವರು ಮಡಿವಾಳಗಿತ್ತಿಯರು ಏನೆಲ್ಲ ಹೊತ್ತು ಹಾಕುತ್ತಿದ್ದಾರೆ. ಬರಜೂ ಪಧಾನ ಎಲ್ಲರಿಗೂ ಹೊಸ ಅರಿವೆ ಕೊಂಡಿರದೆ ಇದ್ದಾನೆಯೇ? ನೀನು ಇದೇನು ಅನ್ನುವಿ?"

ಈ ನಡುವೆ ಆ ಪಂಡೇಬಾಯಿ ಮನೆಯ ನಾಲ್ಕೂ ಮೂಲೆಗೆ ಕಣ್ಣು ಹಾಯಿಸಿ ನೋಡಿಕೊಂಡಿದ್ದಳು. ನಗುತ್ತಾ : "ಇಲ್ಲ, ಇಲ್ಲ. ಅವಳು ಹಾಗೇನೇ ಮೋಸಮಾಡುವಾಕೆಯೇ? ಕಾಣುವದಿಲ್ಲವೇ? ಅಲ್ಲಿ ಹೊಸ ಬಟ್ಟೆ-ಬರೆ ಇದ್ದಾವೆ." ಎಂದು ಅವಳು ಒಂದು ಕೆಂಪು ಬಟ್ಟೆ ಇಟ್ಟಲ್ಲಿಂದ ಕೆಳಗೆ ಎಳೆದು ತೆಗೆದಳು.

ಶರದೂಳ ತಾಯಿ ಊರ ಹೆಂಗಸರಿಗೆಲ್ಲ ಹೆಗ್ಗಡತಿ. ದೊಡ್ಡ ಮಾತು ದೊಡ್ಡದಾಗಿ ಆಡುವವಳು. ಬಲು ಮಾತುಗುಳಿ, ಜೈನಾಪುರದ ಚೌಧರಿಯ ಮಗಳ ಮದುವೆ ನೋಡಿದವಳು ಅವಳು. ಅವಳ ಮುಂದೆ ಮಿಕ್ಕ ಲಗ್ನ ಕಾರ್ಯಗಳು ಏನು ಮಹಾ! ಅವಳಿಗೆ ಗೊತ್ತಿಲ್ಲದ ವಸ್ತು-ಒಡವೆಗಳ ಹೆಸರೇ ಇಲ್ಲವೇನೋ. ತರತರದ ಯಾವ ಸೀರೆ ಆಕೆ ನೋಡಿರಲಿಕ್ಕಿಲ್ಲ. ಈ ಬಟ್ಟೆ ಅವಳಿಗೇಕೆ ಮೆಚ್ಚಿಗೆ ಆದೀತು? ನಾಲ್ಕು ಬೆರಳುಗಳಿಂದ ಆ ಬಟ್ಟೆ ಎತ್ತಿ ತೂಗಿ ನೋಡಿ ಆಕೆ ಆಡಿಯೇ ಬಿಟ್ಟಳು : "ಇದು ಗೋದಾವರಿಯ ಸೀರೆ. ಇದರ ಬಣ್ಣ ಕಚ್ಚಾ. ತಾಳುವದಿಲ್ಲ!"

ಆಗ ಪಂಡೇಬಾಯಿ ಬಾಯಿ ಹಾಕಿದಳು : "ಹೌದೇ? ಹಿರಿಸೊಸೆಯೂ ಇಂಥದೇ ಒಂದು ಸೀರೆ ಉಟ್ಟಿದಾಳೆ."

ಶರದೂಳ ತಾಯಿ ಆಗ ನಿಧಾನವಾಗಿ ಪಂಡೇಬಾಯಿಯನ್ನೇ ದಿಟ್ಟಿಸುತ್ತ ಅಂದಳು : ನಿನಗೇನು ಗೊತ್ತು ಮಣ್ಣು! ಏನು, ಎಲ್ಲಿಯಾದರೂ ಬರೆದದ್ದು ಉಂಟೇ?– –ಹಿರಿಸೊಸೆಯ ಸೀರೆಯಂಥದೇ ಕಿರಿಸೊಸೆಗೂ ತರಬೇಕೆಂದು? ಹಿರಿಸೊಸೆಗೆ ಯಾವ ವಸ್ತು ಕಡಮೆ ಬಿದ್ದಿದೆ—ಇದೊಂದು ಸೀರೆಯಲ್ಲಿ ಅವಳ ತೂಕ ಮಾಡಲಿಕ್ಕೆ? ಅವಳ ಮಗಳ ಲಗ್ನವಾಯಿತು. ನೂರಾರು ರೂಪಾಯಿ ಹುಡಿಹಾರಿತು. ಭರಮಪುರಿ ಸೀರೆ, ಒಡವೆ-ವಸ್ತು ಏನೆಲ್ಲ ಎಷ್ಟೆಲ್ಲ ಮಗಳ ಬಗ್ಗೆ ತಂದದ್ದಾಯಿತು. ಕಿರಿಯ ಸೊಸೆಯ ಬಗ್ಗೆ ಒಂದು ಬೆಲೆಯುಳ್ಳ ಸೀರೆ ತಂದಿದ್ದರೆ ಏನು ಕಡಿಮೆ ಬೀಳುತ್ತಿತ್ತು?"

ಪಂಡೆಯಮ್ಮ ಕಿರಿಸೊಸೆಯ ಕಡೆಗೆ ನೋಡುತ್ತ ಹಲ್ಲು ಕಿರಿದಳು : "ಇದಕ್ಕಾಗಿಯೇ ಏನು ತಂಗಿಯ ಮನಸ್ಸು ಕಟುವಾಗಿ ಹೋಗಿದೆ?"

ಶರದೂಳ ತಾಯಿ, ಕಿರಿಸೊಸೆ ಅಲ್ಲಿ ಇದ್ದೇ ಇಲ್ಲವೆಂಬಂತೆ ಮಾತಾಡುತ್ತಿದ್ದಳು : "ನೀನು ಆಡಿದ್ದು ಕೇಳಿದರೆ ಮನಸ್ಸು ಮೆಚ್ಚುವಂತಿಲ್ಲ. ಮನಸ್ಸು ಕಟು ಏಕೆ ಆಗಬೇಕು?

ಆಕೆ ಏನು ತಂದಿಲ್ಲವೆ? ಉಂಡಿಲ್ಲವೇ–ಉಟ್ಟಿಲ್ಲವೇ? ಮತ್ತೆ ವೆಚ್ಚಗಿಚ್ಚ ಮಾಡದೇ ಉಂಟೆ? ಅಂಥಲ್ಲಿ ಇದೊಂದು ತುಂಡು ಸೀರೆಗಾಗಿ ಅವಳ ಮನಸ್ಸು ಕಟುವಾಗುವದೇ?"

ನಾಡಿಪಾಂಡೆ ಆಡಿದಳು : "ಯಾರು ಅಲ್ಲವೆಂದರು? ಗೊತ್ತಿದೆಯೇ ಈ ತಂಗಿ ಯಾರ ಮನೆಯ ಮಗಳೆಂದು? ಇವಳ ತಂದೆಯ ಹೆಸರು ಯಾರು ಎಲ್ಲಿ ಎತ್ತುವದಿಲ್ಲ? ಇಂಥ ಸೀರೆ ಉಡಲಿಕ್ಕೆ ಇವಳೇನು ಬಿಕ್ಕೆ ಬೇಡುವವಳೇ? ಅಂತೆಯೇ ಮದುವೆಯ ಕಾರ್ಯ–ಕಟ್ಲೆ ಮುಗಿದೊಡನೆ ತೆಗೆದು ಬದಿಗೆ ಕಟ್ಟಿಟ್ಟು ಬಿಟ್ಟಳು. ಅದನ್ನು ಮತ್ತೆ ಉಡುವದೇ?"

ಇದನ್ನು ಕೇಳಿ ಕಿರಿಸೊಸೆಯ ಎದೆ ಉಬ್ಬಿ ಒಂದು ಗಜವಾಯಿತು. ಆಕೆ ಅಂದಳು : "ನನ್ನ ಅಕ್ಕನ ಮದುವೆಯಲ್ಲಿ ಇಂಥ ಸೀರೆ ಕೆಲಸಗಿತ್ತಿ ನೀರಿನಾಕೆಯರಿಗೆ ಸಿಕ್ಕಿರಬಹುದು."

ಶರದೂಳ ತಾಯಿ ಅಂದಳು : "ಸರಿ, ಸರಿ. ಅದು ಯಾರಿಗೆ ಗೊತ್ತಿಲ್ಲವಮ್ಮ! ಇವರೆಲ್ಲ ಈಗ ಹೊಸ ಹಾಸಿನವರು—ಅಷ್ಟಕಸಬಿ ಜನ!" ಶರದೂಳ ತಾಯಿಗೆ ನೇತ್ರಮಣಿಯ ತವರಿನವರ ಕುರಿತು ಏನೂ ಗೊತ್ತಿಲ್ಲವೆಂದು ಇಲ್ಲಿ ಬೇರೆ ಹೇಳಬೇಕಿಲ್ಲ.

~*~*~*~

೫

ಹರಿಮಿಶ್ರ ಹಳ್ಳಿಯ ಪಂಚಾಯತದ ಪ್ರೆಸಿಡೆಂಟರು. ತಾಜಾತುಪ್ಪ ಮತ್ತು ಸಣ್ಣಕ್ಕಿ ಇವೆರಡರ ಬಹುದೊಡ್ಡ ಪ್ರಮಾಣದ ಪ್ರಯೋಗದ ಫಲವಾಗಿ ಈ ಅಧಿಕಾರ ಪದವಿ ಮಿಶ್ರ ಮಹಾಶಯರಿಗೆ ಪ್ರಾಪ್ತವಾಗಿದೆ. ಪಿತ್ರಾರ್ಜಿತ ಆಸ್ತಿಯೊಂದಿಗೆ ಅವರು ತಮ್ಮ ಯೋಗ್ಯತೆಯ ಬಲದಿಂದ ಎಷ್ಟೋ ವಿಧವೆಯರ ಹಾಗೂ ಬಡಬಗ್ಗರ ಹೊಲ ಮನೆಗಳನ್ನು ನುಂಗಿ ಜೀರ್ಣ ಮಾಡಿ ಇನ್ನಿಷ್ಟು ಸಂಪತ್ತು ಸಂಪಾದನೆ ಮಾಡಿರುತ್ತಾರೆ. ಬರಜೂ ಪಥಾನನ್ನು ಕಂಡರೆ ಅವರಿಗೆ ಕಣ್ಣು ಒಡೆಯುವಷ್ಟು ಅಸಹ್ಯ. ಏಕೆಂದರೆ ಬರಜೂ ಮೂಲಕ ಅವರ ಕೃತ್ಯಗಳಿಗೆ ಹಲವಷ್ಟು ಅಡಚಣೆಗಳು ಉಂಟಾಗುತ್ತಿರುತ್ತವೆ? ಅದರಿಂದ ಬಹಳಷ್ಟು ಹಾನಿ ಉಂಟಾಗುತ್ತಿರುತ್ತದೆ. ತಮ್ಮ ಊರಲ್ಲಿ ಇಲ್ಲವೇ ಇನ್ನಾವ ಊರಿನಲ್ಲಿಯೂ ವ್ಯಾಜ್ಯ-ವ್ಯವಹಾರವೆದ್ದರೆ ಅದರ ಪಂಚಾಯತಿಗೆ ಮೊದಲಿಗೆ ಬರಜೂನನ್ನೇ ಕರೆದೊಯ್ಯಲಾಗುತ್ತದೆ. ಅಲ್ಲಿ ಪಂಚಾಯತಿಗೆ ಕೂತು ಬರಜೂ ಆ ತಂಟೆ ಅವರೊಳಗೆ ತಗ್ಗಿಸಿ ತೀರ್ಮಾನಿಸಿ ಬಿಡುತ್ತಾನೆ. ಅಲ್ಲಿ ಮಿಶ್ರಮಹಾಶಯರ ಬೇಳೆ ಬೇಯುವದಿರಲಿ, ಹೊಯ್ಯುವರಾದರೂ ಯಾರು? ದಾವೆಯ ಚೌಕಶಿಯ ನೆವದಿಂದ ಒಂದು ಪಕ್ಷದಿಂದ ನಾಲ್ಕು ಆಣೆ ಪಡೆದು ಎಂಟು ಆಣೆಯ ಜಬಾನಿ ಬರೆಯುವ ಸಂಧಿ ಎಲ್ಲೆಡೆಗೂ ಸಿಗುವದಿಲ್ಲ. ಜನರ ಕಣ್ಣು ತೆರೆದಿದ್ದಾವೆ. ಇದಕ್ಕೆಲ್ಲ ಮೂಲ ಆ ಬರಜೂ ಪಥಾನನೇ. ಇಂಥ ಒಂದೆರಡು ವ್ಯಾಜ್ಯಗಳಲ್ಲಿ ಹರಿಮಿಶ್ರರ ಮುಷ್ಟಿ ಎರಡೂ ಪಕ್ಷದವರಿಂದಲೂ ಬೆಚ್ಚಗಾಗುವಂಥ ಅವಸರದಲ್ಲಿ ಬರಜೂ ಪಥಾನ ನಡುವೆ ಬಿದ್ದು ಮೊದಲಿಗೆ ತೀರ್ಮಾನ ಮಾಡಿ ತೋರಿಸಿಬಿಡುತ್ತಿದ್ದ. ಇದೆಲ್ಲ ಸಂಗತಿ ಮಿಶ್ರಮಹಾಶಯರು ಮರೆಯುವದಾದರೂ ಹೇಗೆ? ಸಹಿಸುವದಾದರೂ ಎಷ್ಟು? ಬರಜೂ ಜಾತಿಯಿಂದ ರೈತ; ಕುಣಬಿ, ಗಡುಸಾಗಿ ಕೇಳಿದರೆ ತಂದೆಯ ಹೆಸರೂ ಸರಿಯಾಗಿ ಹೇಳಲಾರದ ಆಸಾಮಿ. ಮೇಲೆ ಮತ್ತೆ ಎಷ್ಟು ಸೊಕ್ಕು ನೋಡಿ!

ಹರಿಮಿಶ್ರ ಒಂದು ಹುಲ್ಲುಕಡ್ಡಿಯಿಂದ ಹಲ್ಲಿನ ಸಂದಿಗೆ ಸಿಕ್ಕ ಅಡಿಕೆಯ ಚೂರು ಕೀಳುವದರಲ್ಲಿ ತೊಡಗಿದ್ದರು. ಆಗಲೇ ಛಕಡಿ ಅದೇ ದಾರಿಯಲ್ಲಿ ಒಂದು ಕೈಚೀಲ ಹಿಡಿದು ಅಂಗಡಿಗೆ ಹೊರಟಿದ್ದ. ಮಿಶ್ರಮಹಾಶಯರು ಕೂಗಿದರು. "ಅದ್ಯಾರು— ಛಕಡಿಯೇ? ಎಲಾ ನನ್ನ ತೊತ್ತಿನ ಮಗನೇ!"

ಮಿಶ್ರರು ಬರಜೂ-ಛಕಡಿಯರಿಗೆ ಹೇಗೋ ಆಪ್ತವ್ಯದಿಂದ ಚಿಗಪ್ಪ ಆಗಬೇಕು. ಛಕಡಿಯ ಹತ್ತಿರ ಬಂದು ಮಿಶ್ರರು ಅಂದರು : "ಎಲೋ, ಇತ್ತ ಬಾ. ಕಟ್ಟೆಯ ಮೇಲೆ

ಸ್ವಲ್ಪ ಕೂತುಕೋ. ಮದುವೆ-ಗಿದುವೆ ಹೇಗೆ ಸಾಗಿತು? ಖರ್ಚು-ಗಿರ್ಚು ಹೇಗಾಯಿತು? ಎಷ್ಟಾಯಿತು?"

ಭಕಡಿ ಅಂದ : "ತಾವು ಸ್ವತಃ ಹೋಗಿದ್ದಿರಲ್ಲ. ಎಲ್ಲ ಕಣ್ಣಾರೆ ನೋಡಿದ್ದೀರಿ, ಕೇಳಿದ್ದೀರಿ- ಮತ್ತೆ ನನಗೇಕೆ ಕೇಳುತ್ತೀರಿ?"

"ಹಃ, ಹಃ ಹಃ ನಾವು ಏನೂ ನೋಡಿಲ್ಲ, ಕೇಳಿಲ್ಲ. ಭೋಜನಪ್ರಿಯರು ನಾವು. ಮೃಷ್ಟಾನ್ನದ ಇತರೇ ಜನ ನಾವು. ಖೀರು ಮತ್ತು ಪುರಿ ಸಿಕ್ಕರೆ ಸೈ. ಮತ್ತೇನು ಯಾರು ಏಕೆ ಕೇಳಬೇಕು? ಹಃ, ಹಃ!" -

"ಹಾಗಿದ್ದರೆ ನನ್ನೇಕೆ ಕೇಳುವಿರಿ?"

"ಹಾಂ, ಹಾಂ, ಏನಂದಿ? ನಿನ್ನನ್ನಲ್ಲದೆ ಇನ್ನಾರನ್ನು ಕೇಳಬೇಕು? ಖಾಸಾ ತಮ್ಮನಿರುವಿ. ಕೊಡಕೊಳ್ಳುವದೆಲ್ಲ ನಿನ್ನದೇ ಆಗಿರಲಿಕ್ಕೆ ಬೇಕು. ನಿನ್ನಿಂದ ಅಲ್ಲದೆ ಏನು ಆ ಚಿಂತೂ ಭಂಗಿಯಿಂದ ಕೇಳಿಕೊಳ್ಳಲೇ?"

ಭಕಡಿ ಗಂಭೀರನಾಗಿ ನುಡಿದ : "ನಾವೇನು?—ಆ ಚಿಂತೂ ಭಂಗಿಗಿಂತಲೂ ಸದರು ಚಿಲ್ಲರೆ-ಕಿರುಕುಳ ಎಂದು ತಿಳಿದಿರಾ?"

"ಹಾಂ, ಹಾಂ, ಹಾಂ. ಏನಂದಿ? ಚಿಂತೂ ಭಂಗಿ? ಏನೆಂದುಕೊಳ್ಳುವಿ? ಛೇ, ಛೇ, ಛೇ!"

"ಮತ್ತೆ ನನ್ನನ್ನೇಕೆ ಕೇಳುತ್ತೀರಿ? ಏನು ಖರ್ಚಾಯಿತೋ-ಹೋಯಿತೋ? ನಾನು ಮಾಡಿಲ್ಲ, ನೋಡಿಲ್ಲ."

"ಏ ನೀನು ಖರ್ಚು ಮಾಡಿಲ್ಲವೆ? ನೋಡಿಲ್ಲವೆ? ಇವೆಲ್ಲ ಎಂಥ ಮಾತು ರಾಯರೇ? ಛೇ, ಛೇ, ಇದೇನು ಬರಜೂ ಸಂಭಾವಿತತನ ತೋರಿಸಿದಂತಾಗಲಿಲ್ಲ. ಖಾಸಾ ತಮ್ಮ ನೋಡು ನೀನು."

"ಅವನದೇನೂ ದೋಷವಿಲ್ಲ ಕಾಕಾ, ಅವನೇನು ಮಾಡ್ಯಾನು? ಭಕಡಿಯ ಎಲ್ಲ ರೊಚ್ಚು ಅತ್ತಿಗೆಯ ಮೇಲೆ ಇತ್ತು."

"ಎಲಾ, ನೀನೇನು ಮಕ್ಕಳಂತೆ ಮಾತಾಡುತ್ತಿಯೋ? ಬರಜೂನ ದೋಷವಿಲ್ಲದೆ ಅವನ ಹೆಂಡತಿಯ ದೋಷವೇನು? ನನಗೇನು ನೀನು ಬುದ್ಧಿ ಕಲಿಸಲು ಬಂದಿಯೋ ಭಕಡೀ! "

ಭಕಡೀ ಅಂದ : "ಕಾಕಾ, ನಾನು ಇದೇನೂ ಹೇಳಲಾರೆ. ಆದರೂ ಅಣ್ಣಾ..."

"ಎಲೋ, ತೆಗೆ, ತೆಗೆ. ನಿನ್ನಣ್ಣ ನಿನಗೆಲ್ಲ ದೊಡ್ಡವನಿರಬಹುದು. ಹೊರಗಿನಿಂದ ನಾಲ್ಕು ಗೃಹಸ್ಥರನ್ನು ಕರೆಯಿಸು—ಅವರು ಕೇಳಿ ತೂಗಿ ನೋಡಲಿ ಈ ಮಾತು.

ನೀವಿಬ್ಬರೂ ಅಣ್ಣ ತಮ್ಮಂದಿರು. ಒಂದೇ ಮನೆಯಲ್ಲಿ ಉಳಿಯುತ್ತೀರಿ. ಯಾರ ಕಡೆಗೆ ಎಷ್ಟು ಜಮಾ, ಖರ್ಚು ಇದರ ಲೆಕ್ಕ ಇಬ್ಬರೂ ನೋಡಿಕೊಳ್ಳುವದು ಬೇಡವೇ?"

"ಆದರೆ ಕಾಕಾ, ಅಣ್ಣನ ಮೇಲೆ ನಾನು ಅವಿಶ್ವಾಸ ಮಾಡಲಾರೆ." ಒಳ್ಳೇ ಜೋರಿನಿಂದ ಈ ಮಾತು ಭಕಡಿಯ ಬಾಯಿಯಿಂದ ಹೊರಟಿತು. ಮಿಶ್ರಮಹಾಶಯರು ತುಸು ತಗ್ಗಿ ಹೋದರು. ಸುಳ್ಳಿನ ಮೇಲೆ ಸತ್ಯದ ಪ್ರಭಾವ ಆಗದೇ ಹೋಗುವದಿಲ್ಲ. ಮಿಶ್ರರು ಅಂದರು : "ಅರೇ ರಾಮ, ರಾಮ. ನಾನು ಹಾಗೇನಾದರೂ ಅಂದೆನೇ? ಸಾಧುವಚನವೇ ಇದೇ ನೋಡು : 'ಕಣ್ಣಾರೆ ಕಂಡನಕ ನಿಜವೆಂದು ನಂಬಬೇಡ; ಗುರುವಚನವನ್ನು ಕೂಡ.' ಬರಜೂ ಒಳ್ಳೇ ಮನುಷ್ಯ. ಇದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ನನ್ನ ಮತದಂತೆ ಅವನದು ತಪ್ಪು ವ್ಯವಹಾರ. ತಮ್ಮನೇನು ಈಗ ಅಪ್ರಬುದ್ಧ ಪೋರನಲ್ಲ. ಯಾರು ನಿನ್ನಲ್ಲಿ ಇಷ್ಟು ಶ್ರದ್ಧೆ ಇಡುತ್ತಾನೋ ಅಂಥ ತಮ್ಮನಿಗೆ ನೀನು ಏನೂ ತಿಳಿಸುವದಿಲ್ಲ, ಹೇಳುವದಿಲ್ಲ, ಅವನಿಂದ ಏನೂ ಮಾಡಿಸುವುದಿಲ್ಲ, ನಡೆಸುವುದಿಲ್ಲ! ನೀನಾಗಿ ತಮ್ಮನ ಕೈಗೆ ಇಪ್ಪತ್ತು–ಇಪ್ಪತ್ತೈದು ರೂಪಾಯಿ ಕೊಟ್ಟು ಹೇಳಿದ್ದುಂಟೋ, 'ಇಕೋ ಈ ರೊಕ್ಕ, ಇಂಥಿಂಥ ಖರೀದಿ ಮಾಡಿಕೊಂಡು ಬಾ!' ಅಥವಾ 'ಬಾರೋ ಭಕಡೀ, ಕಾಗದ–ಟಾಕು ತೆಗೆದುಕೋ. ಕೂಡ್ರು. ಲಗ್ನದಲ್ಲಿ ರೊಕ್ಕ ಎಷ್ಟು ಖರ್ಚಾಯಿತು, ಲೆಕ್ಕಾಚಾರ ಮಾಡಿ ನೋಡೋಣ!' ಇದರಿಂದ ಅಣ್ಣ–ತಮ್ಮಂದಿರ ಒಳಗಿನ ವಿಶ್ವಾಸ ಹಾಳಾಗುತ್ತದೆಯೋ ಹೆಚ್ಚಾಗುತ್ತದೆಯೋ?"

ಭಕಡಿ ಅಂದ : "ಇಲ್ಲ, ಕಾಕಾ, ಅಣ್ಣ ನನಗೆ ಲೆಕ್ಕ ಬರೆದಿಡಲಿಕ್ಕೂ, ಪೇಟಿ ಖರೀದಿ ಮಾಡಲಿಕ್ಕೂ ಹೇಳಿದ್ದ. ನಾನು ಹೇಳಿದೆ : 'ಆ ಕೆಲಸ ನನ್ನಿಂದಾಗದು, ಇನ್ನಾರಿಂದಾದರೂ ಮಾಡಿಸಿಕೋ' ಎಂದು. ಆಮೇಲೆ ಅಣ್ಣ ತನ್ನ ಭಾವನಿಗೆ ರೊಕ್ಕ ಒಪ್ಪಿಸಿದ."

ಕೈಗೆ ಕೈಕೊಟ್ಟು ಮಿತ್ರರು ಉದ್ಗರಿಸಿದರು : "ಸಾಕಲ್ಲ ಸರಿ, ಆಯಿತು ಬಿಡು. ಈಗ ಏನಾದಂತಾಯಿತು? ಇದರಲ್ಲಿ ಮಾನಾಪಮಾನದ ಪ್ರಶ್ನೆ ಇವೆಯೋ ಇಲ್ಲವೋ? ತಮ್ಮ ತನ್ನವನಲ್ಲ, ಭಾವ ತನ್ನವನಾದ?"

ಭಕಡಿಯ ಮನಸ್ಸು ಗಟ್ಟಿಯಲ್ಲ. ಹುಸಿ, ಕರಗುವ ಮೇಣ. ಮಿಶ್ರರ ಮಾತಿನಿಂದ ಕೊನೆಗೂ ಅವನ ಮನಸ್ಸು ಸಡಿಲಿಸಿತು, ಜಾರಿತು. ಅವನಿಗನಿಸಿತು : 'ಮನೆಯ ಒಳಗೇನು ತನಗೆ ಸ್ಥಾನವಿಲ್ಲ!' ಆತ ಆಡಿದ : "ಒಟ್ಟಿಗೆ ಉಳಿಯುವದರಿಂದ ಇದೇ ಅವಸ್ಥೆ ಆಗುತ್ತದೆ ಕಾಕಾ. ಬೇರೆಯಾಗದಿದ್ದರೆ ಅಣ್ಣ ತಮ್ಮಂದಿರು ನೆರೆಹೊರೆಯವರಂತೆ ಸಹ ಕೂಡಿ ನಡೆಯುವದಿಲ್ಲ. ಬೇರೆ ಆಗಿ ಬಾಳಿದರೆ ಯಾರದು ಯಾವ ಕೆಲಸವೋ ಅದನ್ನೇ ಅವನು ಮಾಡುತ್ತಾನೆ."

"ಅಹಾ! ಬೇರೆಯಾಗುವದೇಕೆ? ನಿನಗೇನು ಅನಾನುಕೂಲವಿದೆ? ಇವೆಲ್ಲ ಚಿಕ್ಕ ಮಕ್ಕಳಾಡುವಂಥ ಮಾತು, ಶುದ್ಧ ಹುಡುಗಾಟಿಕೆ!"

"ಅಲ್ಲ, ಅಲ್ಲ. ಮಕ್ಕಳಾಡುವಂಥ ಮಾತಲ್ಲ, ಕಾಕಾ. ಇನ್ನು ನಮ್ಮಿಬ್ಬರ ನಿರ್ವಾಹ ಒಟ್ಟಿಗೆ ಒತ್ತಟ್ಟಿಗೆ ಶಕ್ಯವಿಲ್ಲ. ಮೇಲಿಂದ ನೋಡುವವರಿಗೇನೊ ನಾವು ಒಟ್ಟಾಗಿ ಉಳಿದಿದ್ದೇವೆ. ಆದರೆ ಒಳಗಿಂದ ಮನಸ್ಸು ಒಡೆದು ಹೋಗಿದೆ. ಕಮರಿಹೋದ ತರಕಾರಿಯಲ್ಲಿ ಯಾವ ಸ್ವಾದ ಉಳಿಯುವದು ಹೇಳು?"

"ಎಲೋ, ಇದೆಲ್ಲ ಹುಚ್ಚರಂತೆ ಆಡುವಿಯಲ್ಲ. ಸದ್ಯ ನೀವಿಬ್ಬರೂ ಮಕ್ಕಳಂತೆಯೇ ಇದ್ದೀರಿ. ಈಗಿಂದಲೇ ಏನು ಬೇರೆ ಆಗುವಿರಿ? ಸರಿ, ನೀನು ಶುದ್ಧ ತರಳ. ಒಳ್ಳೇ ಉಂಡುಟ್ಟು ಚೈನಿಯಲ್ಲಿರಲು ನಿನ್ನ ಮನಸ್ಸು ಬಯಸುವದು. ನಾಲ್ಕು ಮಂದಿ ನಾಲ್ಕು ರೀತಿ ಆಡಿಕೊಳ್ಳಬೇಕೆಂದು ಮನಸ್ಸುಮಾಡುವುದು—ಏಕೆ ನೀನೇ ನನಗೆ ಹೇಳು. ನಿನಗೆ ನಾಳೆಯೇ ಪಂಚಾಯತಿಯ ಮುಂದೆ ಒಯ್ದು ನಿಲ್ಲಿಸುತ್ತೇನೆ."

"ಇಲ್ಲ ಕಾಕಾ, ಪಾಲಾದ ಹೊರತು, ಬೇರೆಯಾಗಿ ಉಳಿದ ಹೊರತು ಏನೂ ನಡೆಯಲಿಕ್ಕಿಲ್ಲ."

"ಛೇ, ಛೇ, ಮತ್ತು ಅದೇ—ಬೇರೆಯಾಗುವ ಪಾಲಿನ ಮಾತು ಎತ್ತಿದಿ. ಬೇರೆಯಾಗುವದರಿಂದ ನಿನಗೆ ತಡೆಯುವವರಾರು? ಆದರೆ ನೀನು ಶುದ್ಧ ತರಳನಿದ್ದೀಯಲ್ಲ. ಬೇರೆ ಆದಿಯೆಂದರೆ ನಿನ್ನ ಚರಿತಾರ್ಥ ಹೇಗೆ ಸಾಗಿಸುವಿ?"

ಛಕಡಿ ನಗುತ್ತಾ ಕೇಳಿದ : "ಏನು ಕಾಕಾ, ನಿನ್ನ ಮನೆಗೆ ಬಂದರೆ ಎರಡು ತುತ್ತು ಬಡಿಸಲಾರೆಯಾ ನನಗೆ?"

"ಅಯ್ಯೋ, ಹೀಗೇಕೆ ಅನ್ನುವಿ? ಬೇರೆಯವರ ಮನೆ, ಬೇರೆಯವರ ಮೆಟ್ಟಿಲು ನೋಡಲಿಕ್ಕೆ ನಿನಗೇನು ಬಂದಿದೆ? ನಿನ್ನ ಬಳಿಗೆ ಯಾತರ ಕೊರತೆ ಇದೆ? ನಿನ್ನದೇ ಅಯೋಗ್ಯತೆಯಿಂದ ಎಲ್ಲವು ದಿವಾಳಿಯಾಗುತ್ತ ನಡೆದಿದೆ. ಇಲ್ಲವಾದರೆ ಶಾಮಪಧಾನನ ಮಗನಾಗಿ ನೀನು ಇಂಥ ಮಾತು ಆಡುತ್ತಿದ್ದಿಯೋ? ಅಯ್ಯೊ ರಾಮ ರಾಮಾ! ನೀನು ನನ್ನ ಮನೆಯ ಬಾಗಿಲಿಗೆ ಬರುವವನೇನು? ಏಕೆ ನೀನು ನನ್ನ ಮನೆಯ ಹುಡುಗನೇ ಅಲ್ಲವೇ? ಹೇಳು. ನಾಳೆಗೇ ಮುನ್ನೂರು ರೂಪಾಯಿ ಬರೆದುಕೊಡುತ್ತೇನೆ. ಅಂಗಡಿ ತೆರೆದು ವ್ಯಾಪಾರ ಬೆಳೆಯಿಸು. ಲಾಭ ನೀನೇ ತಿನ್ನು. ಬಂಡುವಾಲವಷ್ಟು ನನ್ನದು, ನನಗೆ ತಿರುಗಿ ಕೊಡುತ್ತ ಹೋಗು. ಒಂದು ಸೇರು ತುಪ್ಪ ವ್ರತಕ್ಕೆ ವೆಚ್ಚವಾದರೇನು ಹಾನಿ? ನನ್ನ ಧನ ಶಾಮಪಧಾನನ ಹುಡುಗನೇ ತಿಂದರೆ ತಿನ್ನಲಿ. ಪರಕೀಯನಾರೂ ಅಲ್ಲ. ದೇವತಾ ಮನುಷ್ಯನಿದ್ದ ಶಾಮಪಧಾನ. ಊರ ಹತ್ತು ಸಮಸ್ತರಲ್ಲಿ ಅವನ ಗಣನೆ ಆಗುತ್ತಿತ್ತು. ಹತ್ತು ಜನ ಅವನ ಮಾತು ಮನ್ನಿಸುತ್ತಿದ್ದರು. ನೀನು ಅವನ ಮಗನಾಗಿ ಮನೆ ಮನೆ ಅಲೆದಾಡುತ್ತ ತಿರುಗುವಿಯೇನು? ಇದೆಲ್ಲ ನಾವು ಕಣ್ಣಾರೆ ಹೇಗೆ ನೋಡಿಕೊಂಡೇವು? ಛೇ, ಛೇ, ಇಲ್ಲ, ಹೀಗಾಗಲಾರದು."

ಹರಿಮಿಶ್ರ ಶಾಮಪಧಾನರ ನಡುವೆ ಬೆಂಕಿ ಹಾಯುತ್ತಿದ್ದಿಲ್ಲ. ಇದು ಊರಿಗೇ ಗೊತ್ತು. ಊರ ಯಾರಿಗಾದರೂ ಹರಿಮಿಶ್ರ ಹೇಳುತ್ತಿದ್ದ : "ಆತ ನಿಮ್ಮ ಪಕ್ಕದ ತೋಟಕ್ಕೆ ಆತಂಕ ಮಾಡಲು ಹೋಗುತ್ತಾನೆ. ನೀವೇಕೆ ಅವನನ್ನು ಕಿತ್ತು ಒಗೆಯಬಾರದು?" ಒಬ್ಬ ಆತಂಕ ಮಾಡಲು ಹೋದಾಗ ಇನ್ನೊಬ್ಬ ಬಂದು ಫಿರ್ಯಾದಿ ಮಾಡುತಿದ್ದ. ಆಗ ಹರಿಮಿಶ್ರನ ಸೂಚನೆ ಬರುತ್ತಿತ್ತು : "ನೀವಿಬ್ಬರೂ ಐದೈದು ರೂಪಾಯಿ ತೆಗೆಯಿರಿ. ನಾವು ಭೂಮಿ ಅಳೆದು ತೀರ್ಮಾನ ಮಾಡಿಕೊಡುತ್ತೇವೆ. ಎಲ್ಲಿಗೆ ಯಾರು ಪಾಲು ನಿಲ್ಲುವದೋ ಅಲ್ಲಿಯ ತನಕ ಅವರ ತೋಟಪಟ್ಟಿ." ಬಂದ ಐದು ರೂಪಾಯಿ ಹರಿಮಿಶ್ರನ ಖರ್ಚಿನ ಬಾಬತ್ತು. ಇಂಥ ಪ್ರಸಂಗಗಳಲ್ಲಿ ಶಾಮಪಧಾನ ಮುಂದಾಗುತ್ತಿದ್ದ. ನಡುವೆ ಬಿದ್ದು ವಿದ್ಯಮಾನಗಳನ್ನೆಲ್ಲ ತಿಳಿದು ತಾನೇ ಭೂಮಿಯ ಪಾಲು–ಗಡಿ ಗೊತ್ತು ಮಾಡಿ ಎರಡೂ ಪಕ್ಷದವರನ್ನು ಒಡಂಬಡಿಸಿ ಒಂದುಗೂಡಿಸುತ್ತಿದ್ದ. ಯಾರದೂ ಒಂದು ಬಿಡಿಕಾಸೂ ಖರ್ಚಾಗುತ್ತಿದ್ದಿಲ್ಲ.

ಇಬ್ಬರು ಹೆಂಗಸರು ಸ್ನಾನ ಮಾಡುತ್ತಿದ್ದರು. ಒಬ್ಬಳ ಬಂಗಾರದ ಲೋಲಕದ (ಬಾವಲಿ) ನೀರಿನಲ್ಲಿ ಬಿದ್ದಿತು. ಮನೆಗೆ ಬಂದು ಆಕೆ ಕಿವಿಯಲ್ಲಿ ಒಡವೆ ಇಲ್ಲದ್ದು ಕಂಡು ಇನ್ನೊಬ್ಬಳನ್ನು ಕೇಳಿದಳು. ಆಗ ಆಕೆ ತನಗೆ ಅದು ನೀರಲ್ಲಿ ಸಿಕ್ಕಿತೆಂದು ಒಪ್ಪಿ ಆ ಒಡವೆಯನ್ನು ಅದರ ಒಡತಿಗೆ ತಿರುಗಿ ಕೊಟ್ಟಳು. ಆದರೆ ಈ ಸಂಗತಿ ಹರಿಮಿಶ್ರರ ಕಿವಿಯವರೆಗೆ ಹೇಗೋ ಮುಟ್ಟಿತು. ಯಾರ ಒಡವೆ ಕಳೆದುಹೋಗಿತ್ತೋ ಅವಳ ಯಜಮಾನನನ್ನು ಕರೆಯಿಸಿಕೊಂಡು ಮಿಶ್ರರು ಗದರಿಸಿದರು : "ಏನ್ರೋಽಽ? ನೀವು ಮಂದಿ ನನ್ನನ್ನು ಈ ಊರಲ್ಲಿ ಉಳಿಯಗೊಡುವಿರೋ ಇಲ್ಲವೋ? ಈಗ ನನ್ನ ಪಂಚಾಯತ ಪ್ರೆಸಿಡೆಂಟತನ ನನ್ನ ಕೈಯಿಂದ ಕಳಚಲು ನೋಡುವಿರೆಂದು ಕಾಣುತ್ತದೆ. ಇದು ಕಳುವಿನ ಖಟ್ಲೆ. ಪೋಲೀಸ್ ಪ್ರಕರಣ. ನಿಮ್ಮ ವಸ್ತು ನಿಮಗೆ ಸಿಕ್ಕಿತು ಮುಗಿಯಿತು. ನೀವು ಸುಮ್ಮನೆ ಕೂತುಬಿಟ್ಟಿರಿ. ಆದರೆ ಈ ಖಟ್ಲೆಯ ಪ್ರಕರಣ ಮುಗಿಯುವುದು ಹೇಗೆ? ಮುಗಿಸುವವರು ಯಾರು? ನಾಳೆ ಪೋಲೀಸರು ಬರುವರು. ನಿನ್ನನ್ನು ಹಿಡಿಯುವರು, ಇವಳನ್ನು ಹಿಡಿಯುವರು, ಅವಳನ್ನೂ ಹಿಡಿಯುವರು. ನಾನೂ ಅದೇ ಹೊಂಡದಲ್ಲಿ ಬೀಳುವೆನು. ನಾನು ಪ್ರೆಸಿಡೆಂಟನಿರುವಾಗ ನನ್ನದೇ ಊರಿನಲ್ಲಿ ಒಂದು ಕಳುವಿನ ಪ್ರಕರಣ ಅಡಗಿಹೋಯಿತು—ಅಂದರೆ ನಾನು ಮುಳುಗಿ ಸಾಯುವ ಪ್ರಸಂಗವಲ್ಲದೇ ಇನ್ನೇನು?" ಆಗ ಆ ಬಡ ಪ್ರಾಣಿ ಜಾಮೀನು ಹೊತ್ತ ಹೊರತು ಬೇರೆ ಗತಿಯೇ ಇದ್ದಿಲ್ಲ. "ಕೊಡು, ಫೌಜದಾರ ಸಾಹೇಬರಿಗಾಗಿ ಏನು ಕೊಡುವಿ? ಊರ ಜಮೀನದಾರರಿಗೋಸ್ಕರ ಏನು ಕೊಡುವಿ? ಕೊಟ್ಟು ಬಿಡು." ಊರ ಜಮೀನದಾರರೊಂದಿಗೆ ಊರ ಫೌಜದಾರರ ಹೋಲಿಕೆ ಆಗುವದಿಲ್ಲ. ಇಬ್ಬರಲ್ಲಿಯೂ ಮೂಡು–ಪಡುವಣದಷ್ಟು ಅಭ್ಯಂತರ. ಆದರೆ ನಮ್ಮ ಮಿಶ್ರ ಮಹಾಶಯರ ಹೋಲಿಕೆ ಅತ್ತ ಠಾಕಜರಲ್ಲಿಯೂ ಇತ್ತ ಫೌಜದಾರರಲ್ಲಿಯೂ ಆಗಬಲ್ಲುದು. ಆದ್ದರಿಂದ ಅವರಿವರ

ಹೆಸರು ತಾವೇ ಸಹಜವಾಗಿ ಎತ್ತಬಲ್ಲರು. ಅವರಂತೆಯೇ ತಾವೆಂದು ತೋರಿಸಬಲ್ಲರು. ದೀಪದ ನೆಣೆ (ಬತ್ತಿ) ದೊಡ್ಡದು ಮಾಡುವಾಗ ಕೈಗೆ ನಯ ಹತ್ತದೆ ಹೋಗುವದಿಲ್ಲ. ಅಷ್ಟೇ ಲೇಸು. "ಛೇ, ಛೇ. ಈ ಕಾಲಮಾನವೇ ಎಂಥ ಕೇಡಿಗೆ ಬಂದಿದೆ! ಒಬ್ಬ ವ್ಯಕ್ತಿ ಸ್ನಾನ ಮಾಡುತ್ತಿದೆ. ಅದರ ಕಿವಿಯ ಒಡವೆ ಕಳಚಿಕೊಂಡು ಹೋಗುತ್ತಾರೆ! ಇನ್ನೂ ಊರಲ್ಲಿ ಉಳಿಯುವದೇ ಕಷ್ಟಕ್ಕೆ ಬಂತು. ಈ ಮಂದಿ ಕಣ್ಣಿನ ನೀರು ಕೂಡ ನಾಳೆ ಕದ್ದಾರು!"

ಶಾಮಪಧಾನ ಇದ್ದಾಗ ಹೇಳುತ್ತಿದ್ದ : "ಅಯ್ಯೋ, ನಾವು ಬಡವರು, ಸಣ್ಣ ಬುದ್ಧಿಯ ಜನ ಕಳ್ಳರಾಗಿದ್ದಾರೆ. ಆಗಲಿ, ನಮ್ಮ ಕಣ್ಣು ಹೆಚ್ಚೆಂದರೆ ಒಂದು ಸೋರೆಯ ಬುರುಡೆಯ ಮೇಲೋ, ಕುಂಬಳಕಾಯಿಯ ಮೇಲೋ ಅಷ್ಟೇ. ಆದರೆ ಈ ಜನ ಎಂಥವರು? ಪ್ರೆಸಿಡೆಂಟರು, ಸಾಹುಕಾರರು, ಜಮೀನದಾರರು ಇವರೂ ಕಳ್ಳರಲ್ಲವೇ? ಇವರು ಕೊಳ್ಳೆಗಾರರು—ಹಾಡೇಹಗಲು ದರೋಡೆ ಮಾಡುವವರು. ಕಾಯಿದೆ-ಕಾನೂನುಗಳಲ್ಲಿ ಹೆಡಮುರಿಗೆ ಕಟ್ಟಿ ಬೆತ್ತ ಬೆದರಿಕೆ ಹಾಕಿ ನಿಮ್ಮನ್ನು ಬೀದಿಯ ಭಿಕಾರಿಯಾಗಿ ಮಾಡುವಂಥವರು. ನರಭಕ್ಷಕ ಹುಲಿಗಳಿರುತ್ತವೆ. ಇವರು ನರಭಕ್ಷಕ ನರರೇ ಆಗಿದ್ದಾರೆ. ಕಾಯಿದೆ-ನ್ಯಾಯ ಇವರಿಗೆ ಏನು ಮಾಡಬಲ್ಲುದು? ಇದು ಇವರ ಸ್ವಭಾವ. ಗಾದೆಯೇ ಇದೆಯಲ್ಲ—"ಹಂದಿಯ ಚಟ ಹೊಲಸಿನಲ್ಲಿ ಆಡುವದು, ಮಂದಿಯ ಚಟ ಸತ್ತರೂ ಬಿಡದು" ಎಂದು.

ಕಣ್ಣೆದುರಿಗೇ ಕಾಣುತ್ತದೆ—ಹರಿಮಿಶ್ರ ಒಬ್ಬ ಬ್ರಾಹ್ಮಣ—ಆದರೆ ಅವನ ಸ್ವಭಾವ -ಶೀಲ ಚಂಡಾಲನಿಗಿಂತಲೂ ಕಡೆ. ದಾರಿ ನಡೆಯುವ ಹುಲಿ, ಹಕ್ಕಿಗಳ ಹಿಂಡು ಕಂಡು ಅವುಗಳನ್ನು ಮುರಿದು ತಿನ್ನಲು ಬಾಯಿ ಚಪ್ಪರಿಸುತ್ತದೆ. ಅಂಬಿಗ ನೀರಿನಲ್ಲಿ ಮೀನುಗಳ ಗುಂಪು ಗುಂಪು ಸುಳಿದಾಟ ಕಂಡು ಅವುಗಳನ್ನು ಹಿಡಿಯಲು ಬಲೆ ತಂದಿಲ್ಲವೆಂದು ಮರುಗುತ್ತಾನೆ. ಅದೇ ರೀತಿ ಈ ಮಿಶ್ರ ಮಹಾಶಯರ ಅವಸ್ಥೆ ಆಗುತ್ತದೆ. ಎಲ್ಲೋ ಒಂದೆಡಗೆ ಒಬ್ಬ ವಿಧವೆ ಅಸಹಾಯಕಳಿದ್ದಾಳೆ. ಅವಳಿಗೆ ಇಬ್ಬರು ಅಪ್ರಾಯಸ್ಥ ಮಕ್ಕಳಿದ್ದಾರೆ. ಒಂದು ಒಳ್ಳೇ ತೆಂಗಿನ ತೋಟವಿದೆ. ಮತ್ತು ಆ ತೋಟ ಮಿಶ್ರರ ತೋಟಕ್ಕೆ ತಾಗಿದರೆ ಅದೇ ಸಾಕು. ಒಂದಲ್ಲ ಒಂದು ಹೊಂಚು ಹೂಡಿ, ಹಂಚಿಕೆ ಮಾಡಿ, ಆ ತೋಟ ಮಿಶ್ರರ ತೋಟಕ್ಕೆ ಸೇರಿಸಿಕೊಳ್ಳುವದೇ ಖಚಿತ. ಯಾರದೋ ಚಿಕ್ಕ ಮಾವಿನ ತೋಪು ಮಿಶ್ರರ ತೋಪಿನ ಪಕ್ಕದಲ್ಲಿದೆ. ಅದರ ಒಡೆಯ ಬೇನೆ ಬಿದ್ದಿದ್ದಾನೆ. ಆತ ಸತ್ತರೆ ಅವನ ಹೆಂಡತಿ ತಾನಾಗಿ ಆ ತೋಪು ಮಿಶ್ರರಿಗೆ ಮಾರುವಳು.

ಇಡೀ ಊರಲ್ಲಿ ಯಾರೂ ಉಳಿಯಲಿಕ್ಕಿಲ್ಲ. ಎಲ್ಲ ಜಮೀನು, ತೋಟ-ಪಟ್ಟಿ, ಹೊಲ-ಹಕ್ಕಲು ಮಿಶ್ರರ ಆಸ್ತಿಯಾಗುವದು. ಎಲ್ಲರೂ ಅವರ ಆಳು-ಹೋಳುಗಳಾಗಿ ಕೂಲಿ-ಕಂಬಳ ಮಾಡುವರು. ಮಿಶ್ರರ ಮಿದುಳಿನಲ್ಲಿ ಇದೊಂದೇ ವಿಚಾರ ಚಕ್ರ

ತಿರುಗುತ್ತಿರುತ್ತದೆ. ಇದೊಂದೇ ಚಿಂತೆಯಲ್ಲಿ ಅವರು ಮುಳುಗಿರುತ್ತಾರೆ. ಮಿಶ್ರರಿಗಿಂತಲೂ ಭಯಂಕರ ಹೆಬ್ಬುಲಿ ಬೇರೆ ಯಾರು?

ಮಂದಿ ಹೇಳುವದುಂಟು...ನಾವು ಚಿಕ್ಕವರು, ಕ್ಷುಲ್ಲಕರು, ಕಳ್ಳರು. ಠಕ್ಕರು. ನಾವೇ ಸೈತಾನರು. ದೊಡ್ಡ ಮಂದಿಯನ್ನು ನಾವೇ ಕೆಡಿಸಿದವರು. ಆದರೆ ಹುಲಿಯ ಬುದ್ಧಿಯನ್ನು ಹಕ್ಕಿಗಳೇ ಕೆಡಿಸಿದವೇ? ಅಂಬಿಗನ ದುಶ್ಚಟ ಮೀನುಗಳೇ ಕಲಿಸಿದವೇ? ನಾವು ದನ ಮೇಯಿಸುತ್ತೇವೆ. ಈ ಜನ ಮಂದಿಯನ್ನು ಮೇಯಿಸುತ್ತಾರೆ! ನಮ್ಮ ಗಣನೆ ಪಶು ಪಕ್ಷಿಗಳಲ್ಲಿಯೂ ಆಗುವದಿಲ್ಲ. ಹತ್ತು ಕೊರಡೆ ಹೊಡೆದರೆ ನಮ್ಮ ಬಾಯಿಯೂ ತೆರೆಯುವದಿಲ್ಲ. ಅಂದಮೇಲೆ ಇಂಥಿಂಥ ದೊಡ್ಡ ದೊಡ ಮಂದಿಯನ್ನು ನಾವು ಕೆಡಿಸುವವರೇ? ಆದರೆ ಈ ಮಾತು ಯಾರು ಹೇಳಬೇಕು? ಯಾರು ಕೇಳಬೇಕು?

ಹರಿಮಿಶ್ರ ಶಾಮಪಧಾನರ ಗೆಳೆತನ ಇದೇ ರೀತಿ ಇತ್ತು. ಅವನದೇ ಮಗ ಬರಜೂ, ತಂದೆಯ ಬದಲು ಮಗ ಈಗ ಮುಂದೆ ನಿಂತಿದ್ದಾನೆ. ಗಲ್ಲ ಹಿಂಡಿದರೆ ಹಾಲು ತೊಟಕುವದು. ಮಿತ್ರರೊಂದಿಗೆ ಕುಚೇಷ್ಟೆಯೇ?

~*~*~*~

೬

ಮನೆಯ ರಾದ್ಧಾಂತ ದಿನೇ ದಿನೇ ಬೆಳೆಯುತ್ತಿದೆ ಎಂದು ಬರಜೂ ಕಂಡುಕೊಂಡ. ಒಂದು ಗಳಿಗೆಯೂ ಮನೆಯಲ್ಲಿ ಶಾಂತಿ ಸಿಗುವಂತಿದ್ದಿಲ್ಲ. ಮನಃಶಾಂತಿ ಸಿಗದ ಮನೆಗೆ ಮನೆಯಾದರೂ ಏಕೆ ಅನ್ನಬೇಕು? ಅದು ಮಸಣಕ್ಕೂ ಹೀನ. ಹೆಣದ ಮೇಲೆ ಮುಗಿದು ಬಿದ್ದು ಹದ್ದು-ನಾಯಿಗಳು ಕಚ್ಚಾಡುವದಿಲ್ಲವೇ? ಕೂಗಾಡುವದಿಲ್ಲವೇ? ಮನೆಯಲ್ಲಿ ಮಾತು ಮಾತಿಗೂ ಅದೇ ಬಗೆಯ ತಂಟೆ ತಕರಾರು ತಲೆದೋರುತ್ತಿದ್ದುವು. ತಲೆ ತಿನ್ನುತ್ತಿದ್ದವು. ಒಂದು ಕ್ಷಣವೂ ನಿಶ್ಚಿಂತ ಕೂಡುವಂತಿದ್ದಿಲ್ಲ. ಭಕಡೀ ಬಹಿರಂಗವಾಗಿ ಅಣ್ಣನಿಗೆ ಆದರ-ಮನ್ನಣೆ ತೋರಿಸುತ್ತಿದ್ದ. ಆದರೆ ಅವನ ಬೆನ್ನಿಗೆ ಬಹಳ ಆಡಿಕೊಳ್ಳುತ್ತಿದ್ದ: "ಅಣ್ಣನ ಮಗಳ ಮದುವೆ ಮಾಡಿದ, ಎಷ್ಟು ಖರ್ಚು ಮಾಡಿದ, ಏನೇನು ಮಾಡಿದ? ನನಗೆ ಏನೂ ಹೇಳಲಿಲ್ಲ, ಕೇಳಲಿಲ್ಲ. ಮನಸ್ಸೇ ಮುರಿದ ಮೇಲೆ ಮತ್ತೇನು? ಹರಿದ ದಾರ ಜೋಡಿಸಲು ಹೋದರೆ ಗಂಟೇ ಬೀಳುತ್ತದೆ."

ಕಿರಿಸೊಸೆ ಹಿರಿಯಳಿಗೆ ಮಾತುಮಾತಿಗೂ ಕೊಂಕು-ಕುಹಕ ಆಡುತ್ತಿದ್ದಳು. ಮಗಳ ಮದುವೆ ಮತ್ತು ಮಕ್ಕಳ ಖರ್ಚಿನ ಪ್ರಶ್ನೆಯ ಮಟ್ಟಿಗೆ ಅವಳಂತೂ ಒಬ್ಬಾಕೆ. ಅವಳದೇನು ಯಾರು ತಿಂದವರುಂಟು? ತೀರಿಸಿದವರುಂಟು? ಕಿರಿಯ ಸೊಸೆಯಂಥ ನಾಲ್ಕು ಹೆಂಗಸರೊಡನೆ ಕಾದಾಡಲಿಕ್ಕೆ ಹಿರಿಯ ಸೊಸೆ ಹಲ್ಲು ಮಸೆದು ಸಿದ್ಧಳೇ—ಅವಳನ್ನು ಮೀರುವವರು ಯಾರುಂಟು?

ಏನು ಮಾಡಬೇಕು? ಮತ್ತು ಮನೆಯಲ್ಲಿ ಮೊದಲಿನಂತೆ ಶಾಂತಿಸ್ಥಾಪನೆ ಹೇಗೆ ಆಗಬೇಕು—ಈ ಬಗೆಗೆ ವಿಚಾರ ಮಾಡಿ ಮಾಡಿ, ಬರಜೂ ಸೋತ—ತಳವನ್ನೇ ನಿಲುಕದಾದ. ಅಂದರೆ ತಾನು ಬೇರೆ ಆಗಬೇಕೇ? ಬೇರೆಯಾಗಿಯೂ ಜನ ತಮ್ಮ ಚರಿತಾರ್ಥ ನಡೆಯಿಸುತ್ತಾರೆ. ಒಂದು ಮನೆಯ ಮಂದಿ ಏಳು ಕಡೆಗೆ ಹಂಚಿ ಪಾಲಾಗಿ ಹೋದರೂ ಸುಖವಾಗಿ ಉಳಿಯಬಲ್ಲರು. ಹೀಗೆ ರಿಪಿರಿಪಿ ರಂಪು ಮಾಡುತ್ತ ಒಂದೆಡೆಗೆ ಉಳಿಯುವದು ತರವಲ್ಲ. ಮನಸ್ಸು ಕೆಟ್ಟು ಹೋದಾಗ ಅಡಿಗೆ ಬೇರೆ ಮಾಡುವದರಲ್ಲಿ ಯಾವ ಪರಿವೆಯೂ ಇಲ್ಲ. ಆದರೆ ಮನಸ್ಸು ಕೂಡಿರುವಾಗ ಬೇರೆಯಾಗುವದೊಂದು ಮಾತು; ಮನಸ್ಸು ಕೆಟ್ಟಾಗ ಬೇರೆ ಆಗುವುದೊಂದು ಮಾತು. ಭಕಡೀ-ಬರಜೂ ಬೇರೆ ಆಗುವರು. ಛೇ, ಛೇ, ಹಳ್ಳಿಯ ಕಗ್ಗ ಹುಡುಗ. ಇದೇ ನಿನ್ನೆ ಮೊನ್ನೆಯ ಮಾತು. ಬರಜೂ ಅವನನ್ನು ತೊಡೆಗೆತ್ತಿಕೊಂಡು ತಿರುಗಾಡುತ್ತಿದ್ದ. ತಿಳಿಗೇಡಿತನಕ್ಕಾಗಿ ತಿಳಿಹೇಳುತ್ತಿದ್ದ. ಇಂದು ಹಾಗೆಯೇ ತರಳನಿದ್ದಾನೆ ಭಕಡೀ. ಹಾಗೆಯೇ ತಿಳಿಗೇಡಿ

ಇದ್ದಾನೆ. ಇಂದೇನು ಅವನಿಗೆ ತಿಳಿಹೇಳಲು ಬರಜೂನಲ್ಲಿ ಬುದ್ಧಿ ಇಲ್ಲದೇ ಹೋಯಿತೇ? ತಂದೆಯ ಮಾತು ನೆನಪಾಯಿತು—"ಆತ ಸ್ವಲ್ಪ ತುಂಟ, ಉಡಾಳ. ಈ ಮನೆಯ ಅಂಗಳದಲ್ಲಿ ಗೋಡೆ ಏಳದಿರಲಿ, ಗದ್ದೆಯ ನಡುವೆ ಮೇರೆ ಬೀಳದಿರಲಿ." ಬರಜೂನ ಕಣ್ಣಿನಿಂದ ನಾಲ್ಕು ಹನಿ ಉದರಿದವು. ಇದಕ್ಕೂ ಹೆಚ್ಚು ಆತ ಅತ್ತಿದ್ದು ಯಾರೂ ನೋಡಿದ್ದಿಲ್ಲ. ಅದೇ ಭಕಡಿಯೊಂದಿಗೆ ಇಂದು ಎತ್ತು-ಅಳಕು, ಪಾತ್ರೆ-ಪರಾತು, ಹೊಲ-ತೋಟ ಎಲ್ಲ ಸಮಪಾಲು ಹಂಚಿಕೊಂಡು ಆತ ಬೇರೆಯಾಗುವನು. ನಾಳೆ ಬೆಳಗಾದರೆ ಯಾರಿಗೆ ಮೋರೆ ಕಾಣಿಸಬೇಕು? ಬರಜೂ ಭಕಡೀಯಿಂದ ಬೇರೆ ಆದನು! ಛೀ, ಛೀ, ಇದೇ ಏನು ಅವನ ಸಜ್ಜನಿಕೆ?

ಬರಜೂ ಹೀಗೆ ಆಚೆ ಈಚೆ ಹೊಯ್ದಾಟದಲ್ಲಿ ಒಗೆ ಹರಿಯದ ಬಿಚ್ಚು ಬಿಗಿತದ ದಿಗ್ಭ್ರಮೆಯಲ್ಲಿ ತಾಕಲಾಡುತ್ತ ಉಳಿದ; ಯಾವ ತಡಿಗೂ ಹಾಯಲಿಲ್ಲ. ಅವನೇ ಸ್ವತಃ ಸುತ್ತಲಿನ ಐದು ಹಳ್ಳಿಗಳ ಪಂಚರ ನಡುವೆ ಕೂತು ಎಷ್ಟೋ ಕುಟುಂಬ ಕಲಹಗಳನ್ನು, ತಂಟೆ-ತಕರಾರುಗಳನ್ನು ತೀರ್ಮಾನಿಸಿದ್ದುಂಟು. ಆದರೆ ಈಗ ಮನೆಯ ಜಗಳವೆದ್ದಾಗ ಅವನ ಬುದ್ಧಿಗೂ ಸತ್ತಂತಾಯಿತು. ಈ ಇಬ್ಬರು ಹೆಂಗಸರು ತಮ್ಮೊಳಗೆ ಜಗಳಾಡುತ್ತಾರೆ. ಭಕಡಿಯೂ ಈವರೆಗೆ ತನಗೆ ಏನೂ ಹೇಳಿಲ್ಲ. ಹಾಗಾರೆ ಭಕಡಿಯನ್ನು ತಾನೇ ಕರೆದು ಕೇಳಬೇಕೇ? ಛೇ, ಭಕಡಿಯಂಥ ಒಬ್ಬ ತರಳನ ಮುಂದೆ ಎಂಥ ನಾಚಿಕೆ!

ಬರಜೂ ನೋಡಿದ—ಮನೆಯಲ್ಲಿ ಎಲ್ಲರೂ ದೋಷಿಗಳು. ಹೆಂಡತಿ, ತಮ್ಮ, ಅತ್ತಿಗೆ ಮತ್ತು ತಾನು ಕೂಡ. ಎಲ್ಲಕ್ಕೂ ಹಿರಿಯ ದೋಷಿ ತಾನು. ತಾನು ಮನೆಯ ಯಜಮಾನ. ಮನೆಯೊಳಗೆ ಎಲ್ಲ ಹೊತ್ತಿಗೂ ಉರಿ ಹೊತ್ತಿರುತ್ತದೆ. ಇದಕ್ಕೆ ತಾನು ಮಾಡಿದ್ದೇನು? ಮರದ ಗೊಂಬೆಯಂತೆ ಕೂತರೆ ಆಗುವದೇನು? ಇದರಲ್ಲಿ ಎಲ್ಲ ದೋಷ ತನ್ನದೇ. ಮನೆ ಮುರಿದರೆ ತನ್ನದೇ ಅಪಖ್ಯಾತಿ. ತನ್ನ ಹೆಸರೇ ಹಾಳಾಗುವದು.

ಹೆಂಗಸರಂತೆ ಭಕಡಿ ಮನೆಯೊಳಗೆ ಹೊಕ್ಕು ಅತ್ತಿಗೆಗೆ ಬಯ್ದಾಡಿದ್ದಾನೆ. ಮೂರು ಸಲ ಹೊಡೆಯಲು ಓಡಿದ್ದಾನೆ. ಹೋಗಲಿ ಬಿಡು. ಇದೆಲ್ಲ ಬರಜೂ ಅಲ್ಲದೆ ಬೇರೆ ಯಾರು ಸಹಿಸಬೇಕು?

ಆದರೆ ಎಲ್ಲ ರಾದ್ಧಾಂತದ ಬುಡ ಬೇರು ಇವೆರಡೂ ಹೆಣ್ಣುಗಳೇ. ಇವರಿಬ್ಬರೂ ತೆಪ್ಪಗಿದ್ದರೆ ಭಕಡಿಯಂಥ ಪ್ರಾಯದ ಗಂಡು ಅವಳೊಡನೆ ಜಗಳಾಡುತ್ತಿದ್ದನೇ? ಆದರೆ ಇವೆರಡು ಹೆಣ್ಣುಗಳ ನಡುವೆ ಜಗಳಗಳ ಶ್ರೀಗಣೇಶ ಎಲ್ಲಿಂದ ಆಯಿತು? ಯಾರಿಗೆ ಗೊತ್ತು? ಆದರೂ ಇಷ್ಟೊಂದು ನಿಜ. ಇಬ್ಬರಲ್ಲಿ ಯಾರೂ ಒಬ್ಬರಿಗೊಬ್ಬರು ಕಡಮೆ ಇಲ್ಲ. ಒಬ್ಬರಾದರೂ ಒಳ್ಳೆಯವರಿದ್ದರೆ ಇನ್ನೊಬ್ಬಳು ತನಗೆತಾನೇ ಸುಮ್ಮನಾಗುತ್ತಿದ್ದಳು —ಸೌಮ್ಯರಾಗುತ್ತಿದ್ದರು. ಚಪ್ಪಾಳೆ ಒಂದೇ ಕೈಯಿಂದ ಎಂದೂ ಬಡಿಯುವದಿಲ್ಲ.

ಸರಿ ಆ "ಒಬ್ಬಳು" ಹಿರಿಯ ಸೊಸೆಯೇ ಆಗಲಿ, ಹಾರಾಳ ತಾಯಿಯೇ ಒಳ್ಳೆಯವಳಾಗಲಿ—ಆಗ ಎಲ್ಲ ಬಗೆಹರಿಯುವದು. ಇದು ಬರಜೂನ ಕೈಯಲ್ಲಿಯೇ ಇದೆ. ತನ್ನ ಹೆಂಡತಿಯನ್ನು ಸರಿದಾರಿಗೆ ತರಲಾರದ ಗಂಡನೇನು ಗಂಡನೇ? ಬರಜೂನ ಮನಸ್ಸು ಹಿಗ್ಗಿತು. ಇಷ್ಟು ದಿನಗಳ ನಂತರ ಇಂದು ಅವನಿಗೆ ಒಂದು ಉಪಾಯ ತೋಚಿತು. ಹೆಂಡತಿಯನ್ನು ತಾನು ಸರಿದಾರಿಗೆ ತರಲಾರನೇ?

ಅದೇ ದಿನ ಬರಜೂ ಹಾರಾಳ ತಾಯಿಯನ್ನು ಕರೆದು ಹೇಳಿದ : "ನಿನ್ನೊಡನೆ ಒಂದು ಮಾತು ಆಡುವದಿದೆ."

ಮಾತು ಆಡುವದಿದೆ ? ಬರಜೂಗೆ ತನ್ನೊಡನೆ ಮಾತಾಡುವದಿದೆ? ಇಂದು ಯಾವ ದೇವರು ಕಣ್ಣು ತೆರೆದನೋ! ಮಾತಾಡುವದಿದೆ! ಎಂಥ ಮಾತು? ಕಪ್ಪೆಯ ಕತೆಯೋ? ಹಾರಾಳ ತಾಯಿಯ ಎದೆ ಉಬ್ಬಿ ಒಂದು ಗಜ ಅಗಲವಾಯಿತು. ಎಷ್ಟು ಸಲ ಆಕೆ ಎಣ್ಣೆಯಿಕ್ಕಿಕೊಂಡು ತನ್ನ ಕೆಂಪನ್ನ ಮೈ ವಿರುಗುವಂತೆ ಮಡಿ ಮಾಡಿಕೊಂಡು ಹೆಳಲು ಹಾಕಿ, ಬೈತಲೆಯಲ್ಲಿ ಕುಂಕುಮ ತುಂಬಿಕೊಂಡು, ಕಣ್ಣಿಗೆ ಕಾಡಿಗೆ ಹಚ್ಚಿ, ಯಜಮಾನರ ದಾರಿ ಕಾಯುತ್ತ ಕೂತಿಲ್ಲ!—ಕೇವಲ ಇಂಥ ಒಂದು ಮಾತು ಕೇಳಲಿಕ್ಕೆ ಅಲ್ಲವೇ? ಸಾಮಾನ್ಯವಾಗಿ ಆಕೆ ಕಂಡದ್ದು ತನ್ನ ಗಂಡನ ಹೊಗೆಯಾಡುವ ಉರಿ ಮೋರೆಯನ್ನೇ. ಅವನ ಬಾಯಿಂದ ಹೊರಡುವ ಒಂದು ಶಬ್ದವನ್ನಾದರೂ ಕೇಳಬೇಕೆಂದು ಎಷ್ಟು ಆತುರಳಾಗಿಲ್ಲ! ಇಂದು ಅದೇ ಬರಜೂನ ಬಾಯಿಯಿಂದ ಮಾತು ಹೊರಟಿತು. ಭಾಗ್ಯದಲ್ಲಿ ಬರೆದಾಗಲೇ ಎಲ್ಲ ದೊರೆಯುವದು.

ಹಾರಾಳ ತಾಯಿಯ ಬಾಯಿ ತೆರೆಯಲಿಲ್ಲ. ಅವಳು ನೆಟ್ಟ ದೃಷ್ಟಿಯಿಂದ ನೋಡುತ್ತಲೇ ನಿಂತಳು.

ಬರಜೂ ಕೇಳಿದ : "ಒಳ್ಳೇದು, ಮನೆಯಲ್ಲಿ ಈ ಕಲಹ ಹೀಗೆ ನಡೆಯುತ್ತಲೇ ಇರುವದೇ?"

"ಅದು ಮುಗಿಯುವದಾದರೂ ಹೇಗೆ? ತಾವೇ ಹೇಳಿರಿ, ಕಲಹ ಮಾಡುವವರು ಯಾರು?—ನಾನೇ? ಅವಳೇ?"

ಹಾರಾಳ ತಾಯಿಗೆ ಇದೊಂದೇ ದೊಡ್ಡ ದುಃಖ. ಬರಜೂ ಮತ್ತೆ ತಮ್ಮನ ಮತ್ತು ತಮ್ಮನ ಹೆಂಡತಿಯ ಪಕ್ಷ ಹೊರುತ್ತಾನೆ. ಹಾಗೂ ಎಲ್ಲ ದೋಷ ತನ್ನದೇ ತಲೆಯ ಮೇಲೆ ಹೇರುತ್ತಾನೆ.

ಬರಜೂ ಅಂದ : "ಕಲಹ ಯಾರು ಮಾಡುತ್ತಾರೆ ಎಂದು ಹುಡುಕುತ್ತ ಕೂತರೆ ರಾದ್ಧಾಂತ ಮುಗಿಯಲಿಕ್ಕೇ ಇಲ್ಲ."

"ರಾದ್ಧಾಂತ ಮುಗಿಯಲಿ, ಬಿಡಲಿ, ನನಗೆ ಇನ್ನು ಈ ಮನೆಯಲ್ಲಿ ಉಳಿಯುವದು ಶಕ್ಯವಿಲ್ಲ."

"ಹಾಗಾದರೆ ಬೇರೆ ಆಗುವದರ ಹೊರತು ಬೇರೆ ಉಪಾಯ ಏನಾದರೂ ಏನಿದೆ?"

"ಬೇರೆಯಾಗಿರಿ ಅಥವಾ ಕೂಡಿ ಉಳಿಯಿರಿ. ಆದರೆ ಅವಳ ಬಯ್ಗಳನ್ನು, ಚುಚ್ಚುವ ಉರಿಯುವ ಮಾತುಗಳನ್ನು ಇನ್ನು ಕೇಳಲಾರೆ, ತಾಳಲಾರೆ. ನಾನು ಅವಳ ಜತೆಗೆ ಬಾಳಲಾರೆ."

ಬರಜೂ ನೋಡಿದ. ಅಭಿಮಾನಿನಿಯಾದ ತನ್ನ ಹೆಂಡತಿಯ ಎದೆಯ ಮೇಲಿನ ಬೆಟ್ಟದಂಥ ಭಾರ ಕಳಚುವದು ಸುಲಭವಲ್ಲ. ಮಾತಿನಿಂದ ಸ್ಪಷ್ಟವಾಯಿತು—ಆಕೆ ಬೇರೆಯಾಗಿರುವದೇ ಉತ್ತಮವೆಂದು ನಿರ್ಧರಿಸಿದ್ದಾಳೆ. ಆದರೆ ಹಾಗೆ ಸ್ಪಷ್ಟ ಹೇಳಲಾರಳು. ಬರಜೂನ ಇದುರಿಗೆ ಅವಳು ಹಾಗೆ ಆಡುವದಾದರೂ ಹೇಗೆ? ಅಷ್ಟು ಸಾಹಸ ಅವಳಿಗೆ ಇದ್ದಿಲ್ಲ. ಬರಜೂ ಸಿಡುಕಿನಿಂದ ಅಂದ : "ಇಂಥ ಸುರುಳಿ ಸುತ್ತುವ ಮಾತಿನ ಬರುಡೆ ನನಗೆ ಅರ್ಥವಾಗುವದಿಲ್ಲ. ಸ್ಪಷ್ಟವಾಗಿ ಹೇಳುವದಿದ್ದರೆ—" ಬರಜೂನ ತುಟಿ ನಡುಗತೊಡಗಿದವು. ಕಣ್ಣು ಕೆಂಪೇರಿದವು.

ಅವನ ರೌದ್ರಾವತಾರ ನೋಡಿ ಹಾರಾಳ ತಾಯಿ ನೀರು ನೀರಾದಳು. ಅವಳ ಹಣೆಯಲ್ಲಿ ಇಂಥ ಗಂಡನೇ ಬರೆದಿದ್ದ. ಮನಸ್ಸಿನ ಒಳಒಳಗೇ ಅವಳು ಹೆದರಿದಳು —ಯಾರಿಗೆ ಗೊತ್ತು ಇವರು ಏನು ಮಾಡಿ ಬಿಟ್ಟಾರು!

ಹಾರಾಳ ತಾಯಿ ದಿಗಲು ಬಿದ್ದಳು. ಅಳು ದನಿಯಲ್ಲಿ ಅಂದಳು : "ಮಾತಲ್ಲದ ಮಾತಿಗೆ ಹೀಗೆಲ್ಲ ರೇಗುವಿರೇಕೆ? ನಾನು ಮನೆಯ ಎಲ್ಲ ಕೆಲಸ ಬೊಗಸೆ ನೋಡಿಕೊಳ್ಳುವೆನು. ಬರಹೋಗುವವರ ಒಳ ಹೊರಗಿನ ಎಲ್ಲ ದುಡಿತ ಮಾಡುವೆನು."

ಬರಜೂ ಕೋಪಾಟೋಪದಲ್ಲಿ ನುಡಿದ : "ಮತ್ತೆ ಸುಳ್ಳಾಡುವಿ. ಮನೆಯ ಕೆಲಸ ಕಷ್ಟ ನೀನೇ ನೋಡುತ್ತೀ? ಕಿರಿಯ ಸೊಸೆ ಏನೂ ಮಾಡುವದಿಲ್ಲ?"

ಹಾರಾಳ ತಾಯಿಗೆ ಗೊತ್ತು—ಅತ್ತು ಕರೆದು ಗೋಳಾಡಿದರೆ ಬರಜೂನ ಕಲ್ಲೆದೆ ಕರಗುವಂತಹದಲ್ಲವೆಂದು. ಮೊದಲೇ ಸುಳ್ಳು ಮಾತು ಕೇಳಿ ಆತ ಕಾದು ಹೋಗಿದ್ದಾನೆ. ಹಿಂದೊಮ್ಮೆ ಇಂಥ ಸುಳ್ಳು ಮಾತಿಗಾಗಿ ಆತ ಮನೆಯಲ್ಲಿ ಎರಡು ದಿನ ಊಟವೇ ಮಾಡಿದ್ದಿಲ್ಲ. ಜನ ಎಷ್ಟೆಲ್ಲ ಸುಳ್ಳಾಡುವುದಿಲ್ಲ!

ಆಕೆ ನಿಧಾನವಾಗಿ ಅಂದಳು : "ಇರಬಹುದು. ನಾನೇ ಗದ್ದರಿಸಿದೆ, ಹಚ್ಚಿ-ಕೊಟ್ಟೆ, ಏನೆಲ್ಲ ಮಾಡಿದೆ—ಜಗಳಾಟಕ್ಕಾಗಿ. ಆದರೆ ನನ್ನ ಮಕ್ಕಳು ಅವಳದೇನು ಹಾಳುಮಾಡಿದರು. —ಅವರನ್ನು ಹಾಡೇ ಹಗಲು ಕೊಳಕು ಮಾತಿನಿಂದ ಚುಚ್ಚಲಿಕ್ಕೆ?"

"ಮಕ್ಕಳನ್ನು ಆಕೆ ಗದ್ದರಿಸಿದರೆ ಅವರಿಗೇನು ಹಾನಿ ಆಗುವದಿಲ್ಲ."

ಹಾರಾಳ ತಾಯಿ ಕೆರಳಿದಳು : "ಸೈ, ಸೈ, ನನ್ನ ಮಕ್ಕಳಿಗೆ ಬಯ್ಯುವವಳು ಈ ಕಿರಿಸೊಸೆ ಯಾರು? ಒಳ್ಳೇ ಹೇಳುವಿರಿ. ನನಗೆ ಒಳ್ಳೇ ಬೋಧ ಮಾಡುವಿರಿ. ಇದೆಲ್ಲ ನನಗೆ ಬೇಕಾಗಿಲ್ಲ. ನಾನು ನನ್ನ ಮಕ್ಕಳನ್ನು ಕಟ್ಟಿಕೊಂಡು ಬೇರೆಯಾಗಿಯೇ ಬಿಡುವವಳು."

"ಒಳ್ಳೇದು. ಮಕ್ಕಳನ್ನು ಕಟ್ಟಿಕೊಂಡು ಬೇರೆಯಾಗುವೆಯಾದರೆ ಆಗಿ ಬಿಡು. ಆದರೆ ನನ್ನನ್ನು ಮತ್ತೆ ಹುಡುಕಬೇಡ."

"ಸೈ, ಸೈ, ಹೊಟ್ಟೆಯ ಮಕ್ಕಳ ಬಗೆಗೂ ಇವರ ಎದೆಯಲ್ಲಿ ಮಮತೆ ಇಲ್ಲ! ಸರಿ, ಇನ್ನೇನು ಬೇರೆ ಹೇಳುವಿರಿ? ಇದೊಂದೇ ಕಲಿತಿರುವಿರಿ, ನನ್ನನ್ನು ಹೆದರಿಸಲಿಕ್ಕೆ." ಹೀಗೆಂದು ಹಿರಿಯ ಸೊಸೆ ಗೋಳೋನೆ ಅತ್ತು ಬಿಟ್ಟಳು.

ನಿಜವಾಗಿಯಾಗಿಯೂ ಬರಜೂ ಕದಲದಂಥ ಗುಡ್ಡದಂಥ ಮನುಷ್ಯ. ಅವನ ಮಾತಿನಲ್ಲಿ, ದನಿಯಲ್ಲಿ ಸ್ವಲ್ಪವೂ ಮರುಕ ಮಾರ್ದವ ಬರಲಿಲ್ಲ. "ನೋಡು ಅಳುವದರಿಂದ, ಕೂಗಾಡುವದರಿಂದ, ಮನೆಯ ಜಗಳ ಮುಗಿಯುವದಿಲ್ಲ."

ಹಾರಾಳ ತಾಯಿ ಆವೇಶದಿಂದ ಆಡಿದಳು : "ಮನೆ ಜಗಳ ಎಂದೂ ಮುಗಿಯಲಿಕ್ಕಿಲ್ಲ."

"ಸರಿ, ಹಾಗಾದರೆ ಯಥೇಚ್ಛ ಜಗಳಾಡಿಕೊ" ಅವನು ಒಬ್ಬ ಸತ್ಯಸಂಧ ಹುಡುಗನಂತೆ ಮೆಲ್ಲಗೆ ಮನೆಯಿಂದ ಹೊರಬಿದ್ದು ನಡೆದ. ಅವನ ಬಾಯಿಯಿಂದ ಒಂದು ಶಬ್ದವೂ ಹೊರಬೀಳಲಿಲ್ಲ—ಗುರುಗಳ ಮುಂದೆ ಹೊರಟು ಹೋಗುವ ಶಾಲೆಯ ತರಳನಂತೆ ಆತ ಎದ್ದು ನಡೆದ.

ಬರಜೂ ಹೊರಟು ಹೋದಮೇಲೆ ಹಾರಾಳ ತಾಯಿಗೆ ಎಚ್ಚರ ಬಂದಿತು. "ಹಕ್ಕಿಗೇ ಗೊತ್ತು ಹಕ್ಕಿಯ ಭಾಷೆ." ಅಯ್ಯೋಽಽ ಈ ಡಾಕಿಣಿ ಇದೇನು ಮಾಡಿಬಿಟ್ಟಳು! ಒಂದಿಷ್ಟು ಉಂಡು ತಿಂದು ಹೋಗಬಹುದಿತ್ತು. ಮುಂಜಾನೆಯಿಂದ ಹೊಲ-ಗದ್ದೆ ಸುತ್ತಾಡುವದರಲ್ಲಿ ಏನೂ ತಿಂದಿಲ್ಲ. ಮೈ ಕೈ ಕೂಡ ತೊಳೆದಿಲ್ಲ. ನದಿಯ ಧಾರೆಯಂತೆ ಅವಳ ಎರಡೂ ಕಣ್ಣುಗಳಿಂದ ನೀರು ಹರಿಯಹತ್ತಿತು. ಏನು ಹೇಳಲು ಎಷ್ಟು ಹುರುಪಿನಿಂದ ಅವರು ಹತ್ತಿರ ಕರೆದಿದ್ದರು! ಇದೇ ಮಾತು, ಕೊನೆಗೆ ಹೀಗೆ ಬಿಟ್ಟು ಹೋಗಲಿಕ್ಕೆ? ಎಷ್ಟು ಜಾಗ್ರತೆಯಾಗಿ ಮಾತುಕತೆಯಾಡಿದೆ. ಆದರೆ ಏನೂ ಆಗಲಿಲ್ಲ. ನನಗೇಕೆ ಸಾವು ಬರಲಿಲ್ಲವೋ!

ವಿನಾ ಕಾರಣ ಸದಾಕಾಲವೂ ಇಂಥ ಚಕಮಕಿ—ಇದರಿಂದ ಯಾರ ಮನಸ್ಸು ಕಟುವಾಗಲಿಕ್ಕಿಲ್ಲ? ಹಾರಾಳ ತಾಯಿಯ ಎಲ್ಲ ಸಿಟ್ಟು, ಈಗ ತನ್ನ ಮೈದುನ-ಮೈದುನನ ಹೆಂಡತಿಯ ಮೇಲೆ ಹರಿಯಿತು. ಅವರ ಮೂಲಕವೇ ಆಕೆ ಮನಬಿಚ್ಚಿ ಏನೂ

ಆಡಲಾರಳು. ಹೆಂಡತಿ ಎಷ್ಟೇ ಹತ್ತಿರದವಳಿದ್ದರೂ ಅಣ್ಣ-ತಮ್ಮಂದಿರ ಒಡನಾಟದಲ್ಲಿ ಯಾರೂ ಯಾರ ಮಾತೂ ಅರಿಯಲಾರರು. ಒಬ್ಬರ ಒಂದು ಪುಟ್ಟ ಮಾತು ಇನ್ನೊಬ್ಬರಿಗೆ ನಂಜಾಗಿ ಅನಿಸುವದು. ಹೀಗೇಕೆ? ಹಗಲಿರುಳೂ ಬೆಟ್ಟದಂತೆ ಭಾರವೆನಿಸುವದೇಕೆ?

ಬಹುಶಃ ಯಾರೋ ಏನೋ ಮಾಟ ಮಾಡಿರಬೇಕು. ಖಂಡಿತ, ಖಂಡಿತ. ಮತ್ಯಾರು? ಇದೇ ಹೊಯ್ಮಾಲಿ ಕಿರಿ ಸೊಸೆ. ಏನೋ ಮೋಡಿ, ಮಂತ್ರ ಮಾಡಿಸಿರಬೇಕು. ಅವಳಲ್ಲದೇ ಮತ್ತಾರು? ಮತ್ತಾರಿಗೆ ಹೊತ್ತು ಹೋಗುವದಿಲ್ಲ? ಹಿರಿಯ ಸೊಸೆ ಇಷ್ಟಕ್ಕೆ ಸುಮ್ಮನಾಗುವಳೇ? ಒಳ್ಳೇದು. ಅವಳೂ ಆ ಕಿರಿಸೊಸೆಯ ಮೇಲೆ ತನ್ನ ಅಂತರಾಳದ ದುರುದ್ದೇಶಗಳನ್ನು ಸಾಧಿಸದಿದ್ದರೆ ಅವಳೂ ಧನಪಂಡೆಯ ಮಗಳಲ್ಲ!

"ಏ ಮೋತೀ, ಏ ಸೋನಾ, ಸ್ವಲ್ಪ ನೋಡಿರಿ. ಆ ನಿಮ್ಮ ವೈರಿ ಹುಟ್ಟಿದ್ದೇ ನನ್ನ ಜೀವ-ಹೀರಿಕೊಳ್ಳಲಿಕ್ಕೆ. ನಿಮ್ಮ ಅಪ್ಪ ಎಲ್ಲಿ ಹೋದರೆಂದು ನೋಡಿರಿ." ಮೋತಿ, ಸೋನಾಳ ತಂಗಿ, ಮೋತಿ-ಸೋನಾ ಇಬ್ಬರೂ ಅಪ್ಪನ ಬೆನ್ನಿಗೆ ಓಡಿದರು. ಅಪ್ಪ ಮಂಗಲಾದೇವಿಯ ಕಟ್ಟೆಯ ಮೇಲೆ ಅಂಗಾತ ಬಿದ್ದಿದ್ದಾನೆ. ಮೈ ಕೆಳಗೆ ಪಂಚೆಯನ್ನೂ ಹಾಸಿಲ್ಲ. ಪಕ್ಕದಲ್ಲಿಯೇ ಕಟ್ಟೆಯ ಕೆಳಗೆ ಕೇತಕಿಯ ಪೊದೆಯಲ್ಲಿ ಒಂದು ಕಾಡು ಹೂವಿನ ಮುಳ್ಳು ಕಂಟಿ ಇದೆ. ಕಾಜಾಣದ ಹಕ್ಕಿ ಆ ಕಂಟಿಯಲ್ಲಿ ಟೊಂಗೆಯಿಂದ ಟೊಂಗೆಗೆ ಹಾರಾಡುತ್ತಿದೆ. ತುಸು ದೂರ ಬರಜೂನ ಕಬ್ಬಿನ ಹಕ್ಕಲು ಹೂ ಬಿಟ್ಟಿದೆ. ನಡು-ನಡುವೆ ಬರಜೂನ ನಿದ್ದೆ ಹರಿದಾಗ ಆತ ಆ ಹಕ್ಕಲದತ್ತ ಕಣ್ಣು ಹಾಯಿಸುತ್ತಾನೆ. ಅವನ ಎಷ್ಟು ಆಶೆ, ಎಷ್ಟು ಚಿಂತೆ ಮುಡಿಯಡಿಯ ಎಷ್ಟು ಬೆವರು ಹೊಯ್ದುದರ ಫಲವಿದು—ಈ ಕಬ್ಬಿನ ಹೊಸ ಹೂವು.

ನಿಧಾನವಾಗಿ ಸಂಜೆಯಾಯಿತು. ಇಡಿಯ ಕೊಪ್ಪದ ಮೋರೆ ಕಪ್ಪಿಟ್ಟಿತು. ಬಿಸಿಲಿನಲ್ಲಿ ಅಲೆದಾಡಿದ ಮಕ್ಕಳ ಮುಖಗಳ ಕಳೆ ಇಳಿದಿತ್ತು. ಬರಜೂ ಇಬ್ಬರೂ ಹುಡುಗಿಯರ ಸಂಗಡ ಮನೆಗೆ ಬಂದ.

ಉಪಾಯವೇನು? ಅವನು ಉಣ್ಣದೇ ಮನೆಯವರಾರೂ ಉಣ್ಣುವಂತಿಲ್ಲ. ಎಲ್ಲರಿಗೂ ತನ್ನಿಂದಾಗಿ ಹಸಿದ ಹೊಟ್ಟೆಯ ಮೇಲೆ ಉಪವಾಸಗೆಡಿಸುವದು ಅವನಿಗೆ ಸರಿದೋರಲಿಲ್ಲ. ಆದರೆ ಮಾಡುವದೇನು? ಎಷ್ಟು ದಿನ ಇವರು ಈ ರೀತಿ ಉಪವಾಸ ಉಳಿಯಬಹುದು? ಉಳಿದರೆ ಉಳಿದಿರಲಿ. ಹೆದರಿ ನಡೆದರೆ ಬರಜೂನ ಕೆಲಸ ಸಾಗುವಂತಿಲ್ಲ. ಒಂದೊಂದು ಕಾರ್ಯಸಾಧನೆಗಾಗಿ ಇದೇ ದೇಶದ ಜನ ಎಂಥೆಂಥ ಕಠೋರತಪಸ್ಸು ಆಚರಿಸಿಲ್ಲ! ಗಿಡದ ತೊಪ್ಪಲು ಕೂಡ ತಿಂದು ಬದುಕು ಬದುಕಿದ್ದಾರೆ. ಇಷ್ಟರಿಂದಲೇ ಬರಜೂ ತಗ್ಗಿ ಹೋಗಬಲ್ಲನೇ? ಮತ್ತೆ ಉಪವಾಸ ಉಳಿಯುವದರಿಂದ ಹಾರಾಳ ತಾಯಿಗೆ ಗೆಲುವು ಆದೀತು. ಆಕೆ ದಿನನಿತ್ಯವೂ ಜಗಳವಾಡುತ್ತಲೇ ಉಳಿದಾಳು. ಮನೆಯಲ್ಲಿ ಎಲ್ಲ ಹೊತ್ತು ಅಶಾಂತಿ ನಿಂತೀತು. ಬೇರೆಯೇ ಆಗುವದಿದ್ದರೆ ತಿಳಿದು

ಅರಿತು ಸೌಜನ್ಯದಿಂದ ಬೇರೆ ಆಗಬೇಕು. ಒಬ್ಬರು ಇನ್ನೊಬ್ಬರೊಂದಿಗೆ ಒಡನಾಡುವದು ಕೂಡದಿದ್ದರೆ, ತಾನು ತನ್ನ ದುರಭ್ಯಾಸ ತಿದ್ದದಿದ್ದರೆ, ಆಗಲಾದರೂ ಬೇರೆ ಆಗಬೇಕು. ಮನುಷ್ಯರಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ, ದೇವತೆಗಳೂ ಇದ್ದಾರೆ, ದೈತ್ಯರೂ ಇದ್ದಾರೆ. ಈ ದೇವ-ದಾನವರೊಳಗೆ ಯುದ್ಧ ನಡೆದಿದೆ. ಒಮ್ಮೆ ಒಳಿತಿಗೆ ಜಯ. ಒಮ್ಮೆ ಕೆಡಕಿಗೆ ಜಯ. ಒಳಿತು ಗೆದ್ದಾಗ ಮನುಷ್ಯ ದೇವನಾಗುತ್ತಾನೆ, ಪೂಜ್ಯನಾಗುತ್ತಾನೆ, ಅಮರನಾಗುತ್ತಾನೆ. ಹತ್ತು ಮಂದಿಗೆ ಯೋಗ್ಯದಾರಿಯಲ್ಲಿ ನಡೆಯಿಸುತ್ತಾನೆ. ಕೆಡುಕಿನ ಗೆಲುವಾದರೆ ಮನುಷ್ಯ ಕಳ್ಳ-ಠಕ್ಕ-ಕೊಲೆಗಾರ-ಕೊಳ್ಳೆಗಾರನಾಗುತ್ತಾನೆ. ಮನೆ-ಮನೆ, ಹಳ್ಳಿಹಳ್ಳಿಗಳಲ್ಲಿ ತುಂಬಿರುವ ವ್ಯಾಜ್ಯವ್ಯವಹರಣೆ, ಜಗಳ-ಜಂಜಾಟಗಳಿಂದ ಗೊತ್ತಾಗುವದೇನು? ಪ್ರಪಂಚದಲ್ಲಿ ಇಂದು ಕೆಡುಕು ಹೆಚ್ಚುತ್ತಿದೆ, ಹಬ್ಬುತ್ತಿದೆ. ದೈತ್ಯರ ಬಲ, ದೇವತೆಗಳಿಗಿಂತ ಹೆಚ್ಚಾಗಿದೆ. ರಾಮಾಯಣ-ಮಹಾಭಾರತಗಳೊಳಗಿನ ದೇವ-ದಾನವರ ಯುದ್ಧಗಳು ಇದೇ ಒಳಿತು-ಕೆಡಕುಗಳ ಹೋರಾಟವೇ ಆಗಿದ್ದವು. ಈ ಯುದ್ಧ ಈ ಹೋರಾಟ ಪ್ರಪಂಚದಲ್ಲಿ ಎಂದಿನಿಂದಲೂ ನಡೆದು ಬಂದಿದೆ. ಬರಜೂ ತಿಳಿದೂ ತಿಳಿದೂ ಈ ಕೆಡಕಿನ ಇದಿರು ಸೋಲು ಹೇಗೆ ಒಪ್ಪಿಕೊಂಡಾನು? ಹಾರಾಳ ತಾಯಿ ಉಪವಾಸ ಉಳಿದಳು. ಅತ್ತು ರಂಭಾಟ ಮಾಡಿದಳು —ಎಂಬುದಕ್ಕೆ ಹೆದರಿ ಕಣ್ಣೆದುರಿಗಿದ್ದ ಈ ಮನೆಯೊಳಗಿನ ಕೆಡುಕಿಗೆ ಬೆಳೆಯಲು ಹಬ್ಬಲು ಆತ ಬಿಡುವನೇ? ಇಲ್ಲ, ಇಲ್ಲ. ಇದು ಎಂದೂ ಶಕ್ಯವಿಲ್ಲ. ಬರಜೂ ಈ ಹೋರಾಟದಲ್ಲಿ ಸೋಲಲಿಕ್ಕಿಲ್ಲ. ಇದೇ ಹೋರಾಟಕ್ಕಾಗಿ ಶ್ರೀರಾಮಚಂದ್ರ ತಂದೆಯನ್ನು ಕಳಕೊಂಡ, ಮನೆಯನ್ನು ಬಿಟ್ಟ, ತನ್ನ ನೆಚ್ಚಿನ ಮಡದಿಯನ್ನೂ ಅಡವಿಗಟ್ಟಿದ. ಬರೇ ಪ್ರೀತಿ-ಮಮತೆಯನ್ನೇ ನೋಡುವದಿದ್ದರೆ ಒಳಿತನ್ನು ಬಿಟ್ಟು ಕೆಡುಕನ್ನೇ ಒಪ್ಪಿಕೊಳ್ಳಬೇಕಾದೀತು. ಪಾಂಡವರು ಐವರು ಸೋದರರು ಎಷ್ಟೆಲ್ಲ ಕಷ್ಟ-ಸಂಕಟ ಸಹಿಸಿದರು. ಎಲ್ಲ ಪುರಾಣ ಪುಣ್ಯ ಗ್ರಂಥಗಳಲ್ಲಿ ಇದೊಂದೇ ಸಂಗತಿ ಸಿಗುತ್ತದೆ. —ದೇವತೆಗಳ ಜಯ, ದೈತ್ಯರ ಲಯ.

ಬರಜೂನ ಮನೆಯೊಳಗೆ ಈ ದಾನವೀ ವಿಪ್ಲವ ನಡೆಯುತ್ತಿತ್ತು. ಛಕಡೀ ಸೊಸೆಯಂದಿರು ಇವರೊಳಗೆ ಈ ದೈತ್ಯಲೀಲೆಯ ರಂಗ ರಚಿತವಾಗಿತ್ತು. ಇಂಥ ದೈತ್ಯರ ಸಂಹಾರಕ್ಕಾಗಿ, ಅಸುರ ವಿಜಯಕ್ಕಾಗಿ ರಾಮನು ಪಿತೃವಿಯೋಗ ಸಹಿಸಿದನು. ಪಾಂಡವರು ರಾಜ್ಯಭ್ರಷ್ಟರಾದರು. ದ್ರೌಪದಿಯು ಅನೇಕ ದುಃಖಗಳನ್ನು ಭೋಗಿಸಿದಳು. ಅಂಥಲ್ಲಿ ಬರಜೂನಂಥ ಎಂಟೆದೆಯ ಬಂಟನು ಸ್ವಲ್ಪ ಭಿಡೆ-ಭೀತಿಗಳನ್ನು ಬಿಡಬಾರದೆ? ಹಾರಾಳ ತಾಯಿ ಉಣ್ಣದೆ ತಿನ್ನದೆ ಐದು ದಿನ ಅಳುತ್ತ ಬಿದ್ದುಳಿದಳು. ಎಲ್ಲರೂ ಹಸಿವೆ ಉಪವಾಸಗಳಿಂದ ಗೋಳಾಡುವರೆಂದು ಅದಕ್ಕಾಗಿ ದೇವತೆಗಳ ಪಕ್ಷ ಬಿಟ್ಟು ದೈತ್ಯರಿಗೆ ಶರಣು ಹೋಗುವದೇ? ತಾನೇನು ಅಷ್ಟು ಅಧಮನೇ? ಬರಜೂ ಹಾರಾಳ ತಾಯಿಯನ್ನು ಪ್ರೀತಿಸುವದಿಲ್ಲವೇ? ಅವಶ್ಯ ಪ್ರೀತಿಸುತ್ತಾನೆ. ಆದರೆ ಪ್ರೀತಿಸುವದು ಅವಳಲ್ಲಿಯ

ಒಳಿತನ್ನು, ಕೆಡುಕನ್ನಲ್ಲ. ಕೆಡುಕನ್ನು ಪ್ರೀತಿಸುವದು? ಅಂಥ ಪ್ರೀತಿ ಪ್ರೀತಿ ಅಲ್ಲ. ವಿಷದ ಗುಟುಕು. ಬರಜೂ ಹಾರಾಳ ತಾಯಿಯನ್ನು ನಿಜವಾಗಿ ಪ್ರೀತಿಸಲು ಬಯಸುತ್ತಾನೆ-ಅವಳ ಅವಗುಣಗಳನ್ನು ನಿವಾರಿಸಿ ಒಬ್ಬರು ಒಬ್ಬರನ್ನು ಪ್ರೀತಿಸಿದರೆ ಅವರ ಮಂಗಲವನ್ನೇ ಬಯಸುತ್ತಾರೆ, ಎಣಿಸುತ್ತಾರೆ. ಹಾರಾಳ ತಾಯಿಗೆ ತನ್ನ ಒಳಿತು-ಕೆಡುಕು ಅರಿವಾಗದಿದ್ದರೆ ಅವಳಿಗೆ ಅದರ ಅರಿಕೆ ಮಾಡಿ ಕೊಡುವದು ಬರಜೂನ ಕೆಲಸವಲ್ಲವೇ?

ಆದ್ದರಿಂದ ಅವಳೊಂದಿಗೆ ರಾದ್ಧಾಂತವೇ ಆದರೆ ಅದರಲ್ಲಿ ಅಡ್ಡಿ ಏನು? ಇದು ಅವಳಿಗೆ ಸರಿದೋರದೆ ಇರಲಿ, ಸೇರದೆಯೂ ಇರಲಿ. ಅಡ್ಡಿ ಏನು? ರೋಗಿಗೆ ಮದ್ದು ಮೆಚ್ಚಿದ್ದುಂಟೇ? ಇಂದು ಅವಳಿಗೆ ತನ್ನ ವ್ಯವಹಾರ ಸೇರಲಿಕ್ಕಿಲ್ಲ, ಸರಿಯೆನಿಸಲಿಕ್ಕಿಲ್ಲ. ಆದರೆ ಆಕೆ ಸರಿಯಾಗಿ ಒಳ್ಳೆಯವಳಾಗಿ ಇದನ್ನು ಅರಿತುಕೊಳ್ಳುವ ಒಂದು ದಿನವೂ ಬರುವದು-ಅದೂ ದೂರವಿಲ್ಲ.

ಬರಜೂ ಮನೆಗೆ ಹೋಗಿ ಊಟಕ್ಕೆ ಕೂತ. ಉಣ್ಣುವ ಇಚ್ಛೆ ಇದ್ದಿಲ್ಲ. ಸತತವಾಗಿ ಮನಸ್ಸಿಗೆ ಒಂದೇ ಕುದಿ—ಒಂದೇ ಉಕ್ಕು—ಈ ಅಶಾಂತಿ ಮುಗಿಯುವದು ಹೇಗೆ? ಮೋರೆಯ ಮೇಲೆ ಕಳೆಯೇ ಇದ್ದಿಲ. ಮನುಷ್ಯ ಏನು ಮಾಡಲಾರ? ಮಂದಿ ಎಂಥೆಂಥ ದೊಡ್ಡ ರಾಜ್ಯ ನಡೆಸಿದ್ದಿಲ್ಲ! ಬರೇ ಈ ಬರಜೂ ನಾಲ್ಕು ಜನರ ಮೇಲೆ ಶಾಸನ ನಡೆಯಿಸಲಾರ!

ಬರಜೂನ ಹೆಂಡತಿ ನೋಡಿದಳು—ಯಜಮಾನರ ಮನಸ್ಸು ಮೆಲ್ಲನೆ ಪಲ್ಲಟಿಸುತ್ತ ನಡೆದಿದೆ. ಮನೆಯಲ್ಲಿ ಮಕ್ಕಳೊಂದಿಗೆ ಎಲ್ಲರ ಸಂಗಡವೂ ಅವನ ಮನಸ್ಸು ವಿಮುಖವಾಗುತ್ತಿದೆ. ಅನ್ನದ ತಾಟು ನೋಡಿದಳು. ದಿನಾಲು ಉಣ್ಣುವಷ್ಟು ಆತ ಇಂದು ಉಂಡಿದ್ದಿಲ್ಲ. ಆಕೆ ವ್ಯಾಕುಲಳಾಗಿ ಅಂದಳು : "ಉಣ್ಣುವುದಿಲ್ಲ, ತಿನ್ನುವುದಿಲ್ಲ, ಸದಾ ಕಾಲ ಹೀಗೆ ಗುಮ್ಮನಂತೆ ಮೋರೆಮಾಡಿ ತಿರುಗುತ್ತೀರಿ—ಯಾವ ಹಾಳುಮುಂಡೆ ಏನಾದರೂ ಮಾಡಿ ಹಾಕಿದಂತೆ!"

"ಏನೇ, ಅಂದಿ? 'ಹಾಳುಮುಂಡೆ'?" ಪಕ್ಕದ ಕೋಣೆಯಿಂದ ಕಿರಿಯಸೊಸೆ ಹೊರಬಿದ್ದು ಕೇಳಿದಳು.

ಬರಜೂ ಮಲಗಿದ್ದ. ಮೆಲ್ಲಗೆ ಎದ್ದು ಹೊರಗೆ ಹೊರಟು ಹೋದ. ಮತ್ತೆ ಮರಳಲಿಲ್ಲ. ದಿನದ ಹಿಂದೆ ದಿನ ಸರಿಯಿತು. ಐದು ದಿನ ಸಂದುವು. ಬರಜೂ ತಿರುಗಿ ಬರಲಿಲ್ಲ. ಹಾರಾಳ ತಾಯಿ ನಾಲ್ಕೂ ಕಡೆಗೆ ಆಳು ಓಡಿಸಿದಳು ಗಂಡನ ಶೋಧಕ್ಕಾಗಿ. ಎಲ್ಲಿಯೂ ಗೊತ್ತು ಪತ್ತೆ ಹತ್ತಲಿಲ್ಲ.

ಶರದೂಳ ತಾಯಿ ಬಂದು ಅಂದಳು : "ಇದೇನೇ ಹಾರಾಳ ತಾಯಿ. ಅನ್ನವಿಲ್ಲ-ನೀರಿಲ್ಲ. ನೀನು ಬರೇ ಒಣಕಡ್ಡಿ ಆಗಿರುವಿ. ಬರಜೂಗೆ ಆಗಿದೆ ಯಾದರೂ ಏನು? ಎಂಥ ಒಳ್ಳೆಯ ಮನುಷ್ಯನಾಗಿದ್ದ."

"ನನ್ನ ಹಣೆಬರಹ—ನನ್ನ ಸಹವಾಸದಲ್ಲಿ ಒಳ್ಳೇ ಮನುಷ್ಯರೂ ಕೆಟ್ಟು ಹೋಗುತ್ತಾರೆ ಅಕ್ಕ." ಹಾರಾಳ ತಾಯಿಯ ಕಣ್ಣುಗಳಿಂದ ನೀರಿನ ಝರಿಗಳು ಉಕ್ಕಿ ಹರಿಯ ತೊಡಗಿದವು.

ಶರದೂಳ ತಾಯಿ ಅಂದಳು: "ಛೀ ತಂಗೀ, ಅಳುವಿಯೇಕೆ? ಬರಜೂ ಬಂದೇ ಬರುತ್ತಾನೆ."

ಹಾರಾಳ ತಾಯಿ ಬಿಕ್ಕಿ ಬಿಕ್ಕಿ ಅಂದಳು : "ನಾನಾರೆ ಏಕೆ ಬದುಕಿದ್ದೇನೆ? ಏಕೆ ಸತ್ತು ಹೋಗಿಲ್ಲ? ಅವರು ನಿಜವಾಗಿಯೂ ಬರುವರೇ? ಅದರ ಭರವಸೆ ಏನು?" ಅವಳ ಕಣ್ಣುಗಳು ಶ್ರಾವಣದ ಮೋಡಗಳಂತೆ ಜಡಿಮಳೆಯ ಧಾರೆ ಹಿಡಿದಿದ್ದವು. ಮಕ್ಕಳು ರಂಪುಮಾಡಲು ಆರಂಭಿಸಿದವು. ತಾಯಿ ಅಳುವದನ್ನು ನೋಡಿ ಅವಳ ತೊಡೆಯ ಮೇಲಿನ ಮಗುವೂ ತೀಡಲು ತೊಡಗಿತು.

ಶರದೂಳ ತಾಯಿ ಅಂದಳು : "ಇದೇನೇ ತಂಗೀ, ಮಕ್ಕಳೆಲ್ಲ ಅಳುತ್ತಿದ್ದಾರೆ. ಅವರನ್ನು ಸಮಾಧಾನ ಪಡಿಸಿಲ್ಲ. ತಿಳುವಳಿಕೆ ಇದ್ದ ಹೆಣ್ಣಾಗಿ ನೀನು ಹೀಗೆ ಅತ್ತರೆ ಮಕ್ಕಳಿಗೆ ಬುದ್ಧಿ ಹೇಳುವವರು ಯಾರು?"

ನಿಜವಾಗಿಯೂ ಬರಜೂ ಮತ್ತೆ ಬರುವವರೆಗೂ ಹಾರಾಳ ತಾಯಿಯ ಚಿತ್ತ ಸ್ಥಿರವಾಗದು. ಬರಜೂನ ಮುಂದೆ ತನ್ನ ಬಾಯಿ ಮುಚ್ಚಿಕೊಂಡು ಇರಲು ಅವಳು ಮನಸ್ಸಿನಲ್ಲಿಯೇ ಅದೆಷ್ಟು ನಿಶ್ಚಯ ಮಾಡುತ್ತಾಳೆ. ಆದರೆ ಹಾಗೆ ಆದದ್ದೇ ಇಲ್ಲ. ಹೇಗಾದರೂ ಬಾಯಿಯಿಂದ ಮಾತು ಹೊರಟೇ ಬಿಡುತ್ತದೆ. ವಿಷ ನುಂಗಿ ಸತ್ತುಹೋದರೆ ಪೀಡೆ ಮುಗಿಯುತ್ತಿತ್ತು!

ಶರದೂಳ ತಾಯಿ ಅಂದಳು : "ತಂಗೀ ನೀನು ಹೀಗೇಕೆ ಆಗಿರುವಿ ಎಂಬುದರ ಕಾರಣ ನನಗೆ ಗೊತ್ತಾಯಿತು. ಆತ ಒಳ್ಳೆಯವನೇ ಇದ್ದ. ಆದರೂ ಮಕ್ಕಳು–ಮರಿ, ಮನೆ ಮಾರುಬಿಟ್ಟು ಹೋಗಲಿಕ್ಕೆ ಆತನಿಗೆ ಏನಾಯಿತು? ಇದರಲ್ಲಿ ಬೇರೆ ಏನೋ ಮಾತಿದೆ."

ಹಾರಾಳ ತಾಯಿಯ ಮನದಲ್ಲಿ ಈ ಮಾತು ತಳಕ್ಕೆ ಹೋಗಿ ಕೂತಿತು. "ಅವರು ಮಲಗಿದ್ದರು. ಇದೇ ಮಾತಿಗಾಗಿ ದಿಗ್ಗನೆ ಎದ್ದು ಹೊರಟೇ ಹೋದರು."

ಶರದೂಳ ತಾಯಿ ಪಿಸುಗುಟ್ಟಳು : "ಎಂಥ ಏರುವ ವಿಷಕ್ಕೂ ಇಳಿಸುವ ಮದ್ದು ಇದ್ದೇ ಇದೆ. ಮಾಟ– ಮೋಡಿ ಮಾಡುವ ಎಷ್ಟು ಜೋಯಿಸರನ್ನು ನಾನು ನೋಡಿಲ್ಲ! ಸನಿಯಾ ಓರಝಾ ಜೋಯಿಸ ಗೊತ್ತಿಲ್ಲ? ಅವನಿಗಿಂತ ಹಿರಿದಾದ ಕುಳ ಬೇರೆ ಯಾರು? ಮೊನ್ನೆಯೇ ಆತ ಹೀಗೆ ಮಂತ್ರ ಮಾಡಿ ಬೂದಿ ಹಾರಿಸಿಬಿಟ್ಟ—ಎಂಟು

ವರ್ಷ ಮಾಯವಾಗಿ ಹೋಗಿದ್ದ ಆ ಜಸುವಾನ ಮಗ ಎರಡೇ ದಿನಗಳಲ್ಲಿ ಮನೆಗೆ ಬಂದ, ನೋಡು!"

"ಸನಿಯಾ ಓರಝಾ ಎಲ್ಲಿ? ನಾನೆಲ್ಲಿ? ಅವನ ಬಗೆಗೆ ನಾನೇನು ಬಲ್ಲೆ? "

"ನೀನೆಲ್ಲಿ ಹೋಗಿ ಬರಬೇಕಾದದ್ದೂ ಅಷ್ಟೇ ಇದೆ. ವೆಚ್ಚವೂ ವಿಶೇಷವಿಲ್ಲ. ಏಳು ಅನ್ನದ ಮುದ್ದೆ, ಏಳು ತುಪ್ಪದ ದೀಪ, ಏಳು ದೂರ್ವೆಯ ಕಟ್ಟು."

ಶರದೂಳ ತಾಯಿ "ತಂಗಿ"ಗೆ ತಿಳುವಳಿಕೆ ಕೊಟ್ಟು ವೆಚ್ಚಕ್ಕೆಂದು ಹಣ ಎತ್ತಿಕೊಂಡು ಹೋದಳು.

~*~*~*~

೭

ಚಿಕ್ಕ ಪಧಾನವಾಡೆಯಲ್ಲಿ ನಿತ್ಯದಂತೆ ಸಂಜೆ ಆಯಿತು. ದನಕರುಗಳು ಹಟ್ಟಿಯ ಕಡೆಗೆ ಮರಳಿದವು. ಹಕ್ಕಿ ಗೂಡಿಗೆ ತೆರಳಿದವು. ಗದ್ದೆಯಲ್ಲಿ ಯಾರೋ ಕೂಗಿದರು : "ನವೀನಾ, ಇಲ್ಲಿ ಬಾ." ರೈತನ ಸೊಸೆ ಹಣತೆ ಹೊತ್ತಿಸಿ ಹೊರಗೆ ತುಳಸಿಯ ಕಟ್ಟೆಯ ಮೇಲೆ ಇಟ್ಟು ಹೋದಳು. ಮನೆಯ ಮಾಡುಗಳ ಮೇಲೆ ಸುತ್ತಾಡುವ ಹೊಗೆ ಮುಗಿಲೆತ್ತರಕ್ಕೂ ಎದ್ದಿತು.

ಭಕಡಿ ಪಧಾನ ತನ್ನ ಮನೆ ಬಾಗಿಲಲ್ಲಿ ಎಲೆಯಡಿಕೆ, ಹೊಗೆಸೊಪ್ಪುಗಳ ಅಂಗಡಿ ತೆರೆದಿದ್ದಾನೆ. ಗಿರಾಕಿಗಳು ಭರದಿಂದ ಖರೀದಿ ಮಾಡುತ್ತಿರುತ್ತಾರೆ.

"ಓ ಪಧಾನಾ, ನನ್ನ ಕಾಳು ಅಳತೆಮಾಡಿ ತೆಗೆದುಕೊಳ್ಳಿರಿ."

"ಭಕಡೀ ಕಾಕಾ, ಇದು ನನ್ನ ಕಾಳು."

"ನನಗೆ ಎರಡು ಬಿಲ್ಲಿಯ ಎಲೆ."

"ಆ ಬೆಂಕೀ ಪೆಟ್ಟಿಗೆ ತುಸು ಇತ್ತ ಕೊಡು ಭಕಡೀ."

"ನನಗೆ ತುಸು ಲಗೂ ಕೊಟ್ಟು ಬಿಡಿರಿ. ನನ್ನ ಮಗು ಅಳುತ್ತಲೇ ಇದೆ ಆಗಿನಿಂದ."

"ಅರೇ, ನಿನ್ನ ಮಗು ಅಳಲಿ, ಬಿಡಲಿ. ನನಗೆ ಬಂದದ್ದೇನು?" ಆ ಗದ್ದಲ ಗೊಂದಲದಿಂದ ಭಕಡಿ ಬೇಸತ್ತು ನುಡಿಯುತ್ತಾನೆ.

"ಒಳ್ಳೇ ವ್ಯಾಪಾರಕ್ಕೆಂದು ಬಂದೆ. ವ್ಯಾಪಾರ ಆಗುವ ಹಾಗಿಲ್ಲ. ಕೊಡಿರಿ, ನನ್ನ ಕಾಳು ತಿರುಗಿ ಕೊಡಿರಿ."

"ತೆಗೆ, ತೆಗೆ. ತಕ್ಕೊಂಡು ಹೋಗು ನಿನ್ನ ಕಾಳು. ಯಾರಿಗೆ ಹೆದರಿಸುತ್ತೀ?"

"ಅಲ್ಲ ರಾಯರೇ, ಸ್ವಲ್ಪ ಲಗೂ ವ್ಯಾಪಾರ ಹೊಂದಿಸಿ ಕೊಡಿರಿ. ಎಷ್ಟರದದು? ಮೇಲೆ ಮತ್ತೆ ಸಿಟ್ಟಾಗುವಿರೇಕೆ?"

"ಇದೆಂಥ ಎಲೆ ಕೊಟ್ಟಿರಿ? ಹುಳ ಹಿಡಿದಂತೆ ಕಾಣುತ್ತದೆ."

"ಭಕಡೀ, ಒಂದೆರಡು ಬೀಡಿಯೂ ಕೊಟ್ಟು ಬಿಡು. ಈಗ ಹೋಗಿ ಎತ್ತುಗಳಿಗೆ ಮೇವು ನೀರು ಹಾಕಬೇಕು."

"ಅರೇ, ನನಗಿರುವದು ಎರಡೇ ಕೈ, ನಾಲ್ಕು ಕೈಗಳೇನು ಅಲ್ಲ. ಈ ಮಂದಿಯ ಹತ್ತಿರ ಒದರಾಡಿ ನನ್ನ ಗಂಟಲಂತೂ ಒಡೆದು ಹೋಯಿತು. ನೀ ಹೇಳು ಸನಿಯಾಳ ತಾಯಿ, ನಿನಗೆ ಏನೇನು ಬೇಕು?"

"ಕೊಡಿರಲ್ಲ, ನನಗೆ ಹೊಗೆಸೊಪ್ಪು ಕೊಡಿ."

ಭಕಡಿ ಕಾಳಿನ ಅಳತೆ ಬಿಟ್ಟು ಹಿಂದೆ ಸರಿದು ಎದ್ದು ನಿಲ್ಲುತ್ತಾನೆ. "ಬಾ, ನೀನೇ ಕೊಡುವವರಿಗೆಲ್ಲ ಕೊಟ್ಟು ಬಿಡು" ಅನ್ನುತ್ತಾನೆ.

ಸನಿಯಾಳ ತಾಯಿ ಅಂದಳು : "ಅಂಗಡಿಯಲ್ಲಿ ಇದ್ದವರು ಒಬ್ಬರೇ. ಅವರಿಗೆ ಕೈಗಳಾದರೂ ಎಷ್ಟು? ನನ್ನ ಮಗು ಅಲ್ಲಿ ಅಳುತ್ತಿದೆ. ವ್ಯಾಪಾರಕ್ಕಾಗಿ ಸಂಜೆಯ ಮುಂಚೆಯೇ ಇಂದು ನಾನು ಇಲ್ಲಿ ಇನ್ನೂ ಕೂತಿದ್ದೇನೆ. ಈಗ ಎರಡು ಗಳಿಗೆ ರಾತ್ರೆ ಆಗಿರಬೇಕು."

"ನಿನಗೆ ಸ್ವಲ್ಪವೂ ಸಹನೆ ಎಂಬುವದು ಇಲ್ಲ. ಕುದುರೆಯ ಬೆನ್ನೇರೇ ಬಂದಿದ್ದೀ, ಕೈಯಲ್ಲಿ ಬಡಿಗೆ ಹಿಡಿದುಕೊಂಡು!"

"ಕೊಡಿರಲ್ಲ, ನನ್ನ ಕಾಳಿನ ಬದಲಿಗೆ ಎಲೆ ಅಡಿಕೆ, ಕಾಚು, ಮತ್ತು ಹೊಗೆಸೊಪ್ಪು."

ಭಕಡಿ ಸಿಟ್ಟಿಗೆದ್ದು ಅಂದ : "ಕಾಳು ಪೂರಾ ಒಂದು ಪಾವಲಿಯದೂ ಇಲ್ಲ; ವ್ಯಾಪಾರ ಮಾತ್ರ ಹದಿನೆಂಟು ಬಗೆ ಮಾಡಲಿಕ್ಕೆ ಬಂದಿದ್ದಾಳೆ!"

"ಈ ಹೊತ್ತು ಏಕೆ ಹೀಗೆ ಒದರಾಡುವಿರಿ? ದಿನಾಲು ಕೊಡುತ್ತಿದ್ದಿರಲ್ಲ!"

ಬಡ ಭಕಡಿ ಕೆಸರು ರಾಡಿಯಲ್ಲಿ ನಡೆಯಲಾರ. ಹೊಲ ಗದ್ದೆಯ ಗೈಮೆಯಲ್ಲಿ ಆತ ಪೂರ್ತಿ ನಿರುಪಯೋಗಿ. ಆದ್ದರಿಂದ ಒಂದು ಅಂಗಡಿ ತೆರೆದಿದ್ದಾನೆ. ಬರಜೂ ಪ್ರತಿ ತಿಂಗಳು ಅವರಿಗೆ ಖರ್ಚಿಗೆ ಏನಾದರೂ ಕೊಡುತ್ತಲೇ ಇದ್ದ. ಅಂಗಡಿ ಇಡುವ ಇಚ್ಛೆ ಇದೆಯೆಂದು ಕೇಳಿದೊಡನೆ ತಮ್ಮನಿಗೆ ಅವನು ಸ್ವಲ್ಪ ರೂಪಾಯಿ ಕೂಡ ಕೊಟ್ಟುಬಿಟ್ಟ. ಮನೆಯಲ್ಲಿ ಮೈಗಳ್ಳನಾಗಿ ಕೂತಿರುವದಕ್ಕಿಂತ ಏನಾದರೂ ಮಾಡುವದು ಲೇಸು. ಅಣ್ಣನಿಂದ ಸಿಕ್ಕ ರೂಪಾಯಿಗಳಲ್ಲಿ ಕೆಲವು ನೇತ್ರಮಣಿಯ ಆಭರಣಗಳ ರಿಪೇರಿಗೆ ವೆಚ್ಚವಾದವು. ಉಳಿದವು ಅಂಗಡಿಗೆ ಬಿದ್ದವು. ಅಂಗಡಿಯಲ್ಲಿ ಆಗುವ ನಿತ್ಯದ ಮಾರಾಟದಿಂದ ನೇತ್ರಮಣಿಯ ವೀಳ್ಯದ ವೆಚ್ಚ ತುಂಬುತ್ತಿತ್ತು. ಸೋನಾ–ಮೋತಿ ಮೊದಲಿಗೆ ಬಂದು ಅಂಗಡಿಯಿಂದ ಎಲೆ ಹೊಗೆಸೊಪ್ಪು ಒಯ್ಯುತ್ತಿದ್ದರು. ಆದರೆ ಈಗ ಅವರ ತಾಯಿ ಗದ್ದರಿಸಿಟ್ಟಿದ್ದಾಳೆ : "ನಮಗೆ ಬೇಕಾದದ್ದು ನಿಧಿ ಸಾಹೂನ ಅಂಗಡಿಯಿಂದ ಏಕೆ ಕೊಂಡುತರಬಾರದು? ಯಾವದೊಂದು ದಿನ ಒಂದು ಪಾವಲಿ ಇಲ್ಲವೇ ಚವಲಿಯ ಎಲೆ–ಅಡಿಕೆ ಇಲ್ಲಿಂದ ತಂದರೆ ಇವನ ಹೆಂಡತಿಯ ಸಾವಿರ ಶಾಪ ಕೇಳಬೇಕಾದೀತು."

ಭಕಡಿಯ ಅಂಗಡಿಯ ಕಾರಭಾರ ನಡೆಯುವ ರೀತಿಯಲ್ಲಿ ಲಾಭದ ಮಾತು ಬದಿಗಿರಲಿ, ಬಹುಶಃ ಹಾನಿಯೇ ಹೊರಡುವಂತೆ ಅನಿಸುತ್ತದೆ. ಆದರೂ ಆತ ಅಂಗಡಿ ನಡೆಸುತ್ತಿದ್ದಾನೆ. ಮತ್ತೇನು ಮಾಡ್ಯಾನು?

ಅವನ ಅಂಗಡಿಯಲ್ಲಿ ನೆರೆಯುವ ಗಿರಾಕಿಗಳಲ್ಲಿ ಯಾವದೇ ವ್ಯಾಪಾರ ವ್ಯವಹಾರದ ಅಗತ್ಯ ಇಲ್ಲದಂಥ ಜನವೇ ಹೆಚ್ಚಾಗಿ ಬರುತ್ತದೆ. ಅವರು ಕೇವಲ ಹರಟೆ ಹೊಡೆಯಲಿಕ್ಕೆ ಬರುತ್ತಾರೆ. ಬರಜೂನ ಹೆಸರೆತ್ತಿದರೆ ಅವರಿಗೆ ಉಪ್ಪೂ ಸಪ್ಪಗೆ. ಇಬ್ಬರೂ ಅಣ್ಣ ತಮ್ಮಂದಿರು ಬೇರೆ ಆಗಬೇಕು. ಇಬ್ಬರ ನಡುವೆ ವ್ಯಾಜ್ಯವೇಳಬೇಕು. ಆಗ ನೋಡಬೇಕು. ಬರಜೂ ಹೊರಗೆ ಹೇಗೆ ದೊಡ್ಡಸ್ತಿಕೆ ಮೆರೆಯಿಸುತ್ತಾನೆಂದು! ಮನೆಯ ಜಗಳ, ಅಣ್ಣ-ತಮ್ಮಂದಿರ ಮನಸ್ತಾಪ ಆತ ಹೇಗೆ ಸಂಭಾಳಿಸಿಕೊಂಡು ಹೋಗುತ್ತಾನೋ ನೋಡಬೇಕು. ಇಲ್ಲಿಯೇ ಅವನ ಬುದ್ಧಿ ಪರೀಕ್ಷೆ ಆಗುವದು. ಅಲ್ಲಲ್ಲಿ ಮಧ್ಯಸ್ತಿಕೆ ಮಾಡುತ್ತ ತಿರುಗುತ್ತಾನೆ. ಮನೆಯ ಜಗಳದಲ್ಲಿ ಏನು ಮಾಡುತ್ತಾನೋ ಒಮ್ಮೆ ನೋಡಬೇಕು. ಗಡಿಗೆ-ಮಡಿಕೆ, ದನ-ಕರು, ಹೊಲ-ತೋಟ ಪ್ರತಿಯೊಂದರಲ್ಲೂ ತಮ್ಮನೊಂದಿಗೆ ಪಾಲುಮಾಡಿಕೊಳ್ಳ ಬಹುದೇ?

"ಏ ಮುಂಡೆ ಮಗನೇ, ನಿನ್ನ ಅಂಗಡಿ ಹೇಗೆ ನಡೆಯುತ್ತದೆ?" ಎನ್ನುತ್ತ ಮಿಶ್ರರು ಅಂಗಡಿಯ ಇದುರಿಗೆ ಬಂದು ನಿಂತರು.

ಭಕಡಿ ಮಿಶ್ರರಿಗಾಗಿ ಒಂದು ಚಾಪೆ ತಂದು ಹಾಸುತ್ತ ಅಂದ : "ಕಾಕಾ ಬನ್ನಿ ಕೂತುಕೊಳ್ಳಿ."

ಮಿಶ್ರರು ಕೂತ ಮೇಲೆ ಭಕಡೀ ಎಲೆ ಅಡಕೆ ಸಿದ್ಧಮಾಡಹತ್ತಿದ. ಗಿರಾಕಿಗಳೆಲ್ಲ ಎರಡು ಗಳಿಗೆ ರಾತ್ರಿಯೊಳಗೇ ತಮ್ಮ ತಮ್ಮ ಖರೀದಿ ಮುಗಿಸಿ ಹೋಗುತ್ತಾರೆ. ಅನಂತರ ಅಂಗಡಿಯ ಮುಂದೆ, ಊರ ಉಂಡಾಡಿಗಳ ಹಾಗೂ ಹರಟೆಯ ಹುಂಜರ ಅಡ್ಡೆಗೂಡುತ್ತದೆ.

ಮಿಶ್ರರು ಕೂತಲ್ಲಿಂದ ಅಂದರು : "ನೀನು ಅಂಗಡಿ ಮಾಡಿದ್ದು ಒಳಿತೇ ಆಯಿತು. ನಿನ್ನಿಂದ ಗದ್ದೆ ಕೆಲಸ ಶಕ್ಯವೇ ಇದ್ದಿಲ್ಲ."

ಧರಮದಾಸ ನುಡಿದ : "ನಾವೆಲ್ಲ ಬೆನ್ನಿಗೆ ಬಿದ್ದು ಜಿದ್ದು ಹಿಡಿದಿದ್ದರಿಂದಲೇ ಆಯಿತು ಈ ಅಂಗಡಿ. ಇಲ್ಲವಾದರೆ ಅಂಗಡಿ ಎಲ್ಲಿ? ಭಕಡಿ ಎಲ್ಲಿ?"

ಮಿಶ್ರರು ತುಸು ಮೆಳ್ಳಗಣ್ಣಿನವರಾಗಿದ್ದರು. ಹತ್ತು ಮಂದಿಯಲ್ಲಿ ಕೂತು ಮಾತನಾಡುವಾಗ ಅವರು ತನ್ನನ್ನೇ ನೋಡುತ್ತಿದ್ದಾರೆಂದು ಪ್ರತಿಯೊಬ್ಬನಿಗೆ ಅನಿಸುತ್ತಿತ್ತು. ಇದುರಿಗೆ ನೋಡಿದಾಗ ಅವರ ದೃಷ್ಟಿ ಹಾಯುವದು ಬಲಗಡೆಗೆ. ಎಡಕ್ಕೆ ನೋಡುವಾಗ

ಇದುರಿಗೆ. ಧರಮದಾಸನ ಕಡೆಗೆ ಕೊಂಚ ಕಡೆಗಣ್ಣಿನಿಂದ ನೋಡಿ ಮಿಶ್ರರು ಅಂದರು : "ಒಳ್ಳೆ ಮಾತು ಆಡಿದಿ ನೀನು. ಯಾರ ಅಪ್ಪ, ಅಜ್ಜ ಹೂಳಿಟ್ಟ ಹಣದಿಂದ ಅಂಗಡಿ ಹೂಡಿಲ್ಲ ಇವನು. ಸ್ವತಃ ತಂದೆ ಹಣ ಕೂಡಿಸಿಟ್ಟ; ಮಗ ಅಂಗಡಿ ಇಟ್ಟ."

ಭಕಡಿ ಅಂದ : "ಅಲ್ಲ ಕಾಕಾ, ನಮ್ಮ ದಾದಾ ಒಂದು ಪೈ ಕೂಡ ಬಿಟ್ಟು ಹೋಗಿಲ್ಲ. ಹೋಗುವ ಮೊದಲು ಹೇಳಿಯೇ ಹೋಗಿದ್ದರು. 'ಕೇವಲ ಧರ್ಮವೊಂದೇ ಬಿಟ್ಟು ಹೋಗುತ್ತಿದ್ದೇನೆ' ಎಂದು."

"ಸಾಕು ಸಾಕು. ಎಲ್ಲ ನಾನು ಬಲ್ಲೆ. ಮುದುಕ-ಮುದುಕಿ ಏನಾದರೂ ಕೂಡಿಸಿಟ್ಟು ಹೋಗಿರದಿದ್ದರೆ ಬರಜೂ ನಿನಗೆ ತನ್ನ ಗಳಿಕೆಯಿಂದ ರೂಪಾಯಿ ಎಣಿಸಿ ಕೊಡುತ್ತಿದ್ದನೇ? ಇವೆಲ್ಲ ಹೇಳುವ ಕೇಳುವ ಮಾತುಗಳು."

"ನಿನಗೇನು ಗೊತ್ತು ಕಾಕಾ, ನನ್ನ ಕಣ್ಣೆದುರಿಗೇ ಇಬ್ಬರೂ ಕಣ್ಣು ಮುಚ್ಚಿದ್ದರು. ಆದರೆ ನನಗೇನೂ ಗೊತ್ತಿಲ್ಲ."

"ಹಿಃ ಹಿಃ ಹಿಃ, ನಿನಗೇನು ಗೊತ್ತು ಅಕ್ಕಿ ಯಾವ ದರಕ್ಕೆ ಮಾರುತ್ತದೆಂದು? ನಾನು ಏನು ಛತ್ರದಲ್ಲಿ ಊಟ ಮಾಡುವದಿಲ್ಲ. ನಿನ್ನ ಸ್ಥಿತಿಯೇ ಆಗ ಹಾಗಿತ್ತು. ಅಲ್ಲವೇನೋ ಧರಮಾ?"

ಧರಮಾ ಅಂದ : "ಇಲ್ಲ ರಾಯರೇ, ಬರಜೂನೇ ಕೊಟ್ಟಿದ್ದಾನೆ. ಗುನೇ ಪರಡೇಯಿಂದ ಕಡ ಬೇಡಿ ತಂದು."

"ಎಲಾ, ನನಗೆ ಬುದ್ಧಿ ಕಲಿಸುವೆಯಾ? ನಿನ್ನ ಮಾತು ನಿನ್ನ ಮಟ್ಟಕ್ಕೇ ಇಟ್ಟುಕೊ. ನಾನು ಶಾಮಪಧಾನನನ್ನು ಬಲ್ಲೆ. ಅವನ ಮುದುಕಿಯನ್ನೂ ಬಲ್ಲೆ. ಬರಜೂನಂತೂ ಚಿಕ್ಕಂದಿನಿಂದ ನೋಡುತ್ತಿದ್ದೇನೆ."

"ಏನ್ರೀ, ಎಂದಾದರೂ ನಾವು ಬರಜೂನಿಂದ ಏನಾದರೂ—"

"ಸಾಕು ಸುಮ್ಮನಿರು. ಮಾತಿಗೆ ಮಾತು ಕೊಡಬೇಡ. ನೀನೇನು ಬಲ್ಲೆ? ಹೀಗೆ ನನ್ನೆದುರು ಉದ್ದುದ್ದ ನಾಲಿಗೆ ಸಡಿಲು ಬಿಡಲಿಕ್ಕೆ? ಏನೋ ಭಕಡೀ."

"ಹೌದು ಕಾಕಾ, ಇವರೇನು ಹೇಳಬಲ್ಲರು? ನರನ ಮಾಯೆ ನಾರಾಯಣನೂ ಕಾಣ."

"ಆಯಿತೋ ಇಲ್ಲೋ? ತಿಳುವಳಿಕೆ ಇದ್ದವ ತಿಳಿದೇ ತಿಳಿಯುತ್ತಾನೆ. ಧರಮದಾಸ ಮತ್ತೆ ಮಾಮಲೇದಾರನಂತೆ ಮಾತಾಡಲು ಬಂದಿದ್ದಾನೆ. ನೇಗಿಲು ಹಿಡಿದೂ ಹಿಡಿದೂ ಗಂಜಿಯ ತಿಳಿ ಕೂಡ ಪಡೆದು ಬರಲಿಲ್ಲ ಹಣೆಯಲ್ಲಿ—ಅಂಥವ ನಮ್ಮ

ಸರಿಸಮವಾಗಿ ಮಾತಾಡಲು ಬರುತ್ತಾನೆ. ಈ ಯುಗವೇ ಅಂಥಹದು. ಚಿಕ್ಕಮಂದಿ ದೊಡ್ಡವರಾಗುತ್ತಿದ್ದಾರೆ."

"ಇಲ್ಲ ಒಡೆಯಾ, ನೀವು ಅಂದ ಮೇಲೆ ಆಯಿತು." ಧರಮಾ ಬಹಳ ಸಂಕೋಚ ಪಟ್ಟುಕೊಂಡು ಆಡಿದ.

"ಸುಮ್ಮನಿರೋ ಉದ್ಧಟ; ಆಯಿತು. ಬರಜೂ ಪಧಾನ ತನ್ನ ಕೈಯಿಂದಲೇ ಕೊಟ್ಟ. ಆದರೇನು? ಇಡೀ ಆಸ್ತಿಯ ಲಾಭ-ಹಾನಿ ಎಲ್ಲ ಅವನೇ ಭೋಗಿಸುತ್ತಾನೆ. ಅದರೊಳಗಿಂದ ಒಂದೆರಡು ನೂರು ರೂಪಾಯಿ ಕೊಟ್ಟರೆ ಏನು ದೊಡ್ಡ ಮಾತು?"

ಛಕಡಿ ಅಂದ : "ಕಾಕಾ, ಇವನದೇನು ಕೇಳುತ್ತೀರಿ? ಇವನು ನಮ್ಮ ಮನೆಯ ಮಾತೇನೂ ಅರಿಯ."

ಧರಮದಾಸ ಒಬ್ಬ ಉಡಾಳ, ಹರಟೆಯ ಮಲ್ಲ. ನಿತ್ಯ ಪೆಟ್ಟು ತಿಂದರೂ ತನ್ನ ಬಕವಾದ ಬಿಡುವಾತನಲ್ಲ. ಇಂಥವರಿಗಾಗಿಯೇ "ಲತ್ತೆಗುಳಿ" ಎಂಬ ಶಬ್ದ ಉಂಟಾಗಿದೆ. ಆತ ಮಿಶ್ರರ ಇದಿರು ಏನೂ ಆಡದಾದ. ಆದರೆ ಛಕಡಿಯ ಕಡೆಗೆ ಹೊರಳಿ ಹೇಳಿದ : "ಹಾಂ, ಹಾಂ ಗೊತ್ತಾಯಿತು. ನಿಮಗೆಲ್ಲರಿಗೂ ಗೊತ್ತಿದೆಯಲ್ಲವೇ! ಆದ್ದರಿಂದಲೇ ದೇವರೊಂದಿಗೆ ದೇವರ ಮಣೆಯೂ ನೈವೇದ್ಯ ನುಂಗಲು ಕೂತಿದೆ. ಅಂಗಡಿ ಮಾಡಿರುವಿ. ಆದರೆ ಇದರಿಂದ ಬಂಡವಾಳ ಕೂಡ ಹುಟ್ಟಲಿಕ್ಕಿಲ್ಲ ನೋಡು."

ಛಕಡಿ ಕಾವೇರಿ ಕೆಂಪಾದ. " ಓಡು, ಓಡು. ಇಲ್ಲಿ ನಿಲ್ಲಬೇಡ. ಇಲ್ಲಿ ಕಾಕಾಜಿ ಕುಳಿತಿದ್ದಾರೆ. ಅವರೆದುರು ಶೋಭೆ ಬೇಡ."

"ಇದೇನು ಬಲು ಜೋರಿನಿಂದ ಮಾತಾಡುವಿ? ನನಗೇನು ಹೊಡೆಯುವಿಯೋ?" ಧರಮಾ, ಬಾವರಿ ಜಾತಿಯವನಾಗಿದ್ದ. ಅವನದು ಹೊಲ ಮನೆ ಏನೂ ಇದ್ದಿಲ್ಲ. ಹಣಕಾಸು ಇದ್ದಿಲ್ಲ. ಯಾರೂ ಅವನನ್ನು ಮೋಸ ಮಾಡಿ ಠಕ್ಕಿಸಿ ಸುಲಿಯುವುದು ಸಾಧ್ಯವೇ ಇದ್ದಿಲ್ಲ. ಹೆಚ್ಚೆಂದರೆ ಒಂದೆರಡು ಏಟು ಬಿಗಿಯಬಹುದು ಯಾರಾದರೂ, ಅದರಿಂದ ಆಗುವ ನಷ್ಟವೇನು? ಚಿಕ್ಕಂದಿನಿಂದಲೂ ಆತ ಅದೆಷ್ಟು ಪೆಟ್ಟು ಬಯ್ಗಳನ್ನು ತಿಂದು ತಿಂದು ಬೆಳೆದಿದ್ದನೋ! ಯಾರದೇನು ಕಳುವು-ಗಿಳುವು ಮಾಡಲಿಲ್ಲ ಜೇಲಿಗೆ ಒಯ್ದು ಹಾಕಲಿಕ್ಕೆ.

ಆದರೆ ಇದೇನು? ಮಿಶ್ರರ ಮುಂದೆ ಒಬ್ಬ ಯಕಃಶ್ಚಿತ 'ಬಾವರಿ' ಹೀಗೆ ಸೊಕ್ಕಿನ ಮಾತು ಆಡುವುದೇ? ಆದರೆ ಧರಮಾ ಒಬ್ಬ ಮುತ್ಠಾಳ. ಮಿಶ್ರರೇ ಅವನನ್ನು ಹತ್ತೆಂಟು ಸಲ ಹೊಡೆದು ಆ ಮಾತು ಕಂಡುಕೊಂಡಿದ್ದರು. ಮಿಶ್ರರು ಕಣ್ಣು ಕೆಕ್ಕರಿಸಿ ಅಂದರು : "ಏನೋ ಧರಮಾ, ಈ ಹೊತ್ತು ನಿನ್ನ ಬೆನ್ನಿಗೆ ತಿಮಿರೆದ್ದಿದೆಯೋ ಏನು?"

ಧರಮಾನಿಗೂ ಹಿಂದಿಲ್ಲ, ಮುಂದಿಲ್ಲ. ಹೆಚ್ಚೆಂದರೆ ಒಂದೆರಡು ಪೆಟ್ಟು ಹೊಡೆಯಬಹುದು. ಇಷ್ಟಕ್ಕೆ ಹೆದರುವುದೇಕೆ? ಆದರೂ ಅರೆರಾತ್ರಿಗೆ ಪೆಟ್ಟು ತಿನ್ನುವದಾದರೂ ಏಕೆ? ಆದ್ದರಿಂದ ಆತ ಎದ್ದು ಅಂದ : "ಹಾಂ ಗೊತ್ತು. ಅದೊಂದೇ ಬೆದರಿಕೆ ನಿಮ್ಮ ಕೈಯಲ್ಲಿದೆ. ನಾಲ್ಕೈದು ಏಟು ಏರಿಸಿಬಿಡುವಿರಿ ಅಥವಾ ಊರಿಂದ ಹೊರಗೆ ಅಟ್ಟಿ ಬಿಡುವಿರಿ. ಇನ್ನೇನು ಮಾಡುವಿರಿ? ನಾವು ಕೂಲಿಯಾಳುಗಳು. ನಮ್ಮ ಕೈಕಾಲು ನಡೆಯುವವರೆಗೂ ನಮ್ಮ ಹೊಟ್ಟೆ ಬರಿದಾಗಿರುವುದಿಲ್ಲ. ನಮ್ಮ ಮನೆಗೆ ನೀವು ಕೊಡುವ ಧನ-ದೌಲತ್ತು ಕೊಡಬೇಡಿ. ಚಪ್ಪರದ ಮೇಲೆ ಒಂದು ಹೀರೆ ಬಳ್ಳಿ ಹಬ್ಬಿದರೂ ಅದನ್ನು ನೀವು ಇಡಗೊಡುವುದಿಲ್ಲ. ಇಲ್ಲವಾದರೆ ಈ ಊರಿಂದಲೇ ಕಂಬಿ ಕಿತ್ತು ಬಿಡುತ್ತೇವೆ. ಎಲ್ಲಿ ಹೋಗುವೆವೋ ಅಲ್ಲಿ ಕೂಲಿ ಕೆಲಸ ಮಾಡಿ ಉಣ್ಣುವೆವು."

"ಒಳ್ಳೇದು, ಒಳ್ಳೇದು. ಹೋಗು ರಾತ್ರೆಯಾಯಿತು. ಬಟ್ಟೆ ಮೈಲಿಗೆಯಾಗುತ್ತದೆ. ಅದಕ್ಕೇ ಬಿಟ್ಟಿದ್ದೇನೆ. ನಾಳೆ ನೋಡಿಕೊಳ್ಳುತ್ತೇನೆ."

"ಹತ್ತಾರು ಸಲ ನೋಡಿಕೊಂಡಿದ್ದೀರಲ್ಲ, ನಾಳೆ ಮತ್ತೆ ಹೆಚ್ಚೇನು ನೋಡುವಿರಿ" ಎನ್ನುತ್ತ ಧರಮದಾಸ ಹೊರಟುಹೋದ.

ಮಿತ್ರ ಮಹಾಶಯರು ಅಂದರು : "ನೋಡಿದೆಯಾ ಭಕಡೀ, ಆ ಕೀಳು ಮಂದಿಯ ಬಾಯಿಗೆ ಯಾರು ಬೀಳುತ್ತಾರೆ? ನಿನ್ನ ಅಣ್ಣ ಬರಜೂನೇ ಇದಕ್ಕೆ ಯೋಗ್ಯ. ಇಲ್ಲವಾದರೆ ಧರಮದಾಸನಂತಹ ಆಸಾಮಿ—ತಂದೆಯ ಹೆಸರು ಕೇಳಿದರೆ ಹೇಳಲಾರದ ಪಾಪಿ —ಅವನದೆಂಥ ದರ್ಪ ನೋಡು—ನನ್ನ ಮೋರೆಗೆ ಹೀಗೆ ಮಾತಾಡಿ ಹೋಗಲಿಕ್ಕೆ! ಈ ಜನಕ್ಕೆ ಏನು ಬೇಕು ಗೊತ್ತೆ? ಎದ್ದಾಗ ಕೂತಾಗ ಒಂದೊಂದು ಒದೆತ ಬಿದ್ದರೆ ಸಾಕು. ಎಲ್ಲ ಸರಿಯಾಗಿ ಬಿಡುತ್ತಾರೆ. ಬರಜೂ ಪಧಾನ ಈ ಮಂದಿಯ ಜೊತೆಗೆ ಕೂಡ್ರುತ್ತಾನೆ. ಇವರಿಗೆ ದುರುಪದೇಶ ಮಾಡುತ್ತಾನೆ. ಇದರಿಂದ ಇವರ ತಲೆ ತಿರುಗದೇ ಉಂಟೇ? ಅದೇ ಆ ಧನ ಖಟಾಯಿಯ ಖಟ್ಲೆಯೇ ನೋಡು. ಅವನೇನು ಸುಳ್ಳು ದಾವೆ ಮಾಡಿದನೇ? ಎಲ್ಲರಿಗೂ ಸುಳ್ಳು ಸುಳ್ಳು ಎನ್ನುತ್ತ ತಿರುಗಾಡಿದ. ನಾನು ಎಷ್ಟೆಲ್ಲ ಹುಡುಕಿದೆ, ಅವನ ಬಗ್ಗೆ ನನಗೆ ಒಂದು ಸಾಕ್ಷಿಯೂ ಸಿಗಲಿಲ್ಲ. ಎಲ್ಲರೂ ಸುಳ್ಳುಗಾರರು. ನೀನು ಮಾತ್ರ ಸತ್ಯವಂತ. ಸುಳ್ಳಾಡದ ಒಬ್ಬನಾದರೂ ಇದ್ದಾನೆಯೇ? ಯಾರ ನಾಲಿಗೆಗೆ ಎಲುಬು ಇದೆ?"

"ಎಲ್ಲರೂ ಅನ್ನುತ್ತಾರೆ : 'ನಮ್ಮ ಅಣ್ಣ ಸುಳ್ಳಾಡುವದಿಲ್ಲ' ಎಂದು."

"ಹಾಂ, ಇದೆಲ್ಲ ಅಜ್ಞಾನಿಗಳ ಕಣ್ಣಿಗೆ ಮಣ್ಣು ಹಾಕುವ ಮಾತು. ನನ್ನಿಂದ, ನಿಮ್ಮಿಂದ ಆ ಮಾತು ಬಚ್ಚಿಟ್ಟಿದ್ದುಂಟೇ? ಮನೆಯಲ್ಲಿ ನೀನೇ ನೋಡುತ್ತಿರುವಿ. ನಿನ್ನೊಂದಿಗೆ ಒಂದು ಬಗೆಯ ಮಾತಾದರೆ ಹೆಂಡತಿಯೊಂದಿಗೆ ಇನ್ನೊಂದು ಬಗೆ."

"ನನಗೇನೂ ಗೊತ್ತಿಲ್ಲವೆಂದು ಆ ಧರಮಾ ಬಾವರಿ ನನಗೆ ಕಲಿಸಬೇಕೇ? ಮೇಲೆ ಮತ್ತೆ ಹೇಳುತ್ತಾನೆ—ದೇವರ ಸಂಗಡ ದೇವರ ಮಣೆಯೂ ನೈವೇದ್ಯ ನುಂಗುತ್ತದಂತೆ."

"ಅವನ ಶೀಲ ಮಹಾ ಕೆಟ್ಟದ್ದು. ಮೈಮೇಲೆ ಬಟ್ಟೆ ಇದ್ದಿದ್ದಕ್ಕೇ ಪಾಪಿ ಬದುಕಿದ. ಇಲ್ಲವಾದರೆ ಬೆನ್ನು ಕೆಂಪಗಾಗುತ್ತಿತ್ತು."

ಧರಮಾ ಬಾವರಿಯ ಮಾತಿನಿಂದ ಭಕಡಿಗೆ ಅಪಮಾನವಾಯಿತು. ಅವನ ಕೆನ್ನೆ-ಬೆನ್ನು ಯಾವದೂ ಕೆಂಪು-ಕಪ್ಪು ಆಗಿದ್ದರೆ ಭಕಡಿಯ ಮನಸ್ಸು ಹಿಗ್ಗುತ್ತಿತ್ತು. ಅವನು ಮಿತ್ರರ ಮಾತು ಕೇಳಿ ಆಡಿದ : "ನಾಳೆ ಅವನನ್ನು ಸ್ವಲ್ಪ ನೋಡಿಕೊಂಡರೆ ಆಗಲಿಕ್ಕಿಲ್ಲವೇ ಕಾಕಾ?" ನಾಳೆ ಮುಂಜಾನೆ ಧರಮಾನನ್ನು ಥಳಿಸುವ ಕಲ್ಪನೆ ಮಾಡಿಯೇ ಭಕಡಿ ಮನಸ್ಸಿನಲ್ಲಿ ಹಿಗ್ಗಿದ.

ಮಿಶ್ರರು ಅಂದರು : "ನೀನು ನನಗೆ ತುಸು ನೆನಪು ಮಾಡಿ ಕೊಡಬೇಕು. ನಾಳೆ ತುಸು ನನ್ನ ಮನೆಯ ಕಡೆಗೆ ಬಂದು ಹೋಗು. ಆತ ಸಾಮಾನ್ಯಕ್ಕೆ ಹದಕ್ಕೆ ಬರುವವನಲ್ಲ. ಅವನಿಗೆ ಬೇಕು ಎತ್ತಿನ ಹಗ್ಗ, ತೆಂಗಿನ ಮರ ಮತ್ತು ಬೆತ್ತದ ಛಡಿ. ಆಗಲೇ ಅವನಿಗೆ ತೃಪ್ತಿ. ಧರಮಾ ಒಂದು ತಾಸಿನಲ್ಲಿ ಮೊಳಕಾಲು ಊರುತ್ತಾನೆ. ಆದರೆ ನಿನ್ನ ಅಣ್ಣನಿಗೆ ಹಣ್ಣು ಮಾಡುವದು ಕಷ್ಟ. ಈ ಹೊತ್ತು ಒಬ್ಬನನ್ನು ಹೊಡೆದು-ಬಡೆದು ಹದಕ್ಕೆ ತಂದು ಸರಿ ಮಾಡುವಿ. ಆದರೆ ನಾಳೆ ನಿನ್ನ ಅಣ್ಣನ ಬೋಧನೆ-ಪ್ರಚೋದನೆಗಳಿಂದ ಇನ್ನೂ ಮೂರು ಜನ ಬಯಲಿಗೆ ಬರುತ್ತಾರೆ. ಅವರಿಗೇನು ಮಾಡಬೇಕು? ಅದಕ್ಕೆ ಉಪಾಯವೇನು? ಹೇಳು ನೋಡೋಣ. ಕೀಳು ಮನುಷ್ಯನಿಗೆ ಬೋಧ ಕೊಟ್ಟು ಅವನಿಂದ ತಮ್ಮನ ಅಪಮಾನ ಮಾಡಿಸುವದೆಂದರೇನು? ಇಲ್ಲವಾದರೆ ದೇವರು ದೇವರ ಮಣೆಯ-ನೈವೇದ್ಯ ಇವೆಲ್ಲ ಮಾತು ಆ ಘಟಿಂಗ ಪರದೇಸಿಗೆ ಹೇಗೆ ಗೊತ್ತಾಗಬೇಕು? ಇದು ಬರಜೂನದೇ ದುರ್ಬೋಧನೆ. ನೀನು ನನಗೆ ಒಳ್ಳೇ ಬುದ್ಧಿ ಹೇಳಬಹುದು."

"ಎಲ್ಲ ಗೊತ್ತಾಯಿತು ಬಿಡಿ, ಕಾಕಾ. ನನ್ನ ಹೆಂಡತಿಯ ಮಾತು ಹಚ್ಚಿಕೊಂಡವನೇ ಅಲ್ಲ ನಾನು. ಆದರೆ ಹೆಂಡಂದಿರ ಮಾತು ಇಂಥಂಥ ಕುಚೋದ್ಯವಲ್ಲ. ಕೇಳಲೇಬೇಡಿ. ಬಹಳ ದಿನಗಳಿಂದ ಆಕೆ ಒಂದೇ ರಾಗ ಎಳೆಯುತ್ತ ಬಂದಿದ್ದಾಳೆ—'ಬೇರೆ ಅಡಿಗೆ ಮಾಡೋಣ, ಬೇರೆ ಒಲೆ ಹೂಡೋಣ—' ಅವರಿಗೆ ಮೂರು ಮಕ್ಕಳು. ಅವರ ಲಗ್ನಕಾರ್ಯಗಳ ಖರ್ಚೆಲ್ಲ ಇದೇ ಮನೆಯಿಂದ ಆಗುತ್ತದೋ, ಹೊರಗಿನಿಂದಲೋ? ನಮಗೇನು ಬಿದ್ದಿದೆ ಹೆರವರ ಹೊಟ್ಟೆ ಹೊರಲಿಕ್ಕೆ. ನಾವು ಕಷ್ಟ ಪಡುವದು?"

"ಹೆರವರು" ಈ ಮಾತು ಬಾಯಿಂದ ಹೊರಟೊಡನೆ ಭಕಡಿಗೆ ಏನೇನೋ ಅನಿಸಿತು. ಆದರೆ ಹೆರವರಲ್ಲದೇ ಮತ್ತಾರು? ನನ್ನವರೇ? ಈಗಿನ ಕಾಲದಲ್ಲಿ ಎಲ್ಲರಿಗೂ

ತಮ್ಮತಮ್ಮದೇ ತಮಗೆ ಭಾರಿ ಬ್ರಹ್ಮಾಂಡ. ಇವಳು ಈ ಅಂಗಡಿಯಿಂದ ವೀಳ್ಯ ತಂದು ತಿಂದರೆ, ಅವಳು ಬೇರೆ ಎಲ್ಲಿಂದಲೋ ತಂದು ತಿನ್ನುವದು. ಇಬ್ಬರೂ ಅಕ್ಕತಂಗಿಯರಲ್ಲಿ ಒಳ್ಳೇ ಮಾತುಕತೆ ನಡೆಯುವದು ಒಂದು ಕನಸೇ ಸರಿ. ಆಗುವ ಮಾತ್ತೆಲ್ಲ ಜಗಳದ್ದೇ. ಇಬ್ಬರು ಅಣ್ಣ ತಮ್ಮಂದಿರಲ್ಲೂ ಮನಸ್ಸು ಸ್ವಚ್ಛವಿಲ್ಲ. ಮನೆಯ ವೆಚ್ಚವೆಲ್ಲ ಅಣ್ಣನ ಕೈಯಲ್ಲಿ. ಅವನೂ ಒಂದು ದಿನವಾದರೂ ತಮ್ಮನನ್ನು ಕರೆದು ಲೆಕ್ಕ ಕಾಣಿಸಿದ್ದುಂಟೇ? ತಿಳಿಸಿದ್ದುಂಟೇ? ಒಳಗೆಲ್ಲ ಕೃತ್ರಿಮ, ಹೊರಗಿನ ಮುಖೋಪಚಾರದ ಬನ್ನಣೆಯಿಂದ ಆಗುವದೇನಿದೆ?

ಮಿಶ್ರರು ಶೆರೆ ನೋಡಿ ಚಾಣ ಹಾಕಿದರು : "ಹೆಂಗಸರ ಮಾತು ನೀನೆಂದಿಯಲ್ಲ, ಅದು ಸರಿಯೇ—ಅವರೇ ಮನೆಯ ಲಕ್ಷ್ಮೀದೇವಿ, ತಮ್ಮಾ ಲಕ್ಷ್ಮೀದೇವಿ. ಮನೆಯ ಸ್ಥಿತಿಗತಿ ನಮಗೇನು ಗೊತ್ತಾಗುತ್ತದೆ? ನಾವು ಹೊರ ಹೊರಗೇ ಇರುತ್ತೇವೆ. ಮನೆ ನಡೆಯಿಸಿಕೊಂಡು ಹೋಗುವವರು ಅವರೇ. ಹೆಂಗಸರ ಮಾತು—ಎಂದು ಮೂದಲಿಸುವದು ಧರಮದಾಸನಂಥವರ ಮಾತು. ಅಂಥ ಮಾತಿನಿಂದ ಏನು ಆಗುವದಿದೆ, ಹೋಗುವದಿದೆ? ನಮ್ಮ ವಾಸೂನ ತಾಯಿಯೂ ನನಗೆ ಹೀಗೇ ಬೇರೆ ಆಗಲು ಬಹಳ ಹಿಂದಿನಿಂದಲೇ ಹೇಳುತ್ತಲೇ ಇದ್ದಳು. ಹೆಣ್ಣಿನ ಮಾತು—ಎಂದು ನಾನು ಮೊದಮೊದಲು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಆದರೆ ಬೇರೆ ಆದಮೇಲೆ ದೇವರ ದಯೆಯಿಂದ ಈ ಗೃಹಸ್ಥಿಕೆ ಚೆನ್ನಾಗಿಯೇ ನಡೆಯುತ್ತಿದೆ. ನನ್ನ ತಮ್ಮನಂತೆ ನಾನೂ ಬೇರೆಯವರಲ್ಲಿ ಅಡಿಗೆ ಮಾಡುತ್ತ ಇಲ್ಲವೇ ಬಿಕ್ಕೆ ಬೇಡುತ್ತ ಅಲೆದಾಡುತ್ತಿಲ್ಲವಲ್ಲ?"

"ಇದೇನು ಕಾಕಾ, ಹೀಗೆನ್ನುವಿರಿ? ತಾವು ಬಿಕ್ಕೆ ಬೇಡಿದರೆ ನಾವು ಇರುವದಾದರೂ ಏತಕ್ಕೆ?"

"ಹಿಃ, ಹಿಃ, ಹಿಃ. ನೀನಿನ್ನೂ ಹುಡುಗ. ಏನೇನೂ ತಿಳಿಯದು ನಿನಗೆ. ನೀನೇಕೆ ಬಿಕ್ಕೆ ಬೇಡಬೇಕು? ನಿನ್ನದು ಹತ್ತು ಎಕರೆಯ ಜಮೀನು ಇದೆ. ಎತ್ತುಗಳಿವೆ. ಏಳು ಪೀಳಿಗೆ ಉಳಿದು ಬಂದ ಮನೆ ಇದೆ. ಏನೇ ಹೇಳು ಭಕಡೀ, ನಿನ್ನದು ಶುದ್ಧ ಅಪ್ರಬುದ್ಧತನ ನೋಡು."

"ನಿಮಗೆಲ್ಲ ಗೊತ್ತು ಕಾಕಾ, ಈ ಹೊಲಮನೆಯ ವಿಚಾರ ನನಗೆ ಅವನು ಏನೂ ತಿಳಕೊಳ್ಳಲಿಕ್ಕೇ ಬಿಡುವದಿಲ್ಲ."

ಮಿಶ್ರರು ಖಿನ್ನರಾಗಿ ಅಂದರು : "ನಿನಗೆ ಯಾರು ಬಿಡಬೇಕು? ನೀನೇನು ಮೊಲೆಯುಣ್ಣುವ ಹಸುಗೂಸೇ?"

ಭಕಡಿ ಅಂದ : "ಹಾಗಲ್ಲ, ಕಾಕಾ, ನಮ್ಮ ಆ ಚಂದ್ರಾ ಸಿಯಲ ಹೇಳುವಂತೆಯೇ ಮಾಡಿಬಿಡುತ್ತೇನೆ. ಐದು ಎಕರೆ ಗದ್ದೆಯನ್ನು ಈ ವರ್ಷ ಬೇರೆ ಇರಿಸುತ್ತೇನೆ. ಮುಂದೆ ಪುಷ್ಯದಲ್ಲಿ ಅರ್ಧ ಹೊಲದ ಪೈರು ಕೊಯ್ದು ಬೇರೆ ಬಣವೆ ಹಾಕಿಸುತ್ತೇನೆ."

ಚಂದ್ರೂ ಅಂದಿದ್ದ : "ಅಲ್ಲೋ, ನಿನಗೆ ಈ ಬುದ್ಧಿ ಯಾರು ಕಲಿಸಬೇಕು? ಇದೇನು ನಿನ್ನ ಜಮೀನು ಅಲ್ಲವೋ? ಈ ಕೂಲಿಯಾಳು ನಿನ್ನ ಹಣದಿಂದಲೇ ದುಡಿಯುವದಿಲ್ಲವೋ? ಅಣ್ಣ ನೋಡುತ್ತಾನೆ, ಮಾಡುತ್ತಾನೆ. ಅವನ ಜತೆಗೆ ಯಾವದೇ ಕೆಲಸದಲ್ಲಿ ಅಲ್ಲಲ್ಲಿ ತುಸು ಕೈಕೊಟ್ಟು ಇದ್ದರೆ ಸಾಕು. ಮುಂದಿನ ಪಾಲಿಗೆ ಕೂಡ ಮೂರು ನಾಲ್ಕು ಎಕರೆ ಗದ್ದೆ ಕೊಡುತ್ತಾರೆ. ಒಬ್ಬನೇ ಹೂಡುವ ಬಿತ್ತುವ ರೈತ. ತಾನೊಬ್ಬನೇ ಉಣ್ಣುತ್ತಾನೋ, ಗದ್ದೆಯ ಒಡೆಯರಿಗೂ ಏನಾದರೂ ಕೊಡುತ್ತಾನೋ?"

ಚಂದ್ರೂ ಜಾತಿಯಿಂದ "ಸಿಯಲ" ಆದರೇನು? ಅವನಿಗೆ ಬುದ್ಧಿ ಇದೆ. ಭಕಡಿ ಹೆಂಡತಿಯನ್ನು ಕೇಳಿದ. ಆಕೆ ಅಂದಳು : "ಮತ್ತೇನು ಕೇಳುವದು? ಆ ಬಣವೆ ಹಾಕುವ ಜಾಗವಿದೆಯಲ್ಲ, ಅದಕ್ಕೆ ತಾಗಿಯೇ ನೆಲ ಸರಿಮಾಡಿಸಿ ನಿಮ್ಮದೊಂದು "ಕಳ" ಮಾಡಿಸಿಕೊಳ್ಳಿ, ನಿಮ್ಮ ಬಣವೆ ಹಾಕಿಸಲಿಕ್ಕೆ ನಮ್ಮ ಪಾಲಿನ ಹೆಸರು-ಕಾಳು ಅಲ್ಲಿಯೇ ಒಕ್ಕಿಸಿಕೊಳ್ಳೋಣ."

"ಇಷ್ಟು ದಿನಗಳನಂತರ ಇಂದು ನಿನ್ನಿಂದ ಒಂದು ಚಾತುರ್ಯದ ಮಾತು ಕೇಳಿದೆ. ಇದೇ ಸರಿ. ಇದರಲ್ಲಿ ಏನೂ ಮಾನಾಪಮಾನ ಒಲೆ ಬೇರೆ ಹೂಡುವ ಪ್ರಶ್ನೆಯೇ ಇಲ್ಲ. ಅಣ್ಣ ಸರಿಯಾಗಿದ್ದರೆ ಅವನಿಗೂ ಇದು ಸರಿಕಾಣಲಿಕ್ಕಿಲ್ಲವೇ? ಇದರಲ್ಲಿ ಯಾರಿಗೆ ಏನು ಹೇಳುವದುಂಟು? ಇದು ಸರಿಯಾದ ಮಾತು. ಚಂದ್ರಾ ಸಿಯಲ ಒಣಸೌದೆ ಹಿಂಡಿ ನೀರು ಹನಿಸುವ ಮನುಷ್ಯ. ಇಲ್ಲವಾದರೆ ಅವನಿಗೇನು ಬರೆ ಪುಕ್ಕಟೆ ಇಟ್ಟುಕೊಂಡದ್ದೇ ಆಳಾಗಿ?"

ಇದೇ ಸಮಯ ಚಂದ್ರಾ ಸಿಯಲ ಎಲ್ಲಿಂದಲೋ ಬಂದು ತಲುಪಿದ. ನಾಲ್ಕು ಮೊಳ ಉದ್ದ ಗೇಣ್ಣುಗೇಣ್ಣಾದ ಬಿದುರಿನ ದೊಣ್ಣೆಯನ್ನು ಬಾಗಿಲ ಸಂದಿಯಲ್ಲಿ ಅಡಗಿಸಿಟ್ಟು ಆತ ಮಿಶ್ರರಿಗೆ ಉದ್ದಂಡ ನಮಸ್ಕಾರ ಹಾಕಿದ. ಮಿಶ್ರರು ಅವನ ಕಡೆಗೆ ನೋಡುತ್ತಾ ಅಂದರು : "ಅರೇ ಇವನಿಗೆ ನೂರು ವರ್ಷ ಆಯುಷ್ಯ. ಏನೋ ಚಂದ್ರಾ, ಹೇಗೆ ಬಂದುಬಿಟ್ಟೆ?"

ಚಂದ್ರಾ ಮಿಶ್ರರ ದೂತ. ಯಾರು ಎಲ್ಲಿ ಸೀನಿದರು, ಯಾರು ಎಲ್ಲಿ ಕೂತರು, ನಕ್ಕರು ಇದೆಲ್ಲ ಸಮಾಚಾರ ತಂದು ಮಿಶ್ರರ ಕಿವಿ ತುಂಬುವ ಕೆಲಸ ಅವನದು. ಶಿವನ ದರ್ಶನಕ್ಕೂ ಮೊದಲು ಜನ ಬಸವನ ಬೆನ್ನ ಮೇಲೆ ಕೈ ಆಡಿಸುತ್ತಾರೆ. ವಿಷ್ಣುವಿನ ದರ್ಶನಕ್ಕೆ ಮುಂಚೆ ಗರುಡನನ್ನು ಪೂಜಿಸುತ್ತಾರೆ—ಅದೇ ರೀತಿ ಹರಿಮಿಶ್ರರ ಕೈ ನಿಲುಕುವ ಮೊದಲು ಜನರು ಚಂದ್ರೂನ ಕೈಯೊಳಗೆ ಆಡಬೇಕು. ಬರಜೂ ಅನ್ನುವಂತೆ ಈ ಮಾತು ಬರೇ ಬಸವ ಗರುಡ ಮತ್ತು ಚಂದ್ರಾ ಸಿಯಲ ಇವರ ಕುರಿತೇ ಮಾತ್ರವಲ್ಲ, ಪ್ರತಿಯೊಬ್ಬ ವ್ಯಕ್ತಿಗೂ ಈ ಮಾತು ಅನ್ವಯಿಸುತ್ತದೆ. ರಾಜರು ಮಹಾರಾಜರು,

ಅಧಿಕಾರಿ ಆಫೀಸರುಗಳು ಇವರಿಗಿಂತ ಮೊದಲು ಇವರ ಪರಿವಾರದ ಕಿರುಕುಳದ ನೌಕರರಿಗೂ, ಸಿಪಾಯರಿಗೂ ಆರಾಧನೆ ಆಗಲೇಬೇಕು.

ಚಂದ್ರಾ ಕಿರಿನಗೆ ಕಿರಿಯುತ್ತ ಅಂದ : "ಈ ಹೊತ್ತಿನ ಸುದ್ದಿ ಭಾರಿ ವಿಶೇಷ. ಸ್ವಲ್ಪ ಈ ಕಡೆ ಬಂದರೆ ಹೇಳುತ್ತೇನೆ."

"ಎಲೋ ಅತ್ತ ಕಡೆಗೆ ಏಕೆ ಬರುವದು? ಭಕಡೀ ನನ್ನ ಮಗ ಇದ್ದಂತೆ. ಅವನಿಂದ ಏನು ಭಯ? ಅವನೇನು ಯಾರಿಗಾದರೂ ಹೇಳಲು ಹೋಗುತ್ತಾನೆಯೇ?"

"ರಾಯರೇ, ಆ ಸದೇಯಿ ಬಾರೀಕ ಇದ್ದಾನಲ್ಲ. ಅವನ ಅಳಿಯ ಕಳೆದ ಎರಡು ವರ್ಷಗಳಿಂದ ಕಲಕತ್ತೆಯಲ್ಲಿಯೇ ಇದ್ದಾನೆ. ಸದೇಯಿಯ ಮಗಳು ಇಲ್ಲಿ ತವರಿನಲ್ಲಿಯೇ ಇದ್ದಾಳೆ. ಕಳೆದ ವರ್ಷದ ವೃತ್ತಾಂತ ತಮಗೆ ಗೊತ್ತೇ ಇದೆ. ಎಲ್ಲಿ ಮಾಯಮಾಡಿಬಿಟ್ಟರೋ ಏನೋ! ಪತ್ತೆ ಆಗಲೇ ಇಲ್ಲ. ಈಗ ಈ ವರ್ಷ ನೋಡಿರಿ. ಅವರ ಮನೆಯ ಹಿತ್ತಲ ಕಡೆಗೆ ಬಾಳೆಯ ಹೊಂಡದಲ್ಲಿ ಒಂದು ಕೂಸು 'ಕ್ಯಾಂs ಕ್ಯಾಂs' ಮಾಡುತ್ತಿದೆ."

"ಆಂ ಏನೆಂದೆ? ಕೂಸು ಜೀವಂತವಿದೆ?"

"ಕೂಸಿನ ಕೂಗಿಗೆ ಹಿತ್ತಲೆಲ್ಲ ಮೊಳಗುತ್ತದೆ. ಕೂಸಿನ ಹುಟ್ಟಿಗೆ ಕಾರಣಳಾದವಳು ಸದ್ದುಮುದ್ದಾಗಿ ಅಡುಗೆಯ ಮನೆಯಲ್ಲಿ ಅಕ್ಕಿ ಎಸರಿಗೆ ಹೊಯ್ಯುತ್ತಿದ್ದಾಳೆ. ನನಗೆ ಇದೀಗ ಶರದೂಳ ತಾಯಿ ಬಂದು ತಿಳಿಸಿದಳು. ಇಲ್ಲವಾದರೆ ನನಗೆಲ್ಲಿ ಗೊತ್ತಾಗಬೇಕು?"

"ಏನು ಕೂಸು ಜೀವಂತವಿದೆಯೇ? ಇಲ್ಲವಾದರೆ ನೋಡು. ಚೌಕಿದಾರ (ಫೌಜದಾರ)ನಿಗೆ ಕರೆಕಳುಹಿಸು. ಪೋಲೀಸ ಠಾಣೆಯಲ್ಲಿ ನಮೂದು ಮಾಡಲಿ. ಸದೇಯಿ ಬಾರೀಕ ಎಲ್ಲಿದ್ದಾನೆ?"

"ಅವನೇನು ಮಾಡುತ್ತಾನೆ? ಸುದ್ದಿ ಊರ ತುಂಬ ಹಬ್ಬಿದೆ. ಅದು ಗೊತ್ತಾಗದಿದ್ದರೆ ಅವನೆಂಥ ಮನುಷ್ಯ? ಅವನು ಸುಲಭವಾಗಿ ಒಪ್ಪಬಹುದೇ?"

"ಅವನು ಎಲ್ಲೇ ಇರಲಿ, ಸಿಡಿದ ಅಕ್ಕಿಕಾಳು ಒನಕೆಯ ಬಾಯಿಗೆ ಬರದೇ ಹೋಗುವದಿಲ್ಲ. ನೀನು ಮೊದಲು ಹೋಗಿ ಚೌಕಿದಾರನಿಗೆ ವರದಿ ತಿಳಿಸು. ನಡೆ ಮಗನೇ; ಅಂಗಡಿ ಮುಚ್ಚು. ಒಳಗೆ ಹೋಗಿ ಉಂಡು ಹಾಯಾಗಿ ಮಲಗು. ನಾಳೆ ಮುಂಜಾನೆ ಭೆಟ್ಟಿಯಾಗು."

"ಅದನ್ನು ಮತ್ತೆ ಹೇಳಬೇಕೇ ಕಾಕಾ?"

ಊರ ಊರ ಬಾಳೆಯ ಹೊಂಡಗಳಲ್ಲಿ, ಕೇತಕಿಯ ಪೊದೆಗಳಲ್ಲಿ ಕೆರೆಗಳ ಕಟ್ಟೆಯ ಮೇಲೆ ಹಾಗೆಯೇ ಯಾರಿಗೆ ಗೊತ್ತು, ಇನ್ನು ಯಾವ ಯಾವ ಸ್ಥಳಗಳಲ್ಲಿ ಹೀಗೆಯೇ "ಕ್ಯಾಂ ಕ್ಯಾಂ" ದನಿ ಹೊರಡುತ್ತದೆ. ಎಷ್ಟು ಕಂದಮ್ಮಗಳು ಮಣ್ಣು ಪಾಲಾಗುತ್ತವೆ!

ಅದರ ಬಗ್ಗೆ ಯಾರು ಏನು ಮಾಡುತ್ತಾರೆ? ಅದರಿಂದಲೇ ಹರಿಮಿಶ್ರರಂಥವರ ಸಂಪಾದನೆ ಹೆಚ್ಚುವದು. ಸದೇಯಿ ಬಾರೀಕನಂಥವನು ಹಾಳಾಗುವನು.

ಇಂಥ "ಕ್ಯಾಂ ಕ್ಯಾಂ" ದನಿ ಕೇಳಿದಾಗ ಬರಜೂ ಪಧಾನನ ಕಣ್ಣಿನಿಂದ ನೀರು ಉಕ್ಕಿ ಹರಿಯುತ್ತದೆ—ಕಬೀರನ ಮಾತು ಅವನ ಬಾಯಿಯಿಂದ ಹೊರಬೀಳುತ್ತದೆ.

"ಜಾಕೋ ರಾಖೇ ಸಾಯಿಯಾ ಮಾರಸಕೇ ನ ಕೋಯ
ಬಾಲನ ಬಾಂಕಾ ಕರಸಕೇ ಜೋ ಜಗವೈರೀ ಹೋಯ."

(ಸ್ವಾಮಿಯೇ ಕಾಯುತಿರೆ ಕೊಲ್ಲಲಾರರು ಯಾರು
ಕೂದಲೂ ಕೊಂಕಿಸದು ಜಗವೆ ಹಗೆಯಾದರೂ.)

~*~*~*~

೮

ಹಾರಾಳ ತಾಯಿ ದೇವದೇವತೆಗಳಿಗೆಲ್ಲ ಎಷ್ಟೆಷ್ಟೋ ಹರಕೆ ಹೊತ್ತಳು—"ಅಮಾ ಮಂಗಲಾ, ಅವರು ಕ್ಷೇಮದಿಂದ ಮನೆಗೆ ಬರಲಿ. ನಾಳೆ ನಿನಗೆ ಅರಿಸಿಣ ಕುಂಕುಮ ಮಾಡಿಸುವೆ. ಕಪಾಲೇಶ್ವರನೇ, ನಿನಗೆ ಲಕ್ಷ ಬಿಲ್ವಾರ್ಚನೆ ಮಾಡುವೆ. ಅವರು ಸುರಕ್ಷಿತವಾಗಿ ತಿರುಗಿ ಬರಲಿ." ಐದು ದಿನಗಳ ತನಕ ಬರಜೂ ಎಲ್ಲಿ ಉಳಿದನೆಂಬುದು ಯಾರಿಗೂ ತಿಳಿಯಲಿಲ್ಲ. ಶರದೂಳ ತಾಯಿ ಮಂತ್ರ ಮಾಡಲಿಕ್ಕೆಂದೇ ಯಾವ ದಿನ ಸಾಮಾನು ಕೊಂಡು ಒಯ್ದಳೋ ಅದೇ ದಿನ ಸಂಜೆಗೆ ಮೋತಿ ತಾಯಿಯ ಕೈಹಿಡಿದು ಜಗ್ಗಿ ಕೂಗಿದಳು : "ಅಮ್ಮಾ, ದಾದಾ ಬಂದ." ಹಾರಾಳ ತಾಯಿ ಬಾಗಿಲ ಮುಂದೆ ಕೂತು ದೀಪಕ್ಕೆ ಹಾಕಲು ನೆಣೆಗಳನ್ನು ಹುರಿ ಹಾಕುತ್ತಿದ್ದಳು. ಅವಳ ಮನಸ್ಸಿನಲ್ಲಿ ಏನಾಗಿರಬೇಕು ಅವಳಿಗೇ ಗೊತ್ತು!

ಬರಜೂ ಬಾಗಿಲಲ್ಲಿ ಬಂದು ನಿಂತ. ಆಗ ಸೋನಾ ಕೈಕಾಲು ತೊಳೆಯಲಿಕ್ಕೆ ಒಂದು ತಂಬಿಗೆ ನೀರು ಅವನ ಮುಂದೆ ತಂದಿದ್ದಳು. ಹಾರಾಳ ತಾಯಿ ಬತ್ತಿ ಹುರಿ ಹಾಕುವುದನ್ನು ಬದಿಗಿಟ್ಟು ತಲೆಯೆತ್ತಿ ಒಮ್ಮೆ ತನ್ನ ಯಜಮಾನರ ಕಡೆಗೆ ನೋಡಿದಳು —ಅವನ ಮೋರೆ ಒಣಗಿಹೋಗಿತ್ತು. ಹೊಟ್ಟೆ ಬೆನ್ನಿಗೆ ಅಂಟಿಕೊಂಡು ಬಿಟ್ಟಿತ್ತು. ಎಣ್ಣೆ ಇಲ್ಲದೆ ತಲೆ ಕೂದಲೆಲ್ಲ ಕೆದರಿ ಹರಡಿ ಬುರುಬುರು ಹಾರಾಡುತ್ತಿದ್ದವು. ನೆಣೆಗಳನ್ನು ಅಲ್ಲಿಯೇ ಬಿಟ್ಟು ಅವಳು ಜಗ್ಗನೆದ್ದು ಮನೆಯೊಳಗೆ ಹೋದಳು. ಅವಳ ಕಣ್ಣಿನಿಂದ ನೀರು ಕೋಡಿಗಟ್ಟಿ ತುಳುಕಿ ಹರಿಯಿತು. ಅವಳು ಮಗುವಿನಂತೆ ಬಿಕ್ಕಿಬಿಕ್ಕಿ ಅಳತೊಡಗಿದಳು.

ಬರಜೂ ಮನೆಗೆ ಬಂದ. ಆದರೆ ಮನಸ್ಸಿನಲ್ಲಿ ಸುಖವಿಲ್ಲ. ಮುಖ ಎಂದಿನಂತೆಯೇ ಗಂಟಿಕ್ಕಿದ್ದೇ, ಊಟ–ತಿಂಡಿ–ಜಳಕ–ಬಟ್ಟೆ ಯಾವ ಪರಿವೆಯೂ ಇಲ್ಲ. ಹೆಂಡತಿ ಕೇಳಿದ್ದಕ್ಕೆ "ಹೂಂ" ಅಥವಾ "ಊಹೂಂ" ಇದಷ್ಟೇ ಉತ್ತರ ಸಿಗುತ್ತಿತ್ತು. ದಿನವೆಲ್ಲ ಅವನ ಬಾಯಿಗೆ ಬೀಗ. ಯಾತರಲ್ಲಿಯೂ ನೆಮ್ಮದಿ ಇಲ್ಲ, ಸುಖವಿಲ್ಲ.

ನೇತ್ರಮಣಿ ತಲೆಯ ಸೆರಗು ಜಾರಿಸಿ ವೀಳ್ಯದಿಂದ ಕೆಂಪಾದ ತುಟಿಗಳಿಂದ ನಗೆ ಅರಳಿಸಿ ಭಕಡಿಯೊಂದಿಗೆ ಅಂದಳು : "ನೋಡಿರಲ್ಲಿ ಈ ಒಯ್ಯಾರ. ಎಂಥ ಬದಣ್ಣಿ ಬಹಿರಂಗತನ ನಡೆದಿದೆ! ಇದೆಲ್ಲ ನಮಗೆ ಕಾಣಿಸಲಿಕ್ಕೇs." ಭಕಡಿ ನೇತ್ರಮಣಿಯ ರೂಪ ಕಂಡು ಪ್ರಸನ್ನನಾಗಿದ್ದ. "ಹೌದು ಮತ್ತೆ, ನಮಗೆ ಕಾಣಿಸಲಿಕ್ಕೆ ಅಲ್ಲದೆ ಇನ್ನೇಕೆ?" ನೇತ್ರಮಣಿ ನುಡಿದಳು : "ನಿಮಗೆ ನಿಜವಾದ ಗುಟ್ಟು ಗೊತ್ತಿಲ್ಲ. ಸೋನಾ–ಮೋತಿ

ಇಬ್ಬರ ಮದುವೆ ಆಗುವದಿದೆ. ನೀವೇನು ಬಿಡುವವರೇ? ನೀವೇನು ಕಡಿಮೆ ಕುಳವೇ? ಹಿರಿ ಹಿರಿ ಹಿಗ್ಗಿ ಎಷ್ಟು ಕುಣಿದಾಡುವಿರೋ? ಒಳ್ಳೇ ಮನುಷ್ಯರೆಂದುಕೊಂಡು ಎಷ್ಟು ಮೆರೆದಾಡುವಿರೋ! ನಾನು ಮೊದಲೇ ಹೇಳಿದಂತೆಯೇ ಆ ಮದುವೆಯ ಸಮಯ ನಾನು ಇಲ್ಲಿ ಇರುವವಳಲ್ಲ. ನನ್ನನ್ನು ತವರ ಮನೆಯಲ್ಲಿ ಬಿಟ್ಟು ಬನ್ನಿ ತಿಳಿಯಿತೇ?"

ಭಕಡಿಯ ಬುದ್ಧಿ ಭಂಡಾರಿಸಿತು. ತವರು ಸೇರಿಬಿಟ್ಟರೆ ಐದಾರು ತಿಂಗಳು ಸಂದು ಹೋಗುವವು. ತಾಯಿ ಅಂದಾಳು : "ನನ್ನ ಮಗಳು ಎಷ್ಟು ಕರಗಿ ಸೊರಗಿ ಕಡ್ಡಿ ಆಗಿದ್ದಾಳೆ. ಇನ್ನೆರಡು ತಿಂಗಳು ಉಳಿಯಲಿ. ಆಮೇಲೆ ಒಯ್ಯುವಿರಂತೆ." ಭಕಡಿ ಅಂದ : "ಹೀಗೆಲ್ಲ ಏಕೆ ಮಾತಾಡುವಿ? ಸೋನಾ-ಮೋತಿಯರ ಮದುವೆಯ ತನಕ ನಾವು ಒಟ್ಟಾಗಿ ಇದ್ದರಲ್ಲವೇ?"

ಹಾರಾಳ ತಾಯಿಯ ಇದ್ದಬಿದ್ದ ಸಾಹಸವೂ ಕುಗ್ಗುತ್ತ ಹೋಯಿತು. ಊರಿಗೆ ಊರೇ ಒಳಮಾತಿನ ಪಿಸುಗುಡುವ ಹೊದರಾಯಿತು. ಹೆಂಡತಿಯೊಂದಿಗೆ ಹೊಂದಿಕೆ ಇರದೆ ಬರಜೂ ಮನೆಬಿಟ್ಟು ಹೋಗಿದ್ದ. ಮೈದುನ-ಮೈದುನನ ಹೆಂಡತಿ ಇದನ್ನು ನೋಡಿ ನಗುತ್ತಾರೆ. ಇದೇ ಅವಳ ಹಣೆ ಬರೆಹ. ಇನ್ನು ಹಾರಾಳ ತಾಯಿ ನೆರೆಹೊರೆಯವರಿಗೆ ಮೋರೆ ತೋರಿಸಲಾರದೆ ಹೋದಳು. ಯಾರೇ ಭೆಟ್ಟಿಯಾಗಲಿ, ಆಕೆ ಕುಟ್ಟಿ-ಕುಟ್ಟಿ, ಕೆದರಿ-ಕೆದರಿ ಕೇಳುವವಳೇ : "ಏನೇ, ಹಾರಾಳ ತಾಯಿ ಅಂಥದೇನೇ ಜಗಳವಾಯಿತು—ಬರಜೂ ಮನೆ ಬಿಟ್ಟು ಹೋಗಲಿಕ್ಕೆ?"

ಆಗುವದಿತ್ತು, ಆಗಿಬಿಟ್ಟಿತು. ಹಾರಾಳ ತಾಯಿ ಯಾರಿಗಾಗಿ ಇಷ್ಟೆಲ್ಲ ಮಾಡುವದು? ಅವರು ಬಿಚ್ಚುಮನಸ್ಸಿನಿಂದ ಮಾತಾಡಿದರೆ, ಸಂತೋಷದಿಂದ ಉಂಡು ತಿಂದರೆ, ನಡೆದರೆ-ನೋಡಿದರೆ ಎಷ್ಟು ಚೆನ್ನಾಗಿತ್ತು? ಶರದೂಳ ತಾಯಿ ಹೆಚ್ಚೇನು ಮಾಡಿದಂತಾಯಿತು. ರೂಪಾಯಿಗೆ ರೂಪಾಯಿ ತೆಗೆದುಕೊಂಡಳು. ಆದರೆ ಯಾವ ಫಲವೂ ಬರಲಿಲ್ಲ.

ಹಾರಾಳ ತಾಯಿ ಬರಜೂನಿಗೆ ಎಷ್ಟೆಲ್ಲ ಪ್ರಶ್ನೆ ಮಾಡಿದಳು—ಹಾರಾಳ ಮಾವನ ಮನೆಯ ಕುರಿತು; ಸೋನಾ-ಮೋತಿಯರ ಮದುವೆಯ ಕುರಿತು. ಆದರೆ ಯಾವ ಪ್ರಶ್ನೆಗೂ ಬರಜೂ ಬಾಯಿ ಬಿಚ್ಚಿ ಉತ್ತರ ಕೊಡುತ್ತಿದ್ದಿಲ್ಲ.

ಹಾರಾಳ ತಾಯಿ ಅಂದಳು : "ನೀವು ನೋಡಿದಾಗೆಲ್ಲ ಉದಾಸೀನ; ಸೋನಾ-ಮೋತಿಯರಿಗೆ ವರ ಹುಡುಕುವದಕ್ಕೆ ನಾನು ಹೋಗಲೇ? ನಾನು ಏನೆಂದೆ ಕೇಳಿದಿರಾ? —ಮನೆಯಲ್ಲಿಯೇ ಶತ್ರುಗಳಿದ್ದಾರೆ, ಆಗ ಎರಡೂ ಕನ್ನೇಯರೇನು ಮದುವೆಯಿಲ್ಲದೇ ಕೂತಿರಬೇಕೇ? ನಾಳೆ ಭಕಡಿ ಬೇರೆ ಆಗುವವನು. ಆ ಬಗ್ಗೆ ಏನೆಲ್ಲ ಚರ್ಚೆ ನಡೆಯುತ್ತಲೇ ಇದೆ."

ಬರಜೂ ನಿಧಾನವಾಗಿ ನುಡಿದ : "ಹಾರಾಳ ತಾಯೀ, ನಿನ್ನ ಕಿವಿಯ ಪರಡಿಯಲ್ಲಿ ಏನು ಬಿತ್ತೆಂಬುದನ್ನು ನಾನು ಕೇಳಲಿಲ್ಲ."

ಹಾರಾಳ ತಾಯಿಯ ಮೋರೆ ಒಣಗಿ ಸುಕ್ಕಾಗಿ ಹುಲ್ಲುಕಡ್ಡಿ ಆಯಿತು. ಆದರೆ ಸುಮ್ಮನಿದ್ದರೆ ಬರಜೂನೊಂದಿಗೆ ಮಾತು ಮುಂದುವರಿಯುವದು ಹೇಗೆ? ಆದ್ದರಿಂದ ಆಕೆ ಮತ್ತೆ ಅಂದಳು : "ನೀವು ನನ್ನ ಮರ್ಯಾದೆ ಏನು ಉಳಿಸಿದ್ದೀರಿ? ಮೇಲೆ ಮತ್ತೆ ರೇಗಾಡುವಿರಿ! ಅನ್ನ-ನೀರು ಬಿಟ್ಟು ಐದೈದು ದಿನ, ಐದೈದು ರಾತ್ರಿ ಎಲ್ಲೋ ಹೋಗಿ ಬಿದ್ದಿರುವಿರಿ! ನಿಮ್ಮ ಯಾವ ಯಾವ ಮಾತು ನಾನು ಕೇಳಿಲ್ಲ-ನಡೆಸಿಲ್ಲ? ಹೀಗೆ ನೀವು..." ಹಾರಾಳ ತಾಯಿಯ ಕಣ್ಣೆರಡೂ ತೊಯ್ದು ನೀರಾದವು.

ಬರಜೂ ಅಂದ : "ನನ್ನ ಮಾತು ಕೇಳೆಂದು ನಾನು ಹೇಳುವುದಿಲ್ಲ. ನೀನೇ ಸ್ವತಃ ಏಕೆ ವಿಚಾರ ಮಾಡುವದಿಲ್ಲ? ವಿವೇಚನೆ ಮಾಡುವದಿಲ್ಲ?—ಮನೆಯಲ್ಲಿ ಶಾಂತಿ ಹೇಗೆ ನಿಲ್ಲಬೇಕು? ಹೇಗೆ ನಡೆಯಬೇಕು?"

"ನಾವು ಹೆಣ್ಣು ಹೆಂಗಸರು—ನಮಗೇನು ತಿಳಿಯುತ್ತದೆ? ನೀವೇ ಹೇಳಿರಿ—ಏನು ಮಾಡಿದರೆ ನೆಟ್ಟಗಾದೀತು?"

ಬರಜೂ ನೋಡಿದ. ಹೆಂಡತಿಯಲ್ಲಿ ತುಸು ಮಾರ್ಪಾಟವಾಗಿದೆ. ಈಗ ಸರಿದಾರಿಗೆ ಬರಬಹುದು. ಆತ ನುಡಿದ : 'ಒಳ್ಳೇದು, ನೀನು ಒಂದು ಕೆಲಸ ಮಾಡು. ನಿನ್ನ ಕಡೆಯಿಂದ ಕಿರಿಸೊಸೆ ಯಾವ ದೂರೂ ಆಡಿಕೊಳ್ಳುವಂತೆ ಮಾಡಬೇಡ. ನೀನೂ ಅವಳನ್ನು ದೂರಬೇಡ. ಆಕೆ ನಿನ್ನೊಂದಿಗೆ ಜಗಳಾಡಿದರೆ, ನಿನಗೆ ಏನಾದರೂ ಅಂದರೆ, ಮಕ್ಕಳಿಗೆ ಏನಾದರೂ ಆಡಿದರೆ ನೀನು ಬಾಯಿ ತೆರೆಯಬಾರದು. ನೀನು ಎಷ್ಟೆಲ್ಲ ವ್ರತ-ವಿಧಾನಗಳನ್ನು ಮಾಡಿರುವಿ. ದಿನನಿತ್ಯವೂ ಉಪವಾಸ ಮಾಡುವಿ. ಅಂಥಲ್ಲಿ ಇದೊಂದು ಸಂಗತಿ ವ್ರತವೆಂದು ಭಾವಿಸಿ ನಡೆಯಿಸಲ್ಲ! ಏನು ನಡೆಯಿಸುವಿಯೋ ಇಲ್ಲ? ನಾ ಹೇಳಿದಂತೆ ಮಾಡುವಿಯೋ ಇಲ್ಲ?"

"ಮಾಡದೇ ಏನು?" ಅಂದಳು ಹಾರಾಳ ತಾಯಿ. ಆದರೆ ಅವಳ ಮಾತಿನಲ್ಲಿ ಕಸುವು ಇದ್ದಂತೆ ತೋರಲಿಲ್ಲ. ಎರಡೇ ದಿನಗಳಲ್ಲಿ ಆಕೆ ಕಿರಿಸೊಸೆಯೊಂದಿಗೆ ಜಗಳಾಡಿಬಿಟ್ಟಳು. ಆದರೆ ತನ್ನ ತಪ್ಪು ತಿಳಿದು ಬಂದಕೂಡಲೇ ನಾಲಗೆ ಕಚ್ಚಿಕೊಂಡಳು. ಬರಜೂ ಎಷ್ಟೆಲ್ಲ ಹೇಳಿದ್ದ; ಆದರೆ ಸಿಟ್ಟಿನ ಭರದಲ್ಲಿ ಎಲ್ಲ ಮರೆತು ಹೋಯಿತು. ಬರಜೂ ಅಂದ : "ಒಳ್ಳೇ ವ್ರತ ನಡೆಯಿಸಿದೆ!"

ಹಾರಾಳ ತಾಯಿ ಮೂಗು ಅರಳಿಸಿ ಭುಸುಗುಟ್ಟಿದಳು : "ಮಾತಾಡಬೇಡಿ. ನನ್ನ ಎದೆಗೆ ಬೆಂಕಿ ಬೀಳಲಿ. ಏನೂ ನೆನಪೇ ಉಳಿಯಲಿಲ್ಲ."

"ಒಳ್ಳೇದು, ಈ ಸಲ ನೆನಪು ಉಳಿಯಲಿಲ್ಲವಾದರೆ ಇಲ್ಲ. ಇನ್ನು ಮುಂದೂ ಇದೇ ರಗಳೆ ನಡೆದರೆ ನಾನು ನನ್ನ ಮನ ಬಂದಂತೆ ಮಾಡಿಬಿಡುವವನು."

ಹೆಂಡತಿ ಹೆದರಿ ಹೋದಳು. ಯಾರಿಗೆ ಗೊತ್ತು—ಏನು ಮಾಡಿಬಿಟ್ಟಾನೆಂದು? ಆದರೆ ಮಾತುಮಾತಿಗೆ ಕಿರಿಯ ಸೊಸೆ ತನ್ನ ಮಕ್ಕಳನ್ನು ಬಯ್ಯುವಳು, ಶಪಿಸುವಳು. ಆಗ ನಾನು ಬಾಯಿಗೆ ಬೊಂತೆ ಬಿಗಿದು ಸುಮ್ಮನೆ ಬಿದ್ದಿರಬೇಕು, ಇದು ಅಶಕ್ಯ ಸಂಗತಿ.

ಬರಜೂ ನೋಡಿದ—ಬರೇ ಮನೆಬಿಟ್ಟು ಹೋಗುವದರಿಂದ ಹೆಂಡತಿ ಹಾದಿಗೆ ಬರಲಾರಳು. ಮನೆಯಲ್ಲಿ ಇದ್ದೇ ಏನಾದರೂ ಉಪಾಯ ಮಾಡಬೇಕು. ಹೆಂಡತಿ ಪ್ರಾಣ ಬಿಟ್ಟರೂ ಸರಿಯೇ. ಬರಜೂ ಮನೆಯಲ್ಲಿ ಮಾತು ಕೂಡ ಆಡುವದನ್ನು ಬಿಡುವವನೇ.

ಎಂಟು ಹತ್ತು ದಿನ ಕಳೆದವು. ನೇತ್ರಮಣಿ ಏನೇ ಅಂದರೂ, ಎಷ್ಟೇ ಅಂದರೂ ಹಾರಾಳ ತಾಯಿ ತುಟಿ ಬಿಚ್ಚಲಿಲ್ಲ. ಆದರೆ ಅವಳ ನಾಲಗೆ ಒಳಒಳಗೇ ತುರುಚುಗೊಳ್ಳುತ್ತಿತ್ತು. ಕಿರಿಸೊಸೆ : "ಸಾಯಿ, ಸುಟ್ಟು ಬೂದಿಯಾಗು, ಬೆಂಕಿಗೆ ಬೀಳು, ...ಡೆ ಮರ್ಯಾದೆಗೆಟ್ಟವಳು, ಮಗ ಸಾಯಲಿ, ಮಗಳು-ವಿಧವೆ ಆಗಲಿ—" ಇವೇ ಮುಂತಾದ ಸಾವಿರ ಅಪಶಬ್ದಗಳಲ್ಲಿ ಅಬ್ಬರಿಸುತ್ತ ರಣಕಹಳೆ ಊದಿ ಆಹ್ವಾನ ಕೊಡುತ್ತಿದ್ದಳು. ಆದರೆ ಒದರಾಡಿ ಒದರಾಡಿ ಸುಮ್ಮನಾಗುತ್ತಿದ್ದಳು. ಹಾರಾಳ ತಾಯಿಯಿಂದ ಇದೆಲ್ಲ ಹೇಗೆ ತಾಳಲಾಗಬೇಕು? ಬರಜೂ ಮನೆಯಲ್ಲಿ ಇಲ್ಲದಾಗ ಆಕೆ ಎಲ್ಲಾದರೊಂದು ಶಬ್ದ ಉರುಳಿಸಿಯೂ ಬಿಡುತ್ತಿದ್ದಳು. ಆದರೆ ತನ್ನ ಸ್ವರ ಸ್ವಲ್ಪವೇ ಕಿವಿಗೆ ಬಿದ್ದರೂ ಕಿರಿಯ ಸೊಸೆಯ ಕಂಠ ಪಂಚಮದಲ್ಲಿ ಕಿರುಚಿಕೊಳ್ಳಲಿಕ್ಕೆ ಹತ್ತುವದೆಂಬುದಕ್ಕಾಗಿ ಅವಳು ಗಾಬರಿ ಪಡುತ್ತಿದ್ದಳು. ಏಕೆಂದರೆ ಆಗ ಥಕ್ಕನೆ ಬರಜೂ ಬಂದು ಅದನ್ನು ಕೇಳಿಬಿಟ್ಟರೆ? ಬರಜೂ ಮನೆಯ ಒಳಗೆ ಹೊರಗೆ ಅಥವಾ ಮುಂಗಡೆ ಎಲ್ಲಿಯಾದರೂ ಇದ್ದಾಗೆಲ್ಲ ಹಾರಾಳ ತಾಯಿ ಸುಮ್ಮನಿರುತ್ತಿದ್ದಳು.

ಆ ದಿನ ಅದೇಕೋ ಬರಜೂ ನೇಗಿಲು ಹೆಗಲಿಗೇರಿಸಿ ಲಗೂ ಮನೆಗೆ ಮರಳಿದ. ಅವನು ಚೌಕಿಯಲ್ಲಿ ನೇಗಿಲು ಕಳಚಿ ಇಡುತ್ತಿರುವಾಗಲೇ ಮನೆಯೊಳಗಿಂದ ಶಬ್ದ ಕೇಳಿಬಂತು. ಬೆಂಕಿಯಲ್ಲಿ ಹುಲ್ಲುಕಡ್ಡಿ ತುರುಕಿದಂತೆ ಆಗ ಮೈದುನನ ಹೆಂಡತಿ ಮೈ ಪರಚಿಕೊಂಡು ಉರಿಉರಿ ಆಗುತ್ತಿದ್ದಳು. ಬರಜೂ ಮನೆಯೊಳಗೆ ಹೋಗುವಾಗ ನೋಡಿದಾಕ್ಷಣ ಅವಳು-ಹಿರಿಯ ಸೊಸೆಯು — ಮೊಳಮಟ್ಟ ನಾಲಗೆ ಹೊರತೆಗೆದು ಕಚ್ಚಿ ಮುಖ ಮುಚ್ಚಿಕೊಂಡಳು. ಬರಜೂನನ್ನು ಕಂಡು ಹೆದರಿ ಕಂಗೆಟ್ಟು ಮರದ ಗೊಂಬೆಯಂತೆ ಸೆಟೆದು ನಿಂತಳು. ಕಿರಿಯ ಸೊಸೆಗೆ ಲಜ್ಜೆ-ವಿನಯವೇನೂ ಇದ್ದೇ ಇಲ್ಲ. ಭಾವೇಶನನ್ನು ಕಂಡು ಅವಳ ದನಿಯೇನೋ ತುಸು ತಗ್ಗಿತು, ಹೊರತು ತಡೆಯಲಿಲ್ಲ.

ಬರಜೂನಿಗೆ ಅನಿಸಿತು. ತನ್ನ ಬಾಳೇ ಪಾಪದ ಬಾಳು. ತನ್ನಿಂದಲೇ ಮನೆ ಹಾಳಾಗುತ್ತದೆ—ಮರ್ಯಾದೆ ಹೋಯಿತು, ಗೌರವ ಹೋಯಿತು. ಚಿನ್ನದಂಥ ಮನೆ

ಮಣ್ಣುಗೂಡುವಂತಾಯಿತು. ಕೊನೆಗೂ ಏನು? ಎಲ್ಲ ನಾಶವಾಗುವದೇ? ಮನೆ ಪಾಲು ಆದಮೇಲೆ ಅಂಗಳದಲ್ಲಿಯೇ ಅಡ್ಡಗೋಡೆ ಎದ್ದು ನಿಲ್ಲುವದೇ? ಅಷ್ಟರಿಂದಲೇ ಈ ತಂಟೆ ತಕರಾರು ಮುಗಿಯುವದೇ? ಯಾರ ಪಾಲಿನ ನೆಲದಲ್ಲಿ ನೂರು ಹೊಂಡ ತೋಡಿದರು, ಬೂದಿ ಚೆಲ್ಲಿದರು, ಒಬ್ಬರ ಬೆಕ್ಕು ಇನ್ನೊಬ್ಬರ ಮನೆ ಒಳಹೊಕ್ಕಿತು —ಹೀಗೆ ಪ್ರತಿಯೊಂದು ಮಾತಿಗೂ ಜಗಳದ ಬೀಜ ಮೊಳೆಯುವಂತಾಗುವದು. ಅಂದಾಗ ಒಬ್ಬ ಅಣ್ಣನೋ ತಮ್ಮನೋ ಬೇರೆಯಾಗಿ ಎಲ್ಲಿ ಹೋಗಿ ಉಳಿದಾನು? ಮನುಷ್ಯ ತನ್ನ ಒಳಗಿನ ಪಿಶಾಚಿಗೆ ಹೆದರಿ ಹೀಗೆ ಮಾಡತೊಡಗಿದರೆ ಆತ ನೆರೆಹೊರೆಯವರಲ್ಲಿ ಮನೆ ಮಾಡಿ ಊರಪ್ಪಂತೆ ಉಳಿಯುವನಾದರೂ ಹೇಗೆ? ಕೊನೆಗೂ ಆತ ಅಡವಿಯಲ್ಲಿ ಹೋಗಿ ಉಳಿಯುವದೇ ಉಚಿತವಲ್ಲವೇ?

ಬರಜೂ ತನಗೆ ಯಾವದು ಸರಿಯಾಗಿ ಕಂಡಿತೋ ಹಾಗೆಯೇ ಮಾಡಿದ. ಆತ ಮನೆಯಲ್ಲಿ ಮಾತಾಡುವದನ್ನೇ ಪೂರ್ತಿ ಬಿಟ್ಟುಬಿಟ್ಟ. ಹೆಂಡತಿ ಮಕ್ಕಳು ಏನಾದರೂ ಕೇಳಿದರೆ ಅವನು ಅವರ ಕಡೆಗೆ ಕಣ್ಣೆತ್ತಿ ನೋಡುವದೂ ಕೂಡ ಇಲ್ಲವಾಯಿತು. ಬರೇ ಮೂಕನಲ್ಲ, ಜಡಮೂರ್ತಿ. ಹುಚ್ಚನಂತೆ ಇರತೊಡಗಿದ. ಇದನ್ನು ಕಂಡು ಹಾರಾಳ ತಾಯಿಗೆ ದಿಗಿಲಾಯಿತು — ಇದೇನು? ಎಲ್ಲಿಗೆ ಬಂತು ಎಂದು ಬಾಯಿತೆರೆಯದೇ ಮನುಷ್ಯ ಬದುಕುವದಾದರೂ ಹೇಗೆ? ಬರಜೂನ ನಡತೆಗೆ ಆಕೆ ನಗುವದೋ, ಅಳುವದೋ?

ದಿನದ ಹಿಂದೆ ದಿನ ಉರುಳಿತು. ಬರಜೂನ ಬಾಯಿ ತೆರೆಯಲಿಲ್ಲ. ಆತ ಕಣ್ಣು ಕೆಂಪೇರಿ ಯಾವಾಗಲೂ ದುರುದುರು ದಿಟ್ಟಿಸುತ್ತ ಇರುತ್ತಿದ್ದ. ಹಿಂದೆಲ್ಲ ಆತನಿಗೆ ಮೀನ ಮಾಂಸವೇನೂ ಇದ್ದ ಹೊರತು ಊಟ ಮೆಚ್ಚುತ್ತಲೇ ಇದ್ದಿಲ್ಲ. ಏನಿಲ್ಲದಿದ್ದರೆ ಒಣಮೀನ ಪುಡಿಯಾದರೂ ತಂದು ಅವನಿಗಾಗಿ ಮೇಲಾರ ಮಾಡಬೇಕಾಗುತ್ತಿತ್ತು. ಆದರೆ ಇತ್ತೀಚೆಗೆ ಅವನು ಮೀನ-ಮಾಂಸವೇನೂ ಹತ್ತಿರ ಹಾಯಗೊಡುತ್ತಿದ್ದಿಲ್ಲ. ಬರಜೂ ಆಚರಿಸತೊಡಗಿದ ವ್ರತ ಅನನ ಕಾರ್ಯ ಸಿದ್ಧಿಸುವ ತನಕವೂ ಹೇಗೆ ಬಿಡಲಾದೀತು? ತಲೆಯ ಕೂದಲು ಎಣ್ಣೆ ಕಾಣದೆ ಬುರುಬುರು ಹಾರತೊಡಗಿದವು. ಹುರಿಯಾಗಿ ಮೈಯೆಲ್ಲ ಸೊರಗಿ ಸುಕ್ಕಾಗಿ ಉರುಟಾಗಿ ಹೋಯಿತು. ಹೆಂಡತಿ ನಿತ್ಯವಂತೆ ಕಾಲಿಗೆ ಎಣ್ಣೆ ತಿಕ್ಕಲು ಹೋದರೆ ಆತ ಎದ್ದು ಹೊರಡುತ್ತಿದ್ದ. ಮೊದಮೊದಲು ಬರಜೂ ಮಾತು ಬಿಟ್ಟಾಗ ಅವಳಿಗೆ ಅದು ಮೆಚ್ಚಿಗೆ ಆಗಲಿಲ್ಲ. ಆದರೆ ಅವಳು ಆಗ ನಗುತ್ತಿದ್ದಳು. ಈಗ ಮೆಲ್ಲಮೆಲ್ಲನೆ ಅವಳಿಗೆ ಅಳು ಬರತೊಡಗಿತು. ಆ ದಿನ ಅಮಾವಾಸ್ಯೆಯಾಗಿತ್ತು. ಬರಜೂನಿಗೆ ಕಾಯಿ ಹೋಳಿಗೆ* ಬಹಳ ಮೆಚ್ಚುಗೆ ಪಕ್ವಾನ್ನ. ಆದ್ದರಿಂದ ಹಾರಾಳ

*ಮೂಲದಲ್ಲಿ "ಚೀತಡ ಪೀಠಾ" ಎಂಬ ಖಾದ್ಯವಿದೆ. ಅದನ್ನೇ ಇಲ್ಲಿ ಕಾಯಿ ಹೋಳಿಗೆಯಾಗಿ ಬದಲಿಸಲಾಗಿದೆ.

ತಾಯಿ ಅದನ್ನು ಮಾಡಿ ತನ್ನ ಯಜಮಾನನಿಗೆ ಹೊಟ್ಟೆ ತುಂಬ ತಿನ್ನಿಸಬೇಕೆಂದು ಮನವಾರೆ ಹಂಬಲಿಸಿಕೊಂಡಿದ್ದಳು.

ಬರಜೂ ಬಾಗಿಲಲ್ಲಿ ಕೂತು ದರ್ಭೆಯ ಚಾಪೆ ಹೆಣೆಯಲು ಸಣಬಿನ ಹುರಿ ತೆಗೆಯುತ್ತಿದ್ದ. ಇಬ್ಬರು ಮಕ್ಕಳು ಹತ್ತಿರವೇ ಕೂತಿದ್ದರು. ಹಾರಾಳ ತಾಯಿ ಒಂದೊಂದು ಬಟ್ಟಲು ತುಂಬ ಕಾಯಿ, ಹೋಳಿಗೆಗಳನ್ನು ಅಲ್ಲಿ ಇಟ್ಟು ಹೋದಳು. ಮತ್ತು ಒಂದು ಲೋಟ ಹಾಲು, ಸ್ವಲ್ಪ ಕರಿತ ತರಕಾರಿ ತೆಗೆದುಕೊಂಡು ಲಗುಬಗೆಯಿಂದ ಬಂದು ನೋಡುತ್ತಾಳೆ — ಬರಜೂ ಒಂದು ಚೂರು ಹೋಳಿಗೆ — ಬಾಯಿಗೆ ಇಟ್ಟು ಒಮ್ಮೆಲೇ ಎದ್ದು ನಿಂತ.

ಹೆಂಡತಿಗೆ ತಡೆಯಲಾಗಲಿಲ್ಲ. ಒಮ್ಮೆಲೇ ಚೀರಿ ಅವನ ಕೈಹಿಡಿದು ಅಂದಳು : "ಹೀಗೇಕೆ ಕಾಡುತ್ತೀರಿ? ಹೋಳಿಗೆ ಪೂರಾ ತಿನ್ನಿರಿ. ನೀವು ಹೇಳಿದ್ದು ಮಾಡುತ್ತೇನೆ : ಯಾವ ಆಣೆ ಹೊರಬೇಕು, ಹೊರುತ್ತೇನೆ." ಬರಜೂ ಮೌನವ್ರತ ಆರಂಭಿಸಿದಂದಿನಿಂದ ಹಾರಾಳ ತಾಯಿಯೂ ಕಿರಿಯ ಸೊಸೆಯೊಂದಿಗೆ ಬಾಯಿ ಬಿಡುತ್ತಿದ್ದಿಲ್ಲ. ಆದರೆ ಇಷ್ಟರಿಂದಲೇ ಏನೂ ಆಗುವದಿಲ್ಲ. ಇನ್ನೂ ಎಷ್ಟೋ ಸಂಗತಿಗಳಿವೆ. ಮೂಲತಃ ಮನಸ್ಸೇ ಕೂಡುವದಿಲ್ಲ.

ಬರಜೂನ ಬಾಯಿ ತೆರೆಯಿತು — ಹಾರಾಳ ತಾಯಿಗೆ ನಿಧಿ ಸಿಕ್ಕಂತೆ ಅನಿಸಿತು. ಬರಜೂ ಅಂದ : "ಹೇಳಲೋ? ನಾನು ಹೇಳಿದಂತೆ ಮಾಡುವಿಯಲ್ಲವೇ?"

"ಹೌದು, ಹೌದು. ಹಾಗೆಯೇ ಮಾಡುತ್ತೇನೆ."

"ನೀನೇ ಸ್ವತಃ ಏಕೆ ವಿಚಾರ ಮಾಡಿ ತಿಳಿಯುವದಿಲ್ಲ? ಸ್ವತಃ ಹೇಗೆ ಯೋಗ್ಯವೆನಿಸುವದೋ ಹಾಗೆ ಮಾಡು."

"ಇಲ್ಲ, ಇಲ್ಲ. ನಾನು ಏನೂ ಅರಿಯೆ. ನನ್ನ ತಿಳುವಳಿಕೆಗೆ ಏನೂ ಹರಿಯುವದಿಲ್ಲ. ನೀವು ಹೇಗೆ ಹೇಳುವಿರೋ ಹಾಗೆಯೇ ಮಾಡುತ್ತೇನೆ. ಹೌದು. ಹಾಗೆಯೇ ಮಾಡುತ್ತೇನೆ." ಹಾರಾಳ ತಾಯಿಯ ಎರಡೂ ಕಣ್ಣುಗಳಿಂದ ಧಾರೆ ಹರಿಯಹತ್ತಿದವು.

ಭಕಡಿ ಮತ್ತು ನೇತ್ರಮಣಿ ಈ ನಡುವೆ ಇನ್ನೊಂದು ಬಾಗಿಲಿನಿಂದ ಇಣಿಕಿ ಇಣಿಕಿ ಈ ತಮಾಷೆ ನೋಡುತ್ತಿದ್ದರು.

ಬರಜೂ ಪಿಶಾಚಿಯಂತೆ ಕೂದಲು ಕೆದರಿಕೊಂಡು ನಿಂತಿದ್ದಾನೆ. ಅವನ ಅಭಿಮಾನಿಯಾದ ಹೆಂಡತಿ ಯಾರ ಇದಿರಿಗೂ ತಗ್ಗದ ಬಗ್ಗದ ಆ ಹೆಂಗಸು ಹಾರಾಳ ತಾಯಿ ಗಂಡನ ಕೈಹಿಡಿದು ತಲೆ ತಗ್ಗಿಸಿ ನಿಂತಿದ್ದಾಳೆ. ದೂರದಿಂದ ನೇತ್ರಮಣಿ ಮತ್ತು ಭಕಡಿ ಈ ಹಗರಣ ನೋಡಿ ಬಾಯಿಗೆ ಬಟ್ಟೆ ತುರುಕಿಕೊಂಡು ನಗುತ್ತಿದ್ದರು.

ಹಾಗೆಯೇ ಮೇರುವಂತೆ ಅಚಲನಾಗಿ ನಿಂತು ಬರಜೂ ಅಂದ : "ಸರಿ ಹಾಗಾದರೆ, ವಚನ ಕೊಡು. ಕಿರಿಸೊಸೆಯೊಂದಿಗೆ ನೀವಾಗಿ ಏನೂ ಜಗಳವಾಡುವುದಿಲ್ಲವೆಂದು,

ಹಗೆತನ ಮಾಡುವುದಿಲ್ಲವೆಂದು, ಶಪಥ ಮಾಡು." ಹಾರಾಳ ತಾಯಿಯ ಕಣ್ಣಿಂದ ಹರಿಯುವ ನೀರು ಬರಜೂನ ಪಾದ ತೊಳೆಯುತ್ತಿತ್ತು. ಆಕೆ ಮಗುವಿನಂತೆ ಬಿಕ್ಕಿ ಬಿಕ್ಕಿ ಅಂದಳು : "ಇಲ್ಲ, ನಾನು ಕಿರಿಸೊಸೆಯೊಂದಿಗೆ ಎಂದೆಂದಿಗೂ ಜಗಳವಾಡುವುದಿಲ್ಲ, ಎಂದೂ ಅವಳ ಹಗೆತನ ಮಾಡುವುದಿಲ್ಲ."

"ಅವಳು ಏನೇ ಆಡಿದರೂ ನೀನು ಸುಮ್ಮನಿರಬೇಕು."

"ಅಹುದು, ಅವಳು ಏನೇ ಆಡಲಿ, ನಾನು ಸುಮ್ಮನಿರುವೆನು."

"ಒಳ್ಳೇದು, ಈಗ ಒಳಗೆ ಹೋಗು. ಏನು ಮಾಡುವದೆಂಬುದನ್ನು ಮುಂದೆ ಹೇಳುತ್ತೇನೆ." ಹೆಂಡತಿಯ ಕಣ್ಣೀರು ಪಾದಗಳ ಮೇಲೆ ಬಿದ್ದಾಗ ಅವನ ಆ ಬಿರುಸು ಪಾದಗಳಲ್ಲಿ ಕಚಕುಳಿ ಆಗುತ್ತಿತ್ತೋ ಇಲ್ಲವೋ ಅವನಿಗೇ ಗೊತ್ತು!

ಹಾರಾಳ ತಾಯಿ ನೋಡಿದಳು—ತಾನು ವೈರಿಗಳ ನಗುವಿಗೆ ತುತ್ತಾಗಿ ಬಿಟ್ಟೆ. ಆದರೆ ಬೇರೆ ಯಾರ ಕಣ್ಣಲ್ಲಿಯೂ ಅಲ್ಲ. ಬರಜೂನ ಕಣ್ಣಿನಲ್ಲಿ ತಾನು ಇಳಿದು ಹೋದೆ, ಕೀಳಾದೆ, ಆದರೇನಾಯಿತು? ಅವನು ಜೋಗಿಯಾದರೆ ತಾನು ಜೋಗಿತಿ. ಹೊರಗಿನವರಿಗಾಗಿ ಬುರುಕಿ-ಬಿಂಕ-ಲಜ್ಜೆ ಅದೀಗ ಹರಿದು ಹಿಂಜರಿಯಿತು. ಇನ್ನೇತರ ಹೆದರಿಕೆ? ಈ ಕಿರಿಸೊಸೆ-ಭಕಡಿ ಇಲ್ಲವೇ ಆ ನೆರೆಹೊರೆಯವರು—ಇವರದೇಕೆ ಹೆದರಿಕೆ? ಆಕೆ ಬರಜೂನ ಕೈ ಬಿಡಲೇ ಇಲ್ಲ. ಹಟ ಹಿಡಿದು ಹೇಳಿದಳು : "ಇಲ್ಲ, ಇಲ್ಲಿಯೇ ನಿಲ್ಲಿರಿ." ಬರಜೂನೂ ಸಾಮಾನ್ಯನಲ್ಲ. ಅವನಿಗೂ ಭಯ-ಭಿಡೆ ಲೋಕ ಲಜ್ಜೆಗಳ ಲಕ್ಷ್ಯವಿದ್ದಿಲ್ಲ. ಪಾಪ, ಆತ ಆ ಮುಗ್ಧ ಹೆಣ್ಣಿಗೆ ಎಷ್ಟೊಂದು ದುಃಖ ಕಷ್ಟ ಕೊಟ್ಟಿದ್ದನು? ಮೋಸ ಮಾಡಿದ್ದನು? ಆಕೆಯೇ ಅವನ ಗೃಹಿಣಿ. ಅವನ ಮಕ್ಕಳ ತಾಯಿ. ಇದೇ ಹೆಣ್ಣು ಲಕ್ಷ್ಮಿ, ಶಕ್ತಿ ದುರ್ಗಾದೇವಿಯಾಗಿ ಪೂಜೆ ಪಡೆಯುತ್ತಾಳೆ. ಬರಜೂ ಅವಳನ್ನು ವಕ್ರದೃಷ್ಟಿಯಿಂದ ಹೇಗೆ ನೋಡಬಲ್ಲ? ಬರಜೂ ನೋಡಿದ. ಹಾರಾಳ ತಾಯಿಗೆ ಇಂದು ಲಜ್ಜೆ ಅಭಿಮಾನ ಏನೂ ಉಳಿದಿಲ್ಲ. ಅವನು ಒಳ್ಳೇ ಸಂತುಷ್ಟನಾದ.

ಹಾಗೆಯೇ ನಿಂತಲ್ಲಿಯೇ ಆತ ಆಡಿದ : "ಒಳ್ಳೇದು, ಮನೆಯಲ್ಲಿ ನಿತ್ಯವೂ ನೀನು ಮಾಡಿದ ಅಡಿಗೆ ತುಪ್ಪ-ತಿಂಡಿ ಯಾವ ವಸ್ತುವೇ ಇರಲಿ, ಮೊದಲು ಭಕಡಿ ಮತ್ತು ಕಿರಿಯಸೊಸೆ ಇವರಿಗಾಗಿ ಕಾದಿಡಬೇಕು. ಅವರ ಊಟ ಉಪಚಾರಕ್ಕೆ ಎಲ್ಲರಿಗೂ ಮೊದಲು ಲಕ್ಷ್ಯ ಕೊಡಬೇಕು. ಅವರ ನಂತರ ಮಕ್ಕಳಿಗೆ. ಮತ್ತು ಕೊನೆಗೆ ನಿನಗೆ ಮತ್ತು ನನಗೆ."

ಹಾರಾಳ ತಾಯಿ ಕಣ್ಣು ಮುಚ್ಚಿ ಗಿಳಿಯಂತೆ ಗಂಡನ ಮಾತನ್ನು ಮರು ನುಡಿಯುತ್ತಿದ್ದಳು. ಮಕ್ಕಳ ಊಟ ತಿಂಡಿ ಎಲ್ಲರಿಗೂ ನಂತರ? ಒಳ್ಳೇದು. ಮಕ್ಕಳೇನು ನನ್ನ ಒಬ್ಬಳವೇ ಅಲ್ಲ. ಅವರಿಗೆ ಇದು ಸರಿಯೆನಿಸಿದರೆ ಹಾಗೆಯೇ ಆಗಲಿ. ಹಾರಾಳ ತಾಯಿ ತನ್ನ ಎದೆಯನ್ನು ಕಲ್ಲಾಗಿ ಮಾಡಿದಳು. ಬರಜೂ ತುಸು ಕಿರಿದಾಗಿ ನಕ್ಕು

ಅಂದ : "ಏನು, ನೀನು ನನ್ನ ಕೈಹಿಡಿದು ಈ ವ್ರತ ಹಿಡಿದಿರುವಿ. ಇದನ್ನು ನಡೆಯಿಸದಿದ್ದರೆ ನಿನಗೆ ನನ್ನ ಮೇಲೆ ವಿಶ್ವಾಸವೇ ಇಲ್ಲವೆಂದು ತಿಳಿಯುವೆನು" ಹಾರಾಳ ತಾಯಿ ಒಮ್ಮೆಲೇ ನಾಚಿಕೆಯಿಂದ ಕೈಬಿಟ್ಟಳು. ನಿಜವಾಗಿ ಅವಳು ಅದೆಷ್ಟು ಹೊತ್ತು ಕೈಹಿಡಿದು ಕೊಂಡು ನಿಂತಿದ್ದಳೋ!

ಬರಜೂ ಕಾಯಿ ಹೋಳಿಗೆಯ ಥಾಲಿಯ ಮುಂದೆ ಬಂದು ಕೂತ. ಮಕ್ಕಳೊಂದಿಗೆ ಹಿಗ್ಗಿ ಹಿಗ್ಗಿ ಹರಟಿದ. ಹಾರಾಳ ತಾಯಿಯ ಬಿಂಕದ ಬೆನ್ನೇ ಮುರಿದು ಹೋಗಿತ್ತು. ಆದರೆ ಬರಜೂನ ಬಾಯಿಂದ "ತರಕಾರಿ ಮತ್ತು ಹಿಂಗು ಮೆಣಸು ತಾ" ಎಂಬ ಅಪ್ಪಣೆ ಕೇಳಿದಾಕ್ಷಣ ಅವಳಿಗೆ ಹರ್ಷದಿಂದ ಉಬ್ಬಲಿಕ್ಕೆ ಮೈಸಾಲದಾಯಿತು. ಯಾರೋ ತನ್ನ ಎದೆಯ ಮೇಲಿಂದ ಒಂದು ಗುಡ್ಡವನ್ನೇ ಎತ್ತಿ ದೂರ ಒಗೆದಂತೆ ಅವಳಿಗೆ ಅನಿಸಿತು. ಮನೆಯ ಒಳಗೂ ಹೊರಗೂ ಅವಳಿಗೆ ಅದೆಷ್ಟೋ ಸಲೀಸ-ಸರಳವೆನಿಸಿತು ಬಾಳು.

ಬರಜೂ ಹೋಳಿಗೆಯ ಥಾಲಿಯಲ್ಲಿ ಕೈಹಾಕುತ್ತ ಅಂದನು : "ಭಕಡಿಯನ್ನು ಕರೆ." ಹಾರಾಳ ತಾಯಿ ಯಂತ್ರ ತಿರುಗಿಸಿದಂತೆ ಹೋದಳು. ಅವಳು ಭಕಡಿಯನ್ನು ಕರೆದಳು —ಅವಳಿಗೆ ಮೂರು ನಾಲ್ಕು ಸಲ ಹೊಡೆಯಲು ಎದ್ದ ಅದೇ ಭಕಡಿಯನ್ನು. ಹಾರಾಳ ತಾಯಿ ಈಗ ಅದನ್ನೆ ಮರೆತು ಹೋಗಿದ್ದಳು.

"ಅಂಗಡಿಯ ವ್ಯಾಪಾರ ಮುಗಿಸಿ ಬಂದಾಗ ತಿನ್ನುವೆನು" ಎಂದು ಹೇಳಿ ಭಕಡಿ ಹೊರಬಿದ್ದು ಹೋದ. ಹಾರಾಳ ತಾಯಿಯ ಮನಸ್ಸೂ ಈಗ ಹರ್ಷದಿಂದ ತಿಲ್ಲಾಣವಾಡುತ್ತಿತ್ತು. ಎಲ್ಲ ಜನ ಅವಳಿಗೆ ಒಳ್ಳೆಯವರಾಗಿ ಕಾಣಿಸತೊಡಗಿದರು. ಅವಳ ಮನಸ್ಸು ಎಲ್ಲರ ಸಂಗಡವೂ ಮಾತುಕತೆ ಬೆಳೆಸಲು ಹಾತೊರೆಯ ಹತ್ತಿತು. ಭಕಡಿ ಹೊರಟುಹೋದ ಮೇಲೆ ಅವಳು ಹೇಳದೇ ಕೇಳದೇ ಕಿರಿಯಸೊಸೆಯ ಕೈಹಿಡಿದು ಅಂದಳು : "ತಂಗೀ, ಬಾ. ನಡೆ ಒಂದೆರಡು ಹೋಳಿಗೆ ತಿನ್ನೋಣ. ಭಕಡಿ ಎಲ್ಲಿ ಓಡಿಹೋದ? ಯಾವಾಗ ಮರಳುವನೋ ಯಾರಿಗೆ ಗೊತ್ತು?"

ಕಿರಿಸೊಸೆಗೆ ಇಂದು ಅಕ್ಕನ ನಡತೆ ವಿಚಿತ್ರವೆನಿಸಿತು. ಬೆರಗು ಬಿನ್ನಾಣದಿಂದ ಸಂಭಾವಿತತನ ಕಾಣಿಸಲು ಬಂದಿದ್ದಾಳೆ. ಅವಳು ಮೋರೆ ಸೊಟ್ಟಮಾಡಿ ಅಂದಳು : "ಇಲ್ಲ, ಅವರು ಮರಳಿ ಬರುವಾಗ ಯಾರು ತಿನ್ನುವರು? ನೀನು ತಿಂದುಕೋ." ಹಾರಾಳ ತಾಯಿ ಮುಗುಳು ನಗೆಯಾಡುತ್ತ ಅಂದಳು : "ಆದದ್ದೆಲ್ಲ ಮರೆತು ಬಿಡು, ಏನೇ ಆದರೂ ನಾನು ಅಕ್ಕಳಿದ್ದೇನೆ. ಏನಾದರೂ ಆಡಿದ್ದರೆ ಅದನ್ನೆಲ್ಲ ಗಂಟುಹಾಕಿ ಇಟ್ಟುಕೊಳ್ಳುವಿಯೇಕೆ?" ನೇತ್ರಮಣಿಗೆ ಈ ಮಾತುಗಳು ಮರ್ಮಕ್ಕೆ ಚುಚ್ಚಿದವು. ಗಂಡ ಹೆಂಡಿರಲ್ಲಿ ಮನಸ್ಸು ಇಷ್ಟು ಕೆಟ್ಟು ಕನಲಿ ಹೋಗಿತ್ತು. ಅವನ ಮೋರೆ ಅತ್ತ, ಇವಳ ಮೋರೆ ಇತ್ತ. ಈ ಹೊತ್ತು ಎಲ್ಲೋ ತುಸು ಮನಸ್ಸು ಕೂಡಿದೆ. ಹೆಂಡತಿ ಹೇಗೆ ಹೊಗರಾಡುತ್ತಿದ್ದಾಳೆ!

ಕಿರಿಸೊಸೆ ಮೋರೆ ಉಬ್ಬಿಸಿ ಅಂದಳು : "ನಾನಾರೆ ಯಾರಿಗೆ ಏನು ಹೇಳಲು ಹೋಗಲಿ? ನನಗೂ ಯಾರು ಏನು ಹೇಳಬೇಕು?"

ಅಕ್ಕನಿಗೆ ಇನ್ನೇನೂ ತೋಚಲಿಲ್ಲ. ಆಕೆ ಹೋಗಿ ಬರಜೂನಿಗೆ ಎಲ್ಲ ಅರಿಕೆ ಮಾಡಿಕೊಂಡಳು.

ಬರಜೂ ಅದನ್ನೆಲ್ಲ ಕೇಳಿ ಅಂದ : "ಒಳ್ಳೇದು, ಕಿರಿಯ ಸೊಸೆ ತಿನ್ನುವ ತನಕ ನೀನೂ ತಿನ್ನಬೇಡ."

ಹಾರಾಳ ತಾಯಿ ಗಂಡನ ಮೋರೆ ನೋಡಿ ನಕ್ಕಳು. ಬರಜೂ ಕೂಡ ಹೆಂಡತಿಯ ಮೊಗವನ್ನು ಕಣ್ಣಿಟ್ಟು ನೋಡಿದನು : ಅವರಿಬ್ಬರೂ ಹೀಗೆ ಒಬ್ಬರನ್ನೊಬ್ಬರು ಕಣ್ತುಂಬ ನೋಡಿ ಹಿಂದೆ ಎಂದೂ ಹೀಗೆ ನಕ್ಕಿದ್ದರೇ? ಇಬ್ಬರಲ್ಲಿ ಒಬ್ಬರಿಗೂ ಇದರ ನೆನಪಿಲ್ಲ. ಕನ್ನಡಿಯಲ್ಲಿ ಮುಖ ನೋಡಿಕೊಂಡಂತೆ ಹಾರಾಳ ತಾಯಿಯ ಮುಖದಲ್ಲಿ ಬರಜೂ ತನ್ನ ನಗುವನ್ನೇ ಕಂಡುಕೊಳ್ಳುತ್ತಿದ್ದನು. ಮತ್ತು ಆಕೆ ಬರಜೂನ ಮೋರೆಯಲ್ಲಿ ತನ್ನ ನಗೆಯನ್ನು ನೋಡುತ್ತಿದ್ದಳು. ಆಶ್ವೀಜದ ಕಾಜಿನಂತೆ ತೊಳಗುವ ನೀರಿನಲ್ಲಿ ನಗುವ ಕುಮಾರ ಪೌರ್ಣಿಮೆಯ ಚಂದ್ರನು ತಿಳಿಯುತ್ತಾನೆ—ನಾನು ನೀರಿನಲ್ಲಿ ಇದ್ದೇನೆ. ನೀರು ತಿಳಿಯುತ್ತದೆ ನಾನು ಚಂದ್ರನಲ್ಲಿ ಇದ್ದೇನೆ! ಈ ರೀತಿ ಆ ಗಂಡ ಹೆಂಡಿರ ಸ್ಥಿತಿ ಆಗಿತ್ತು. ಇಬ್ಬರ ದೇಹಗಳೂ ಪುಳಕಿತವಾಗಿದ್ದವು. ಇಬ್ಬರೂ ಉಲ್ಲಸಿತರಾಗಿದ್ದರು.

ಹಾರಾಳ ತಾಯಿಯ ಮುಖದಲ್ಲಿ ನಗೆ ಕಂಡು ಬರಜೂನ ಚರ್ಯೆ ಹಾಗೆಯೇ ಆಯಿತು. ಅವನಿಗೆ ಅನಿಸಿತು—ಮದುವೆ ಆದಂದಿನಿಂದ ಇಂದಿನ ತನಕ ಬರೇ ಹೊರಗಿನಿಂದಲೇ ಕೂಡಿ ಆಡಿ ಹೆಂಡತಿಯೊಂದಿಗೆ ತನ್ನ ಮದುವೆ ಆಗಿತ್ತು. ಆದರೂ ಇಬ್ಬರ ನಡುವೆ ಒಂದು ಗೋಡೆ ನಿಂತಿತ್ತು. ಸುಳ್ಳೇ ಇಬ್ಬರಲ್ಲಿ ಅಂತರಾಯ ಉಂಟಾಗಿತ್ತು. ನಿಜವಾಗಿಯೂ ಇಬ್ಬರೂ ಬೇರೆ ಬೇರೆ ಇರುವದಕ್ಕೇ ಹೆಚ್ಚು ದೂರವಿದ್ದರು. ಆದರೆ ಈ ಹೊತ್ತು ಬರಜೂ ಹುಲಿಯಂತೆ ಆ ಗೋಡೆಯನ್ನು ಕೆಡುಹಿ ಬಿಟ್ಟಿದ್ದನು. ಹಾರಾಳ ತಾಯಿ ಮತ್ತು ಬರಜೂ ಈಗ ತೀರ ಹತ್ತಿರಕ್ಕೆ ಬಂದಿದ್ದರು. ಬರಜೂನ ಅಂತಃಕರಣದ ಸ್ಪರ್ಶಮಣಿಯು ಹಾರಾಳ ತಾಯಿಯ ಹೃದಯದ ಲೋಹವನ್ನು ಚಿನ್ನವಾಗಿ ಮಾರ್ಪಡಿಸಿತ್ತು. ಇಬ್ಬರೂ ಎಚ್ಚೆತ್ತು ಎದ್ದಂತಿತ್ತು. ಹೆಂಡತಿಯಲ್ಲಿ ಈ ಪರಿವರ್ತನ ಕಂಡು ಬರಜೂನಿಗೆ ಆಶ್ಚರ್ಯವಾದಂತೆ ಹಾರಾಳ ತಾಯಿಯು ತನ್ನನ್ನು ಹೊಸರೂಪದಲ್ಲಿ ಕಂಡು ತಾನೇ ಬೆರಗಾಗಿದ್ದಳು.

ಪ್ರತಿಯೊಬ್ಬನ ಅಂತಃಕರಣದಲ್ಲಿ ಇಂಥ ಸ್ಪರ್ಶಮಣಿ ಇರುತ್ತದೆ. ಅದನ್ನು ಬಳಸಲು ಬರುವಂತಾದರೆ ಎಲ್ಲ ಲೋಹವೂ ಚಿನ್ನವಾದೀತು.

ನಡುರಾತ್ರಿಗೆ ಭಕಡಿ ಮನೆಗೆ ಮರಳಿದ. ಆ ತನಕ ಅಕ್ಕ ತಂಗಿಯರು ಏನೂ ತಿಂದದ್ದಿಲ್ಲ. ಹಾರಾಳ ತಾಯಿಗೆ ಇದರಿಂದ ಏನೂ ತೊಂದರೆ ಆಗಲಿಲ್ಲ. ಆದರೆ ಕಿರಿಯ ಸೊಸೆಗೆ ? ಹಾರಾಳ ತಾಯಿಯ ಮಕ್ಕಳಿಗೆ ಅವಳು ಎಷ್ಟೆಲ್ಲ ಬಿರುಸಾಡಿಲ್ಲ.

ಅಶುಭವನ್ನು ಎಣಿಸಿಲ್ಲ. ಆದರೇ ಅದೇ ಈ ಕಿರಿಸೊಸೆಗಾಗಿ ಆ ಹಿರಿಸೊಸೆ ಊಟಮಾಡದೆ ಕಾಯುತ್ತಾ ಕೂತಿದ್ದಾಳೆ.

ಭಕಡಿ ಬಂದಕೂಡಲೇ ಬರಜೂ ಅಂದ : "ಮಧ್ಯರಾತ್ರಿಯ ತನಕ ಎಲ್ಲಿ ಅಡ್ಡಾಡುತ್ತಿದ್ದಿ? ಏ ಒಳಗೆ ಯಾರು? ಲಗೂ ಭಕಡಿಯ ಬಗ್ಗೆ ಏನು ಊಟ ಇಟ್ಟಿದ್ದೀ? ಲಗೂ ಅವನಿಗೆ ಬಡಿಸು." ದಿನಾಲು ಬರಜೂ ಊಟಕ್ಕೆ ಕೂಡುವಾಗ ಭಕಡಿಯನ್ನು ಕರೆಯುತ್ತಾನೆ. ದಿನಾಲು ಕೇಳುತ್ತಾನೆ, ಭಕಡಿ ಉಂಡನೋ ಇಲ್ಲವೋ? ಕೆಲವೊಮ್ಮೆ ಅವನು ಅಡ್ಡಾಡಲು ಹೋಗಿದ್ದಾನೆಂದೂ, ಕೆಲವೊಮ್ಮೆ ಅಡ್ಡಾಗಿದ್ದಾನೆಂದೂ ಕೇಳುತ್ತಾನೆ.

ಭಕಡಿ ಅಣ್ಣನ ಇದುರಿಗೆ ಹಾಯುತ್ತಿದ್ದಿಲ್ಲ. ಇದಿರುತ್ತರ ಕೊಡುತ್ತಿದ್ದಿಲ್ಲ. ನೇತ್ರಮಣಿಯೊಂದಿಗೂ ಅಣ್ಣನ ವಿಷಯ ಚರ್ಚೆ ಮಾಡುತ್ತಿದ್ದಿಲ್ಲ. ಜಗಳಾಡುವದಾದರೆ ಅತ್ತಿಗೆಯೊಂದಿಗೆ ಜಗಳಾಡುತ್ತಿದ್ದ—ಅದೂ ಅಣ್ಣ ಮನೆಯಲ್ಲಿ ಇಲ್ಲದಿರುವಾಗ. ಅಣ್ಣನ ಬೆನ್ನ ಹಿಂದೆ ಹರಿಮಿಶ್ರರೊಂದಿಗೆ ಬಹಳ ವಿಚಾರ ವಿನಿಮಯ ಮಾಡುತ್ತಿದ್ದ. ಆದರೆ ಅಣ್ಣನ ಇದಿರು ಬಂದಾಕ್ಷಣ ಮೈ ಮುದುಡಿಕೊಂಡು ಬದಿಗೆ ಸರಿದುಬಿಡುತ್ತಿದ್ದ. ಹೆದರಿ ಕಾಲು ಕೀಳಬಾರದೆಂಬುದೇ ಅವನಿಗೆ ತೋಚುತ್ತಿದ್ದಿಲ್ಲ. ನೇತ್ರಮಣಿ ಅವನನ್ನು ಪರಿಪರಿಯಾಗಿ ಕೇಳಿ ಕೆದರಿ ಹುರಿದುಂಬಿಸುತ್ತಿದ್ದಳು. ಆದರೆ ಅಣ್ಣ ಮುಂದೆ ಬರುತ್ತಲೇ ಅವನ ಬಾಯಿಯೇ ತೆರೆಯುತ್ತಿದ್ದಿಲ್ಲ ಛೀ, ಛೀ!

ಮಲಗುವ ಕೋಣೆಯಲ್ಲಿ ಹೋಗಿ ಭಕಡಿ ನೇತ್ರಮಣಿಯೊಂದಿಗೆ ಗೊಣಗಾಡುತ್ತಿದ್ದ. ಬರಜೂ ಮತ್ತೆ ಕೂಗಿದ : "ಎಲ್ಲಿ ಹೋದಿಯೋ? ಇಲ್ಲಿ ಬಡಿಸಿಟ್ಟ ಬಟ್ಟಲು ತಣ್ಣಗಾಯಿತು."

"ಇದೋ ಬಂದೆ." ಎಂದು ಭಕಡಿ ಕಾಲು ತೊಳಕೊಂಡು ಬಟ್ಟಲ ಮುಂದೆ ಬಂದು ಕೂತ.

ಹಿರಿಯ ಸೊಸೆ ಮತ್ತೆ ಹೋಗಿ ಕಿರಿಸೊಸೆಗೆ ಅಂದಳು : "ತಂಗೀ, ಬಾರಲ್ಲ. ಎಲ್ಲರೂ ಉಂಡು ಮಲಗಿದರು. ನಾವಿಬ್ಬರೂ ಯಾವ ಅಪರಾಧ ಮಾಡಿದ್ದೇವೆ?"

"ನನ್ನ ಬಗ್ಗೆ ನೀನೇಕೆ ಕೂತಿದ್ದೀ?" ಎಂದು ನೇತ್ರಮಣಿ ಸೆಟಕೊಂಡು ಎದ್ದಳು. "ಅಹಹಾ! ಯಾವಾಗಿನಿಂದ ಈ ಮುದ್ದೊ? ಜತೆಗೆ ಕೂತು ತಿನ್ನದಿದ್ದರೆ ರೊಟ್ಟಿ ಅರಗುವದೇ ಇಲ್ಲ!"

ಹಿರಿಯ ಸೊಸೆ ಮಲಗಲು ಹೋದಳು. ಮದುವೆಯಾದ ಇಪ್ಪತ್ತು ವರ್ಷಗಳ ನಂತರ ಇಂದು ಗೃಹಪ್ರವೇಶವಾದಂತೆ ಅವಳಿಗೆ ಅನಿಸಿತು. ಅವಳಿಗೆ ಅನಿಸಿತು—ಇಡೀ ಜಗತ್ತಿನಲ್ಲಿ ತನಗೆ ಹಗೆ ಎಂಬುವರು ಯಾರೂ ಇಲ್ಲ. ಎಲ್ಲರೂ ಅವಳ ಗೆಳತಿಯರೇ. ಇಂದು ಅವಳಿಗೆ ರೂಪವಿದ್ದಿಲ್ಲ. ಪ್ರಾಯ ಇಳಿದಿತ್ತು. ಆದರೂ ಅವಳಿಗೆ ಇಂದು ದೊರೆತ ನವಯೌವನದ ಹೊಸರೂಪದ ಕಳೆ ಹತ್ತೆಂಟು ವರ್ಷ ಸಂದರೂ

ಬಾಡುವಂತಹದಲ್ಲ. ಹಳಸುವಂತಹದಲ್ಲ. ಅದು ಎಂದೆಂದಿಗೂ "ಅಕ್ಲಿಷ್ಟ ಕಾಂತಿ"ಯಾಗಿ ಉಳಿಯುವಂತಹದು.

ಹಾರಾಳ ತಾಯಿ ಅಂದಳು : "ಕೇಳಿದಿರಾ, ನಮ್ಮ ಹಾರಾಳ ಮದುವೆಯ ಸಮಯ ಕಿರಿಸೊಸೆಗೆ ಒಳ್ಳೇ ಸೀರೆ ತಂದಿದ್ದಿಲ್ಲ. ಇದಕ್ಕಾಗಿ ಅವಳ ಮನಸ್ಸು ಸಣ್ಣದಾಗಿ ಹೋಗಿದೆ. ಈ ಸಲ ಸೋನಾಳ ಮದುವೆಗೆ ಒಂದು ಮೇಲ್ತರಗತಿಯ ಸೀರೆ ತರಬೇಕು."

ಬರಜೂನ ಕಿವಿ ನಂಬಲೇ ಇಲ್ಲ. ಹಿರಿಸೊಸೆಯೇ ಹೇಳುತ್ತಿರುವಳೇ? "ಕಿರಿಸೊಸೆಗೆ ಒಂದು ಮೇಲ್ತರಗತಿಯ ಸೀರೆ ತರಬೇಕೆಂದು!" ಹಿಂದೆ ಕಿರಿಸೊಸೆಗೆ ಏನು ಒಡವೆ ತಂದರೂ ಹಿರಿಯಳ ಜೀವ ಕಮಲವಾಗುತ್ತಿತ್ತು. ಬರಜೂ ತುಸು ಕೆರಳಿಸಲಿಕ್ಕೆ ಹೀಗೆ ಅಂದ : "ಸರಿ, ಅದು ಬಂದೇ ಬರುವದು. ಆದರೆ ನಿನಗೆ?"

"ಹೌದು, ಈಗ ಬಣ್ಣಬಣ್ಣದ ಬೆಡಗಿನ ಸೀರೆ ಉಡುವ ಪ್ರಾಯವೇ ನನ್ನದು? ನನ್ನ ಮಕ್ಕಳು ಉಟ್ಟರೆ ನಾನು ಉಟ್ಟಂತೆಯೇ!"

ಬರಜೂ ಕೇಳಿದ : "ನೀನೆನ್ನುವದು ನಿಜವೇ?"

"ಇಲ್ಲ, ನೀವೊಬ್ಬರೇ ನಿಜವಾಡುವ ಸತ್ಯವಂತರು. ಉಳಿದವರೆಲ್ಲ ಸುಳ್ಳು ಠಕ್ಕರು."

"ಅಲ್ಲ, ನಾನು ಅಂದದ್ದು ಹಾಗಲ್ಲ, ನೀನು ಸತ್ಯವಂತೆ. ನಿನ್ನ ಮನಸ್ಸು ಸದಾ ಕಾಲ ಹೀಗೆ ಉಳಿದರೆ ಒಳ್ಳೇದು."

ಹಾರಾಳ ತಾಯಿ ನಗುನಗುತ್ತ ಅಂದಳು : "ಮನಸ್ಸು ಹೀಗೇ ಉಳಿಯದೆ ಮತ್ತೇನಾಗುವದು?"

"ಒಳ್ಳೇದು, ನಿಜ ಹೇಳು. ನಾವು ಮನೆ-ಮನೆ ಬಿಕ್ಕೆ ಬೇಡುತ್ತ ಹೋಗುವಂತಾದರೆ ಆಗಲೂ ನಿನ್ನ ಮನಸ್ಸು ಹೀಗೇ ಉಳಿಯುವದೇ? ಬದಲಿಸಲಿಕ್ಕಿಲ್ಲವೇ?"

"ಹೀಗೇಕೆ ಅನ್ನುವಿರಿ, ನೀವು ಬಿಕ್ಕೆ ಬೇಡುವದಾದರೆ ನಾನು ಒಡತಿಯಾಗಿ ಕೂಡ್ರುವೆನು! ಬಿಕ್ಕೆ ಬೇಡಿದರೇನು? ಪ್ರಾಣ ಹೋಗುವಂತಾದರೂ ನನ್ನ ಮನಸ್ಸು ಬೇರೆ ಸಿಗಲಿಕ್ಕಿಲ್ಲ."

ಬರಜೂ ಪ್ರಸನ್ನನಾದ. ಅವನು ಮನಗಂಡ, ಇಂದು ಹಾರಾಳ ತಾಯಿಯ ಆಂತರ್ಯದ ದೇವತೆ ದಾನವನ ಮೇಲೆ ವಿಜಯ ಪಡೆದಿದೆ.

ಮರುದಿನ ಹಾರಾಳ ತಾಯಿ ಸ್ನಾನಕ್ಕೆ ಕೆರೆಗೆ ಹೋದಳು. ಅಲ್ಲಿ ಶರದೂಳ ತಾಯಿ, ನಾಡಿ ಪಾಂಡೆಯೂ ಬಂದಿದ್ದರು. ಹಿರಿಯ ಸೊಸೆಯ ಮನಸ್ಸು ಹಿಗ್ಗಿನಲ್ಲಿ ಜೀಕಾಡುತ್ತಿತ್ತು-ಶತಮಾನಗಳಿಂದ ಕಳೆದುಹೋದ ಗಂಡ ಆಕೆಗೆ ದೊರೆತ್ತಿದ್ದನೋ ಎಂಬಂತೆ! ಇಂದು ಅವಳ ಬಾಯಿಯಿಂದ ಮೈದುನನ ಹೆಂಡತಿಯ ಟೀಕೆ ಕೇಳಿ

ಬರಲಿಲ್ಲ. “ನಮಗೇನು? ಉಳಿದ ಎರಡು ಹುಡುಗಿಯರ ಮದುವೆ ಆಗಿಬಿಟ್ಟರೆ ತೀರಿತು. ನಮಗೆ ಬಿಡುಗಡೆ. ಅವರೇ ಮನೆ ಮಾಡಲಿ, ಹೊಲ ನೋಡಲಿ, ಆಸ್ತಿ–ಪಾಸ್ತಿ ಉಪಭೋಗಿಸಲಿ. ಹಿರಿಯರು ಹೇಳುವದು ನಿಜ ನೋಡಿ. ಸಂಸಾರದಲ್ಲಿ ಮನೆಮಾಡಿ ಬಾಳುವೆನೆಂದರೆ ಕಲ್ಲುಗಳ ಸುರಿಮಳೆ ಸಹಿಸಲೇಬೇಕಾಗುವದು, ಜಗಳವಾಡಲೇ? ಯಾರೊಂದಿಗೆ? ನನ್ನ ಮೈದುನ–ಮೈದುನನ ಹೆಂಡತಿಯೊಡನೆ ಜಗಳಾಡಲೇ? ಯಾಕೆ? ಏನು ಫಲ? ಯಾರೂ ಏನೂ ಸಂಗಡ ಒಯ್ಯುವದಿಲ್ಲ. ನಾವಾದರೂ ಏನು ಒಯ್ಯುತ್ತೇವೆ?”

ಶರದೂಳ ತಾಯಿ, ನಾಡೀ ಪಾಂಡೆ ಹಿರಿಯ ಸೊಸೆಯ ಬಾಯಿಯಿಂದ ಇಂಥ ಮಾತು ಕೇಳಿ ತಬ್ಬಿಬ್ಬಾದರು. ಹಾರಾಳ ತಾಯಿ ಹೇಳುತ್ತಿದ್ದಳು : “ಒಂದು ಕೈಯಿಂದ ಚಪ್ಪಾಳೆ ಬಡೆಯುವದಿಲ್ಲ. ನಮ್ಮ ದೋಷವಲ್ಲದಿದ್ದರೆ ನಮ್ಮನ್ನು ಬಿಟ್ಟು ಬೇರೆ ಯಾರು ಇದ್ದಾರೆ? ನಾವು ಮತ್ತು ಅವರು. ನಿಜವಾಗಿ ನೋಡಿದರೆ ನನ್ನದೇ ದೋಷವಲ್ಲವೇ? ಆಕೆ ನನಗೋಸ್ಕರ ಏನು ಮಾಡಲಿ, ಬಿಡಲಿ ನಾನು ಹಿರಿಯಳಾಗಿ ಅವಳಿಗಾಗಿ ಏನು ಮಾಡಿದ್ದುಂಟು, ನೋಡಿದ್ದುಂಟು? ಅವರು ಹೇಗೆ ಚೆಂದ ಮಾತುಗಳಲ್ಲಿ ತಿಳಿಸಿ ಹೇಳುತ್ತಾರೆ! ಅವರು ಅನುತ್ತಾರೆ : ‘ನಮಗೆ ನಮ್ಮ ಕುಂದು ಕಾಣುವದಿಲ್ಲ.’ ನಮ್ಮ ದೋಷಗಳ ಬಗ್ಗೆ ನಾನು ಎಂದಾದರೂ ವಿಚಾರ ಮಾಡಿದ್ದುಂಟೇ? ನಿಜವಾಗಿಯೂ ಊರುಕೇರಿಗಳೆಲ್ಲ ಅವರನ್ನು ಹೊಗಳುತ್ತಾರೆ–ಎಂಥ ಸತ್ಯವಂತ, ಸಜ್ಜನ ಎಂತ!”

ಹಾರಾಳ ತಾಯಿಗೆ ಹೆಚ್ಚು ಹೇಳಲಾಗಲಿಲ್ಲ. ತನ್ನವರನ್ನು ಎಷ್ಟೆಂದು ಹೊಗಳುವದು? —ಛೀ, ಮರ್ಯಾದೆಯ ಮಾತು ಅದು. ಬಟ್ಟೆ ಇಳಿಸುತ್ತ ಆಕೆ ಅಂದಳು : “ಅಕ್ಕಾ, ನಾಡೀ, ನಡೆಯಿರಿ. ನಿಮ್ಮ ಬಗ್ಗೆ ಸ್ವಲ್ಪ ಒಡೆ, ಪಲ್ಲೆ ಮನೆಯಲ್ಲಿ ತೆಗೆದಿಟ್ಟಿದ್ದೇನೆ.”

ಶರದೂಳ ತಾಯಿ ಮತ್ತು ನಾಡೀ ಪಾಂಡೆ ಇಬ್ಬರೂ ಹಾರಾಳ ತಾಯಿಯ ಈ ರೀತಿ ನೋಡಿ ಚಕಿತರಾದರು : “ಇವಳು ಇಂಥ ದಾನಿ ಎಂದಿನಿಂದ ಆಗಿ ಬಿಟ್ಟಳು?”

ಹಾರಾಳ ತಾಯಿ ಗಂಡನ ಇದಿರು ಮಾಡಿದ ಶಪಥ ಒಂದೊಂದಾಗಿ ಪಾಲಿಸುತ್ತಿದ್ದಳು. ಮೈದುನನ ಹೆಂಡತಿಯ ಉಪಚಾರ–ಸಮಾಚಾರ ಆಕೆ ದಿನಾಲು ಮೊದಲಿಗೆ ನೋಡಿಕೊಳ್ಳುವಳು. ಕಿರಿಸೊಸೆಗೆ ಅನಿಸಿತು : “ಎಂದೋ ತನಗೆ ದೊರೆಯಬೇಕಾದ ಪ್ರೀತ್ಯಾದರಗಳು ಅಕ್ಕನ ದೋಷಗಳ ಮೂಲಕ ಈವರೆಗೆ ದೊರೆಯುತ್ತಿದ್ದಿಲ್ಲ. ಅವು ಇಂದು ದೊರೆಯ ಹತ್ತಿವೆ.” ಹಿರಿಯ ಸೊಸೆಯು ಕೈಯಿಂದ ಏನಾದರೊಂದು ಕೆಲಸ ಕಸಿದುಕೊಂಡು ಮಾಡಿದರೆ ಕಿರಿಯಳು ಅದೇ ಹೆಚ್ಚಿನದೆಂದು ತಿಳಿಯುವಳು. ಏಕೆಂದರೆ ಬರೇ ಮಕ್ಕಳ ಮೂಲಕ ರೂಪಾಯಿಗೆ ಹನ್ನೆರಡಾಣೆ ಕೆಲಸ ಹಿರಿಯಳಿಗೇ ಒಪ್ಪಿದ್ದು. ಅವಳು ಮಾಡಿದರೇನಾಯಿತು? ಅವಳಲ್ಲದೇ ಇನ್ನಾರು ಮಾಡುವರು.

~*~*~*~

೬

“ಧರಮಾ, ನಿನಗೆ ಯಾರು ಹೊಡೆದರೋ?” ಕಳವಳದಿಂದ ಕೂಗುತ್ತ ಬರಜೂ ಪಧಾನ ಧರಮಾ ಬಾವರಿಯ ಮನೆಯೊಳಗೆ ಹೊಕ್ಕನು. ಬಾವುರಿ ಹೊಲೆಯರಲ್ಲಿ ಒಂದು ಒಳಜಾತಿ. ಆದರೇನು? ಕಾರೆಯ ಬರಲಿನಿಂದ ಹೊಡೆದ ಹೊಡೆತಕ್ಕೆ ಧರಮಾನ ಸುಲಿದು ಬಾತಿದ್ದ ಬೆನ್ನು, ಬಡಿಗೆಯ ಏಟಿಗೆ ನೀಲಿ ಕಪ್ಪು ಬಾಸುಂಡೆ ಎದ್ದು ವಿಕಾರವಾಗಿತ್ತು. ಅದನ್ನು ಕಂಡು ಬರಜೂನ ಕಣ್ಣು ತುಂಬಿ ಬಂದವು. ಧರಮಾನ ಹೆಂಡತಿ ಅವನ ಬೆನ್ನಿಗೆ ಎಣ್ಣೆ ಉಜ್ಜುತ್ತಿದ್ದಳು. ಬರಜೂ ಕೇಳಿದ : “ಧರಮಾ ನಿನಗೆ ಹೊಡೆದರು ಯಾರು?”

ಧರಮಾ ನರಳುತ್ತ ಅಂದ : “ನೀವು ಮನೆಯಲ್ಲಿ ಇದ್ದಿಲ್ಲವೇ, ಬರಜಣ್ಣಾ? ಲೇss, ಕೂಡ್ರಲಿಕ್ಕೆ ಆ ಕಿರಿಮಂಚ ಮುಂದೇ ಮಾಡೇ...ಅದೇ ಹಂದಿಯ ಮಗ. ಆ ಬ್ರಾಹ್ಮಣನ ಅಪ್ಪಣೆಯಂತೆ—”

“ಏಕೆ? ಏನಾಯಿತು?” ಬರಜೂನ ದನಿ ಮಿದುವಾಯಿತು.

“ನಿಮಗೆ ಗೊತ್ತಿಲ್ಲವೇ ಬರಜಣ್ಣಾ? ಮತ್ತೇನು? ಹರಿಮಿಶ್ರ ಹಾರವ ಬಲು ಹಳೆಯ ಕಾಲದ ಹಗೆ ಇಂದು ಸಾಧಿಸಿಕೊಂಡ. ಅಂಗಡಿಯಲ್ಲಿ ನಾನು ಅವನಿಗೆ ಮುಖಾಮುಖಿ ಉತ್ತರಕೊಟ್ಟಿದ್ದೆ. ಅಂದಿನಿಂದಲೂ ಆತ ಸೆಟಗೊಂಡೇ ಇದ್ದ. ಇಂದು ಮುಂಜಾನೆ ನನ್ನ ದನ ಅವನ ಬಾಳೆಯ ಹಿತ್ತಿಲಲ್ಲಿ ಹೊಕ್ಕಿತು—ಅದೇ ನೆಪ ಒಡ್ಡಿ ಈ ಕೆಲಸ ಸಾಧಿಸಿಕೊಂಡ. ನನ್ನನ್ನು ಹಿಡಿದು ತೆಂಗಿನ ಮರಕ್ಕೆ ಕಟ್ಟಿಟ್ಟ. ನಾನು ಅವನಿಗೆ ಹೇಳುವದೇನು? ನನ್ನ ಮಾತೇ ಹೀಗೆ—” ಬರಜೂನ ಕಣ್ಣಿನಿಂದ ನಾಲ್ಕೈದು ಹನಿ ಟಪಟಪ ಉದುರಿದವು.

ಅಯ್ಯೋ, ಧರಮಾ! ಲೋಕದಲ್ಲಿ ಇಂಥ ಎಷ್ಟೋ ಧರಮಾರ ಬೆನ್ನು ಹಣ್ಣು ಹಣ್ಣಾಗುತ್ತದೆ! ಬರಜೂನಂಥ ಎಷ್ಟೋ ವ್ಯಕ್ತಿಗಳ ಕಣ್ಣಿನಿಂದ ಹನಿ ಉದುರುತ್ತವೆ. ಆದರೆ ಯಾರೇನು ಮಾಡುವರು? ಯಾರಿಂದಲೇನಾಹುದು?

ಧರಮಾ ಅಂದ : “ನನಗೆ ಈ ಸಲ ಬೆಲ್ಲ ತುಪ್ಪ ತಿನ್ನಿಸು. ನಾನೂ ಒಂದು ಕೈ ನೋಡಿಬಿಡುತ್ತೇನೆ. ಆ ಮಿಶ್ರ ಮತ್ತು ಅವನ ಆ ಹಂದಿ ಇಬ್ಬರೂ ಬಂಟರನ್ನು ನೋಡಿಕೊಳ್ಳುತ್ತೇನೆ. ನಾವು ಮನೆ ಮಠ ಇಲ್ಲದ ಮಂದಿ. ರಟ್ಟೆ ಮುರಿದು ದುಡಿದಲ್ಲಿ ಹೊಟ್ಟೆ ಹೊರಕೊಳ್ಳುವ ಆಳು. ಇಲ್ಲಿ ನಮ್ಮದೇನು ಆಸ್ತಿ ಬಿದ್ದಿದೆ—ದೆವ್ವ ತಿಂದು ಹೋಗಲಿಕ್ಕೆ? ಈ ಪ್ರಕರಣದಲ್ಲಿ ಮನೆಯ ಗುಂದ ನನ್ನ ಹೆಸರಿಗೆ ಹಾಳಾಗಲಿ. ಅದರ

ಮೇಲೆ ಬದನೆಯ ಬಳ್ಳಿ ಹಚ್ಚುತ್ತೇನೆ. ಅವನಿಗೆ ಹಾಳುಮಾಡಲು ಬಿಡುವುದಿಲ್ಲ. ನಾನೇ ಮಾಡಿ ಹೋಗುತ್ತೇನೆ. ಅಂತೇ ನಾನು ಈ ಧನಿಯಾಳ ತಾಯಿಗೆ ಹೇಳಿದೆ : ಕೈ ಬಳೆ ಕಳಚಿ ಒಗೆದುಬಿಡು; ನನ್ನ ಆಸೆ ಬಿಟ್ಟು ಬಿಡು. ನೀನು ಬಾವುರಿಯ ಮನೆಯ ಹೆಣ್ಣು. ನಾಳೆ ಇನ್ನಾರದಾದರೂ ಮನೆಯನ್ನು ಕಾಣುವಿ. ಇಲ್ಲವೇ ನನ್ನ ಮನೆಯಲ್ಲಿ ದುಡಿದು ಉಂಡಂತೆ ಇನ್ನೆಲ್ಲಿಯಾದರೂ ಗೈದು ದುಡಿದು ಉಣ್ಣುವಿ. ನಿನ್ನ ಹೊಟ್ಟೆ ಹೊರದೆ ಉಳಿಯುವದೇ?"

ಬರಜೂ ಧರಮಾನ ಮಾತು ಅರಿಯದಾದ. ಆತ ಅಂದ : "ಏಕೋ ಹೀಗೆ ಬಡಬಡಿಸುತ್ತೀ ತಿಳಿಗೇಡಿ?"

"ಬಡಬಡಿಸುತ್ತಿಲ್ಲ! ಇಕೋ ನೋಡಿ ಕುಂಕುಮ ಹಚ್ಚಿ ಇಟ್ಟಿದ್ದೇನೆ" ಧರಮಾ ಒಂದು ಹರಿತವಾದ ಕಠಾರಿ ತೆಗೆದು ತೋರಿಸಿದ. "ಬರಜಣ್ಣಾ, ಇದು ಕುತ್ತಿಗೆಗೆ ಸರಿಯಾಗಿ ಕೂಡ್ರುವದಲ್ಲವೇ?"

ಬರಜೂ ನಡುಗಿದ. ಅವನು ಕೂತಿದ್ದ. ಕಠಾರಿ ಕಂಡೊಡನೆ ಹಿಂದಕ್ಕೆ ಸರಿದ. "ಅರೇ ಇದೇನು ಅನ್ನುವಿ ಧರಮಾ?"

ಧರಮಾ ಕಣ್ಣು ಹೊರಳಿಸುತ್ತ ಹೇಳಿದ : "ಮತ್ತೇನು ಹೇಳಲಿ? ಹೇಳ ತಕ್ಕದ್ದನ್ನು ಸಂತೆಪೇಟೆಯಲ್ಲಿ ಕೂಗಿ ಸಾರಿ ಹೇಳುವೆನು. ಹಿಂದಾಗಲಿ, ಮುಂದಾಗಲಿ—ಒಂದು ದಿನ ಸಾಯಲೇಬೇಕು. ಅಂದಾಗ ಹೆದರುವದೇಕೆ? ಯಾರಿಗೆ ? ಮನೆಯಲ್ಲಿ ಬಿದ್ದಲ್ಲಿ ಸಾಯುವದೂ ಒಂದು ಸಾವು. ಗಲ್ಲಿಗೆ ಶೂಲಕ್ಕೇರಿ ಸಾಯುವುದೂ ಒಂದು ಸಾವೇ. ಮತ್ತೆ ಧರಮಾನಿಗೆ ಯಾರ ಭೀತಿ? ಯಾತರ ಭೀತಿ?"

ಬರಜೂ ಪಥಾನ ಅಶ್ವತ್ಥದ ಎಲೆಯಂತೆ ನಡುಗ ಹತ್ತಿದ. ಧರಮಾನ ಬಾಯಿಯಿಂದ ಇಂದು ಇದೆಂಥ ಮಾತು? ಅವನು ಧರಮಾನ ಕೈಹಿಡಿದು ಅಂದ : "ಧರಮಾ, ತಮ್ಮ ಸ್ವಲ್ಪ ತಾಳಿಕೋ. ಸಹಿಸಿಕೋ. ಇಂದು ಸಂಜೆಗೆ ಮಂಗಲಾದೇವಿಯ ಪೂಜೆ ನಡೆಯುವದಿದೆ—ನಿನಗೆ ಅದಕ್ಕಾಗಿ ಕರೆಯಲು ಬಂದೆ. ಅಲ್ಲಿಗೆ ಬರುವಿಯಾ?"

ಮಂಗಲಾ ಮಾತೆಯ ಪೂಜೆಗೆ ಧರಮಾನಿಗೆ ಮನಸ್ಸಾಗಲಿಲ್ಲ. ಆತ ಮೊದಲಿನಂತೆಯೇ ನುಡಿದ : "ಬರಜಣ್ಣಾ, ಸತ್ತವನಿಗೆ ಹಿಂದಿಲ್ಲ. ಮುಂದಿಲ್ಲ. ಧರಮಾ ಬಾವರಿ ಇಂದು ಮಿಶ್ರರ ಬ್ರಾಹ್ಮಣನ ನೆತ್ತರದಿಂದ ಮಂಗಲ ಬರೆಯುವದಿದೆ."

"ತಮ್ಮಾ, ಧರಮಾ ಸ್ವಲ್ಪ ನನ್ನ ಮಾತು ಕೇಳು. ಹೀಗೆ ತಾಳ್ಮೆಗೆಟ್ಟರೆ ಹೇಗೆ? ಇಂದು ಸಂಜೆ ಮಂಗಲಾ ತಾಯಿಯ ಪೂಜೆ ಇದೆ ಬರುವೆಯಾ?"

"ಬರದೇ ಏನು? ನನಗೇನು ಮಾರಿ ಬಡಿದಿದೆ ಬರದೇ ಇರಲಿಕ್ಕೆ? ಇದಕ್ಕಿಂತಲೂ ಹೆಚ್ಚು ಹೊಡೆತ ನಾನು ಎಷ್ಟೆಲ್ಲ ಸಹಿಸಿಲ್ಲ? ಇದೇನು ದೊಡ್ಡದು?"

ಸಂಜೆಯ ಮಬ್ಬುಗತ್ತಲಿನ ವೇಳೆಗೆ ಧರಮಾ ಮಂಗಲಾದೇವಿಯ ಗುಡಿಗೆ ಹೋಗಿ ತಲಪಿದ. ಅಲ್ಲಿ ಕುಂಡದ ಹೊಗೆ ನಾಲ್ಕೂ ಕಡೆಗೆ ಹರಡಿತ್ತು. ಕಟಕರ ಜಯ, ಬಡಿಗರ ಊದ, ರೂಪ ಜೈನಾ, ದಲಾಯಿ ಜದು—ಒಬ್ಬೊಬ್ಬರೇ ಬಂದು ಕೂಡಿದರು. ಮಂಗಲೆಗೆ ದಂಡದಂತೆ ಅಡ್ಡ ಬಿದ್ದು ಎಲ್ಲರೂ ಮಾಲತೀ ಬಳ್ಳಿಯ ಚಪ್ಪರದಡಿಗೆ ಹೋಗಿ ಕೂತರು.

ಜದು ನುಡಿದ : "ಬರಜೂ ಅಣ್ಣಾ, ಎಲ್ಲ ಭಾಗ್ಯದ ಸುತ್ತು. ಧರಮದಾಸ ಬಡವ. ಅವನು ಯಾರದೇನು ಹಾನಿ ಮಾಡಿದ್ದು, ಅವನ ಹಣೆಯಲ್ಲಿ ಇಂಥ ಪೆಟ್ಟು ಬರೆದಿರಲಿಕ್ಕೆ!"

"ನಾನು ನಿನಗೆ ಆ ದಿನವೇ ಹೇಳಲಿಲ್ಲವೇ—ಧರಮಾನ ಭಾಗ್ಯ ಬೇರೆ ಅಲ್ಲ, ಹರಿಮಿಶ್ರ ಧರಮಾನ ಹಣೆಯಲ್ಲಿ ಬರೆಯುತ್ತಾನೆ. ಒಮ್ಮೆ ಒಳಿತು—ಒಮ್ಮೆ ಕೆಡಕು-ಎಲ್ಲ ಮಿಶ್ರರ ಮರ್ಜಿ."

"ಇಲ್ಲ, ನಾನು ಈ ಮಾತು ಒಪ್ಪುವುದಿಲ್ಲ. ಹರಿಮಿಶ್ರ, ಧರಮಾನ ಭಾಗ್ಯ ಉಂಟು ಮಾಡುವದಿಲ್ಲ. ಧರಮನ ಭಾಗ್ಯ ಹರಿಮಿಶ್ರನನ್ನು ಉಂಟು ಮಾಡುತ್ತದೆ."

"ನೀನು ಎಷ್ಟೇ ಹೊಸ ಹೊಸ ರೀತಿ ಮಾತಾಡಿದರೂ ಹುರುಳು ಒಂದೇ—ರಾವಣ, ರಾಮಚಂದ್ರನಿಗಾಗಿ ದುಷ್ಟಗ್ರಹವಾಗಿ ಜನ್ಮತಾಳುವದೆಂಬುದೇ ರಾಮಚಂದ್ರ ರಾವಣನಿಗಾಗಿ ದುಷ್ಟಗ್ರಹವಾಗಿ ಹುಟ್ಟಿಬರುವದು. ಭಾಗ್ಯದಲ್ಲಿ ಹೀಗೆ ಉಂಟೆಂದು ಕಣ್ಣು ಮುಚ್ಚಿಕೊಂಡು ಬಿದ್ದಿರುವದರಿಂದ ಏನೂ ನಡೆಯದು. ದುಷ್ಟಗ್ರಹಗಳ ಶಾಂತಿಗಾಗಿ ಏನಾದರೊಂದು ಉಪಾಯ ಮಾಡಲೇಬೇಕು."

"ಹೌದು, ಅವಶ್ಯ ಮಾಡಬೇಕು. ಇದೇನು ನನಗೆ ಗೊತ್ತಿಲ್ಲವೆ?"

"ಹಾಗಾದರೆ ಗ್ರಹಶಾಂತಿಗಾಗಿ ನಾವು ಏನು ಮಾಡಬೇಕು?"

"ಬರಜಣ್ಣಾ, ನಾನು ನಿಮಗೆ ತೋರಿಸಿದ್ದೇನಲ್ಲ—" ಹಿಂದೆ ಕೂತಲ್ಲಿಂದ ಧರಮಾ ಕೂಗಿ ಹೇಳಿದ. ಬರಜೂ ಬೆಚ್ಚಿ ಬಿದ್ದ. ಮತ್ತೆ ಹೇಳಹತ್ತಿದ. "ಒಳ್ಳೇದು, ಇಂದು ಹರಿಮಿಶ್ರ ಹೊಡೆದ, ನಾಳೆ ಜಮೀನದಾರನ ಕಾರಕೂನ ಹೊಡೆಯುವನು. ನಾಡಿದ್ದು ಸಾವುಕಾರನ ಜವಾನ—ನಾವೇನು ಬರೇ ಹೊಡೆತ ತಿನ್ನಲಿಕ್ಕೆ ಹುಟ್ಟಿ ಬಂದದ್ದೋ?"

"ಇಲ್ಲ, ಬರೇ ತಿನ್ನಲಿಕ್ಕೆ ಅಲ್ಲ; ತಿನ್ನಿಸಲಿಕ್ಕೂ—"

"ಇದೆಲ್ಲ ಗೊಡ್ಡು ಮಾತು. ಈ ಹಳ್ಳಿಯಲ್ಲಿ ಇಷ್ಟು ರೈತರಿದ್ದಾರೆ—ಆದರೆ ಹೊಡೆಯುವ ಧೈರ್ಯ ಯಾರಿಗೆ ಆಗಿದೆ? ಇಲ್ಲ ಅಣ್ಣಾ, ಹೊಡೆತ ತಿನ್ನಲಿಕ್ಕೇ ನಾವು ಹುಟ್ಟಿ ಬಂದದ್ದು. ನಾವು ಯಾರಿಗೂ ಹೊಡೆಯಲಾರೆವು—ಹೊಡೆತ ತಿನಿಸಲಾರೆವು, ಎಂಬ ಪ್ರಶ್ನೆಯಲ್ಲ. ನಾವು ಹೊಡೆದರೆ ನಮ್ಮವನನ್ನೇ ಹೊಡೆಯುತ್ತೇವೆ. ನಮ್ಮ ಸೋದರ, ನಮ್ಮ ಸಂಬಂಧಿಕ, ನಮ್ಮ ಕುಟುಂಬದವನನ್ನೇ ನಾವು ಹೊಡೆಯುತ್ತೇವೆ.

ನಮ್ಮೊಳಗಿನ ಜಗಳದ ನಿಕಾಲೆ ನಾವು ಮಾಡಲಾರದೆ ಪೇಚಾಡುತ್ತಿದ್ದಾಗ ಹೊರಗಿನಿಂದ ಮಧ್ಯಸ್ಥನನ್ನು ಕರೆದು ತರುತ್ತೇವೆ."

ಬಡಿಗರ ಊದ ಅಂದ : "ಇದು ಹದಿನಾರಾಣೆ ಸತ್ಯ. ನಮ್ಮನಮ್ಮಲ್ಲಿ ಜಗಳವಿಲ್ಲದಿದ್ದರೆ ಪಂಚರು ದುಡ್ಡು ಹೇಗೆ ತಿನ್ನಬೇಕು? ಪಂಚರು ಬರಲಿ, ಅಧಿಕಾರಿಗಳು ಬರಲಿ. ಅವರಿಗೇನು? ಏಳು ಪೀಳಿಗೆಗಳಿಂದಲೂ ನಾವು ನಮ್ಮ ನಮ್ಮ ಹೊಲ ಹೂಡುತ್ತ ಬಂದಿದ್ದೇವೆ. ಅವರು ಕಾಗದದ ಮೇಲೆ ಏನು ಬೇಕೋ ಮಾಡಿಕೊಳ್ಳಲಿ. ಅದರಿಂದ ನಮ್ಮ ಹೊಲ ನೆಲದಲ್ಲಿ ಯಾವ ಪರಿಣಾಮವೂ ಆಗುವದಿಲ್ಲ. ನಾವು ನಮ್ಮ ನಮ್ಮ ಗದ್ದೆಯಲ್ಲಿ ಬೇಸಾಯ ಮಾಡುವೆವು. ಕಾಗದ ಬರೆಯಿಸಿಕೊಟ್ಟರೆ ಬೇರೆ ಯಾರೂ ಬಂದು ಗದ್ದೆ ಹೂಡಲಾರರು."

ಬರಜೂ ನುಡಿದ : "ಧರಮಾನಿಗೆ ಹೊಡೆತ ಬಿತ್ತು—ಆದರೆ ಹೊಡೆದದ್ದು ಯಾರು? ನಮ್ಮ ನಡುವೆ ಒಬ್ಬೊಬ್ಬ ಚಂದರಾ ಸಿಯಲ ಇರದಿದ್ದರೆ ಹರಿಮಿಶ್ರನಂಥ ಒಂಟಿ ಮನುಷ್ಯ ಮುನ್ನೂರು ಮಂದಿಯನ್ನು ಎಷ್ಟೆಂದು ಹೊಡೆಯಬಲ್ಲ? ಮೂಲದ ಮಾತೆಂದರೆ ನಮ್ಮಲ್ಲಿ ಒಕ್ಕಟ್ಟು ಇಲ್ಲ. ಒಕ್ಕೂಟವಿಲ್ಲ. ಒಟ್ಟು ಹೊಂದಿಕೆ ಇಲ್ಲ. ಧರಮಾನ ಬೆನ್ನಿಗೆ ಬಾರಕೋಲು ಬಿದ್ದರೆ ಬಾಸಲೆ ಎದ್ದರೆ ಅವನ ನೆರೆಮನೆಯ ಊದಿಯು ನಗಲು ಆರಂಭಿಸುತ್ತಾನೆ. ಹೀಗೂ ಅನ್ನುತ್ತಾನೆ : 'ಒಳ್ಳೇದೇ ಆಯಿತು. ಸೊಕ್ಕು ಮುರಿಯಿತು.' ಧರಮಾನಿಗೆ ಬಿದ್ದ ಪೆಟ್ಟಿನ ನೋವು ನಮಗೂ ಅನಿಸಿದ್ದರೆ, ಆ ಪೆಟ್ಟು ನಮಗೇ ಬಿದ್ದಿದೆಯೆಂದು ನಾವು ತಿಳಿದಿದ್ದರೆ; ಹಾಗೆಯೇ ಡೋಮಾನ ಮನೆ ಸುಟ್ಟು ಹೋದಾಗ ಅವನ ಮಗ ಸತ್ತುಹೋದಾಗ ಆ ದುಃಖ ನಮಗೇ ಆಗಿದ್ದೆಂದು ನಾವೆಲ್ಲ ತಿಳಿದಿದ್ದರೆ, ಅಥವಾ ಯಾರೊಬ್ಬನ ಪ್ರಕೃತಿ ಕೆಟ್ಟಾಗ, ನಮ್ಮ ಮನೆಯಲ್ಲಿಯೇ ಒಬ್ಬರು ಬೇನೆ ಬಿದ್ದಿದ್ದಾರೆಂದು ನಾವು ಭಾವಿಸಿದರೆ ಆ ಯಾರೊಬ್ಬನ ಪ್ರಕೃತಿ ನೆಟ್ಟಗಾಗುತ್ತಿತ್ತು. ಡೋಮನ ಮನೆ ಮತ್ತೆ ನಿಲ್ಲುತ್ತಿತ್ತು. ಧರಮಾನಿಗೆ ಸಾಂತ್ವನ ಕೊಡುವದು ನಮ್ಮ ಕರ್ತವ್ಯವೆಂದು ಎಣಿಸಿದ್ದರೆ ಸಕಲ ದುಃಖವೂ ನೀರು ನೀರಾಗಿ ಹೋಗುತ್ತಿತ್ತು. ಇಷ್ಟು ಒಳ್ಳೇ ಜನರ ನಡುವೆ ಒಬ್ಬ ಹರಿಮಿಶ್ರ ಕೆಟ್ಟವನಾಗಬಲ್ಲನೇ? ಧರಮಾ ಪೆಟ್ಟು ತಿನ್ನುವಾಗ ಎಷ್ಟೊಂದು ಜನ ನಿಂತಿದ್ದರು? ಆದರೆ ಯಾರೂ ಏನೂ ಮಾಡಲಿಲ್ಲ."

ಇಬ್ಬರು ಮೂವರು ಎದ್ದು ನಿಂತರು : "ನಾವು ಏನು ಮಾಡುವುದು? ನಾವೂ ಪೆಟ್ಟು ತಿನ್ನಬೇಕಿತ್ತೆ?"

ಬರಜೂ ಆವೇಶದಿಂದ ಹೇಳಿದ : "ಹೌದು, ಪೆಟ್ಟೇ ತಿನ್ನಬೇಕಿತ್ತು. ಧರಮಾನಿಗೆ ಬಿದ್ದ ಪೆಟ್ಟು ನಿಮಗೆ ಬಿದ್ದಂತೇ ಅಲ್ಲವೇ? ನಿಮ್ಮಲ್ಲಿ ಯಾರೊಬ್ಬನಿಗೆ ಹೀಗೆ ಪೆಟ್ಟು ಬಿದ್ದರೆ ಅದು ಇನ್ನು ಹಲವರಿಗೆ ಬಿದ್ದಂತೆಯೇ. ಹೇಳಿರಿ ನೋಡೋಣ—ಈ ಪೆಟ್ಟು ಧರಮಾನಿಗೆ ಬಿತ್ತೋ? ನಿಮ್ಮೆಲ್ಲರಿಗೆ ಬಿತ್ತೋ?"

ಮುದಿ ರತನನು ಅಂದ : "ಇಲ್ಲ, ಇಲ್ಲ. ನಮ್ಮೆಲ್ಲರಿಗೂ ಬಿತ್ತು. ನಿನ್ನ ಮಾತು ನಿಜ."

ರೂಪ ಜೈನಾ ಅಂದ : "ಆದರೆ ನಾವು ಅಲ್ಲಿ ಏನು ಮಾಡಬಹುದಿತ್ತು? ಹರಿಮಿಶ್ರನನ್ನು ನೀನು ಬಲ್ಲೆ. ಅವನು ಯಾರ ಮಾತೂ ಕೇಳುವವನೇ. ಹಾವಿನ ಹೆಡೆಯನ್ನು ಆತ ಮೆಟ್ಟಿ ತುಳಿದಾನು!"

ಬರಜೂ ನಿಧಾನವಾಗಿ ನುಡಿದ : "ನೀವು ಹತ್ತು ಮಂದಿ ಕೂಡಿ ಧರಮಾನನ್ನು ಸುತ್ತುಗಟ್ಟಿ ನಿಂತು 'ಮಿಶ್ರಜೀ, ಇಂದು ಧರಮಾನಿಂದ ತಪ್ಪೇ ಆಗಿರಬಹುದು. ಒಪ್ಪಿಕೊಳ್ಳೋಣ. ನಾಳೆ ನಮ್ಮಿಂದಲೂ ಅಂಥ ತಪ್ಪು ಆದೀತು. ತಾವು ದೊಡ್ಡ ಮನುಷ್ಯರು. ಮಂದಿಯನ್ನೇ ಮೇಯಿಸುವವರು. ನಾವು ಕೂಲಿಯಾಳುಗಳು. ದನ ಮೇಯಿಸುವವರು, ನಮ್ಮ ಮಾತನ್ನಿಷ್ಟು ಕೇಳಿರಿ. ಧರಮಾ ಏನು ಮಾಡಿದ—ಬಿಟ್ಟ, ಐದು ಮಂದಿ ಕೂಡಿ ವಿಚಾರ ಮಾಡಲಿ. ಅವನ ಅಪರಾಧವೇ ಇದ್ದರೆ ದಂಡ ತೆರಲಿ. ಇನ್ನು ಹೊಡೆಯುವದೇ ಇದ್ದರೆ ನಮ್ಮೆಲ್ಲರಿಗೂ ಹೊಡೆಯಿರಿ'—ಎಂದು ಒಟ್ಟಾಗಿ ಹೇಳಿದ್ದರೆ—?"

"ಹೇಳಿದರೇನು?" ರೂಪ ಜೈನಾ ನಗುತ್ತಾ ನುಡಿದ. "ಹರಿಮಿಶ್ರ ಇದೆಲ್ಲ ಕೇಳುವವನು? ನಾವು ಹೊಡೆತ ತಿನ್ನಬೇಕಾಗುತ್ತಿತ್ತು."

ಬರಜೂ ಆವೇಶದಿಂದ ಆಡಿದ : "ಹಾಗಿದ್ದರೆ ಒಳಿತೇ ಆಗುತ್ತಿತ್ತು. ನೀವೆಲ್ಲ ಹೊಡೆತ ತಿಂದಿದ್ದರೆ ಧರಮಾನಿಗೋಸ್ಕರ ತಿನ್ನುತ್ತಿದ್ದಿರಿ. ನಿಮ್ಮ ಬಾಂಧವನಿಗಾಗಿಯೇ ತಿನ್ನುತ್ತಿದ್ದಿರಿ. ಅದರಿಂದ ಏನು ಹಾನಿ ಇತ್ತು? ಹರಿಮಿಶ್ರ ಎಲ್ಲರನ್ನೂ ಹೊಡೆಯುತ್ತಿದ್ದಾರೆ. ಇಂದು ಧರಮನಿಗಾಗಿ, ನಾಳೆ ನಿನಗಾಗಿ, ನಾಡಿದ್ದು ನನಗಾಗಿ—ಹೀಗೆ ಒಬ್ಬರಿಗಾಗಿ ಇಪ್ಪತ್ತು-ಇಪ್ಪತ್ತೈದು ಮಂದಿಯನ್ನು ಹೊಡೆಯುತ್ತ ಹೋದರೆ ಅವನು ಎಷ್ಟು ಹೊಡೆಯಬಹುದು? ಹೊಡೆಯಲಿ, ಹೇಗೂ ಹೊಡೆಯುತ್ತಲೇ ಇರುತ್ತಾನೆ. ಆದರೆ ನಾವು ಹೊಡೆತಕ್ಕೆ ಹೆದರಿ ಕಳ್ಳರಂತೆ ಮನೆಯೊಳಗೆ ಹೊಕ್ಕು ಕೂತರೆ ಹೇಗೆ? ಅದೇ ನಾವೆಲ್ಲ ಒಟ್ಟಾಗಿ ಎದೆ ಸೆಟೆದು ನಿಂತುಕೊಂಡರೆ ನಮ್ಮ ಮುಂದೆ ಕೈ ಎತ್ತಲಿಕ್ಕೆ ಯಾರಿಗೆ ಗಂಡಸುತನವಿದೆ? ಮನುಷ್ಯತ್ವವಿದೆ?"

ದಲೇಯಿ ಜದು ನುಡಿದ : "ಧರ್ಮವೆಂಬುದು ಇಲ್ಲವಾಗಿಯೇ ಹೋಯಿತೇ? ಬರೇ ಅನ್ಯಾಯದ ಮೇಲೆಯೇ ಜಗತ್ತು ನಡೆಯುವದೇ?"

ರೂಪ ಆಡಿದ : "ಎಲ್ಲರೂ ಬಾಯಿ ಮಾತಿನಲ್ಲಿ ಆಡುವವರೇ—ಇಷ್ಟೆಲ್ಲ ಜನ ಕೂತಿದ್ದೀರಿ. ಹೇಳಿರಿ, ಈ ಕೆಲಸಕ್ಕೆ ಇವರಲ್ಲಿ ಎಷ್ಟು ಮಂದಿ ಸಿದ್ಧರಿದ್ದಾರೆ?"

ಬರಜೂ ಪಧಾನ ಎದ್ದು ನಿಂತು ಹೇಳಿದ : "ನಾನು ಸಿದ್ಧನಿದ್ದೇನೆ. ನಾನು ಮಿಶ್ರ ಮಹಾಶಯರ ಪಾದ ಹಿಡಿದು ಹೇಳುತ್ತೇನೆ—ಮಿಶ್ರರು ಒಪ್ಪದಿದ್ದರೆ ಧರಮಾನನ್ನು ಅಪ್ಪಿಕೊಂಡು ನಿಲ್ಲುತ್ತೇನೆ, ಎಷ್ಟು ಹೊಡೆಯುವದಿದೆಯೋ ಹೊಡೆಯಲಿ. ಧರಮಾ

ನನ್ನ ಒಡಹುಟ್ಟಿದವ. ಅವನಿಗಾಗಿ ನಾನು ಹೊಡೆತ ತಿನ್ನುವವ. ಪ್ರಾಣ ಹೋದರೂ ಏನಾಯಿತು? ಈ ಊರು ಬರಿದಾದರೂ ಏನಾಯಿತು? ಪಥಾನ ಪಾಡೆಯಂಥ ನೂರು ಬಡವರು ಮಣ್ಣುಪಾಲಾಗಿ ಹೋದರೆ ಹೋಗಲಿ. ಎಲ್ಲರನ್ನೂ ಹೊಡೆದೋಡಿಸಿ ಮಿಶ್ರರೊಬ್ಬರೇ ಈ ಊರಲ್ಲಿ ಉಳಿಯಲು ಬಯಸುತ್ತಿದ್ದರೆ ಉಳಿಯಲಿ. ಎಲ್ಲರ ಮನೆ ಹಾಳುಮಾಡಿ ತನ್ನ ಮನೆ ಬೆಳೆಸುವದರಲ್ಲಿ ಅವರಿಗೆ ಸುಖ ಸಿಗುತ್ತಿದ್ದರೆ ಅವರ ಸುಖ ಹೆಚ್ಚು ಹೆಚ್ಚು ಬೆಳೆಯಲಿ. ಇನ್ನು ಈ ಊರಲ್ಲಿ ನಾವು ಉಳಿಯುವ ಆವಶ್ಯಕತೆಯಿಲ್ಲ. ಹುಳ ಹುಪ್ಪಡಿಗಳಂತೆ ಬದುಕಿ ಉಳಿಯುವ ಬದಲು ಸಾಯುವದು ಎಂದಿಗೂ ಲೇಸು. ನೀವು ಏನು ಆಲೋಚಿಸುತ್ತಿರುವಿರಿ? ನಾವು ಇಷ್ಟು ದುರ್ಬಲರಾಗಿದ್ದೇವೆ, ನಿಷ್ಕ್ರಿಯರಾಗಿದ್ದೇವೆ. ಆಡು ಕುರಿ ತಿಂದು ತುಳಿದು ಮೆಟ್ಟುವ ಹುಲ್ಲುಜಡ್ಡಿ ಹುರಿಹಾಕಿದರೆ ಆನೆಯಂಥ ಪಶುವನ್ನೂ ಬಿಗಿದು ಕಟ್ಟಬಹುದು. ಆದರೆ ನಾವು ಹುಲ್ಲು ಅಲ್ಲ; ಮನುಷ್ಯರಾಗಿಯೂ ಏನೂ ಮಾಡಲಾರೆವು. ಒಂದು ನೂರು ಮನೆಗಳ ನಾವೆಲ್ಲ ಒಟ್ಟಾಗಿ ಸತ್ತರೆ ಇಡೀ ಊರಲ್ಲಿ ಬದುಕಿ ಉಳಿಯುವ ಬಿಡಿ ಹರಿಮಿಶ್ರ ಸುಖಸಂತೋಷದಿಂದ ಶ್ರೇಯೋಭಿವೃದ್ಧಿ ಪಡೆಯುವರೇ?"

ಒಬ್ಬ ಎದ್ದು ಹೇಳಿದ : "ಇಲ್ಲ ಇಲ್ಲ. ಹೀಗೆ ಎಂದೂ ಆಗಲಿಕ್ಕಿಲ್ಲ."

ಬರಜೂ ಮುಂದುವರಿದ : "ನಾವು ನಮ್ಮ ತಪ್ಪಿನಿಂದಲೇ ಸಾಯುತ್ತೇವೆ. ನಾವು ಐದು ಮಂದಿ ಒಂದು ಗುಂಪಾದರೆ ಎಷ್ಟೋ ಹರಿಮಿಶ್ರರು ಕರ್ಪೂರದಂತೆ ಆರಿಹೋಗುವರು. ನಾವೆಲ್ಲ ಹರಿಮಿಶ್ರರ ಈ ಪ್ರಶ್ನೆಗಾಗಿ ಸಾಯಲು ಸಿದ್ಧರಾದರೆ ನಾನು ಸಾರಿ ಹೇಳುತ್ತೇನೆ—ನಮ್ಮ ಈ ಕುದಿಯುವ ನೆತ್ತರು ಹರಿದು ಬಿದ್ದ ನೆಲದ ಚೂರೂ ಪ್ರಳಯವಾಗಿ ಹೋದಮೇಲೂ ತನ್ನ ಕೆಂಪು ಕಳೆದುಕೊಳ್ಳಲಾರದು. ಈ ನಮ್ಮ ಒಣದೊಗಲು ಸುಟ್ಟು ಉರಿದಲ್ಲಿ ಅದೊಂದೇ ಸ್ಥಳವಲ್ಲ—ಆ ಜ್ವಾಲೆ ನಾಲ್ಕೂ ನಿಟ್ಟಿಗೆ ಹಬ್ಬುತ್ತ ಹೋಗುವದು. ನಮ್ಮ ಈ ಎಲುಬುಗಳು ಮಿಶ್ರರ ಹೊಡೆತ ತಿಂದು ಉಕ್ಕಾದಂಥವು. ಎಲ್ಲಿ ಬಿದ್ದರೂ ಅಲ್ಲಿಂದಲೇ ಕೂಗೆಬ್ಬಿಸ್ಯಾವು. ಭೀಮನಂಥ ಜಗಜಟ್ಟಿ ಬಂದು ಮೇರು ಶಿಖರದ ಮೇಲೆ ಕೋಟ್ಯನುಕೋಟಿಯುಗ ನಮ್ಮನ್ನು ತೇಯುತ್ತಿದ್ದರೂ ನಮ್ಮ ಕುರುಹು ಅಳಿಯಲಾರದು! ಕಡಲ ಆಳಕ್ಕೆ ಒಗೆದರೂ ಆ ಎಲುಬು ಅಲ್ಲಿಂದಲೇ ಮೊರೆದೀತು—'ನಾವು ವ್ಯರ್ಥವಲ್ಲ, ನಾವು ಕೆಲಸಗಾರರು, ಬೋಳುಗುಡ್ಡದ ಮೇಲೆ ಬಂಜರು ಬಯಲಲ್ಲಿ ಕಾಳಿನ ಸಸಿ ಚಿಗುರಿಸಬಲ್ಲ ಬಂಟರು ನಾವು'!"

ಬರಜೂ ಇನ್ನು ಮಾತಾಡಲಾರದಾದ. ಅವನ ಉಸಿರು ಒತ್ತರಿಸಿ ಬರಹತ್ತಿತು. ಕಣ್ಣು ನೀರಿನಿಂದ ತುಳುಕಾಡಿತು.

ಮುದಿ ರತನ ಅಂದ : "ಸೈ, ಸೈ, ನಮ್ಮ ಈ ಕೀಳು ಬಾಳು ಇದ್ದರೇನು? ಹೋದರೇನು? ಗಾದೆಯೇ ಇದೆ—ಕೊಲ್ಲಬೇಡ, ನಾನು ಸತ್ತಿದ್ದೇನೆ! ನಮ್ಮನ್ನು ಯಾರು ಕೊಲ್ಲಲು ನಾವು ಯಾರು ಬದುಕಿದ್ದೇವೆ?"

ಜದು ಅಂದ : "ಹೀಗೆ ನಾವು ಸತ್ತಂತೆಯೇ ಸರಿ. ಆದರೂ ಹಾಗೆ ಸತ್ತು ಸಾಯಲಾರೆವು."

ರೂಪ ಜೈನಾ ಆಡಿದ : "ಇದು ನಮ್ಮಿಂದ ಸಾಧ್ಯವೇ? ನಿಮ್ಮ ಮನೆಯಲ್ಲಿ ಒಬ್ಬ ಸತ್ತು ಬಿದ್ದು ಕೊಳೆತು ನಾರುತ್ತಿದ್ದರೂ ನಾನು ಅತ್ತ ವಿಚಾರಿಸಲಿಕ್ಕಿಲ್ಲವೆನ್ನುವದು."

ಬರಜೂ ಪಂಚೆಯಿಂದ ಮೋರೆ ಉದ್ದಿಕೊಳ್ಳುತ್ತ ನುಡಿದ : "ಅಂತೇ ನಾವು ಸಂಕಟದಲ್ಲಿ ಬಿದ್ದಿದ್ದೇವೆ. ನಾನು ಇದನ್ನು ಎಂದಿನಿಂದಲೂ ಹೇಳುತ್ತ ಬಂದಿದ್ದೇನೆ. ಮತ್ತೆ ಏನೆನ್ನುವಿರಿ? ಊರ ಎಲ್ಲ ಮಂದಿಯಲ್ಲಿ ಒಕ್ಕಟ್ಟು ಒಟ್ಟು ಕೂಟ ಇರಬೇಕು. ಯಾರೊಬ್ಬನ ಮೇಲೆ ಆಪತ್ತು ಒದಗಿದರೂ ಮಿಕ್ಕ ಐದು ಮಂದಿ ಅವನ ನೆರವಿಗೆ ಓಡಿಹೋಗಿ ನಿಲ್ಲಬೇಕು. ಏನು? ಯಾರೂ ಏನೂ ಮಾತಾಡುವದಿಲ್ಲವೇಕೆ?"

ಎಲ್ಲರೂ ಒಬ್ಬರಿಗೊಬ್ಬರು ಕುಕ್ಕಿ ಕೇಳಹತ್ತಿದರು : "ಮಾತಾಡು. ಮಾತಾಡುವದಿಲ್ಲವೇಕೆ?"

ಜದು ದಲೇಯಿ ಅಂದ : "ಇದರಲ್ಲಿ ಯಾರದೇನು ಹತ್ತಿಪ್ಪತ್ತು ದುಡ್ಡು ವೆಚ್ಚವಾಗುವುದುಂಟೇ? ಇದು ನಮ್ಮ ಕಷ್ಟಪಡುವ ತಾಳುವ ಮಾತು. ಊರಲ್ಲಿ ಎಲ್ಲರೂ ಒಬ್ಬರಿಗೊಬ್ಬರು ಅಣ್ಣ ತಮ್ಮಂದಿರು. ಊರು ನಮ್ಮೆಲ್ಲರ ಮನೆ. ಇದನ್ನು ಅರಿತುಕೊಂಡು ನಾವು ಕೂಡಿ ನಿರ್ವಾಹ ನಡೆಯಿಸುವೆವು. ಇಲ್ಲವೇ ಈಗಿದ್ದಂತೆ ಒಡಕು ಒಳಜಗಳ ಭೇದ ವಿರೋಧ ವೈರ ನಡೆಯುತ್ತಿರಲಿ. ನನ್ನ ಆಪತ್ತಿನಲ್ಲಿ ನೀವು ನನಗೆ ಬೆಂಬಲವಾಗಿ ನಿಲ್ಲಿರಿ. ನಿಮ್ಮ ಅನುವಿಗೆ ನಾನು ನಿಲ್ಲುತ್ತೇನೆ. ಏನೋ ರೂಪಣ್ಣ, ಇದೇ ಉತ್ತಮವಲ್ಲವೇ? ನಿಮ್ಮ ಮನೆಯಲ್ಲಿ ರಾದ್ಧಾಂತವೆದ್ದರೆ ನಾನು ಚಪ್ಪಾಳೆ ಬಾರಿಸುವದೇ? ನಾಲಿಗೆ ಚಪ್ಪರಿಸುವದೇ? ನಿಮ್ಮ ತೋಟದಲ್ಲಿ ನನ್ನ ದನ ಹೊಕ್ಕರೆ ನೀನು ಅದನ್ನು ಸರಕಾರಿ ಹಟ್ಟಿಗೆ ಎಳೆದು ಹಾಕುವದೇ? ಇದೆಲ್ಲ ಸರಿಯೇ?"

ರೂಪ ಆಡಿದ : "ಇದು ಮತ್ತೆ ಕೇಳುವ ವಿಷಯವೇ? ನನ್ನ ಅಂಬೋಣವೆಂದರೆ ನಮ್ಮಲ್ಲಿ ಒಬ್ಬಿಬ್ಬ ದ್ರೋಹಿಗಳು ಹೊರಟೇ ಹೊರಡುವರು."

ಬರಜೂ ಹೇಳಿದ : ಅವರನ್ನು ನಮ್ಮ ಕಡೆಗೆ ಒಲಿಸಿಕೊಳ್ಳಲಿಕ್ಕೆ ಶಕ್ಯವಿದ್ದಷ್ಟು ಉಪಾಯ ಮಾಡೋಣ. ಕೈ ಮುಗಿಯೋಣ, ಕಾಲಿಗೆ ಬೀಳೋಣ. ಇದರಿಂದಲೂ ಆಗದಿದ್ದರೆ ಕೊನೆಗೆ ಅವರಿಗೆ ಬಹಿಷ್ಕಾರ ಹಾಕೋಣ. ನಾವು ಚಮಗಾರ—ಜಲಗಾರರನ್ನು ಮುಟ್ಟಿಕೊಳ್ಳುವದಿಲ್ಲ. ಏಕೆ? ಅವರ ಕಸಬು ಕೆಲಸ ಕೀಳೆಂದು. ಹತ್ತು ಮಂದಿಯ ಮಾತು ಕೇಳದ, ಒಳ್ಳೇ ಕೆಲಸದಲ್ಲಿ ಕೈಗೊಡದ ಮನುಷ್ಯ ಭಂಗಿ ಚಮಗಾರರಿಗಿಂತ ಕೀಳಲ್ಲವೇ? ಭಂಗಿ ಚಮಗಾರರು ಹೆಂಡ ಕುಡಿಯುತ್ತಾರೆ, ಮಾಂಸ ತಿನ್ನುತ್ತಾರೆ—ಇಷ್ಟೇ ಅಲ್ಲವೇ ಅವರ ಕೀಳು ಕೆಲಸ? ಆದರೆ ಯಾರ ಮನಸ್ಸು ಯಾವಾಗಲೂ

ಪಾಪದ ಮಡುವೋ, ನಾಲ್ಕು ಮಂದಿಯನ್ನು ಹಾಳು ಮಾಡುವದೇ ಯಾರ ಕಸಬೋ ಆತ ಹೊಲೆಯರಿಗಿಂತಲೂ ಹೊಲ್ಲ?"

ಜದು ಅಂದ : "ಸರಿ, ಹತ್ತು ಮಂದಿಯೊಳಗಿಂದ ಒಬ್ಬ ಬೇರೆಯಾಗಿ ಎಲ್ಲಿ ಹೇಗೆ ಬದುಕಿ ಉಳಿಯುವ?"

ಬರಜೂ ಹೇಳಿದ : "ಒಳ್ಳೇದು, ಮೊದಲು ಹತ್ತು ಮಂದಿ ಮುಂದಾಗಲಿ, ಕೆಟ್ಟವನನ್ನು ಸರಿದಾರಿಗೆ ತರಲಿಕ್ಕೆ. ನಾವು ಮನುಷ್ಯರು ಮನುಷ್ಯರಿಂದ ಏನು ಸಾಧ್ಯವಿಲ್ಲ? ಊರ ಒಳಿತಿಗಾಗಿ ಎಲ್ಲವನ್ನೂ ನಾವು ಮಾಡೋಣ. ಹೊಡೆತ-ಬಯ್ಗಳಿಗೆ ನಾವು ಹೆದರುವದಿಲ್ಲ—ಹೆಚ್ಚೇಕೆ? ಸಾವಿಗೂ ಸೊಪ್ಪು ಹಾಕುವವರಲ್ಲ ನಾವು. ನನ್ನ ಮಾತು ಕೇಳಿ. ನಿಮ್ಮ ಹತ್ತು ಮಂದಿಯಲ್ಲಿ ನಾನು ಮೊದಲಿಗ—ಬೆಂಕಿಯಲ್ಲಿ ಹಾರಲಿಕ್ಕೆ ಸಿದ್ಧ."

ಇದರ ನಂತರ ಜದು, ನಿಧಿಯಾ, ಸಾಹು, ಉದಿಯಾ, ನೇತರಾ, ರೂಪ, ಧರಮಾ ಹೀಗೆ ಹತ್ತು ಮಂದಿ ಸಿದ್ಧರಾದರು.

ಜದು ಅಂದ : "ಎಲ್ಲ ಮಾಡಿದ್ದಾಯಿತು, ಬರಜಣ್ಣಾ. ಆದರೆ ಮನುಷ್ಯನ ಕೈಯಲ್ಲಿ ಏನೂ ಇಲ್ಲ—ಭಗವಂತ ಮಾಡಿದ್ದು ಖರೆ."

ಬರಜೂ ನಗುನಗುತ್ತ ಅಂದ : "ಭಗವಂತನಾದರೂ ನಮ್ಮ ಕೈಯಿಂದಲೇ ಕೆಲಸ ಮಾಡುತ್ತಾನೆ. ಮನುಷ್ಯ ಏನು ಭಗವಂತನಿಂದ ಬೇರೆಯೇ?"

ಜದು ಹೇಳಿದ : "ಹೇಳಿದ್ದು ನಿಜ ನೋಡು. 'ಮಾಡು-ಮಾಡಿಸು' ಇವೆರಡರಲ್ಲಿಯೇ ಇದೆ ಎಲ್ಲ ಗುಟ್ಟು. "ಮೋಬನಾಹಿಂ ಪಥಸಂಸಾರ" ಅಂದಿಲ್ಲವೇ ಭಗವಂತ?" (ನಾನಲ್ಲದೇ ಅನ್ಯಪಥವಿಲ್ಲ ಜಗಕೆ).

ಧರಮಾ ಅಂದ : "ನೀವು ಏನೇ ಮಾಡಿರಿ, ಬರಜಣ್ಣಾ. ನಾನು ನನ್ನ ಕಠಾರಿ ಬಿಡುವವನಲ್ಲ. ಚೆನ್ನಾಗಿ ಬಚ್ಚಿಡುತ್ತೇನೆ."

ಬರಜೂ ನಕ್ಕು ನುಡಿದ : "ಮೊದಲು ನಿನ್ನ ಆ ಕಠಾರಿ ಹಳ್ಳಕ್ಕೆ ಒಗೆ-ಹಿಂದಿನಿಂದ ಏನು ಮಾಡುವದಿದೆಯೋ ನಾನು ನೋಡಿಕೊಳ್ಳುತ್ತೇನೆ."

ರೂಪ ಜೈನಾ ಮತ್ತು ಬಾಂಛಾ ಇಬ್ಬರೂ ಹೇಳಿದರು : "ಬರಜೂ ಅಣ್ಣನಿಗೆ ಏನೋ ಸಿದ್ಧಿ ಆಗಿದೆ. ಹೇಗೆ ಹೆಕ್ಕಿ ಹೆಕ್ಕಿ ಮುತ್ತಿನಂಥ ಮಾತಾಡುತ್ತಾನೆ."

ರೂಪ ನುಡಿದ : "ಹೊಟ್ಟೆ ಸಿಗಿದರೆ ಒಂದು ಅಕ್ಷರ ಹೊರಡದ ಆಸಾಮಿ ನೀನು. ನೀನು ಮತ್ತೇನು ಆಡಬಲ್ಲೆ? ಅಲ್ಲೋ ಹುಂಬಾ, ಹೀಗೆ ಸಿದ್ಧಿ ಇಲ್ಲವಾದರೆ ಸರಕಾರ ಅವನನ್ನು ಊರ ಸರಪಂಚನಾಗಿ ಸುಮ್ಮನೇ ನೇಮಿಸುತ್ತಿತ್ತೇ?"

~*~*~*~

೧೦

ಬರುವ ವೈಶಾಖದಲ್ಲಿ ಸೋನಾಳ ಮದುವೆ. ಕಾಳು ಗೇರುವದು, ಮೆರಿಯುವದು, ಉದ್ದು ಬೀಸುವದು ಮುಂತಾದ ಕೆಲಸಗಳ ಭರದಲ್ಲಿ ಹಾರಾಳ ತಾಯಿಗೆ ತೆರಪೆಂಬುದೇ ಇಲ್ಲ.

ನೇತ್ರಮಣಿ ಹಟ ಹಿಡಿದಳು : "ನಾನು ತವರ ಮನೆಗೆ ಹೋಗುತ್ತೇನೆ. ಅಣ್ಣನಿಗೆ ಸುದ್ದಿ ತಿಳಿಸಿರಿ."

ಭಕಡಿ ಆಕಾಶದ ಕಡೆಗೆ ಕಣ್ಣೆತ್ತಿದ. ಬೇರೆ ಆದ ಹೊರತು ಬೇರೆ ಗತಿ ಇರಲಿಲ್ಲ.

ಭಕಡಿ ಸನಿಯಾನೊಂದಿಗೆ ಹೇಳಿದ : ಹೆಸರಿನ ಒಂದು ಬೇರೆ ಕಣಜ ಕಟ್ಟಲಿಕ್ಕೆ ಸನಿಯಾ 'ಛಮಾಸಿ' ಆಳು. ಅಂದರೆ ಆರು ಮಾಸ ಬರಜೂನ ಮನೆಯಲ್ಲಿ ಕೆಲಸ ಮಾಡುತ್ತಾನೆ. ಉಳಿದ ಆರು ತಿಂಗಳು ಅಲ್ಲಲ್ಲಿ ಎಲ್ಲಾದರೂ ಕೂಲಿ ಹುಡುಕುತ್ತಾನೆ. ಭಕಡಿಯ ಈ ಮಾತು ಆತ ಕೇಳಿ ಬೆಚ್ಚಿ ಬೆರಗಾದ. ಭಕಡಿ ತಿರುಗಿ ಹೇಳಿದ : "ಏನೋ ತಿಳಿಯಲಿಲ್ಲವೆ ಹೇಳಿದ್ದು?"

ಸನಿಯಾ ಅಂದ : "ನೀವು ಹೇಳುವದಾದರೂ ಏನು? ಬೇರೆ ಕಣಜ ಕಟ್ಟುವದು ಏಕೆ?"

"ನಿನಗೇಕೆ ಆ ಪಂಚಾಯತಿ! ಹೇಳಿದಷ್ಟು ಮಾಡುವದು ನೀನು ನೋಡಿಕೋ. ಸುಂಠಿಯ ವ್ಯಾಪಾರಿಗೆ ದೋಣಿಯ ಕ್ರಯದ ಉಸಾಬರಿ ಏಕೆ?"

ಸನಿಯಾ ಅಂದ : "ಸುಂಠಿಯ ವ್ಯಾಪಾರವೆಂದರೇನು? ದೋಣಿಯ ಕ್ರಯವೆಂದರೇನು? ನನಗೆ ಇದೆಲ್ಲ ಏನೂ ತಿಳಿಯಲಿಲ್ಲ. ಬೇರೆ ಆಗುವಿರಾ? ಯಾರಿಂದ ಬೇರೆ? ಬರಜೂ ಪಧಾನರಂಥ ಅಣ್ಣನಿಂದ? ಲಕ್ಷಕ್ಕೆ ಒಬ್ಬ—ರತ್ನದಂಥ ಮನುಷ್ಯ!"

"ಎಲೋ ನಿನ್ನ ಸಂಗಡ ಈ ಪಂಚಾಯತಿ ಮಾಡಲು ಯಾರು ಬಂದಿದ್ದಾರೆ? ಹೇಳಿದಷ್ಟು ಕೆಲಸ ಸುಮ್ಮನೆ ಮಾಡು!"

"ಹೌದು, ನಾವು ಕೂಲಿಯಾಳು. ಚಿಕ್ಕ ಬುದ್ಧಿಯ ಜನ, ನಮಗೇಕೆ ಈ ಉಸಾಬರಿ?" ಅಂದ ಸನಿಯಾ. ಆದರೆ ಮನಸ್ಸಿನಲ್ಲಿಯೇ ಅಂದುಕೊಂಡ : " ಇವನೆಂಥ ಮನುಷ್ಯ? ಒಂದೆಡೆಗೆ ಬರಜೂ ಪಧಾನನಂಥ ಅಣ್ಣ; ಇನ್ನೊಂದೆಡೆಗೆ ಈ ತಮ್ಮ; ಇವರಲ್ಲಿ ಯಾವ ಸಾಮ್ಯ–ಏನು ಹೋಲಿಕೆ!"

ಬರಜೂ ಹೋರಿ ಕೊಂಡುಕೊಳ್ಳಲಿಕ್ಕೆ ಎರಡು ದಿನಗಳಿಂದಲೂ ಹೊರಗೆ ಹೋಗಿದ್ದನು. ಊರಲ್ಲಿ ಇರಲಿಲ್ಲ. ಮನೆಗೆ ಮರಳಿದಾಗ ಇದೆಲ್ಲ ಆತ ಕೇಳಿದ. ಮುಗುಳುನಗೆ ನಗುತ್ತಾ ಹಾರಾಳ ತಾಯಿ ಅಂದಳು : "ಒಳ್ಳೇದೆ ಆಯಿತು, ಬಿಡಿ. ಮುಟ್ಠಾಳನಿಗೆ ಮನೆ ಯಜಮಾನಿಕೆಯ ಬುದ್ಧಿಯಾದರೂ ಬರಲಿ."

"ಆಗಲಿ, ನಮಗೇನು ಅದರಿಂದ?" ಹಾರಾಳ ತಾಯಿ ನಗಹತ್ತಿದ್ದಳು. ಅವಳಿಗೆ ಏನೂ ಅರ್ಥವಾಗಲಿಲ್ಲ.

ಇಷ್ಟೊಂದು ಅರ್ಥವಾಯಿತು. ಬರಜೂ ಮಾಡುವದೆಲ್ಲ ಸರಿಯೇ. ಆಡುವದೆಲ್ಲ ಸತ್ಯವೇ. ಅಂದಾಗ ಹಾರಾಳ ತಾಯಿಗೆ ಅದು ಅರ್ಥವಾಗಲಿ ಬಿಡಲಿ. ಬರಜೂನಿಂದ ಅವಳೇನೂ ಬೇರೆಯಲ್ಲ.

ಬರಜೂ ಸನಿಯಾನಿಗೆ ಕೇಳಿದ : "ಏನೋ ಇದು ಯಾವ ಹೊಲದ ಹೆಸರು ಕಾಳು?"

"ಇದು ಆ ಐದು ಬಿಘೆ ಹೊಲದ ಹೆಸರು."

"ಬೇರೆ ಹೊಲಗಳ ಹೆಸರೂ ಬೆಳೆದಿದೆಯೇ?"

ಸನಿಯಾ ಅಂದ : "ಅದೆಲ್ಲ ನಾಳೆ ಕೊಯ್ಯುವೆವು. ಅದು ನಿಮ್ಮ ಕಣಜದಲ್ಲಿ ಇಡಬೇಕಲ್ಲವೇ?"

"ನನ್ನ ಕಣಜವೇನು? ಬೇರೆ ಉಂಟೇ? ಹಾಗಾದರೆ ಇದು ಯಾರದು?" ಬರಜೂ ನಗುತ್ತಲೇ ಕೇಳಿದ.

ಸನಿಯಾ ನುಡಿದ : "ತಿಳಿದೂ ತಿಳಿದೂ ಕೇಳುವಿರಾ? ಗಂಧದ ಕೊರಡು ಕಂಡೂ ಇದು ಕಟ್ಟಿಗೆಯೇ ಎಂದು ಕೇಳುವಿರಲ್ಲ! ಇದು ಛಕಡಿಯ ಕಣಜ. ಅವರೇ ಬೇರೆ ಕಟ್ಟಿಸಿದ್ದಾರೆ. ಅವರ ಹೆಸರು ಬೇರೆ ರಾಶಿ ಹಾಕಬೇಕು. ನಿಮ್ಮದು ಬೇರೆ ರಾಶಿ."

"ಅವನದು—ನನ್ನದು ಎನ್ನುವದೇನಿದೆ ಸನಿಯಾ? ಮಾತು ಇಲ್ಲಿಗೆ ಬಂದರೆ ಎಲ್ಲವೂ ಅವನದೇ; ನನ್ನದು ಏನೂ ಇಲ್ಲ. ಉಳಿದ ಹೆಸರೂ ಕೊಯ್ಯಿಸಿ ಅವನ ಕಣದಲ್ಲಿಯೇ ಅವನ ಹೆಸರಿನೊಂದಿಗೇ ರಾಶಿ ಹಾಕಿಬಿಡು."

ಸನಿಯಾನಿಗೆ ಅನಿಸಿತು : "ಇಂಥ ಮನುಷ್ಯನಿಗೆ ಏನೆನ್ನಬೇಕು?" ಆತ ಕೇಳಿದ : "ಹಾಗಾದರೆ ಎಲ್ಲ ಹೆಸರು ಅವರಿಗೇ ಹಾಕಬೇಕೆ?"

ಬರಜೂ ನಕ್ಕು ಅಂದ : "ಅಲ್ಲದೇ ಮತ್ತಾರು ಅದನ್ನು ಹಾಕಿಕೊಳ್ಳುವವರು? ಮೊದಲು ನಾನು ಹಾಕಿಕೊಳ್ಳುತ್ತಿದ್ದೆ. ಈಗ ಅವನು ಹಾಕಿಕೊಳ್ಳಲಿ. ಬೇರೆ ಇನ್ನಾರು?"

ಸನಿಯಾ ಬೆಕ್ಕಸ ಬೆರಗಾದ; "ಅಂದರೆ ಬೆಳೆಯಲ್ಲಿ ಪಾಲಾಗುವುದಿಲ್ಲವೆ?"

ಬರಜೂ ಅಂದ : "ಎಲೋ ಮುತ್ಥಾಳಾ, ನಾನು ಎಂದಾದರೂ ಪಾಲು ಮಾಡಿದ್ದು ನೋಡಿರುವೆಯಾ? ನಾನು ತೆಗೆದುಕೊಳ್ಳಲಿ, ಆತ ತೆಗೆದುಕೊಳ್ಳಲಿ–ಎರಡೂ ಒಂದೇ."

ಸನಿಯಾನಿಗೆ ಇದೇನೂ ಅರ್ಥವಾಗಲಿಲ್ಲ. ಆತ ಎಲ್ಲ ಹೆಸರು ಬೇಳೆ ಒಂದೇ ಕಣಜಕ್ಕೆ ತಂದು ರಾಶಿ ಹಾಕಿದ.

ಭಕಡಿ ಕೇಳಿದ : "ಏನೋ ಸನಿಯಾ, ಎಲ್ಲ ಬೇಳೆ ಇಲ್ಲಿಯೇ ತಂದು ಏಕೆ ರಾಶಿ ಒಟ್ಟಿರುವಿ?"

ಸನಿಯಾ ಅಂದ : "ಇದೆಲ್ಲ ನಿಮ್ಮದೇ."

ಭಕಡಿ ವಿಮನಸ್ಕನಾಗಿ ಕೇಳಿದ : "ಏಕೆ ಏನಾಯಿತು?"

"ನಿಮ್ಮ ಅಣ್ಣ ಅಂದಿದ್ದಾರೆ, ಎಲ್ಲ ಹೆಸರೂ ನಿಮಗೆ ಸಿಗಬೇಕು."

ಇಂಥ ಮಾತು ಕೇಳಿ ಕೆರಳಿ ಕೂದಲು ಕಿತ್ತುಕೊಳ್ಳದಿರುವ ಅಂಥ ಋಷಿಯಾದರೂ ಯತಿಯಾದರೂ ಯಾರು? ತಾನು ಸುಲಭವಾಗಿ ಬೇರೆ ಆಗಬಹುದೆಂದು ಭಕಡಿ ಭಾವಿಸಿದ. ಆದರೆ ಇದೇನು ತೊಡಕು ಉಂಟಾಯಿತು? ನೇತ್ರಮಣಿ ಎಲ್ಲ ಕೇಳಿ ಅಂದಳು : "ಸರಿ ಒಳ್ಳೇದೇ ಆಯಿತು. ನೀವು ಎಲ್ಲ ಹೆಸರು ಒಯ್ದು ಮಾರಿಬಿಡಿ. ನೋಡಿಯಾದರೂ ನೋಡೋಣ. ಎಷ್ಟು ಸತ್ಯವಂತಿಕೆ ಮೆರೆಯಿಸುತ್ತಾರೆಂದು!"

ಹರಿಮಿಶ್ರರು ಕೇಳಿ ಅಂದರು : "ಚೆನ್ನಾಯಿತು, ಬೆಕ್ಕಿನ ಭಾಗ್ಯದಿಂದಲೆ ಸಿಕ್ಕೆ ಹರಿಯಿತು. ಮತ್ತೆ ಇಂಥ ಸಂಧಿಬಿಡಬಾರದು."

ಭಕಡಿ ಅಂದ : "ಕಾಕಾ, ಅವರು ಪ್ರತಿಯೊಂದು ಸಂಗತಿಯಲ್ಲಿಯೂ ಹೀಗೆ ಮಾಡುತ್ತ ನಡೆಯುವರು. ಮತ್ತು ಇತ್ತ ಅವರ ಮಗಳ ಮದುವೆಯೂ ಆಗಲಿದೆ."

ಮಿಶ್ರರು ಕಣ್ಣು ಹಾರಿಸಿ ಅಂದರು : "ನಿಜವಾದ ಗುಟ್ಟು ಅಲ್ಲಿದೆ. ನನ್ನಿಂದ ಅಡಗಿದ್ದೇನು? ನೀನು ಕಂಚುಗಾರನ ಮನೆಯ ಪಾರಿವಾಳ. ಎಂಥ ಸದ್ದಾದರೂ ಕಕ್ಕಾವಿಕ್ಕಿಯಾಗುವನಂಥವನಲ್ಲ."

ಮಿಶ್ರರ ಹೊಗಳಿಕೆಯಿಂದ ಭಕಡಿಯ ಎದೆ ಎಂಟಂಗುಲ ಅಗಲವಾಯಿತು. "ನಿಜ ಸಂಗತಿ ಏನೆಂಬುದು ನಾನು ಅರಿಯಲಾರೆ ಕಾಕಾ. ಆ ಹೆಂಗಸು ನಾನು ಟೊಣಪನೆಂದೇ ತಿಳಿಯುತ್ತಾಳೆ."

ಮಿಶ್ರರು ಆಡಿದರು : "ಅಲ್ಲೋ ನೀನು ಟೊಣಪನೆಂದಾದರೆ ಲೋಕದಲ್ಲಿ ಜಾಣರು ಯಾರು?"

ಭಕಡಿ ಅಂದ : "ಹೆಸರು ಹೊತ್ತಾಯಿತು. ಈಗ ಏನು ಮಾಡುವೆನು ಗೊತ್ತೋ?"

"ಮತ್ತೆ ಬೆಲ್ಲ."

"ಸರಿ ಕಾಕಾ, ನಿಮಗೆ ಗೊತ್ತಿಲ್ಲವೆಂಬುದೇನಿದೆ? ನಿಮಗೆ ಹೇಳಿಕೊಡಬೇಕೇ? ಹೌದು, ಬೆಲ್ಲದ ವಿಷಯವೇ ಈಗ ಎತ್ತುತ್ತಿದ್ದೆ. ಬೆಲ್ಲದ ಹತ್ತು-ಹನ್ನೆರಡು ಹೇರುಗಳೊಳಗಿಂದ ನನ್ನ ಅಂಗಡಿಗೆ ಸಿಕ್ಕಿದ್ದು ಬರೇ ಎರಡು. ಉಳಿದ ಎಲ್ಲ ಹೇರುಗಳನ್ನು ಮನೆಯಲ್ಲಿ ಅಡಗಿಸಿ ಇಟ್ಟಿದ್ದಾರೆ—ಖರ್ಚಿಗಾಗಿ ನಾಲ್ಕೈದು ಹೊರಗೆ ಇಟ್ಟಿದ್ದಾರೆ. ಇನ್ನೂ ಒಂದೆರಡು ಬಿಟ್ಟಿರಬಹುದು—ಮದುವೆಯ ಖರ್ಚಿಗಾಗಿ."

"ಅಲ್ಲೊ, ಇದೆಲ್ಲ ಹೇಳದೆ ನನಗೆ ತಿಳಿಯುವದೆಂತು? ಹದಿನೆರಡು ಹೇರುಗಳಲ್ಲಿ ನಿನ್ನ ಪಾಲಿಗೆ ಬರಬೇಕು ಆರು. ನಿನಗೆ ಸಿಕ್ಕವು ಬರೇ ಎರಡು. ಉಳಿದ ನಾಲ್ಕರಲ್ಲಿಯೂ ನಿನ್ನ ಹಕ್ಕು ಇದೆಯಲ್ಲ. ಅವು ಮನೆಯ ಒಳಗಿರಲಿ ಹೊರಗಿರಲಿ."

"ಹೌದು ಕಾಕಾ, ಆ ಹೊಯ್ಮಾಲಿ ನನಗೆ ಎಷ್ಟೆಲ್ಲ ಬಾರಿ ಹೇಳಿದಳು—ಉಳಿದ ಬೆಲ್ಲವೆಲ್ಲ ನಮ್ಮ ಮಲಗುವ ಕೋಣೆಯಲಿ ತಂದಿಡಲಿಕ್ಕೆ. ನಮ್ಮ ಬೆಲ್ಲ ಅವರಲ್ಲಿ ಏಕೆ ಬಿದ್ದಿರಬೇಕು ಎಂತ."

"ಅಲ್ಲೋ ಆ ನಿನ್ನ ಹೊಯ್ಮಾಲಿ ಒಳ್ಳೇ ಮನೆತನಸ್ಥ ಹೆಣ್ಣು. ಅವಳು ಹೇಳುವದೆಲ್ಲ ಮನೆಯ ಯಜಮಾನಿಕೆಯ ದೃಷ್ಟಿಯಿಂದಲೇ ಹೇಳುವಳು."

ಭಕಡಿ ನಡುಮನೆಯಿಂದ ಮೂರು ಬೆಲ್ಲದ ಚೀಲಹೊದ್ದ ಹೇರುಗಳನ್ನು ತಂದು ತನ್ನ ಕೋಣೆಯಲ್ಲಿ ಇಟ್ಟುಕೊಂಡ. ಹಾರಾಳ ತಾಯಿ ಅದನ್ನು ನೋಡಿಯೂ ತುಟಿ ಬಿಚ್ಚಲಿಲ್ಲ. ಭಕಡಿ ಹೇಳಿದ್ದು, ಆಕೆ ಕೇಳಿದ್ದು ಇಷ್ಟೇ—"ಮದುವೆಯ ಬಗ್ಗೆ ಬೆಲ್ಲ ಬೇಕಾದರೆ ಕ್ರಯಕ್ಕೆ ತರಬಹುದು. ಈ ಬೆಲ್ಲವೆಲ್ಲ ಅಂಗಡಿಗೆ ಹೋಗುವದು."

ಬರಜೂ ಮನೆಗೆ ಬಂದನು. ಹಾರಾಳ ತಾಯಿ ಹೇಳಿದಳು : "ಇದೇನು ಎಲ್ಲ ಬೆಲ್ಲ ಭಕಡಿ ಹೊತ್ತು ಒಯ್ದ."

ಬರಜೂ ಅಂದ : "ಮದುವೆಗಾಗಿ ಬೇರೆ ಬೆಲ್ಲ ಕೊಂಡರಾಯಿತು. ಅದಕ್ಕೇ ಅವನು ಈ ಬೆಲ್ಲ ಒಯ್ದನು."

"ಇದೆಂಥ ಮಾತು? ಬೆಲ್ಲ ಕೊಂಡುಕೊಳ್ಳುವದೇಕೆ?"

"ಕೊಂಡುಕೊಳ್ಳದೆ ಮದುವೆ ಸಾಗುವದು ಹೇಗೆ?"

ಹಾರಾಳ ತಾಯಿ ಸುಮ್ಮನಾದಳು. ಈ ಮಾತಿಗೆ ಆಕೆ ಮರುಮಾತು ಏನು ಆಡುವಳು?

ಸನಿಯಾ ಅಂದ : "ಆಗಬಾರದ್ದು ಆಗುತ್ತಿದೆ. ಹಗಲು-ರಾತ್ರೆಯೆಲ್ಲ ಹಂದಿ ಹದ್ದು ಓಡಿಸಿದವರು ಯಾರು? ನೀರು ಹೊಯ್ದವರು ಯಾರು? ದುಡಿದವರು ಯಾರು? ಈಗ ಭೋಗಿಸುವವರು ಯಾರು?"

ನೇತ್ರಾ ಓಘಾ ಅಂದ : "ಅಯ್ಯೋ ಈತ ಮನುಷ್ಯನಾಗಿದ್ದರೆ ಹೀಗೆ ಎಂದೂ ಮಾಡುತ್ತಿರಲಿಲ್ಲ, ಇಂಥ ತಮ್ಮನಿಂದ ಆಗುವದೇನಿದೆ? ಬರೇ ಬೇರೆಯವರ ಹೇಳಿಕೆಯಂತೆ ಹೀಗೆ ನಡೆಯುತ್ತಾ ಇದ್ದಾನೆ. ತನ್ನದೇ ಬುದ್ಧಿ ಇಲ್ಲ ಸ್ವಲ್ಪವೂ?"

"ಸ್ವಲ್ಪವಾದರೂ ಬುದ್ಧಿ ಇದ್ದರೆ ಹೀಗೆ ಯಾರು ನಡೆಯುತ್ತಿದ್ದರು. ಗಳಿಸಿದ್ದೆಲ್ಲ ಈ ಮನೆಯಲ್ಲಿಯೇ ಉಳಿಯಿತು. ಅದರೊಳಗಿಂದಲೇ ಎಲ್ಲ ಖರ್ಚು ನಡೆಯುವುದಿಲ್ಲವೇ? ಅದರೊಳಗಿಂದಲೇ ಅಂಗಡಿಗೆ ಎರಡು ಹೇರು ಬೆಲ್ಲ ಹೋಗಿದ್ದು. ಅದಕ್ಕೆ ಅವನ ಅಣ್ಣ ಒಂದು ಬಿಲ್ಲಿಯಾದರೂ ಕೇಳಿದ್ದುಂಟೇ? ಮದುವೆಗಾಗಿ ಎರಡು ಹೇರು ಬೆಲ್ಲ ಇಟ್ಟಿದ್ದರು. ಅದನ್ನೂ ಈಗ ಎತ್ತಿದ್ದಾಯಿತು. ನೀನೊಬ್ಬ ಸ್ವಾರ್ಥಿಯಾದರೆ ಎಲ್ಲರೂ ಸ್ವಾರ್ಥಿಗಳೇನು? ಎಂಥ ಸಣ್ಣ ಬುದ್ಧಿ!"

ಮನೆಯಲ್ಲಿ ಏನೇ ಆದರೂ ಸರಿ—ಅದರ ಸುದ್ದಿ ಹೊರಗೆ ಹೋಗ ಬಾರದೆಂಬುದೊಂದೇ ಬರಜೂನ ಇಚ್ಛೆ. ಆದರೆ ಅವನಿಗೆ ಗೊತ್ತಿಲ್ಲ. ಮನೆ ಮುರಿಯುವ ಬುದ್ಧಿಯಿಂದ ಸುತ್ತಲೂ ಕೆಲಸ ನಡೆಯುತ್ತಿದ್ದಾಗ ಅವನೊಬ್ಬನೇ ಗಟ್ಟಿಯಾಗಿ ನೆಲ ಕಚ್ಚಿ ಕೂತಿದ್ದಾನೆ. ಅವನು ತಾನೇ ಅಲುಗದಿದ್ದರೆ ಅವನನ್ನು—ಮನೆಯನ್ನು ಅಲುಗಿಸಲು ಯಾರಿಗೆ ಎದೆ ಇದೆ. ಊರಲ್ಲೆಲ್ಲ ಅವನು ಒಕ್ಕಟ್ಟು ಹಬ್ಬಿಸುತ್ತ ನಡೆದಿದ್ದಾನೆ. ಊರ ಜನಕ್ಕೆಲ್ಲ ಅಣ್ಣತಮ್ಮಂದಿರಂತೆ ಕೂಡಲು ಕಲಿಸುವ ಹೆಣಗಾಟಕ್ಕೆ ಬಿದ್ದಿದ್ದಾನೆ. ಅಂಥಲ್ಲಿ ತನ್ನ ಮನೆಯಲ್ಲಿ ಇಬ್ಬರು ಅಣ್ಣ ತಮ್ಮಂದಿರು ಬೇರೆಯಾಗುವದೇ? ಇದು ಶಕ್ಯವಿಲ್ಲ. ಇದು ಆಗದ ಮಾತು. ಅಪ್ಪ ಹೇಳಿ ಹೋಗಿಲ್ಲವೇ? ಮನೆಯಲ್ಲಿ ಒಲೆ ಬೇರೆ ಹೂಡಬಾರದು, ಗದ್ದೆಯಲ್ಲಿ ಮೇರೆ ಬೇರೆ ಏಳದಿರಲಿ. ಬರಜೂ ಪಧಾನ ಇಷ್ಟೊಂದು ಮಾಡಲಾರನೇ? ನೋಡೋಣ. ಪ್ರಾಣವೇ ಹೋದರೂ ಹೋಗಲಿ.

ನಿನ್ನೆಯೇ ಸಂಜೆಗೆ ಊರ ಎಲ್ಲ ಮಂದಿ ರೈತನೋ, ಹೊಲೆಯನೋ, ಮಿಠಾಯಿಗಾರನೋ, ಕ್ಷೌರಿಕನೋ ಎಲ್ಲರೂ ಕೂಡಿ ಮಂಗಲಾದೇವಿಯ ಪಾದತೀರ್ಥ ಕುಡಿದು ಒಬ್ಬರಿಗೊಬ್ಬರು ಅಣ್ಣ-ತಮ್ಮಂದಿರೆಂದು ಕರೆಯತೊಡಗಿದ್ದರು. ಇಂದು ಬರಜೂ ಛಕಡಿ ಒಂದೇ ರಕ್ತದ ಎರಡು ಬಿಂದುಗಳು. ಒಂದೇ ತಾಯ್ತಂದೆಗಳ ಒಡಲಿನಿಂದ ಹುಟ್ಟಿ ಬಂದವರು—ಬೇರೆ ಆಗುವರು? ನಾಳೆ ಮುಂಜಾನೆ ಚಂದರಾ, ಜಗುವಾ, ಹೇಳಬಹುದು.

"ಬರಜಣ್ಣಾ, ಮನೆಯಲ್ಲಿಯೇ ಮೇಳವಿಲ್ಲದಿದ್ದಾಗ ಒಂದೇ ಬಸಿರಿನಿಂದ ಹುಟ್ಟಿ ಬಂದ, ಒಂದೇ ಸ್ಥಳದಲ್ಲಿ ಬೆಳೆದ ಅಣ್ಣ-ತಮ್ಮಂದಿರು ಬೇರೆ ಆಗಿಬಿಟ್ಟರೆ ಇಡೀ ಊರ ಮಂದಿ ಎಲ್ಲ ಒಡಹುಟ್ಟಿದವರಂತೆ ಒಡನಾಡುವುದು ಹೇಗೆ? ಒಬ್ಬ ಕಾಹಿಲೆ ಬಿದ್ದರೆ ಇನ್ನೊಬ್ಬ ಅವನ ಬಳಿಗೆ ಕೂತು ಕಾಲು ಒತ್ತುವದು ಹೇಗೆ?" ಬರಜೂ ಜೀವಂತನಿದ್ದಾಗಲೇ ಇಂಥ ಮಾತು ಕೇಳುವಂತಾದರೆ ಆತ ಜೀವಂತ ಉಳಿದು ಏನು ಪ್ರಯೋಜನ?

ಕೋಲು ಮುರಿದರೂ ಅಡ್ಡಿ ಇಲ್ಲ, ಮಣಿಯಬಾರದು. ಬರಜೂ ಪಧಾನ ತನ್ನ ತಂದೆಯ ಮಗ. ಹಾರಾಳ ಮದುವೆ ಆದಂತೆಯೇ ಸೋನಾ-ಮೋತಿಯರ ಮದುವೆಯೂ ಆಗಲಿಕ್ಕೆ ಬೇಕು. ಹಾರಾಳ ಮದುವೆಯ ಸಮಯ ಅವನು ಎಲ್ಲೂ ಹೂಳಿಟ್ಟ ಹಣವನ್ನು ಹೊರಗೆ ತೆಗೆದಿದ್ದಿಲ್ಲ. ಇದೇ ಹೊಲ-ಮನೆಯಿಂದ ಎಲ್ಲ ನಿರ್ವಾಹ ಸಾಗಿತು. ಸೋನಾ-ಮೋತಿಯರ ಬಗ್ಗೆ ಏಕೆ ಹೆದರಬೇಕು? ಅವರನ್ನು ಹುಟ್ಟಿಸಿದ ಸ್ವಾಮಿಯೇ ಅವರಿಗಾಗಿ ಎಲ್ಲಕ್ಕೂ ಮೊದಲು ತಾಯ ಮೊಲೆಯಲ್ಲಿ ಹಾಲು ತುಂಬಿಟ್ಟಿದ್ದನು. ಈಗ ಅವನೇ ಎಲ್ಲ ನಿರ್ವಾಹಕ್ಕೆ ಹೊಣೆಗಾರನಲ್ಲವೇ-ಅಂದಾಗ ಬರಜೂ ಯಾವ ಮಾತಿಗಾಗಿ ಯೋಚನೆ ಮಾಡಿ ತಲೆ ಕೆಡಿಸಿಕೊಳ್ಳಬೇಕು?

ಮಾಡುವದಿದ್ದರೆ ಅವನೇ ಮಾಡುವನು. ಮಾಡಿಸುವದಾದರೂ ಅವನೇ ಮಾಡಿಸುವನು. ಬರಜೂನಿಗೆ ಏಕೆ ಚಿಂತೆ? ಮುದಿ ಪಧಾನ ಸಾಯುವಾಗ ಆಕಾಶದ ಕಡೆಗೆ ಕೈಮಾಡಿ ಹೇಳಿ ಹೋಗಿದ್ದ : "ನಿಮಗಾಗಿ ಧರ್ಮವೊಂದೇ ಇಟ್ಟು ಹೋಗುತ್ತೇನೆ." ಆದರೆ ಎಲ್ಲಿ ಯಾರ ಹತ್ತಿರ ಇಟ್ಟಿದ್ದಾನೆ. ಬರಜೂ ಭಕಡಿಯ ಹತ್ತಿರವೋ? ಬೇರೆ ಯಾರ ಹತ್ತಿರ? ಯಾರ ಹತ್ತಿರವೇ ಇಟ್ಟಿದ್ದಿರಲಿ ಧರ್ಮ ಎಲ್ಲರಿಗಾಗಿಯೇ ಇದೇ. ಎಲ್ಲವರದಾಗಿಯೇ ಇದೆ. ಮನೆ-ಮನೆಯಲ್ಲಿ ಧರ್ಮವಿದೆ. ಬರಜೂಗೆ ಭಯವೇತರದು? ಭಯಪಡುವವರೇ ನಾಸ್ತಿಕರು. ಬರಜೂನಿಗೆ ಧರ್ಮ ಗಿಡ-ಮರಗಳಲ್ಲಿ, ಹೊಳೆ-ಗುಡ್ಡಗಳಲ್ಲಿ ಬನ-ಬಸ್ತಿಗಳಲ್ಲಿ ಇಡೀ ಜಗತ್ತಿನಲ್ಲಿ ತುಂಬಿದೆ. ಜನಸಂದಣಿಯ ಸಂತೆಯಲ್ಲಿದ್ದ ಧರ್ಮವೇ ಶೂನ್ಯ ಸುಡುಗಾಡಿನಲ್ಲಿಯೂ ಇದೆ. ಅಂದಮೇಲೆ ಬರಜೂಗೆ ಭಯವೇಕೆ? ಧ್ರುವ ಹುಡುಗನೇ ಇದ್ದಿಲ್ಲವೇ? ಅವನು ಏಕೆ ಕಾಡು-ಮೇಡು ಲೆಕ್ಕಿಸಲಿಲ್ಲ? ಹುಲಿ ತೋಳ ಲೆಕ್ಕಿಸಲಿಲ್ಲ? ಅಲ್ಲಿಯೇ ಬರಜೂ ತಲೆ ತಗ್ಗಿಸಿ ನುಡಿದ : "ಹೇ ಧರ್ಮ ದೇವನೇ ನನಗೆ ಬಲ ನೀಡು, ಸಾಹಸ ನೀಡು. ಪಾಪವಿದ್ದಲ್ಲಿ, ಅಧರ್ಮವಿದ್ದಲ್ಲಿ ಅದಕ್ಕೆ ನಾನು ಎದೆಯೊಡ್ಡುವಂತಾಗಲಿ, ಪ್ರಾಣ ಒಡ್ಡುವಂತಾಗಲಿ. ಪಾಪವನ್ನು ಧ್ವಂಸ ಮಾಡಲಿಕ್ಕೆ ನನ್ನ ಎಲುಬುಗಳಿಂದ ವಜ್ರ ಉಂಟಾಗಲಿ."

ಸೋನಾಳ ಮದುವೆ ಸಾಂಗವಾಯಿತು. ಕಿರಿಯ ಸೊಸೆಗಾಗಿ ಒಳ್ಳೇ ಸೀರೆ ಕೊಂಡದ್ದಾಯಿತು. ಆದರೆ ಆಕೆಯ ಮನಸ್ಸು ಮೆಚ್ಚಲಿಲ್ಲ.

"ಅಯ್ಯೋ, ಒಂದರ ಹಿಂದೆ ಒಂದು ಈ ಲಗ್ನಗಳ ಲಗ್ಗೆಗೆ ಇಡೀ ಮನೆ ಬರಿದಾಗಿಬಿಟ್ಟಿತು—ಬರೇ ನನ್ನನ್ನು ಮರುಳು ಮಾಡಲಿಕ್ಕೆ ಈ ಹೊಸ ಸೀರೆಯೊಂದು ತಂದಿದ್ದಾರೆ. ಇಂಥ ಎಷ್ಟೋ ಸೀರೆ ನಾನು ಕಂಡಿದ್ದೇನೆ. ಸೀರೆ ನಿಮ್ಮದು, ನಿಮ್ಮೊಟ್ಟಿಗೆ ಇಡಿರಿ ಈ ಸೀರೆ."

ಯುಗಯುಗಗಳಿಂದಲೂ ಮನುಷ್ಯರ ಒಂದು ಪ್ರವಾಹ ಹರಿದು ಹೋಗುತ್ತಿದೆ. ಮನುಷ್ಯನನ್ನು ಮನುಷ್ಯ ಮೆಟ್ಟಿ ತುಳಿದು ಹೋಗುತ್ತಿದ್ದಾನೆ. ಕಾಲ ಕೆಳಗೆ ಬಿದ್ದ ಅರೆ

ಸತ್ತ ಮನುಷ್ಯನ "ಅಯ್ಯೋs ಸತ್ತೆ" "ಅಯ್ಯೋs ಸತ್ತೆ" ಎಂಬ ಕೂಗು ಮೆಟ್ಟಿ ನಿಂತವನ ಕಿವಿಯ ತನಕ ಮುಟ್ಟುವದಿಲ್ಲ. ಇಬ್ಬರೂ ಒಂದೇ ಪ್ರವಾಹದಲ್ಲಿ ಹರಿದು ಹೋಗುತ್ತಿದ್ದಾರೆ. ಒಂದು ಕ್ಷಣಕಾಲವೂ ತಡೆ ಇಲ್ಲ—ಬಿಡುವಿಲ್ಲ. 'ಯಾರು ಕೂಗುವರು ಕೇಳೋಣ' ಎಂದು ಕಿವಿಗೊಡುವದಿಲ್ಲ. ತೆರೆಯ ಮೇಲೆ ತೆರೆ ನುಗ್ಗಿ ಬರುತ್ತದೆ. ತೇಲುವರು ಯಾರು–ಮುಳುಗುವರು ಯಾರು? ಯಾರಿಗೂ ಯಾರದೂ ಗೊತ್ತಿಲ್ಲ. ಗೊಡವೆ ಇಲ್ಲ. ಮನುಷ್ಯ ಇಂದಿಗೂ ತನ್ನ ಅಣ್ಣ–ತಮ್ಮಂದಿರ ನೆತ್ತರ ಹೀರುವದಕ್ಕೆ ಹೇಸಿಲ್ಲ–ಓಕರಿಸಿಲ್ಲ. ಇನ್ನು ಮುಂದೆ ಆತ ಸಭ್ಯನಾಗುವದು ಯಾವಾಗ? ಕಟ್ಟಡವಿ ಇದ್ದಲ್ಲಿ ಭವ್ಯ ಕಟ್ಟಡಗಳು ಎದ್ದು ನಿಂತವು. ಆದರೂ ಮನುಷ್ಯನ ಈ ದಾಹ ಇದ್ದಂತೆಯೇ ಇದೆ—ಜಗಳ–ತಂಟೆ–ಹೆಣಗಾಟ–ಹೋರಾಟ–ಹೆಮ್ಮೆ ಎಲ್ಲವೂ ಇದ್ದಂತೆ ಇವೆ.

ಸೂರ್ಯನ ಸುತ್ತಲೂ ಭೂಮಿ ತಿರುಗುತ್ತ ಸಾಗಿದೆ. ಹಗಲು–ಇರುಳು ವರ್ಷ–ತಿಂಗಳು ಉಂಟಾಗಿ ಅಳಿದು ಹೋಗುತ್ತವೆ. ಸಂಗಡವೇ ಮನುಷ್ಯನ ಈ ಜಾತಿ ಗುಣ ಒಂದೇ ರೀತಿ ನಡೆದು ಬಂದಿದೆ. ಎಷ್ಟು ಜಗಳ–ಕಲಹ, ಯುದ್ಧ–ವಿಪ್ಲವ. ರಾಜಾಧಿರಾಜರು ಎಲ್ಲಿ ನಾಮನಿಃಶೇಷವಾಗಿ ಹೋದರೊ ಗೊತ್ತಿಲ್ಲ. ಕೃತ–ತ್ರೇತ–ದ್ವಾಪರದಲ್ಲಿ ಹೇಗೋ ಈ ಕಲಿಯುಗದಲ್ಲಿಯೂ ಹಾಗೆಯೇ. ಕಾಲದ ಈ ಚಕ್ರದಲ್ಲಿ ಯಾರ ಪ್ರಭಾವ ಎಷ್ಟು ಉಳಿದಿದೆ? ಅದರ ಲೆಕ್ಕ ಇಟ್ಟವರು ಯಾರು? ಬರಜೂ ಪಧಾನ? ಬರಜೂ ಪಧಾನ ಇದರಲ್ಲಿ ಯಾರು? ಈ ಅನಂತ ಪ್ರವಾಹದಲ್ಲಿ ಅವನೊಬ್ಬ ಕಸ–ಕಡ್ಡಿ. ಎಷ್ಟು ಸುಳಿ, ಎಷ್ಟು ಗುಳ್ಳೆ ಪುಟಿಯುತ್ತ ಅಲೆಯುತ್ತ ಕುಣಿಯುತ್ತ ಸಾಗಿವೆ! —ಆ ನಡುವೆಯೇ ತಡೆದು ನಿಂತಿದ್ದಾನೆ. ತಡೆ, ಅದಾರು ಕೂಗಿದರು? ಅದಾರು ಕರೆದರು? ತನ್ನ ತಮ್ಮ, ತನ್ನ ಜಾತಿ, ತನ್ನ ಕುಲ—ಅವುಗಳನ್ನೇ ತುಳಿದು ಮೆಟ್ಟಿ ನೀನು ನುಗ್ಗಿ ಮುಂದೆ ನಡೆಯುತ್ತಿರುವಿ. ಯಾರೋ ರೋಗದಿಂದ ನರಳುತ್ತಿದ್ದಾರೆ. ಅವರಿಗೆ ಕೊಂಚ ಮದ್ದು ಕೊಡಲು ಯಾರೂ ಇಲ್ಲ. ಅವರ ಗಂಟಿನಲ್ಲಿ ಒಂದು ಬಿಡಿಕಾಸೂ ಇಲ್ಲ. ಇನ್ನಾರೋ ಒಪ್ಪತ್ತು ಉಂಡು ಮುಪ್ಪತ್ತು ಉಪವಾಸ ಮಲಗಿದ್ದಾನೆ. ಮಡಿಲೊಳಗೆ ಮಲಗಿದ ಮಗುವಿಗಾಗಿ ಮಾ೯ಯ ಮೊಲೆಯಲ್ಲಿ ಹಾಲೇ ಇಲ್ಲ. ಮೇಲೆ ಯಾರದೋ ಬೆನ್ನಿನ ಮೇಲೆ ಏಟಗಳು ಬೀಳುತ್ತವೆ. ಮಾನವ ಜಾತಿಯೇ ತುಸು ತಡೆ. ರಾಜರು–ಮಹಾರಾಜರೆಲ್ಲ ನಡೆದು ಬಿಟ್ಟರು. ನೀನು ತುಸುವಾದರೂ ನಿಲ್ಲು. ಇದು ಯಾರ ಮೊರೆಯೋ ಕೇಳು. ಮಾನವನದೇ ಕರೆಯೋ, ಬೇರೆ ಯಾರದೋ? ಕಿವಿಯಾದರೂ ಕೊಡು.

ಬರಜೂ ಪಧಾನ ಈ ಮಾನವ ಪ್ರವಾಹದಲ್ಲಿ ತಡೆದು ನಿಂತನು. ಅವನ ಕಿವಿಗಳಿಗೆ ಕೇಳಿಸಿತು—ಬೇನಿಗರ, ಅರೆಸತ್ತವರ, ಹಸಿದವರ, ಹೊಡೆತ ತಿಂದವರ, ಕೂಗು–ಕರೆ. ಇನ್ನೇಕೆ ಇನ್ನೇತರ ಹೆದರಿಕೆ ಅವನಿಗೆ? ಮನೆಮನೆ ಬಿಕ್ಕೆ ಬೇಡುವಂತಾದರೂ, ಹೊಡೆತ ತಿಂದು ತಿಂದು ಸತ್ತೇ ಹೋಗುವಂತಾದರೂ ಬರಜೂ ಸಾವಿಗೆ ಎಂದೂ ಸೊಪ್ಪು

ಹಾಕುವವನಲ್ಲ. ಅವನ ಬದುಕು ಏನು? ಸತ್ತ ಮೇಲೆ ಅಳುವವರಾರು? ಕೇಳುವವರಾರು? ಕೋಟಿ-ಕೋಟಿ ಜನ ಹಸಿದು ಆಸತ್ತು ಕೋಟಲೆ-ಕಾಹಿಲೆಯಲ್ಲಿ ಸತ್ತು ಹೋಗುತ್ತಾರೆ. ಇಲ್ಲವೆ ದನಗಳಂತೆ ಅದೆಷ್ಟೋ ಮಂದಿ ಹರಿಮಿಶ್ರರ ಹೊಡೆತ ತಿನ್ನುತ್ತಾರೆ. ಅವರ ಕೂಗಾಟ-ಚೀರಾಟ ಯಾರು ಕೇಳಬೇಕು? ಹುಟ್ಟಿನಿಂದ ಸಾವಿನವರೆಗೂ ಸಾಯುತ್ತಲೇ ಇರುತ್ತಾರೆ-ಯಾರೂ ಕಾಣದೇ ಕೇಳದೇ. ಅವರಲ್ಲಿ ಒಬ್ಬ ಬರಜೂ ಪಧಾನನೂ ಸಾಯುವನು. ಧರ್ಮದೇವನೇ, ನೀನು ಸಂಸಾರಧಾರಣ ಮಾಡಿರುವಿ. ನಿನ್ನಲ್ಲಿ ರಾಯ-ರೈತ, ಧನಿಕ-ದರಿದ್ರ ಎಲ್ಲರೂ ಸರಿ. ಲೋಕದಲ್ಲಿ ಯಾರಲ್ಲಿ ಧನವಿದೆಯೋ ಬಲವಿದೆಯೋ ಅವರಿಗೆ ನೀನು ಸದ್ಬುದ್ಧಿ ನೀಡು—ಸದ್ಭಾವನೆ ನೀಡು. ಅವರ ಹೃದಯದಲ್ಲಿ ನೊಂದವರಿಗಾಗಿ ಮರುಕ ಉಂಟುಮಾಡು. ಧರಮಾ ಬಾವುರಿ ಇವನಿಗೆ ಈ ಬುದ್ಧಿ ಯಾರು ಕೊಟ್ಟರು? ಹೊಡೆತ ತಿಂದು ತಿಂದು ಅವನು ಸತ್ತಿದ್ದಾನೆ. ಅವನು ಮನುಷ್ಯನಾಗಿ ಉಳಿದೇ ಇಲ್ಲ. ಸತ್ಯ ಪ್ರೇತವಾಗಿ ಬಿಟ್ಟಿದ್ದಾನೆ. ಧರ್ಮವೇ, ಸತ್ಯವೇ ಅವನನ್ನು-ಅವನಂಥವರನ್ನು ಮನುಷ್ಯರನ್ನಾಗಿ ಮಾಡು—ಸದ್ಬುದ್ಧಿ ಕೊಡು. ದೊಡ್ಡವರು ಚಿಕ್ಕವರನ್ನು ಒಳ್ಳೇ ಕಣ್ಣಿನಿಂದ ನೋಡಲಿ. ಮನುಷ್ಯನನ್ನು ಮನುಷ್ಯನಂತೆ ಕಾಣಲಿ. ಸ್ನೇಹ ಮಾಡಲಿ, ಶ್ರದ್ಧೆ ಇಡಲಿ. ಚಿಕ್ಕವರು ದೊಡ್ಡವರನ್ನು ಹಿಂಸೆಯ ದೃಷ್ಟಿಯಿಂದ ನೋಡದಿರಲಿ. ಅವರು ದೊಡ್ಡವರಾಗಿದ್ದಾರೆ. ಅಂತೆಯೇ ಅವರ ಕೇಡು ಅವರ ಅಕಲ್ಯಾಣ ಯೋಚಿಸದಿರಲಿ! ಹೀಗೆ ಯೋಚಿಸುತ್ತ ಯೋಚಿಸುತ್ತ ಬರಜೂನ ಕಣ್ಣಿಗೆ ನೀರು ಮೂಡಿದವು.

"ಬರಜಣ್ಣಾ, ಬರಜಣ್ಣಾ."

ಬರಜೂ ಕಕ್ಕಾಬಿಕ್ಕಿಯಾಗಿ ಬಾಗಿಲಿಗೆ ಬಂದ : "ಏನೋ ನಿತಾ, ಈ ಹೊತ್ತಿಗೆ ನೀನು ಇಲ್ಲಿಗೆ ಹೇಗೆ?"

ನಿತಾಯಿ ಮಹಾರಾಣಾನ ಇಡೀ ಮೈ ಧೂಳಿನಿಂದ ತುಂಬಿ ಹೋಗಿತ್ತು. ನೋಡಿದರೆ ಮುಡಿಯಿಂದ ಅಡಿಯವರೆಗೆ ಬೂದಿ ಬಳಿದುಕೊಂಡಂತೆ ಕಾಣುತ್ತಿದ್ದ.

ನಿತಾಯಿ ಕೂಗಿದ : "ನಾನು ಸತ್ತೆ. ನನ್ನ ಕತೆ ಇನ್ನು ಮುಗಿಯಿತು. ನನ್ನ ಮಕ್ಕಳು ಮರಿ ಇನ್ನು ಬೀದಿ ಬೀದಿ ಅಲೆದಾಡುವರು. ನಾನು ಕಟ್ಟಿಗೆ ಕಡಿದು ಹೊಟ್ಟೆ ಹೊರಕೊಳ್ಳುತ್ತೇನೆ. ಇಪ್ಪತ್ತೈದು ರೂಪಾಯಿ ಎಲ್ಲಿಂದ ತರಲಿ? ನನ್ನ ಮಕ್ಕಳು ಮರಿ ಇನ್ನು ಬದುಕುವದು ಹೇಗೆ?"

ಬರಜೂ ಕೂಗಿದ : "ಏನು ಕತೆ, ಏನಾಯಿತು?"

ನಿತಾಯಿ ತಲೆ ಬಡೆದುಕೊಳ್ಳುತ್ತ ಅಂದ : "ಮಗಳ ಮದುವೆಗೆ ಹತ್ತು ರೂಪಾಯಿ ತಂದೆ, ಇಪ್ಪತ್ತು ರೂಪಾಯಿ ತುಂಬಿದೆ. ಬರಕೊಟ್ಟ ಕಾಗದ ತಿರುಗಿ ಕೊಡಿರೆಂದು ಈ ಹೊತ್ತು ಹೇಳಿದಾಗ ಹೀಗೆ ಅಂದರು : "ಇಪ್ಪತ್ತೈದು ರೂಪಾಯಿ ತಂದು ಒಪ್ಪಿಸು.

ನಾನೆಂದೆ : 'ನಾನು ಬಡ ಪರದೇಶಿ. ಇಷ್ಟು ರೂಪಾಯಿ ಎಲ್ಲಿಂದ ತಂದು ಕೊಡಲಿ? ನನ್ನ ಹತ್ತಿರ ಇದ್ದದ್ದಾರೂ ಏನು?' ಅದಕ್ಕೆ ಅವರು ಆಡಿದರು : 'ಏಕೆ ಊರ ನೀವೆಲ್ಲ ಒಟ್ಟಾಗಿ ಒಂದು ಪಡೆ ಕಟ್ಟಿಕೊಂಡಿದ್ದೀರಿ. ಈಗ ನಿನ್ನ ಬಗ್ಗೆ ಯಾರು ಜಾಮೀನು ನಿಲ್ಲುವರೋ ನೋಡೋಣ.' ಈ ಮಾತು ಕೇಳಿ ನನ್ನ ನೆತ್ತರ ಬತ್ತಿ ಹೋಯಿತು. ಹೊಟ್ಟೆಯ ಕರುಳು ಬಿಗಿದು ಹೋದವು. ನನ್ನ ಮಕ್ಕಳು ಮರಿ ಇಂದು ದಿಕ್ಕುಗೆಟ್ಟರು. ಅಂಬಲಿಯ ನೀರು ಕುಡಿಸಿ ಬೆಳೆಯಿಸಿದ್ದೆ. ನಾಳೆ ಬೆಳಗಾದರೆ ಕೇರಿ ಕೇರಿ ಅಲೆದಾಡುವರು. ಮೂರು ತಿಂಗಳು ಆಯಿತು. ಚಿಕ್ಕ ಮಗ ಕೆಮ್ಮು ಕಫದಿಂದ ಬಿದ್ದಿದ್ದಾನೆ —ಉಸಿರುಗಟ್ಟಿ ಮದ್ದು ಮಾಡೋಣವೆಂದರೆ ಒಂದು ದುಡ್ಡು ದಮಡಿ ಇಲ್ಲ. ಇವರಿಗೆ ಇಪ್ಪತ್ತೈದು ರೂಪಾಯಿ ಎಲ್ಲಿಂದ ತಂದು ಕೊಡಲಿ?" ನಿತಾಯಿ ಎದೆಯೊಡೆಯುವಂತೆ ಬಿಕ್ಕಿ ಬಿಕ್ಕಿ ಅಳಹತ್ತಿದ.

ಬರಜೂ ಅಂದ : "ಅಲ್ಲೋ, ಯಾರ ರೂಪಾಯಿ? ಮಿಶ್ರರದೇ? ನೀನು ಹಿಂದೆ ಕೊಟ್ಟಾಗೆಲ್ಲ ಪಾವತಿ ಏಕೆ ಪಡಕೊಳ್ಳುತ್ತಿದ್ದಿಲ್ಲ?"

"ಏನು ಮಾಡಲಿ? ಅವರ ಮುಂದೆ ತಲೆ ಜಪ್ಪಿ ಜಪ್ಪಿ ಕೂದಲು ಉದುರಿ ಹೋದವು. ಆದರೆ ಫಲವೆಂಬುವದು ಪೂಜಿ. ಅವರೆಂದರು : "ಓಡು, ಓಡು. ಊರ ಎಲ್ಲರೂ ಒಕ್ಕಟ್ಟಾಗಿ ಕೂಟ ಕಟ್ಟಿದ್ದೀರಿ. ಅವರೇ ನಿನ್ನ ಬೆಂಬಲಕ್ಕೆ ಬರುವದಿಲ್ಲವೇ?"

"ಒಳ್ಳೇದು, ನಿತಾಯಿ. ಧೈರ್ಯಗೆಡಬೇಡ. ಅನ್ಯಾಯವೇ ಆಗುತ್ತ ಇರಬೇಕೇನು?"

"ಬರಜೂ ಅಣ್ಣಾ, ಈಗಂತೂ ನಾನು ಪೂರಾ ಮುಳುಗಿದ್ದೇನೆ. ನನಗೆ ಇನ್ನಾರು ಇದ್ದಾರೆ? ಆಮೇಲೆ ಇದ್ದವ—ಹಗಲಿರುಳು ನಡೆಯಿಸುವ ಅವನೊಬ್ಬನೇ ಬಲ್ಲ."

ಬರಜೂನ ಕಣ್ಣು ತುಂಬಿ ಬಂದವು. ತುಟಿ ಅದುರ ಹತ್ತಿತು : "ಹೌದು ಅವನೇ ಎಲ್ಲ ಮಾಡುತ್ತಾನೆ, ನೋಡುತ್ತಾನೆ, ನಿತಾಯಿ. ಮೇಲಿಂದ ಕೆಳಗೆ ಕೆಳಗಿಂದ ಮೇಲೆ ಅವನೇ ಹಗಲಿರುಳು ನಡೆಸುತ್ತಾನೆ—ನೋಡುತ್ತಾನೆ ಎಲ್ಲವನ್ನೂ ಮಾಡುತ್ತಾನೆ. ಅವನಲ್ಲದೇ ನಿನ್ನ ಮಾತು ಕೇಳುವವನು ಯಾರು?"

ಬರಜೂ ಪಧಾನನ ಕಣ್ಣಿಂದ ನಾಲ್ಕು ಹನಿಗಳು ಉದುರಿ ಬಿದ್ದವು. ಬರಜೂ ಪಧಾನ ಯಾರು ಹೇಳಲಿಕ್ಕೆ? ಯಾರು ನಿತಾಯಿಯನ್ನು ಹರಿಮಿಶ್ರರನ್ನು ಕೂಡಿಯೇ ಹುಟ್ಟಿಸಿದ್ದಾನೋ ಅವನೇ ಕೇಳಿಕೊಳ್ಳುವನು. ಬರಜೂ ಪಧಾನ ಏನು ಮಾಡಬಲ್ಲ? ಅವನ ಅಪ್ಪಣೆ, ಅವನ ಇಚ್ಛೆ ಬರಜೂನ ಮುಖಾಂತರ ಪ್ರಕಟವಾಗುವದು.

~*~*~*~

೧೧

ಸೋನಾಳ ಮದುವೆ ಆಯಿತು. ನೇತ್ರಮಣಿ ಹೊಸ ಸೀರೆ ತೊಡಲಿಲ್ಲ. ಬರಜೂ ಪಥಾನ ಹೆಸರುಕೊಂಡು ತಂದನು. ಬೆಲ್ಲ ಕೊಂಡನು. ಎಲ್ಲ ಕ್ರಯಕ್ಕೆ ತಂದು ಲಗ್ನ ಕಾರ್ಯ ನೆರವೇರಿಸಿದನು. ಅತ್ತ ಭಕಡಿ—ಬೆಲ್ಲ ಮಾರಿದನು, ಹೆಸರು ಮಾರಿದನು. ನೇತ್ರಮಣಿಯ ಮೈಗೆ ಚಿನ್ನ ಮಾಡಿಸಿದನು.

ಭಕಡಿ ಅಂದ : "ಕಾಕಾ, ನಾನು ಮಾಡುವದೆಲ್ಲ ಮಾಡುತ್ತೇನೆ. ಆದರೆ ಅಣ್ಣ ಇದಕ್ಕೆ ಒಂದು ಕಡ್ಡಿಯಷ್ಟೂ ಕೆರಳುವುದಿಲ್ಲ. ಹೆಸರು ಮಾರಿದೆ, ಬೆಲ್ಲ ಮಾರಿದೆ. ಎಲ್ಲ ಸರಕು-ಸಾಮಾನು ಎತ್ತಿ ತಂದೆ. ನಾನೇ ಬಳಸಿಕೊಂಡೆ. ಆದರೂ ಅಣ್ಣ-ಅತ್ತಿಗೆ ಯಾರೂ ಬಾಯಿ ತೆರೆಯಲಿಲ್ಲ. ಇಷ್ಟಾಗಿಯೂ ಆ ನನ್ನ ಹೊಯ್ಮಾಲಿ ಹಟ ಹಿಡಿದಿದ್ದಾಳೆ. ನಮ್ಮ ಒಲೆ ಬೇರೆ ಹೂಡಬೇಕಂತೆ. ಅವರದು ಗಾಡಿ ತುಂಬ ಸಂತಾನ. ಅವರ ಮದುವೆ ದಿಂಡು ಎಲ್ಲ ಮುಂದೆ ಆಗ ತಕ್ಕವು. ಹೀಗೆ ನಾವು ಸುಮ್ಮನಿದ್ದರೆ ಹೇಗೆ? ಸುಮ್ಮನಿದ್ದರೆ ಅವರಿಗೇ ಲಾಭ! ನಾಳೆ ಮತ್ತೆ ಮೋತಿಯ ಮದುವೆ ಆಗಬೇಕು. ಯಾರ ಮದುವೆ ಆಗಿ ಬಿಟ್ಟಿದೆಯೋ ಅವರ ಮನೆಗೆ ಪ್ರತಿ ತಿಂಗಳು ಏನೇನು ಹೊತ್ತು ಹಾಕುವರೋ ದೇವರೇ ಬಲ್ಲ! ಕಿರಿಯ ಮಗುವಿಗೆ ಕೂಡ ಅರ್ಧ ಸೇರು ಹಾಲು ನಿತ್ಯ ಬೇರೆ ಕಟ್ಟಿಟ್ಟಿದ್ದೇ. ಏನೇ ಇರಲಿ, ಕಾಕಾ, ನನ್ನ ತಲೆ ತಿರುಗಹತ್ತಿದೆ. ನನ್ನ ಮನಸ್ಸು ಸುಂಟರಗಾಳಿಗೆ ಸಿಕ್ಕಿದೆ. ಅಣ್ಣ ಯಾವ ಮಾತಿಗೂ ಏನಾದರೂ ಆಡಿದರಲ್ಲವೇ? ಹಿಂದೆ ಅತ್ತಿಗೆ ಮಾತುಮಾತಿಗೆ ರಣ-ರಗಳೆ ಎಬ್ಬಿಸುತ್ತಿದ್ದಳು-ಜಗಳ ಕಟ್ಟಿ ನಿಲ್ಲುತ್ತಿದ್ದಳು. ಆದರೆ ಆ ಹೊಲ ಹೆಂಗಸು ಏಕೋ ಏನೋ ಸುಮನಾಗಿಬಿಟ್ಟಿದ್ದಾಳೆ. ನುಣ್ಣಗಾಗಿ ಬಿಟ್ಟಿದ್ದಾಳೆ. ಇದೂ ಒಂದು ಆಶ್ಚರ್ಯವೇ! ಈಗಲೂ ನಾನು ಮತ್ತೆ ಮತ್ತೆ ಮುಳ್ಳು ಕಂಟಿಯ ಮೇಲೆ ಬಟ್ಟೆ ಹರವಿ "ನಿಮ್ಮ ಕಂಟಿ ನನ್ನ ಬಟ್ಟೆ ಹರೆಯಿತು" ಎಂದು ಜಗಳ ಎಬ್ಬಿಸಲು ಹತ್ತಿದರೆ ಹೊರಗೆ ಊರಮಂದಿ ನನಗೆ ಏನು ಅಂದಾರು? ಆದರೆ ನಮ್ಮ ಮಾರಾಯತಿ ಹೇಳುತ್ತಾಳೆ "ಊರಮಂದಿ ಕೆಟ್ಟವರೆಂದರೆ ಅಂದುಕೊಳ್ಳಲಿ. ಒಳ್ಳೇದು ಕೆಟ್ಟದ್ದು ಆಡುವವರೇನು ಯಾರ ಮನೆ ತುಂಬಲು ಬರುತ್ತಾರೆಯೇ?"

ಮಿತ್ರರು ಅಂದರು : "ನಾನು ಹೇಳುತ್ತಿದ್ದುದು ಏನು ಮತ್ತೆ! ಭಟ್ಟನ ಮಗ ಭಟ್ಟ, ಭಟ್ಟಂಗಿಯ ಮಗ ಭಟ್ಟಂಗಿ. ಅಲ್ಲೋ, ನಿನ್ನ ಹೆಂಡತಿ ಮಾಮೂಲಿ ಹೆಣ್ಣಲ್ಲ. ಆಕೆ ಮನೆತಸ್ಥರ ಮಗಳು. ನಿಜವಾಗಿಯೂ ನೀನು ಅಪ್ಪಟ ಹುಂಬ ನೋಡು. ಆ ಊರ ಮಂದಿ ಬೇಕಾದದ್ದು ಆಡಲಿ. ನಿನಗೇನು ಲಾಭ-ಹಾನಿ? ನನಗೇನು ಎಲ್ಲರೂ

ಒಳ್ಳೆಯವನೆಂದು ಹೇಳುತ್ತಾರೆಯೋ? ಹಾಗೆಂದು ನಾನೇನು ಆ ಲುಚ್ಚ-ಲಫಂಗರ ಮಾತಿಗೆ ಹೆದರಿ ಹೋಗುತ್ತೇನೋ? ಇಂಥ ನೂರು ನಾಯಿ ಬೊಗಳಲಿ. ಆದರೆ ಆನೆಗೇನು ಬಂತು? ಆನೆ ತಡೆಯುವದಿಲ್ಲ. ಮುಂದೆ ನಡೆದೇ ನಡೆಯುತ್ತದೆ."

ಭಕಡಿ ಏನೂ ತೋಚದೆ ಹೇಳಿದ : "ಹೌದು ಇದರಿಂದೇನು ಬಂತು? ನನಗೆಲ್ಲ ತಿಳಿಯುತ್ತದೆ. ಆದರೆ ನನಗೆ ಇದೆಲ್ಲ ಪರಚುತ್ತದೆ. ಚುಚ್ಚುತ್ತದೆ. ಅವರು ಒಂದೊಂದು ಮಾತೂ ಒಪ್ಪಿಕೊಂಡು ನಡೆಯುವಾಗ ಬೇರೆ ಅಡಿಗೆ ಹೂಡುವ ಮಾತು ನಾನಾರೆ ಹೇಗೆ ಎತ್ತಲಿ?"

"ಹಾಗಲ್ಲ ತಮ್ಮಾ, ಅಡಿಗೆ ಬೇರೆ ಮಾಡಿ ಏನು ಉಪಯೋಗ? ಇದು ಹೆಣ್ಣು ಹೆಂಗಸಿನ ಮಾತಾಯಿತು. ಎರಡು ದಿನ ಬೇರೆ ಬೇಯಿಸಿ ಉಣ್ಣಬಹುದು. ಮೂರನೆಯ ದಿನ ಮತ್ತೆ ಕೂಡಬಹುದು. ಮತ್ತೆ ಅಡಿಗೆ ಬೇರೆ ಮಾಡಬಹುದು. ಈ ತಮಾಷೆ ಹೀಗೆ ನಡೆಯುವದೇ. ಬೇರೆಯೇ ಆಗುವದಿದ್ದರೆ ಗಂಡಸಿನಂತೆ ಬೇರೆ ಆಗು. ಹೊಲ ಮನೆ, ದನ-ಧನ, ಪಾತ್ರೆ ಪಗಡೆ ಎಲ್ಲ ಸರಿಪಾಲು ಮಾಡಿಕೋ. ಇಲ್ಲವಾದರೆ ಈ ಹೊತ್ತು ಹಂಡೆ ಇಲ್ಲಿಂದ ಅತ್ತ ಇಟ್ಟು ಬೇರೆ ಉಣ್ಣುವೆ. ನಾಳೆ ಮತ್ತೆ ಅಲ್ಲಿಂದ ಇತ್ತ ತಂದು ಹಳೆ ಹಂಡೆಯಲ್ಲಿಯೇ ಹೊಯ್ಯುವೆ. ಈ ಹೆಣ್ಣು ಹಂಚಿಕೆ ನನಗೆ ಒಪ್ಪಿಗೆ ಇಲ್ಲ."

"ಹಾಗಾದರೆ ನಾನು ಏನು ಮಾಡಲಿ, ಕಾಕಾ? ನನಗೆ ಏನೂ ಹೊಳೆಯುವದಿಲ್ಲ. ಆಕೆ ಅನ್ನುತ್ತಾಳೆ—ಮೊದಲು ಅಡಿಗೆ ಬೇರೆ ಮಾಡಿಕೊಳ್ಳುವಾ. ಆಮೇಲೆ ಹೊಲ, ಮನೆ ಪಾತ್ರೆ-ಪಗಡೆ ಎಲ್ಲ. ಅವರ ಇಬ್ಬರು ಹುಡುಗಿಯರ ಲಗ್ನಕ್ಕೆ ಆದ ಖರ್ಚಿನ ಲೆಕ್ಕಾಚಾರವಾಗಲಿ. ಅದರಲ್ಲಿ ಅರ್ಧ ಅವರು ನಮಗೆ ಕೊಟ್ಟು ಬಿಡಲಿ."

"ಭಕಡಿ, ನಿನ್ನ ದೈವ ದೊಡ್ಡದು. ಇಲ್ಲದಿದ್ದರೆ ಇಂಥ ಮನೆಯಾಕೆ ನಿನಗೆ ಸಿಗುತ್ತಿದ್ದಳೇ? ಎಲ್ಲ ಏನು ಮಾಡಬೇಕೆಂಬುದೆಲ್ಲ ಆಕೆ ನಿನಗೆ ತಿಳಿಸಿ ಹೇಳುತ್ತಾಳೆ, ಆಮೇಲೆಯೂ ನಿನ್ನ ಆಲಾಪ ಇದ್ದೇ ಇದೆ. ಎಲ್ಲಿ ಮೈ ಪರಚುತ್ತದೆ, ಎಲ್ಲಿ ಕೈ ಚುಚ್ಚುತ್ತದೆ ಎಂದೆಲ್ಲ! ಹಿಃ ಹಿಃ ಹಿಃ ಹಿಃ ಇದರಲ್ಲಿ ಚುಚ್ಚುವ ಮಾತು ಏನು ಬಂತು? ನಾಲ್ಕು ಸಭ್ಯಗೃಹಸ್ಥರನ್ನು ಕರೆಯಿಸು. ಎಲ್ಲಿ ಏನಿದೆಯೆಂಬುದು ಎಲ್ಲ ಸರಿ ಸರಿ ಪಾಲುಮಾಡಿ ಹಂಚಿಕೊಳ್ಳಿ. ಅದರಲ್ಲಿ ಕಷ್ಟವೇನು? ಕಠಿಣವೇನು?"

"ಸರಿ, ಕಾಕಾ. ಸರಿಯಾದ್ದನ್ನೇ ನೀನು ಹೇಳಿದಿ. ನಾನು ಸಭ್ಯ ಅಸಭ್ಯ ಏನೂ ಅರಿಯೆ. ನೀವೊಬ್ಬರೇ ಬಂದರೂ ನನಗೆಲ್ಲ ಸರಿಹೋಗುತ್ತದೆ. ಆದರೆ ಮುಖ್ಯ ಮಾತೇನೆಂದರೆ ಇಂದಿನವರೆಗೆ ಹೀಗೆ ಬೇರೆ ಆಗಬೇಕೆಂಬ ವಿಚಾರ ನಾನು ಅಣ್ಣನೊಂದಿಗೆ ಎತ್ತೇ ಇಲ್ಲ. ಹೇಗೆ ಎತ್ತಲಿ?"

"ಎಲಾ ಮೂರ್ಖ, ನಿನಗೆ ಇದೂ ಕಲಿಸಿಕೊಡಬೇಕೇ? ಅಣ್ಣನೊಂದಿಗೆ ಮಾತು ಎತ್ತದಿದ್ದರೆ ಹೀಗೆ ತೆಪ್ಪಗೆ ಬಿದ್ದರೆ ನೀನು ಬೇರೆ ಆಗುವುದು, ಪಾಲು ಕೇಳುವುದು ಹೇಗೆ

ಆದೀತು? ನಡೆ ಹೋಗು. ಮನೆಯಲ್ಲಿ ಹೇಗಿದ್ದಿಯೋ ಹಾಗೆಯೇ ಬಿದ್ದಿರು. ನನಗೆ ಬಂದದ್ದೇನು?" ಹರಿಮಿಶ್ರ ಸಿಡುಕಿನಿಂದ ಬಿರುನುಡಿದರು.

ಭಕಡಿ ಅಂದ : "ಆ ಹೆಣ್ಣು ನನಗೆ ನೆಮ್ಮದಿಯೇ ಕೊಡುವದಿಲ್ಲ. ಇಲ್ಲ ಕಾಕಾ, ನಾಳೆ ಮುಂಜಾನೆ ನಿಮ್ಮನ್ನು ಕರೆಯದೆ ಏನೂ ನಡೆಯಲಿಕ್ಕಿಲ್ಲ."

"ಛೇ, ನಾನು ಬಂದು ಕೂತರೆ ಆಗುವದೇನು? ನೀನು ಅಣ್ಣ ದೇವರ ಮುಂದೆ ಬಾಯಿ ಬಿಚ್ಚುವವನಲ್ಲ. ನಿಮ್ಮಿಬ್ಬರನ್ನು ಬೇರೆ ಮಾಡಲಿಕ್ಕೆ ನಾನೇನು ಪಂಚನಾಗಿ ಹೋಗಲೇ? ಇದು ಎಂಥ ಬುದ್ಧಿವಂತಿಕೆ ಆದೀತು?"

"ಅಲ್ಲ ಕಾಕಾ, ನಾನೇನು ಅಷ್ಟು ಮೂರ್ಖನೇ. ಇಂದೇ ನಮ್ಮ ಮನೆಯಲ್ಲಿ ಈ ಮಾತಿನ ಎತ್ತುಗಡೆ ಆಗಬೇಕು."

ಹರಿಮಿಶ್ರರ ಮುಂದೆ ಹೀಗೆ ನಿಶ್ಚಯಮಾಡಿ ಭಕಡಿ ಮನೆಗೆ ಬಂದ; ಆದರೆ ಯಾವ ಮಾತಿನ ಎತ್ತುಗಡೆಯನ್ನೂ ಮಾಡಲಿಲ್ಲ. ಅದೇ ದಿನ ಮಧ್ಯಾಹ್ನ ಭಕಡಿ ನೋಡಿದ. ಬರಜೂ ಜಗಲಿಯ ಮೇಲೆ ಕೂತು ತಾಡೋಲೆಯ ಭಾಗವತದ ದಶಮಸ್ಕಂಧದ ನಕಲು ಮಾಡುತ್ತಿದ್ದ. ಮುದಿ ಶಾಮಪಧಾನ ಚತುರ್ಥಸ್ಕಂಧದ ತನಕ ನಕಲು ಮಾಡಿದ್ದನು. ಆ ನಂತರ ಉಳಿದ ಭಾಗ ಪೂರ್ತಿಗೊಳಿಸಲಿಕ್ಕೆ ಬರಜೂನಿಗೆ ಹೇಳಿಟ್ಟಿದ್ದ. ತಂದೆ ಗುಡಿ ಕಟ್ಟಿದ್ದ; ಮಗ ಅದಕ್ಕೆ ಕಳಸವೇರಿಸುತ್ತಿದ್ದ. ಬರಜೂ ಒಂದೇ ಮನಸ್ಸಿನಿಂದ ಸರಸರನೆ ಬರೆಯುತ್ತ ಸಾಗಿದ್ದ. ಭಕಡಿ ಅಲ್ಲಿಯೇ ಹೋಗಿ ಅತ್ತಿತ್ತ ಸುಳಿದಾಡುತ್ತ ಅಲ್ಲಿ ಇಲ್ಲಿ ನಿಂತು ನೋಡಿದ. ಬರಜೂ ಅವನ ಕಡೆಗೆ ಕಣ್ಣೆತ್ತಿ ನೋಡಿಯೂ ಇಲ್ಲ. ಯಾರ ಕಡೆಗೂ ಅವನ ಗಮನವಿದ್ದಿಲ್ಲ. ಬೇರೆಯಾಗುವ ಮಾತು ಭಕಡಿ ಯಾವ ರೀತಿ ಎತ್ತಬೇಕು? ಒಂದೆರಡು ಸಲ ಒಳಮನೆಗೆ ಹೋದನು. ನೇತ್ರಮಣಿಯನ್ನು ಕರೆದು ಹೇಳಿದ : "ಅಣ್ಣ ಇಂದು ಒಬ್ಬನೇ ಕೂತಿದ್ದಾನೆ. ಇದು ಒಳ್ಳೇ ಸಂಧಿ—ಬೇರೆಯಾಗುವ ಪ್ರಸ್ತಾಪ ಎತ್ತಲೇ?"

"ಅವಶ್ಯ ಎತ್ತಿರಿ. ಎತ್ತಬಾರದೇಕೆ? ಬರೇ ಕೇಳುತ್ತಲೇ ಉಳಿಯುವಿರಾ?" ನೇತ್ರಮಣಿ ತಲೆ ಕೊಡವಿ ಉತ್ತರಿಸಿದಳು.

ಭಕಡಿ ಮತ್ತೆ ಹೊರ ಜಗಲಿಗೆ ಬಂದ. ಬರಜೂ ಯಥಾಪ್ರಕಾರ ಬರೆಯುತ್ತಲೇ ಇದ್ದ. ಅವನಿಗೆ ಭಕಡಿ ಒಳ ಹೊರಗೆ ಬರ ಹೋಗುವ ಅರಿವೇ ಇದ್ದಿಲ್ಲ. ಭಕಡಿ ಅತ್ತಿತ್ತ ಸುಳಿದಾಡಿ ಮತ್ತೆ ಮತ್ತೆ ಒಳಗೆ ಹೋಗುತ್ತಿದ್ದ. "ಲೇss ಏನು ಹೇಳಲಿ? ಹೇಳಲ್ಲ!"

"ನಡೆಯಿರಿ ನನ್ನೆದುರಿಂದ ದೂರಾಗಿರಿ. ಈ ಹೆಣ್ಣು ಹೆಂಗಸಿನಂಥ ಮಾತು ನನ್ನ ಮುಂದೆ ಆಡಬೇಡಿರಿ." ನೇತ್ರಮಣಿ ಕಣ್ಣು ಕೆರಳಿಸಿ ನೋಡಿದಳು.

ಭಕಡಿ ಮತ್ತೆ ಜಗಲಿಗೆ ಬಂದ : "ಛೇ, ಛೇ ಇಂಥ ಅಪಮಾನ ಅದೂ ಕೈಹಿಡಿದ ಹೆಂಡತಿಯಿಂದ! ಏನೇ ಆಗಲಿ. ನಾನು ಈಗ ಮಾತನಾಡಿಬಿಡುವದೇ ಶುದ್ಧ." ಜಗಲಿಯ ಮೇಲೆ ಬಂದು ಭಕಡಿ ಅಂದ : "ಅಣ್ಣಾ!"

ಬರಜೂ ಬರೆಯುವದನ್ನು ತಡೆದು ತಲೆ ಎತ್ತಿ ದಿಟ್ಟಿಸಿದ. ಮುಂದೆ ಭಕಡಿ ನಿಂತಿದ್ದಾನೆ. "ಏನೋ ನನ್ನ ಹತ್ತಿರವೇ ಮಾತನಾಡುವದಿದೆಯೇನೋ?"

ಭಕಡಿ ತತ್ತರಿಸ ಹತ್ತಿದ. ಆತ ನೆನೆದುಕೊಂಡ ಉತ್ತರ ನಿಂತು ಹೋಯಿತು. "ಇಲ್ಲ ಏನೂ ಇಲ್ಲ. ಆ-ಅಲ್ಲ-ಅತ್ತ ಕಡೆಗೆ ಹೋಗುತ್ತಿದ್ದೆ."

ಇಷ್ಟು ಹೇಳಿ ಅಲ್ಲಿಂದ ಕಾಲು ಕಿತ್ತುಬಿಟ್ಟ. ಅಣ್ಣನ ಇದಿರು ತಾನೊಂದು ಹಸುಳೆಯೆಂದೇ ಆತ ಭಾವಿಸಿದ. ಬರಜೂ ಮತ್ತೆ ಬರೆಯುವದರಲ್ಲಿ ಮಗ್ನನಾದ.

ಭಕಡಿ ಹೆಸರು ಬೆಲ್ಲ ಎತ್ತಿ ತಂದ ಕದೀಮ. ಆಗ ಅಣ್ಣನಿಗೆ ಏನಾದರೂ ತಿಳಿಸಬೇಕೆಂಬ ಅಗತ್ಯ ಅವನಿಗೆ ಅನಿಸಿದ್ದೇ ಇಲ್ಲ. ಈಗ ದೂರವಾಗುವ ಮಾತು ಹೇಗೆ ಎತ್ತಬೇಕು? ಹೆಂಡತಿ ಎಲ್ಲ ಹೇಳಿಕೊಡುತ್ತಾಳೆ ನಿಜ. ಆದರೆ ಅದರಂತೆ ಮಾಡುವದು ಯಾರು? ಆಕೆಯೇ ಮಾಡಲಿ ನೋಡೋಣ.

ಮರುದಿನ ಮುಂಜಾನೆ ಎದ್ದು ಬರಜೂ ಸಸಿಗಳಿಗೆ ನೀರು ಹೊಯ್ಯಲು ಹೋದ. ಕಾರ್ತಿಕದ ಕೊನೆಯ ದಿನಗಳಿದ್ದವು. ಮಳೆಯ ನೀರು ಆರಿ ಹೋಗಿತ್ತು. ರೈತರು ಸೋತಿದ್ದರು. ಗಾದೆಯೇ ಇದೆ : "ಕರುಳಿನಿಂದ ಬೇನೆ, ಬಾನಿನಿಂದ ಬರಗಾಲ." ಬರಜೂ ಪಧಾನ ನೀರು ಹೊಯ್ಯಲಿಕೆ ಮರದ 'ಮರಗಿ' ಮತ್ತು ಗುದ್ದಲಿ ತೆಗೆದುಕೊಂಡು ಸನಿಯಾ ಅಣ್ಣನ ಸಂಗಡ ನೀರು ತೋಡಿ ಹಾಕುತ್ತಿದ್ದ. ಅಕ್ಕಪಕ್ಕದಲ್ಲಿ ಹೀಗೆಯೇ ನೀರೆರೆಯುವ ಬೇರೆ ಕೆಲಸಗಾರರ ಹಾಡುಗಳ, ಹರಟೆ ಮಾತುಗಳ ಹಾಗೂ ನೀರೆತ್ತಿ ಚೋಕುವ ಸದ್ದು ಕೇಳಬರುತ್ತಿತ್ತು. ತೋಡಿನ ನೀರಿನಲ್ಲಿ ಬೆಳ್ಳಿ ಮೂಡಿತ್ತು. ಅಲೆಯುವ ನೀರಿನಲ್ಲಿ ಅದು ತೇಲಾಡಿ ತೊಳಗುತ್ತಿತ್ತು. ಹತ್ತಿರದ ಹಳ್ಳಿ ಹಾಗೂ ಗಿಡ ಮರಗಳ ಮೇಲಿಂದ ಮಂಜಿನ ಬಿಳಿ ಮುಸುಕು ಸರಿದು ಏಳುತ್ತಿತ್ತು. ಮೆಲ್ಲಮೆಲ್ಲನೆ ಎಲ್ಲವೂ ನಿಚ್ಚಳವಾಗಿ ಕಾಣಿಸತೊಡಗಿತ್ತು. ನಸುಕಿನ ಹೊತ್ತು ಬೆಳಕು ಹರಿಯುತ್ತಿತ್ತು. ಒಗೆದು ಒಣಗಿಸಲು ಇಟ್ಟ ಮಡಿ ಬಟ್ಟೆಗಳಂತೆ ಬಿಳಿಯ ಬಕಪಕ್ಷಿಗಳ ಹಿಂಡು ಬಯಲಲ್ಲಿ ಕೂತು ಹುಳ ಹುಪ್ಪಡಿ ಹೆಕ್ಕಿ ತಿನ್ನುತ್ತಲಿತ್ತು. ಕಾಗೆ, ಹದ್ದು, ಕಪ್ಪೆ ಹಾಗೂ ತರತರದ ಹಕ್ಕಿಗಳ ಚಿಲಿಪಿಲಿಯಿಂದ ಹೊಲಗಳೂ ಆಕಾಶವೂ ಮೊಳಗೆದ್ದಿದ್ದವು. ಮೂಡಣದ ಬಾನು ಅಲ್ಲಲ್ಲಿ ಕೆಂಪು ಬಸಿಯುತ್ತಿರುವಂತೆ ತೋರತೊಡಗಿತು. ದೂರ ಊರಿನ ಮೇಲೆ ಮಂಜಿನ ಒಂದು ಹಾಳೆಯೇ ಹಾಸಿತ್ತು.

ಬರಜೂ ಪಧಾನ ಗದ್ದೆಗೆ ನೀರು ತೋಡಿ ಹಾಕಿ ಹಸಿ ಹುಲ್ಲಿನ ಹೊರೆಯನ್ನೊಂದು ತಲೆಯ ಮೇಲೆ ಹೊತ್ತು ಮನೆಗೆ ಬಂದನು. ಉಟ್ಟ ಪುಟ್ಟ ಒಣ ಪಂಚೆ ಹಸಿ ಎಲೆಗಳ

ಹಾಗೂ ಇಬ್ಬನಿಯ ತೇವಿನಿಂದ ಒದ್ದೆ ಆಗಿಬಿಟ್ಟಿತ್ತು. ಮನೆಯ ಬಾಗಿಲಲ್ಲೇ ಹರಿಮಿಶ್ರ ಮತ್ತು ಭಕಡಿ ಹರಟೆ ಹೊಡೆಯುತ್ತಿರುವದನ್ನು ಬರಜೂ ಕಂಡನು.

ಬರಜೂನನ್ನು ಕಂಡಕೂಡಲೇ ಹರಿಮಿಶ್ರರೇ ಅಂದರು : "ತಮ್ಮಾ, ಇತ್ತೀಚಿಗೆ ನಿನಗೆ ರಾತ್ರೆ ನಿದ್ರೆಯೇ ಬೀಳುವದಿಲ್ಲವೇ? ಸರಿ, ಒಂಟಿ ಆಳಾಗಿರುವಿ. ತನ್ನ ಕೈಯಿಂದಲ್ಲದೇ ಬೇರೆ ಹೇಗೆ ಕೆಲಸ ಸಾಗಬೇಕು?" ಕೊಟ್ಟಿಗೆಯ ದಾವಣಿಯ ಹತ್ತಿರ ಹುಲ್ಲ ಹೊರೆ ಚೆಲ್ಲಿ ಬರಜೂ ಅಂದ : "ಇಷ್ಟು ನಸುಕಿಗೆ ಇತ್ತ ಕಡೆಗೆ ಎಲ್ಲಿ ಕಾಕಾ?"

"ಮಹಾರಾಯ, ಈ ಭಕಡಿ ನನಗೆ ಸುಖವೇ ಕೊಡುವದಿಲ್ಲ. ಬೇರೆಯಾಗುವನಂತೆ. ಮನೆ ಪಾಲು ಮಾಡಿಸುವನಂತೆ, ನಾನು ಬಂದ ಹೊರತು ಅವನಿಗೆ ಏನೂ ತೋಚುವದೂ ಇಲ್ಲವಂತೆ, ನನಗೇನು ಬೇರೆ ಕೆಲಸ-ವ್ಯವಸಾಯ ಇಲ್ಲವೇ? ನಾನೇನು ದಿನ ನಿತ್ಯವೂ ಇದೇ ಹಗರಣ ಕಟ್ಟಿಕೊಂಡು ಕುಣಿಯುವದೇ?"

ಬರಜೂ ಹೌಹಾರಿ ಕೇಳಿದ : "ಕಾಕಾ, ಯಾರು ಬೇರೆ ಆಗುವರು? ಬೇರೆ ಅಂದರೇನು? ನನ್ನ ಬುದ್ಧಿಗೆ ಹೊಳೆಯುವದೇ ಇಲ್ಲ."

ಮಿಶ್ರರು ಬೆರಗಾಗಿ ಕೇಳಿದರು : "ಏನು ನಿನಗೆ ಗೊತ್ತೇ ಇಲ್ಲವೇ? ಈ ಮೂರ್ಖ ಮುಂಡೇ ಮಗ ನನಗೆ ಸುಳ್ಳೇ ಹೇಳಿದನೇ? ನೋಡು ಒಂದು ತಿಂಗಳಿಂದಲೂ ನನ್ನ ಬೆನ್ನಿಗೆ ಬಿದ್ದಿದ್ದಾನೆ. 'ನಡೆ ಕಾಕಾ, ನಮ್ಮ ಮನೆ ಪಾಲು ಆಗಬೇಕು. ನೀನು ಬಂದು ಹಿಸೆ ಪಂಚಾಯಿತಿಕೆ ಮಾಡಿಕೊಡು.' ನಾನೆಂದೆ : 'ಎಲೋ, ನೀನಂತೂ ಶುದ್ಧ ಅಪ್ರಬುದ್ಧ ಹುಡುಗ. ಈಗಲೇ ಬೇರೆ ಆಗುವಂತಹದೇನು ಬಂದಿದೆ?' ಆದರೆ ಆತ ನನ್ನ ಒಂದು ಮಾತೂ ಕೇಳಲಿಲ್ಲ; ಅಂದ : 'ಇಲ್ಲ ಕಾಕಾ, ಮನೆಯಲ್ಲಿ ಖರ್ಚು ವಿಪರೀತ. ಎರಡೆರಡು ಹುಡುಗಿಯರ ಲಗ್ನಕಾರ್ಯಗಳಾದವು. ನಮ್ಮ ಆಸ್ತಿಯಾದರೂ ಎಷ್ಟು?—ಇಷ್ಟೆಲ್ಲ ಖರ್ಚಿನ ಹೊರೆ ನಾನು ಹೊರಲಿಕ್ಕೆ? ನನ್ನ ಪಾಲಿನ ಅರ್ಧ ಆಸ್ತಿ ನನಗೆ ಕೊಟ್ಟು ಬಿಡಲಿ, ಹುಡುಗೆಯರ ಮದುವೆಯ ಖರ್ಚಿನ ಲೆಕ್ಕ ಆಗಲಿ. ಉಳಿದದ್ದೆಲ್ಲ ಅವರಿಗೆ ಹೋಗಲಿ. ನಾನೇಕೆ ಈ ರಾಡಿಯಲ್ಲಿ ನುಗ್ಗಬೇಕು, ಮತ್ತು ಕಾಲು ತೊಳಕೊಳ್ಳಲು ಓಡಬೇಕು?' ಒಂದು ತಿಂಗಳಾಯಿತು. ಈ ಪೋರ ಹೀಗೆ ನನಗೆ ಕೂಡ್ರಲು-ಏಳಲು ಕೂಡ ಬಿಡುವದಿಲ್ಲ. ಕಷ್ಟ ಕೊಡುತ್ತಾನೆ. ಆಗ ನಾನು ಏನು ಮಾಡಲಿ? ನಸುಕಿಗೇ ಎದ್ದು ಹೊರಟು ಬಂದೆ. ನನ್ನ ಬಾಗಿಲಲ್ಲಿ ಮೂರು ಮೂರು ಜನ ಈಗಾಗಲೇ ಬಂದು ಕೂತಿರಬಹುದು—ಯಾವದಾದರೂ ಹಳ್ಳಿಯ ವ್ಯಾಜ್ಯ ನಿರ್ಣಯ ಮಾಡಲಿಕ್ಕೆ, ಬೇರೆ ಯಾವುದಾದರೂ ಮನೆಯ ಜಗಳದ ಪಂಚಾಯಿತಿ ನಡೆಯಿಸಲಿಕ್ಕೆ. ಇವೆಲ್ಲ ರಗಳೆ ಸುತ್ತಿಕೊಂಡು ಸುತ್ತಾಡುವದರಲ್ಲಿ ನಮ್ಮ ಸ್ವಂತದ ಉದ್ಯೋಗ ಸಂಭಾಳಿಸಲು ನನಗೆ ಆಗುವದಿಲ್ಲ. ಯಾರ ಗದ್ದೆಯಲ್ಲಿ ಪೈರು ಒಣಗಿ ನಿಂತಿವೆಯೋ ಯಾವ ಗದ್ದೆಗೆ ನೀರು ತೋಡಬೇಕೋ ಇದೆಲ್ಲ ನೋಡುವವರಾರು? ಕೇಳುವವರಾರು?"

ದೀಪದ ಬತ್ತಿ ಹೊತ್ತಿಸುವಾಗ ಕೈಗೆ ಜಿಡ್ಡು ಹತ್ತದೆ ಹೋಗುವದಿಲ್ಲ. ಮಿಶ್ರರು ಬರೇ ಪುಕ್ಕಟೆ ತನ್ನ ಉದ್ಯೋಗ ಬಿಟ್ಟು ಮಂದಿಯ ಪ್ರಕರಣಗಳಲ್ಲಿ ತಲೆ ಹಾಕುವವರೇ? ವ್ಯಾಜ್ಯಗಳ ನಿಕಾಲೆ ಆಗುವದಿರಲಿ, ಜಗಳಗಳ ಪಂಚಾಯತಿಯೇ ಇರಲಿ, ಮಿಶ್ರರ ಕೈ ಎಲ್ಲಿ ಬೆಚ್ಚಗಾಗುವದಿಲ್ಲ?

ಬರಜೂ ನಗುತ್ತ ಹೇಳಿದ : "ಇಂಥ ಚಿಕ್ಕ ಮಾತಿಗಾಗಿ ತಮಗೆ ವ್ಯರ್ಥ ತೊಂದರೆ ಕೊಟ್ಟ. ಬೇರೆಯಾಗುವದು, ಪಾಲು ಮಾಡುವದು—ಇದೇನು ಅಷ್ಟು ಭಾರಿ ಕೆಲಸವೇ? ತಾವು ಮನೆಗೆ ಹೋಗಿರಿ. ಈ ಭಕಡಿ ಒಬ್ಬ ಅಪ್ರಬುದ್ಧ. ಅವನ ಮಾತಿಗೆ ತಾವು ಇಷ್ಟೊಂದು..."

"ಮಗನೇ, ಇಂಥ ಮಾತು ಆಡಬೇಡ. ನಾನೇನು ಕಡಿಮೆ ಒಡಂಬಡಿಸಿದ್ದೇನೆಯೇ? ಆದರೆ ನನ್ನ ಮಾತು ಒಂದಾದರೂ ಈತ ಕೇಳಬೇಕಲ್ಲ! ಹೇಳ ಹತ್ತಿದ : ನೀವು ತಂದೆಯ ಸಮಾನ. ನೀವು ಬರದಿದ್ದರೆ ನನ್ನಿಂದ ಏನೂ ಆಗದು!"

ಬರಜೂ ಅಂದ : "ಅಹುದೇ ಸರಿ. ಹಾಗೆ ಅಲ್ಲವೆಂದು ಯಾರು ಅನ್ನುವರು? ಇಷ್ಟು ಕಡ್ಡಿಯಂಥ ಕೆಲಸಕ್ಕೆ ನಿಮ್ಮ ಉದ್ಯೋಗವೆಲ್ಲ ಹಾಳುಮಾಡಿ ಇಲ್ಲಿ ಎಳೆದು ತರಬೇಕೇ?"

ಮಿಶ್ರರು ಎದ್ದು ಕುಳಿತರು. ಪಂಚೆಯಿಂದ ಕಾಲು ಝಾಡಿಸಿಕೊಳ್ಳುತ್ತ ಅಂದರು : "ಸರಿ ಕರೆದು ತಂದಿದ್ದಾಯಿತು, ಬಂದದ್ದಾಯಿತು. ಅಂಥದೇನೂ ಅಪರಾಧ ಆಗಿಲ್ಲವಲ್ಲ! ಲೋ ಭಕಡಿ, ಅರೇ ಅವನೆಲ್ಲಿ ಮಾಯವಾಗಿಬಿಟ್ಟ? ನೋಡಿದಿರಾ, ಇಲ್ಲಿ ಅವನದೇ ಮಾತು ಎತ್ತಿದ್ದೇನೆ, ಅವನೇ ಬೇಪತ್ತೆ!" ಅಣ್ಣ ಬರುವದನ್ನು ಕಂಡು ಭಕಡಿ ಮೊದಲೇ ಅಲ್ಲಿಂದ ಜಾರಿಬಿಟ್ಟಿದ್ದ. ಅವನ ಮನಸ್ಸು ಕದ್ದ ಕಳ್ಳನಂತೆ ಆಗಿಬಿಟ್ಟಿತ್ತು. ಭಕಡಿಯ ಇಂಥ ವರ್ತನದಿಂದ ಕೆರಳಿ ಮಿಶ್ರರು ಮನೆಗೆ ಹಿಂದಿರುಗಿದರು. "ಎಂಥ ಬದಮಾಷ ಹುಡುಗ! ಬರಿದೆ ನಾನು ಕೆಟ್ಟೆ."

ಇಂದು ಬರಜೂ ಪ್ರತ್ಯಕ್ಷಮೂರ್ತಿ ಮನಗಂಡ—ಭಕಡಿ ಬೇರೆ ಆಗುವ ಪಂಥವನ್ನೇ ತೊಟ್ಟಿದ್ದಾನೆ. ನೋಡಿಯೇ ಬಿಡುತ್ತೇನೆ. ಆತ ಮನೆಯನ್ನು ಹೇಗೆ ಒಡೆಯುತ್ತಾನೆಂದು, ಹೇಗೆ ಆಸ್ತಿ ಪಾಲು ಮಾಡುತ್ತಾನೆಂದು. ಬರಜೂ ಪಧಾನ ಬದುಕಿರುವವರೆಗೂ ಇದು ಆಗಲು ಬಿಡುವವನಲ್ಲ. ಭಕಡಿಯನ್ನು ಕರೆದು ಆತ ಮುಗುಳುನಗೆ ಬೀರುತ್ತಾ ಅಂದ : "ಏನೋ ಭಕಡೀ, ಮನೆ ಪಾಲಿಗಾಗಿ ನೀನು ಹೊರಗಿನಿಂದ ಪಂಚರನ್ನು ಕರೆದು ತರುತ್ತೀ. ಆಸ್ತಿ ನಮ್ಮದು. ಹಂಚುವದು ನಮ್ಮೊಳಗೆ. ಪಂಚರು ಬಂದು ಅದನ್ನೇನು ಹೆಚ್ಚಿಸಿ ಕೊಡುವರೇ? ಇದನ್ನು ಮೊದಲು ಹೇಳು—ಬೇರೆ ಆಗಬೇಕೆನ್ನುವಿ. ಅದೇಕೆ?"

ತಿಂಗಳಗಟ್ಟಲೆ ನೇತ್ರಮಣಿ ಭಕಡಿಗೆ ತರಬೇತಿ ಕೊಟ್ಟಿದ್ದಳು. ಉರು ಹಾಕಿಸಿದ್ದಳು. ಹರಿಮಿಶ್ರರೂ ತುಂಬ ಕಲಿಸಿದ್ದರು. ಆದರೆ ಇವನು ಅಷ್ಟು ನಿರುಪಯೋಗಿಯೇ?

ಭಕಡಿ ಒಳ್ಳೇ ಧೈರ್ಯ ತೊಟ್ಟು, ನಾಲಗೆ ಮಸೆದುಕೊಂಡು ಹೇಳಿದ : "ಬೇರೆ ಆಗದೇ ಏನು ಮಾಡಬೇಕು? ಮನೆಯ ಉತ್ಪನ್ನ–ಆಸ್ತಿ ಎಲ್ಲ ನಿನ್ನ ಖರ್ಚಿನದಾಗಿದೆ. ಎರಡೆರಡು ಲಗ್ನಗಳಾದವು. ಇಷ್ಟೆಲ್ಲ ಮಂದಿಯ ವೆಚ್ಚ ಈ ಲೂಟಿ ನಾನು ಸಹಿಸಲಾರೆ."

ಬರಜೂಗೆ ನಾಲಗೆಯೇ ಕತ್ತರಿಸಿದಂತೆ ಆಯಿತು. ಅಣ್ಣನ ಎದುರಿಗೆ ತಲೆಯೆತ್ತಿ ತುಟಿ ಬಿಚ್ಚುತ್ತಿದ್ದಿಲ್ಲ. ಅದೇ ಭಕಡಿಯ ಬಾಯಿಂದ ಇಂಥ ಮಾತು ಆತ ಕೇಳುತ್ತಿದ್ದ : "ಛೇ, ಇಲ್ಲ. ಆ ಭಕಡಿ ಈತ ಎಂದಿಗೂ ಆಗಲಾರ—" ಭಕಡಿಯ ರೂಪದಲ್ಲಿ ಬೇರೆ ಯಾರೋ ಮನುಷ್ಯ ಅಥವಾ ಪಿಶಾಚಿ ನಿಂತು ಮಾತಾಡುತ್ತಿರಬೇಕು.

ಬರಜೂ ಅಂದ : "ಒಳ್ಳೇದು, ಬೇರೆ ಆಗಬೇಕೆಂದೇ ನಿನ್ನ ಇಚ್ಛೆ ಇದೆಯೆಂದಾಯಿತು. ಬೇರೆ ಆಗುವ ವಿಚಾರವೆಲ್ಲ ನಿನಗೆ ಗೊತ್ತಿರಬೇಕು. ಈ ಹೊಲ–ಗದ್ದೆ ಆಸ್ತಿ–ಮನೆ ದನ–ಕರು ಹಂಚಿಕೊಳ್ಳುವದು ಆಗಲಿಕ್ಕಿಲ್ಲ. ಒಳ್ಳೇದು ಹೇಳು. ನಿನ್ನ ಇಷ್ಟವೇ ನನ್ನ ಇಚ್ಛೆ. ನೀನು ಆಡಿದಂತೆ ನಾನು ನಡೆಯುತ್ತೇನೆ" ಬರಜೂ ಭಕಡಿಯ ಕಡೆ ನೋಡಿ ನಕ್ಕ.

ಭಕಡಿಗೆ ಅರ್ಥವಾಗಲಿಲ್ಲ. ಜೋಲುಮೋರೆ ಹಾಕಿ ಅಂದ : "ಇಂಥ ಒಗಟಿನ ಮಾತು ನನಗೆ ತಿಳಿಯುವದಿಲ್ಲ. ಎಲ್ಲ ಸಾಮಾನು ಅರ್ಧಅರ್ಧ ಹಂಚಿ ಕೊಳ್ಳುವದರಿಂದಲೇ ಈ ಜಗಳ ಬಗೆಹರಿಯುವದು. ಅಂದಾಗ ಇಷ್ಟು ಜಿದ್ದು ಏಕೆ?"

ಬರಜೂ ಅಂದ : "ಯಾವದೂ ಅರ್ಧಅರ್ಧ ಆಗಲಾರದು. ಹೇಗೆ ಇದೆಯೋ ಹಾಗೆಯೇ ನಿಲ್ಲಬೇಕು."

ಭಕಡಿ ರೇಗಿ ನುಡಿದ : "ನಾನು ಹೇಳಿಬಿಡುತ್ತೇನೆ—ನನ್ನಿಂದ ಒಟ್ಟಿಗೆ ಉಳಿಯುವದು ಸಾಧ್ಯವಿಲ್ಲ."

"ಆ ಬಗ್ಗೆ ನನ್ನ ಆಕ್ಷೇಪವೇ ಇಲ್ಲ. ನಾವು ಬೇರೆ ಆಗುವದೇ ಸರಿ. ಆದರೆ ಮನೆ ಮಾರು ಆಸ್ತಿಪಾಸ್ತಿ ಎಲ್ಲ ಈಗ ಇದ್ದಂತೆಯೇ ಇರುವದು. ಬೇರೆ ಆಗುವ ಮಾತು ನಮ್ಮಿಬ್ಬರದೇ ಉಳಿಯಿತು."

"ಹೀಗೆ ಅಡ್ಡತಿಡ್ಡ ಸುತ್ತು ಬಳಸಿ ಆಡಿದರೆ ನನಗೆ ತಿಳಿಯದು. ಹಾರಾ–ಸೋನಾರ ಮದುವೆಯ ಖರ್ಚಿನ ಲೆಕ್ಕಾಚಾರವಾಗಿ ಅದರ ಅರ್ಧಅರ್ಧ ಹಂಚಿ ಹೋಗಬೇಕು." ಹಾರಾ–ಸೋನಾರ ಹೆಸರು ಎತ್ತುವಾಗ ಭಕಡಿಯ ಕಂಠ ಬಿಗಿದುಬಂತು. ಆತ ಕೆಮ್ಮ ಹತ್ತಿದ.

ಬರಜೂ ನಗಹತ್ತಿದ. "ಹಾಗಲ್ಲವೋ ಹುಚ್ಚ, ಈ ವೆಚ್ಚದ ಲೆಕ್ಕಾಚಾರ ಯಾರು ಎಂದು ಮಾಡಿದ್ದುಂಟು? ಮಾಡುವದುಂಟು? ಹಾರಾ–ಸೋನಾರ ಮದುವೆಯ

ವೆಚ್ಚದ ಲೆಕ್ಕ ನಮ್ಮ ಪಾಲುಗಾರಿಕೆಯಲ್ಲಿ ಬರಬೇಕೇ? ಇದೇ ನಮ್ಮ ಬುದ್ಧಿಯೇ? ಏಕೆ? ನಾನು ಹೇಳುತ್ತಿದ್ದೇನೆ. ಆಸ್ತಿ-ಮನೆಗಳಲ್ಲಿ ಪಾಲು ಆಗಬಾರದು. ಹೊಲಕ್ಕೆ ಮೇರೆ ಬೀಳಬಾರದು. ಅಂಗಳದಲ್ಲಿ ಗೋಡೆ ಏಳಬಾರದು. ಕೇವಲ ನಾವೇ ಬೇರೆ ಆಗಬೇಕು. ಈ ಮನೆ ನಿನ್ನದು. ಈ ಹೊಲ-ತೋಟ, ಆಸ್ತಿ-ಉತ್ಪನ್ನ, ದನ-ಕರು, ಗಿಡ-ಮರ, ಮನೆ-ಕೊಟ್ಟಿಗೆ, ಪಾತ್ರೆ-ಪಗಡೆ ಎಲ್ಲ ನಿನ್ನವು. ನನಗೆ ಇವುಗಳ ಯಾವ ಸಂಬಂಧವೂ ಇಲ್ಲ. ನನಗೆ ಇರುವ ಹುಡುಗಿ ಇನ್ನೊಬ್ಬಳು—ಮೋತಿ, ಎಲ್ಲಿಯಾದರೂ ಅವಳ ಮದುವೆ ಮಾಡಿಕೊಟ್ಟರೆ ನನ್ನ ಬಿಡುಗಡೆ ಆದಂತೆ. ದುಡ್ಡು ದುಡಿಮೆಯ ಕೂಸು. ಎಲ್ಲಿಯೇ ಇದ್ದರೂ ದುಡಿದವನೇ ಹೊಟ್ಟೆ ತುಂಬಿಕೊಳ್ಳುವನು. ಅಂದಮೇಲೆ ನಮ್ಮಿಬ್ಬರ ನಿರ್ವಾಹ ಹೇಗೂ ಆಗಲಾರದೆ?" ಬರಜೂ ಭಕಡಿಯ ಮೋರೆ ನೋಡಿ ಮತ್ತೆ ನಕ್ಕ.

ಭಕಡಿಗೆ ಯಾವ ಮಾತೂ ಹೊಳೆಯಲಿಲ್ಲ. ಆತ ಕಣ್ಣು ಕೆಕ್ಕರಿಸಿಕೊಂಡು ಅಣ್ಣನ ಮೋರೆ ನೋಡುತ್ತ ಉಗುಳು ನುಂಗುತ್ತ ನಿಂತ—ಅಣ್ಣನ ಗುರುತೇ ಹತ್ತದವನಂತೆ! ಬಹಳ ವರ್ಷಗಳನಂತರ ಅಣ್ಣ ಭೆಟ್ಟಿಯಾಗಿದ್ದಾನೆ-ಗುರುತಿನ ಚಿಹ್ನವೇನೂ ದೊರೆಯುವದಿಲ್ಲವೆಂಬಂತೆ.

ಭಕಡಿಯ ಬಾಯಿಂದ ತನ್ನಾರೆ ಶಬ್ದ ಹೊರಡಿತು : "ಆಂss ಏನಂದೀ?"

ಬರಜೂ ಹೇಳಿದ : "ತಿಳಿಯಲೇ ಇಲ್ಲವೇ? ಆಸ್ತಿಯ ಪಾಲು ಆಗಲಾರದು. ಆದರೆ ನಾವು ಬೇರೆ ಆಗುವೆವು. ನಿನ್ನದೇ ಇದೆಲ್ಲ, ಮನೆ-ಮಾರು ದನ-ಕರು, ಹೊಲ-ತೋಟ ಎಲ್ಲ ಆಸ್ತಿ-ಉತ್ಪನ್ನ. ನಾಳೆಯೇ ನಾನು ನನ್ನ ಹೆಂಡತಿ ಮಕ್ಕಳೊಡನೆ ಮನೆ ಬಿಟ್ಟು ಹೊರಟುಹೋಗುತ್ತೇನೆ. ತಿಳಿಯಿತೇ?" ಬರಜೂ ನಕ್ಕ.

ಭಕಡಿ ನಗಲಿಲ್ಲ, ಅಳಲಿಲ್ಲ. ಹಾಗೆಯೇ ಕಣ್ಣು ಬಿರಿಯುವಂತೆ ದುರುದುರು ನೋಡುತ್ತ ನಿಂತ. ಬರಜೂನನ್ನೇ ನೋಡುತ್ತ ನಿಂತಿದ್ದನೊ, ಬೇರೆ ಯಾರನ್ನೋ ಅವನಿಗೆ ಗೊತ್ತಿದ್ದಿಲ್ಲ. ಅವನು ಕೇವಲ "ಇಲ್ಲ" ಎಂದು ಸುಮ್ಮನಾದ.

ಬರಜೂ ಮತ್ತೆ ನುಡಿದ : "ತಿಳಿಯಲಿಲ್ಲವೇ? ನಾನು ನಾಳೆ ಮೋತಿ, ಮಗ ದಾಮ ಮತ್ತು ಅವರ ತಾಯಿ ಇವರೊಂದಿಗೆ ಮನೆ ಬಿಟ್ಟು ಹೊರಟು ಹೋಗುತ್ತೇನೆ. ಎಲ್ಲ ಆಸ್ತಿ-ಉತ್ಪನ್ನ ನಿನ್ನದು."

ಭಕಡಿ ಇನ್ನೊಮ್ಮೆ "ಇಲ್ಲ" ಎಂದ. ಮುಂದೆ ಮಾತು ಹೊರಡಲೇ ಇಲ್ಲ.

ಈ "ಇಲ್ಲ" ಈ ನಕಾರ ಬಾಯಿಂದ ಹೊರಟದ್ದಿಲ್ಲ. ಒಮ್ಮೆಲೇ ಹೃದಯಾಂತರಾಳದಿಂದ ಹೊಮ್ಮಿ ಬಂದಿತ್ತು. ಈ ನಕಾರದಲ್ಲಿ ನೇತ್ರಮಣಿಯ ಹಟವಿದ್ದಿಲ್ಲ. ಹರಿಮಿಶ್ರರ ಧೂರ್ತತನವೂ ಇದ್ದಿಲ್ಲ. ಇದು ಶುದ್ಧ ಸ್ಪಷ್ಟ ನಕಾರವಿತ್ತು.

ಒಳಮನೆಯನ್ನು ಹೊಕ್ಕು ಬರಜೂ ಹಾರಾಳ ತಾಯಿಗೆ ನಗುತ್ತ ಹೇಳಿದ : "ಏನು? ಏನು ಹೇಳುವಿ? ಆ ದಿನ ಬಲು ದೊಡ್ಡ ಮನಸ್ಸು ಮಾಡಿದ್ದಿ. ಇಂದು ನಿಜವಾಗಿಯೂ ಆ ಕರೆ ಬಂದಿದೆ. ಮನೆ ಬಿಟ್ಟು ಹೋಗಬೇಕಾಗಿದೆ. ಆಸ್ತಿ-ಹೊಲ, ಮನೆ-ಮಾರು ಎಲ್ಲ ಛಕಡಿಗೆ ಕೊಟ್ಟು, ನೀನು ಏನು ಮಾಡಬಲ್ಲೆ?" ಮೊದಲಿಗೆ ಅವಳಿಗೆ ನಂಬಿಗೆಯೇ ಆಗಲಿಲ್ಲ. ಅಂದುಬಿಟ್ಟಳು : "ಛೇ, ಉಂಟೇ? ಸುಳ್ಳೇ..."

ಬರಜೂ ಅಂದ : "ನಿನ್ನ ಮುಂದೆ ನಾನು ಸುಳ್ಳಾಡಲೇ?"

ಬರಜೂ ಎಲ್ಲೂ ಸುಳ್ಳಾಡುವವನಲ್ಲ. ಅಂಥಲ್ಲಿ ಹೆಂಡತಿಯ ಎದುರು ಏಕೆ ಸುಳ್ಳು ಹೇಳಬೇಕು? ಆದರೆ ಅವಳಿಗೆ ಇದು ಕೆಡುಕೆನಿಸಿದಷ್ಟೇ ಕೌತುಕವಾಗಿಯೂ ಕಂಡಿತು. ಆಕೆ ಕೇಳಿದಳು : "ಮನೆ ಮಾರು ಬಿಟ್ಟು ಎಲ್ಲಿಗೆ ಹೋಗುವಿರಿ? ಉಳಿಯುವಿರಿ ಎಲ್ಲಿ?

ಬರಜೂ ನಗುತ್ತಾ ಆಡಿದ : "ಎಲ್ಲಿ ಉಳಿಯುವದು—ಅದು ಯಾರೂ ಮೊದಲೇ ಗೊತ್ತು ಮಾಡುತ್ತಾರೆಯೇ?"

"ಅಂದರೆ ಉಳಿಯುವ ಠಾವು ಠಿಕಾಣೆ ಗೊತ್ತಿಲ್ಲ. ಮನೆಯಿಂದ ಭೂತ ಹೊರಬಿದ್ದಂತೆ ಹೊರಟು ಹೋಗುವದೇ?"

"ಹೌದು, ಹೆಣ್ಣೇ ಹೌದು." ಬರಜೂ ನಗುತ್ತಲೇ ಅಂದ ; ನಾಳೆ ನಸುಕಿಗೇ ಮನೆ ಬಿಟ್ಟು ಓಡಿ ಹೋಗುವೆನು, ಜತೆಗೆ ಬರುವಿಯಾದರೆ ಈಗಿನಿಂದಲೇ ಸಿದ್ಧತೆ ಮಾಡು. ತಿಳಿಯಿತೇ?"

ಹಾರಾಳ ತಾಯಿಗೆ ತಡೆಯದಾಯಿತು. "ಹಾಗಾದರೆ ಏನೇನು ಜತೆಗೆ ತೆಗೆದುಕೊಳ್ಳಲಿ? ಹೇಳಿರಿ, ಗಂಟುಮೊಟ್ಟೆ ಕಟ್ಟಿ ಇಟ್ಟಿಬಿಡುತ್ತೇನೆ."

"ಒಂದು ಒಡಕು ಕಾಸು ಕೂಡ ತೆಗೆದುಕೊಳ್ಳಕೂಡದು. ಬೆಕ್ಕಿನ ಮರಿಯೂ ತರಬಾರದು. ಬರೇ ತೊಟ್ಟುಕೊಳ್ಳಲಿಕ್ಕೆ ನಿತ್ಯದ ಬಟ್ಟೆ-ಬರೆ."

"ಅಯ್ಯೋ, ಪಾತ್ರೆ-ಪಗಡೆ ಬೇಡವೇ?"

"ಏನೇನೂ ಬೇಡ, ಹಾಂ. ಇನ್ನೊಂದು ಮಾತು. ಮನೆಯ ಈ ಮಾತಿನ ಡಂಗುರ ಇನ್ನೆಲ್ಲೂ ಹೊರಗೆ ಹೊಡೆಯಬಾರದು."

"ನನಗೇನು ಬಿದ್ದಿದೆ ಆ ಅಗತ್ಯ?" ಹಾರಾಳ ತಾಯಿ ಅಂದಳು.

ಛಕಡಿ ಇದೆಲ್ಲ ವಾರ್ತೆ ನೇತ್ರಮಣಿಗೆ ಒಪ್ಪಿಸಿದನು.

"ಒಂದು ಸಣ್ಣ ಮಾತು ಆಡಿದ ಕೂಡಲೇ ದಿಲ್ಲಿಗೆ ದೌಡು! ಇಂಥ ಬಡಿವಾರದಿಂದೆಲ್ಲ ನಾವು ಹೆದರುತ್ತೇವೆಂದು ತಿಳಿವರೊ ಏನೋ. ನನಗೇನು ಹೆದರಿಸುತ್ತಾನೆ. ಮನೆ-ಮಠ ಬಿಟ್ಟು ಬಹಳಷ್ಟು ಜನ ದೇಶಾಂತರಕ್ಕೆ ಹೋಗಿದ್ದಾರೆ. ಇವನೂ ಹೋಗುತ್ತಾನೆ.

ಇಂಥ ಬಹಳ ಮಂದಿ ನೋಡಿದ್ದೇನೆ. ಇಡೀ ಜಾತಿಗೆ ಜಾತಿಯೇ ಇಲ್ಲಿ ಬಿದ್ದಿರುತ್ತದೆ. ಬಿದ್ದಲ್ಲಿಯೇ ತಿಂದು ತೇಗಿ ಸತ್ತಿರುತ್ತದೆ, ಅಂದಾಗ ಹೆದರಿಕೆ ಯಾರಿಗೆ? ನಡೆ, ಹೊರಟು ಹೋಗು, ನೀನು ಹೊರಟು ಹೋದರೆ ಎಲ್ಲರೂ ನಿನ್ನ ಬೆನ್ನಿಗೆ ಓಡಿಓಡಿ ಬರುವದು ಅಷ್ಟೇ ಇದೆ. ಹಃ ಹಃ ಹಃ, ದೊಡ್ಡ ಬೆದರಿಕೆ ಹಾಕುತ್ತಾನೆ—ಮನೆ ಬಿಟ್ಟು ಹೊರಡುವನಂತೆ!"

ನೇತ್ರಮಣಿ ಛಕಡಿಯ ಮೇಲೆ ಸಿಟ್ಟಿಗೆದ್ದು ಅಂದಳು : "ನೀವು ಹೇಡಿ ಇದ್ದೀರಿ. ಕಳ್ಳರಂತೆ ಕಾಲುಕಿತ್ತಿ ಬಂದಿರೇಕೆ? ಹೇಳೇಕೆ ಬರಲಿಲ್ಲ?—'ಹೋಗುವದಾದರೆ ಹೊರಟು ಹೋಗು ಅಡ್ಡಿ ಇಲ್ಲ!' ಎಂದು. ಇಂಥ ಮಾತುಗಳಿಂದೆಲ್ಲ ಎಲ್ಲೂ ಯಾರೂ ಹೆದರುವದಿಲ್ಲ. ಅಲ್ಲಿಂದ ಕಳ್ಳನಂತೆ ಓಡಿ ಬಂದು ಇಲ್ಲಿ ದೊಡ್ಡ ಅಮಲದಾರನಂತೆ ಮಾತಾಡುತ್ತೀರಿ. ನಿಮ್ಮಂಥ ಹೇಡಿಯಿಂದ ಆಗುವದು ಏನೂ ಇಲ್ಲ.

"ಹೀಗೇಕೆ ಕೆರಳಾಡುವಿ? ನೋಡು, ನಾಳೆ ನಸುಕಿಗೇ ಎದ್ದು ಹೋಗುವರು. ಹೋಗಲಿ, ನಾವು ಸುಮ್ಮನಿರುವದೇ ಲೇಸು."

ನೇತ್ರಮಣಿ ಅಂದಳು : "ಇದೋ ಮತ್ತೆ ಅದೇ ಮಾತು, ಸುಮ್ಮನಿರುವದೇ ಲೇಸು!"

ಬರಜೂನ ಕಿವಿಗೆ ನೇತ್ರಮಣಿಯ ಆ ಮಾತು ಹೋಯಿತು—"ಹೇಳೇಕೆ ಬರಲಿಲ್ಲ. —ಹೋಗುವದಾದರೆ ಹೊರಟು ಹೋಗಲು ಅಡ್ಡಿ ಇಲ್ಲ."

~*~*~*~

೧೨

ಮುಂಜಾವು ಮೂಡಿತು. ನಸಕು ಹರಿಯಿತು. ಎಂದಿನಂತೆಯೇ ಬರಜೂ ಬೆಳ್ಳಿ ಮೂಡುವ ಮುಂಚೆಯೇ ಎದ್ದು ಭಕಡಿಯನ್ನು ಎಬ್ಬಿಸಿದನು. ಮನೆ–ತೋಟ, ಬಣಿವೆ–ಕಣಜ, ದನ–ಹೋರಿ, ಧಾನ್ಯ–ಬೀಜ ಎಲ್ಲ ಏನಿವೆ, ಎಷ್ಟಿವೆ, ಹೇಗಿವೆ ಎಂಬುದನ್ನು ತಿಳಿಸಿಕೊಟ್ಟನು, ಕಾಣಿಸಿಕೊಟ್ಟನು. ಎಷ್ಟು ಆಸ್ತಿ–ವಸ್ತುಗಳಿವೆ ಎಂಬುದನ್ನು ತಿಳಿಸಿಕೊಡಲಿಕ್ಕೆ ಅವನಿಗೆ ಒಂದು ಗಂಟೆಗಿಂತ ಹೆಚ್ಚು ಹೊತ್ತು ಹಿಡಿಯಲಿಲ್ಲ.

ಬರಜೂ ಕೇಳಿದ : "ಏನು, ಎಲ್ಲ ಸರಿ ತಿಳಿದುಕೊಂಡಿಯಲ್ಲವೇ? ಈಗ ಮತ್ತೆ ಬೇರೆಯಾಗುವ ಮಾತು ಏಕೆ?"

ಭಕಡಿ ಅಂದ : "ಏಕೆ? ಅರ್ಧಅರ್ಧ ಹಂಚಿಕೊಳ್ಳೋಣವೇ?"

"ಇಲ್ಲ ಭಕಡಿ, ನೀನು ತಿಳಿಯಬಹುದು—ಇದರ ಮೇಲೆ ನನ್ನ ಮೋಹವಿದೆಯೆಂದು. ಆದರೆ ತಂದೆಯವರ ಆಜ್ಞೆ ಇದೆ, ಆಸ್ತಿ–ವಸ್ತು ಪಾಲಾಗಕೂಡದೆಂದು."

"ಒಳ್ಳೇದು, ನಿಮ್ಮ ಇಚ್ಛೆ. ಇದರ ಮೇಲೆ ಯಾರೂ ಏನು ಹೇಳುವದು." ಭಕಡಿಗೆ ಅಣ್ಣನೊಂದಿಗೆ ಮಾತು ಸೇರಲಿಲ್ಲ.

ಒಳಗೆ ಹೋಗಿ ಬರಜೂ ನೋಡಿದ, ಹಾರಾಳ ತಾಯಿ ಬೊಡ್ಡೆ–ಮಡಿಕೆ, ಬಟ್ಟೆ–ಬರೆ ಇನ್ನೂ ಏನೆಲ್ಲ ಒಡವೆಗಳ ಮೂಟೆ ಕಟ್ಟುತ್ತಿದ್ದಳು. ಬರಜೂ ಕೇಳಿದ : "ಇದೇನು ಕಾರಖಾನೆ ತೆರೆದಿರುವಿ?"

"ಜತೆಗೆ ಒಯ್ಯುವದು ಬೇಡವೇ?"

"ಇಷ್ಟೆಲ್ಲ ಒಡವೆ ಕಟ್ಟಿಕೊಳ್ಳಲಿಕ್ಕೆ ನಿನಗೆ ಹೇಳಿದವರು ಯಾರು? ಪಾತ್ರೆ–ಪೇಲೆ ಏನೂ ಒಯ್ಯಬಾರದೆಂತಲೇ ಹೇಳಿದ್ದಿಲ್ಲವೇ? ಮತ್ತೆ ಗಡಿಗೆಮಡಿಕೆ ಕಟ್ಟಿಕೊಳ್ಳುವಿ ಏಕೆ?"

ಹಾರಾಳ ತಾಯಿ ಮುಖ ಉಬ್ಬಿಸಿ ಗೊಣಗುಟ್ಟಿದಳು : "ಇವನ್ನು ನಾನೇ ಕ್ರಯಕ್ಕೆ ಕೊಂಡು ಇಟ್ಟಿದ್ದೆ."

"ತೆಗೆ, ಒಗೆ ಅವನ್ನು. ಕೊಂಡು ಇಟ್ಟಿದ್ದೆ! ಅವೆಲ್ಲ ಹೊರಗೆ ತೆಗೆ–ಕೇಳಿಕೋ —ಮತ್ತೊಮ್ಮೆ ಹೇಳುತ್ತೇನೆ. ಬಟ್ಟೆ–ಬರೆ ಏನೂ ಒಯ್ಯುವದಿದ್ದರೂ ಕಿರಿಯ ಸೊಸೆಗೆ ಕಾಣಿಸಿಯೇ ತೆಗೆದುಕೋ."

ಹಾರಾಳ ತಾಯಿ ಬರಜೂನ ಕಡೆಗೆ ನೋಡಿದಳು. ಬರಜೂ ನಕ್ಕ. ಆ ತಾಯಿಯೂ ನಕ್ಕಳು. ಇಬ್ಬರೂ ಒಬ್ಬರನ್ನೊಬ್ಬರು ಅರಿತರು. ಸದ್ದಿಲ್ಲ ಸನ್ನೆ ಇಲ್ಲ. ನೋಟವೇ ಇಂಗಿತವನ್ನು ನುಡಿಯಿತು.

ಹಾರಾಳ ತಾಯಿ ಯಾರಿಗೂ ಏನೂ ಹೇಳಲಿಲ್ಲ. ಆದರೂ ಬರಜೂ ಹೊರಟು ಹೋಗುವ ಸುದ್ದಿ ಹೇಗೋ ಗಳಿಗೆಯಲ್ಲಿ ಊರ ತುಂಬ ಹಬ್ಬಿತು. ಶರದೂಳ ತಾಯಿ, ನಾಡೀ ಪಾಂಡೆ, ನೇತರವ್ವಾ, ಶೋಭಾ ಅಕ್ಕ–ಎಷ್ಟೆಲ್ಲ ಹೆಂಗಸರು ಬಂದು ಪಧಾನರ ಮನೆಯಲ್ಲಿ ಒಟ್ಟಾದರು. ಒಬ್ಬರ ಕೈಯಲ್ಲಿ ಹಲ್ಲುಜ್ಜುವ ಕಡ್ಡಿ. ಇನ್ನೊಬ್ಬಳ ಕೈಯಲ್ಲಿ ಅರಸಿಣ. ಮತ್ತೊಬ್ಬಳ ಹತ್ತಿರ ಎಣ್ಣೆಯ ಗಿಂಡಿ. ಮಗುದೊಬ್ಬಳ ಬಳಿಗೆ ಬಾಳೆಯ ಎಲೆಯಲ್ಲಿ ಸುರುಳೆ ಸುತ್ತಿದ ಹೊಗೆಸೊಪ್ಪು. "ಛೀ, ಛೀ, ಎಂಥ ಮಾತು? ಮನೆ ಬಿಟ್ಟು ಓಡುವದೇ? ಕಳ್ಳರಿಗೆ ಹೆದರಿ ಕಾಡಿಗೆ ಓಡುವದೇ? ಏಕೆ?—ಆಸ್ತಿ–ಪಾಸ್ತಿ ಸಮ ಸಮಪಾಲು ಹಂಚಿದರೆ ಏನು ಆಗುತ್ತದೆ? ಅಣ್ಣ–ತಮ್ಮಂದಿರ ಮನಸ್ಸು ಕೂಡದಿದ್ದರೆ ಬೇರೆ ಬೇರೆ ಇದ್ದರಾಯಿತು. ಪ್ರಪಂಚದಲ್ಲಿ ಹಾಗೆ ಆಗುವದೇ ಇಲ್ಲವೇ? ಮನೆಮನೆಗೂ ಹೀಗೆ ಆದದ್ದೇ, ಆಗುವದೇ ಇದೆ. ಆದರೆ ತಮ್ಮನಿಗೆ ಹೆದರಿ ಅಣ್ಣ ಮನೆ ಬಿಟ್ಟು ಓಡಿಹೋಗುವದು—ಛೀ, ಇದು ಲೋಕವಿಲಕ್ಷಣ ಮಾತು!"

ಹೊರಚೌಕಿಯಲ್ಲಿ ಜದು, ನಿಧಿಯಾ, ಧರಮಾ, ಭಾಗುಣಿ ಮುಂತಾದವರೆಲ್ಲ ಬಂದು ಬಂದು ಗುಂಪುಗೂಡಿದರು. ನಿಧಿಯಾ ಪಂಚೆಯ ಅಂಚಿನಿಂದ ಕಣ್ಣೊರಿಸಿಕೊಳ್ಳುತ್ತ ಅಂದ : ಬರಜೂ ಅಣ್ಣನಿಗೆ ತೋಚಿದ್ದೇ ಹಟ. ಅದನ್ನು ಬದಲಿಸುವವರು ಯಾರು? ಆತ ಜಗನ್ನಾಥನ ರಥದಂತೆ. ಮುಂದೆಯೇ ನಡೆಯುವವ. ಹಿಂದೆ ತಿರುಗುವ ಹಂಬಲವೇ ಬೇಡ?"

ಧರಮಾ ಅಂದ : "ಭಲೇ, ಭಲೇ. ಮಾತೇನೋ ಚೆನ್ನಾಗಿ ಆಡಿದ. ಆದರೆ ಬರೇ ಆಡುವದರಿಂದ ಆಗುವದೇನೂ ಇಲ್ಲ. ನಾವೆಲ್ಲ ಇಷ್ಟು ಮಂದಿ ಇದ್ದಿರುವಾಗ ಅವರು ಮನೆ ಬಿಟ್ಟು ಹೋಗುತ್ತಾರೆ. ಮತ್ತು ನಾವು ಅದನ್ನು ಕಣ್ಣಾರೆ ನೋಡುತ್ತ ಇದ್ದೇವೆ."

ಜದು ನಗುತ್ತ ಅಂದ : "ಇಲ್ಲವಾದರೆ ನೀನು ಇದಕ್ಕೆ ಯಾವ ಉಪಾಯ ಮಾಡುವಿ? ಅದನ್ನಾದರೂ ಹೇಳಿಬಿಡು."

"ಏಕೆ? ನೀವು ಮಂದಿ ಒಂದೆಡೆಗೆ ಇಲ್ಲಿ ಕೂತಿರಿ. ನಾನು ಎಲ್ಲ ಆಸ್ತಿ–ಸೊತ್ತು ಅರ್ಧಅರ್ಧ ಹಂಚಿಕೊಡುತ್ತೇನೆ. ಇನ್ನು ಛಕಡಿ ಪಧಾನ ಮಾತು ಕೇಳಲಿಕ್ಕಿಲ್ಲ. ಆದರೆ ನಾವು ಒಂದು ಮಾತು ಆಡಿದರೆ ಆತ ಎಲ್ಲ ಸೊತ್ತಿನಲ್ಲಿ ಅರೆಪಾಲು ಬಿಟ್ಟುಕೊಟ್ಟ ಹೊರತು ಬೇರೆ ಮಾತು ಏನೂ ಎತ್ತಲಾರ. ಹೇಳಿ ಏನು ನಿಮ್ಮ ಇಷ್ಟ? ಇದು ಈ ಧರಮಾದಾಸನ ಸವಾಲು!"

ನಿಧಿಯಾ ನುಡಿದ : "ಅಲ್ಲೋ, ಸುಮ್ಮನೇ ಬೀಸಿದ ಹುರುಡನ್ನೇ ಮತ್ತೇಕೆ ಬೀಸುವಿ? ಆತ ಹಾಗೆ ಬೇರೆ ಆಗುವವನೇ ಅಲ್ಲ. ಆದ್ದರಿಂದಲೇ ತನ್ನದೇ ಸಂತೋಷದಿಂದ ಮನೆಮಾರು ಬಿಟ್ಟು ಹೊರಗೆ ಹೊರಟಿದ್ದಾನೆ. ಅಂಥವನಿಗೆ ನೀನು ಅರೆಪಾಲು ಕೊಡಿಸಿ ಮನೆಯಲ್ಲಿ ಇರಿಸಿಕೊಳ್ಳುವವನೋ? ಸರಿ, ಇರಿಸಿದಂತೆ ಆಯಿತು ಬಿಡು."

"ಸರಿ, ಸರಿ. ಹಾಗೆಲ್ಲ ಮನೆಮಾರು ಬಿಟ್ಟು ಹೊರಡಲಿಕ್ಕೆ ಏನಂತೆ? ನಾವೆಲ್ಲ ಏನು ಇಲ್ಲಿ ಸತ್ತು ಬಿದ್ದಿದ್ದೇವೋ? ಅಥವಾ ಭೂತ-ಪಿಶಾಚಿ ಆಗಿ ಕೂತಿದ್ದೇವೋ?"

"ಇದಕ್ಕೇ ಹೇಳುವದು—ಕೆಲಸಕ್ಕೆ ಬಾರದ ಹರಟೆಮಲ್ಲ ನೀನೆಂದು."

"ಓಹೋಹೋ, ನೀವೆಲ್ಲ ಧರ್ಮವೀರರು, ಧರ್ಮರಾಜರು!"

ನಿಧಿಯಾ ಮತ್ತೆ ಬಾಯಿ ತೆರೆಯುವವನಿದ್ದ. ಜದು ಅವನನ್ನು ತಡೆದ. "ಸುಮ್ಮನಿರು, ಬರೆ ಪುಕ್ಕಟ್ಟೆ ಮಾತಿಗೆ ಮಾತು ಬೆಳೆಸಿ ಗರಿಯದೇ ಗುರುಡ ಮಾಡುವಿ."

ಬರಜೂ ನೋಡಿದ ಇಡಿ ಊರಿಗೇ ಹಬ್ಬಿಬಿಟ್ಟಿದೆ. ಏನೇ ಆದರೂ ಈಗ ಆತ ಹೋಗಲೇಬೇಕು. ತಮ್ಮನ ಬಾಯಿಯಿಂದ ಬೇರೆ ಆಗುವ ಭಾಷೆ ಹೊರಟ ಮೇಲೆ ಹಾರ-ಸೋನಾರ ಮದುವೆಯ ಲೆಕ್ಕಾಚಾರ ಆಗಬೇಕಾದ ಅಗತ್ಯವೆದ್ದಾಗ—ಇನ್ನೇನು ಆಗುವದು ಉಳಿದಿದೆ? ಹಳೆಯ ಕಳೆದುಹೋದ ಸಂಗತಿಗಳು ಮತ್ತೆ ಹೊಳೆದಂತೆ ಆದವು—ಹೆಸರ ರಾಶಿ ಹಾಕಿಸಿದ್ದು—ಬೆಲ್ಲವೆಲ್ಲ ಹೊತ್ತಿ ಹೊರಗೆ ಮಾರಿದ್ದು—ಇಲ್ಲ ಇನ್ನಿಲ್ಲ. ನಡು-ನಡುವೆ ಮನೆಯ ಮೋಹ ಅವನನ್ನು ಹಿಂದಕ್ಕೆ ಜಗ್ಗುತ್ತಿತ್ತು. ಆದರೆ ಈಗ ಅವನಿಗೆ ಪೂರಾ ಪೂರಾ ಮನದಟ್ಟಾಯಿತು—ಛಕಡಿ ಬೇರೆ ಆಗುವ ಹಟಕ್ಕೆ ಬಿದ್ದೇ ಬಹುಕಾಲದಿಂದಲೂ ಹೀಗಲ್ಲ ಹೆಣಗುತ್ತ ಇದ್ದ. ಬರಜೂ ಒಳಒಳಗೇ ನುಡಿದ : "ಇಲ್ಲ, ಇನ್ನು ತಡೆಯುವದಿಲ್ಲ." ಕಿರಿಯ ಸೊಸೆಯ ಹಿಂದಿನ ಮಾತೂ ಕಿವಿಯಲ್ಲಿ ಮತ್ತೆ ಮೊಳಗಿತು : "ಹೋಗುವದಾದರೆ ಹೋಗಿಬಿಡಲಿ. ಇಲ್ಲ, ಇನ್ನು ಈ ಮನೆಯಲ್ಲಿ ಉಳಿಯುವದು ಶಕ್ಯವೇ ಇಲ್ಲ."

ಬರಜೂ ಹಾರಾಳ ತಾಯಿಯ ಬಳಿಗೆ ಹೋಗಿ ಅಂದ : "ನಡೆ ಈಗ ಹೊರಡು, ಹೊರಬೀಳು."

ಊರ ಹೆಂಗಸರು ಆ ಹಿರಿಯ ಸೊಸೆಗೆ ತರತರದ ಪ್ರಶ್ನೆ ಪರಿಪರಿಯಾಗಿ ಕೇಳಿ ಕಾಡಿದರು. "ಇದೆಂಥ ಮಾತು? ನೀನು ಮನೆಯ ಹಿರಿಸೊಸೆ. ಹೀಗೆ ಬೀದಿ ಬೀದಿ ಎಲ್ಲಿ ಹೇಗೆ ಅಲೆದಾಡುವಿ? ಹೀಗೆ ಎಲ್ಲಾದರೂ ಆದದ್ದುಂಟೇ? ನೀನೇಕೆ ಬರಜೂನನ್ನು ತಡೆಯಲಿಲ್ಲ?" ಹಾರಾಳ ತಾಯಿ ನಗುತ್ತ ಅಂದಳು :

"ನನ್ನ ಮಾತು ಅವರು ಕೇಳಿದರಲ್ಲವೇ ತಡೆಯುವದು?"

ಶೋಭಾ ಅಕ್ಕ ಆಡಿದಳು : "ಹಾಗಾದರೆ ಹೆಣ್ಣು—ಅದೂ ಮನೆತನಸ್ಥ ಹೆಣ್ಣು-ಎಲ್ಲಿ ಹೀಗೆ ಬೀದಿ ಬೀದಿ ತಿರುಗಬೇಕು? ಮರ್ಯಾದಸ್ಥ ರೈತರ ಸೊಸೆ. ನೀನು ಯಾವದೇ ಬೀದಿಯ ಚಮಗಾರನ ಮನೆಯ ಕೊಂಡು ತಂದ ಹೆಂಗಸಲ್ಲ."

ಶರದೂಳ ತಾಯಿ ಅಂದಳು : "ಗಾದೆಯೇ ಇದೆ, ಮನೆಯ ಸೊಸೆ ಬೀದಿಗೆ ಇಳಿಯದವಳು ಸಂತೆಗೆ ಹೋದಳಂತೆ! ಅಲ್ಲ, ಈಗಿತ್ತಲಾಗಿ ದೊಡ್ಡ ದೊಡ್ಡ ಮನೆತನಗಳ ಎಷ್ಟೋ ಹೆಣ್ಣು ಮಕ್ಕಳು ಬೀದಿ ಕೇರಿ ಅಲೆದಾಡುವದಿಲ್ಲವೇ? ಹಾರಾಳ ತಾಯಿ ಹಟಮಾಡಿ ಹೊರಬಿದ್ದರೆ ಅದೇನು ಅಷ್ಟು ದೊಡ್ಡ ತಪ್ಪು ಆಯಿತೇನೇ?"

ಕಿರಿಯ ಸೊಸೆ ಮತ್ತು ನಾಡಿ ಪಾಂಡೆ ಛಕಡಿಯ ಮಲಗುವ ಕೋಣೆಯಲ್ಲಿ ಗುಜುಗುಜು ಮಾತನಾಡುತ್ತಾ ಹಿಃ ಹಿಃ ಎಂದು ನಗುತ್ತಿದ್ದರು.

"ಏಳು, ತಡಮಾಡಬೇಡ" ಎಂದು ಬರಜೂ ಬಟ್ಟೆಯ ಗಂಟು ಬಗಲಿಗೆ ಎತ್ತಿಕೊಂಡ. ತಲೆಗೆ ಮುಂಡಾಸ ಸುತ್ತಿಕೊಂಡ. ಕೈಗೆ ಮೂರು ಮೊಳದ ದೊಣ್ಣೆ ತೆಗೆದುಕೊಂಡ—ಮತ್ತು ಹೊರ ಜಗಲಿಯ ಕಡೆಗೆ ನಡೆದ. ಅವನ ಬೆನ್ನಿಗೆ ಹಾರಾಳ ತಾಯಿ ಮಗು ದಾಮುನನ್ನು ಚಚ್ಚಿಕೊಂಡು ಮೋತಿಯ ಕೈಹಿಡಿದು ಎಲ್ಲ ಹೆಂಗಸರೊಡನೆ ನಗುತ್ತ ಮಾತನಾಡುತ್ತ ಹೊರಗೆ ಬಂದಳು. ಮನೆಯ ಎಷ್ಟೆಲ್ಲ ಬದುಕು—ಪೆಟ್ಟಿಗೆ-ಪಿಠಾರಿ, ಪಾತ್ರೆ ಪಗಡೆ, ಹಿತ್ತಲೋಳಿ ಹೂದೋಟ ಎಲ್ಲವೂ ಇದ್ದಂತೆಯೇ ಇದ್ದುವು. ಅವುಗಳ ಕಡೆಗೆ ಆಕೆ ಕಣ್ಣೆತ್ತಿಯೂ ನೋಡಲಿಲ್ಲ. ಕಂಡೂ ನೋಡಲಿಲ್ಲ. ಅವಳಿಗೆ ಯಾತರ ಮೋಹವೂ ಉಳಿದಿದ್ದಿಲ್ಲ. ಆದರೂ ಆಕೆ ಹೆಣ್ಣೇ ಆಗಿದ್ದಳಲ್ಲವೇ? ಅವಳೇ ಧನ್ಯಳು!

ಭಾಗಾ, ನೇತರಾ, ಚಂದರಾ, ಧರಮಾ ಎಲ್ಲರೂ ಬರಜೂನನ್ನು ಹಿಂದಿರುಗಿಸುವ ನಿಶ್ಚಯ ಮಾಡಿದರು. ಜದು ಹೇಳಿದ : "ಇದು ವ್ಯರ್ಥ. ಯಾರೂ ಹಿಂದಿರುಗಿಸಲಾರರು. ನೀವು ಬೇಡ. ಬ್ರಹ್ಮ ವಿಷ್ಣು ಮಹೇಶ್ವರರಿಂದಲೂ ಸಾಧ್ಯವಿಲ್ಲ. ಬಡಿಗೆ ಮುರಿದೀತು, ಮಣಿಯಲಿಕ್ಕಿಲ್ಲ. ಆತ ಯಾವ ಕೆಲಸಕ್ಕೆ ಕೈ ಒಡ್ಡಿರುವನೋ ಭಗವಂತ ಅದಕ್ಕೆ ಯಶ ಕೊಡಲಿ. ನಾವು ನೀವು ಇಷ್ಟೇ ಬಯಸುವದು-ಬೇಡಿಕೊಳ್ಳುವದು. ಆಗದ ಕೆಲಸಕ್ಕೆ ಹೀಗೆ ಮುಂದು ಬೀಳುವಿರೇಕೆ? ಹಿರಿಯರು ಹೇಳಿದ್ದಾರೆ : ದೇಹದೊಂದಿಗೆ ಸುಖ ದುಃಖ ಪಡೆದೇ ತಂದದ್ದು. ಈ ದೇಹವೇ ಮಾಡಿದ ಕರ್ಮವನ್ನು ಉಣ್ಣಬೇಕು. ಬರಜೂ ಅಣ್ಣನಿಗಾದರೂ ಈ ದೇಹದ ಮೇಲೆ ಅಧಿಕಾರವಿದೆಯೇ? ಅದರ ಕರ್ಮಫಲ ಅವನೂ ಉಣ್ಣಬೇಕು."

ನಿಧಿಯಾ ಅಂದ : "ಮತ್ತೇನಿಲ್ಲ. ಇನ್ನೆಲ್ಲಿಯಾದರೂ ಒಂದು ಠಾವು ಠಿಕಾಣೆ, ಆಶ್ರಯ ಆಧಾರ ಇದ್ದಿದ್ದರೆ..."

ಜದು ಅಂದ : “ಇದೇ ನಿನ್ನ ತಪ್ಪು. ಬರಜೂ ಅಣ್ಣನ ಮನೆ ಎಲ್ಲ ಕಡೆಗೂ ಇದೆ, ಅವನಿಗಾಗಿ ಚಿಂತೆ ಏಕೆ? ತನ್ನ ಮನೆಯನ್ನು ಇಷ್ಟು ಹಾಯಾಗಿ ಬಿಡಬಲ್ಲವನಿಗೆ ಯಾವ ಕೊರತೆಯೂ ಇಲ್ಲ, ಯಾವ ಕೊರಗೂ ಇಲ್ಲ. ಒಣ ರೊಟ್ಟಿ ತಿಂದಾನು. ತಣ್ಣೀರು ಕುಡಿದಾನು.”

ಬರಜೂ ನಗುನಗುತ್ತಲೇ ಮನೆಯಿಂದ ಹೊರಬಿದ್ದ. ಅವನ ಬೆನ್ನಿಗೆ ಹಾರಾಳ ತಾಯಿ, ಅವಳ ಬಗಲಲ್ಲಿ ದಾಮ, ಅವಳ ಕೈಹಿಡಿದು ಮೋತಿ ನಗುನಗುತ್ತ ಕಂಡವರತ್ತ ತಲೆದೂಗುತ್ತ ಹೊರಟರು.

ಜದುವನ್ನು ಕಂಡು ಬರಜೂ ಹೇಳಿದ : “ಊರ ಸುಖದುಃಖ ಇನ್ನು ನಿನ್ನ ಮೇಲೆ ಬಿತ್ತು.”

ಜದು ನಗುತ್ತ ನುಡಿದ : “ನನ್ನೊಬ್ಬನಿಂದ ಆ ಭಾರ ಹೊರುವದು ಆಗ ಬೇಕಲ್ಲ!”

“ಮತ್ತೆ ಅದೇ ಮಾತು. ನೀನು ಒಬ್ಬನೇ ಇರುವಿಯಾ? ನಾನೇನು ಈಗ ಒಬ್ಬನೇ ಹೊರಟಿದ್ದೇನೆ?”

ಜದು ದಲಾಯಿ ಚಿಂತಿಸಿದ; ‘ಏನು, ನಾನು ಇಂದು ಒಬ್ಬಂಟಿಗನೇ?’ ಜದು ಇಂದು ಒಬ್ಬನಲ್ಲ. ಒಬ್ಬ ಅವನ ಜತೆಗೆ ನಿಂತಿದ್ದಾನೆ. ಬರಜೂ ಇಂದು ಒಬ್ಬನೇ ಮನೆಯಿಂದ ಹೊರಟಿಲ್ಲ. ಇನ್ನೂ ಒಬ್ಬ ಅವನ ಜತೆಗೆ ನಡೆಯುತ್ತಾನೆ. ತನಗೇಕೆ ಭಯ? ಜದು ಕಣ್ಣೀರು ಒರಸಿಕೊಂಡ. ಧರಮಾ, ನಿಧಿಯಾ, ಭಾಗಾ, ನೇತರಾ ಎಲ್ಲರೊಡನೆಯೂ ಬರಜೂ ಹೇಳಿದ : “ಸುಮ್ಮನಿರಿ, ಚಿಂತೆ ಏತಕ್ಕೆ? ಚಿನ್ಮಯನಿದ್ದಾನೆ. ಎಲ್ಲ ಸಂಗತಿ ಅವನಿಗೆ ಒಪ್ಪಿವೆ. ನಾನು ಎಲ್ಲೇ ಇರಲಿ. ನಿಮ್ಮ ವಿಚಾರ ಯಾವಾಗಲೂ ನೆನಪಿಡುತ್ತೇನೆ. ನಿಮ್ಮ ಸಮಾಚಾರ ಕೇಳಿ ತಿಳಿದುಕೊಳ್ಳುತ್ತಲೇ ಇರುತ್ತೇನೆ.”

ಬರಜೂನ ಮುಖ ಚರ್ಯೆ ಕಂಡು ಇಂದು ಎಲ್ಲರ ಮನಸ್ಸಿನಲ್ಲಿ ಹೇಗೋ ಭಕ್ತಿ ಭಾವನೆ ಉಕ್ಕೇರಿಬಂದಿತು. ಏನೋ ಏನೋ ಹೇಳಲು ಅವರು ನೆನೆದುಕೊಂಡಿದ್ದರು. ಆದರೆ ಯಾರ ಬಾಯಿಯಿಂದಲೂ ಒಂದು ಶಬ್ದವೂ ಹೊರ ಬೀಳಲಿಲ್ಲ. ಎಲ್ಲರೂ ಕುರಿಗಳಂತೆ, ಗೋವುಗಳಂತೆ ಬರಜೂ ಕುಟುಂಬದ ಬೆನ್ನಿಗೆ ನಡೆಯತೊಡಗಿದರು. ಹಾರಾಳ ತಾಯಿಗೆ ಅಸಾಧ್ಯ ನಾಚಿಕೆ. ಆಕೆ ಮನೆತನಸ್ಥ ಹೆಣ್ಣು—ಕುಲವಧು. ಊರ ಜನಸ್ತೋಮದ ನಡುವೆ ಹೇಗೆ ನಡೆದಳು? ನಡೆಯದೇ ಹೇಗೆ ಉಳಿದಾಳು? ತಲೆಯಮೇಲಿನ ಸೆರಗು ಕೊಂಚ ಎಳೆದುಕೊಂಡು, ಬಗಲಲ್ಲಿ ಕೂಸನ್ನು ಎತ್ತಿಕೊಂಡು ಮಗಳನ್ನು ಸೆರಗಿನ ಇನ್ನೊಂದು ತುದಿಯನ್ನು ಹಿಡಿದು ಬರುವಂತೆ ಮಾಡಿ ಆಕೆ ಗಂಡನ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ನಡೆದಿದ್ದಳು. ಅದೇ ವರ್ಷ ಮಾವಂದಿರ ಮನೆಗೆ ಬಂದ ಸೊಸೆಗಳು ಅರೆತೆರೆದ ಕದಗಳ ಕಿಂಡಿಯೊಳಗಿಂದ ನೆಟ್ಟ ದೃಷ್ಟಿಯಿಂದ ಈ ಪ್ರಸ್ಥಾನವನ್ನು ನೋಡುತ್ತಿದ್ದರು. ಊರ ಹುಡುಗರೂ ಹುಡುಗೆಯರೂ ಜಗುಲಿಗಳಲ್ಲಿ

ಪಡಸಾಲೆಗಳಲ್ಲಿ ಗುಂಪು ಗುಂಪಾಗಿ ಮೋತಿ ಮತ್ತು ದಾಮರ ಕಡೆಗೆ ಕಣ್ಣ ಸನ್ನೆ ಮಾಡಿ ಒಬ್ಬರಿಗೊಬ್ಬರು ಕಾಣಿಸುತ್ತಿದ್ದರು. ಊರ ಹಣ್ಣು ಮುದುಕನೊಬ್ಬ ಬೇನೆ ಹಸಿವೆಯಿಂದ ನೆಲಹಿಡಿದು ಬಿದ್ದಲ್ಲಿಂದಲೇ ತನ್ನ ಗುಡಿಸಲ ನಡು ಒಳಗಿಂದ ಕೂಗಿದ : "ಹೋ ಹೋ. ಊರಿಂದ ಧರ್ಮವೇ ಎದ್ದು ಹೋಯಿತೇ?"

ಬರಜೂ ಪಧಾನ ಊರ ಹಿರಿಯರಿಗೆ ಕಂಡಾಗ ನಮಸ್ಕಾರಮಾಡಿ ಎಂದಿನಂತೆ ತಲೆ ತಗ್ಗಿಸಿ ಮುಂದರಿಯುತ್ತಿದ್ದ—ಅವನಿಗೆ ಯಾವದೇ ಮಾತಿನ ವಿಚಾರವೇ ಇದ್ದಿಲ್ಲವೆಂಬಂತೆ. ಎಲ್ಲೋ ಒಂದು ಬಂಗಾರದ ತುಂಡು ಅವನಿಗೆ ದೊರಕಿದೆ. ಅಲ್ಲಿಗೆ ಈಗ ನೇರವಾಗಿ ಓಡುತ್ತಿದ್ದಾನೆ. ಇಷ್ಟರಲ್ಲಿಯೇ ಸಿರಿವಂತನಾಗುವವನಿದ್ದಾನೆ ಎಂಬಂತೆ.

ಎಲ್ಲರ ಬೆನ್ನ ಮೇಲೆ ಕೈ ಆಡಿಸಿ ಊರ ಅಗಸೆಯಿಂದ ಎಲ್ಲರನ್ನೂ ತಿರುಗಿ ಕಳುಹಿಸಿ ಬರಜೂ ಮುಂದುವರಿದ. ಗದ್ದೆಗಳಲ್ಲಿ ಒಬ್ಬ ನೀರು ತೋಡಿ ಹಾಕುತ್ತಿದ್ದ. ಇನ್ನೊಬ್ಬ ಹಕ್ಕಿ ಓಡಿಸುತ್ತ ಪೈರು ನೋಡಿಕೊಳ್ಳುತ್ತಿದ್ದ. ಮತ್ತೊಬ್ಬ ಹುಲ್ಲು ಕೊಯ್ಯುತ್ತಿದ್ದ. ಎಲ್ಲ ಕರಿಮೈಯ ದನಗಳು ಹಿಂಡು ಹಿಂಡಾಗಿ ಎದ್ದು ಓಡಹತ್ತಿದವು. ಒಬ್ಬರು ನಮಸ್ಕಾರವೆಂದರು. ಒಬ್ಬರು ಕೈಮುಗಿದರು. ಒಬ್ಬರು ಕಾಲು ಮುಟ್ಟಿದರು. ಒಬ್ಬರು ಕಣ್ಣು ಒರಸಿಕೊಳ್ಳುತ್ತ ಹಾದಿಯಲ್ಲಿಯೇ ಬಿಕ್ಕು ನುಂಗುತ್ತ ನಿಂತರು. ಬರಜೂ ಕೆಲವರಿಗೆ ನಮಸ್ಕರಿಸಿದ. ಕೆಲವರಿಗೆ ಆಶೀರ್ವದಿಸಿದ. ಎಲ್ಲರೊಂದಿಗೂ ನಗುನಗುತಲೇ ಮಾತನಾಡುತ್ತ ಮುಂದರಿದ.

ಬರಜೂ ಮೂರು ಮೂರು ಮೊಳಕ್ಕೆ ಹೆಜ್ಜೆ ಇಡುತ್ತ ಮುಂದೆ ಸಾಗಿದ್ದ. ಹಾರಾಳ ತಾಯಿ ಹಿಂದಿನಿಂದ ಕೂಗಿದಳು : "ನೀವು ಇಷ್ಟು ಉದ್ದ ಕಾಲು ಹಾಕಿದರೆ ಮೋತಿ ಸಂಗಡ ಬರುವದು ಹೇಗೆ?"

ಬರದೂ ಹಿಂದಿರುಗಿ ನಗುತ್ತ ನುಡಿದ : "ನೀನೇ ಎಂದು ಏಕೆ–ಹೇಳುವದಿಲ್ಲ? ಮೋತಿಯ ತಲೆಗೇಕೆ ಈ ಆರೋಪ ಹೊರಿಸುವಿ? ಒಳ್ಳೇದು, ಹೊರಟು ಬರುವಾಗ ಕಿರಿಸೊಸೆಗೆ ಭೆಟ್ಟಿಯಾಗಿ ಬಂದಿದ್ದಿಯೋ ಇಲ್ಲವೋ? ನನಗೆ ಭಕಡಿ ಸಿಗಲಿಲ್ಲ."

"ಕಿರಿಸೊಸೆಗೆ ಭೆಟ್ಟಿಯಾಗಲಿಲ್ಲ. ಆಕೆ ನನ್ನ ಕಡೆಗೆ ನೋಡಲೂ ಇಲ್ಲ. ಏನೂ ಆಡಲೂ ಇಲ್ಲ. ನಾನೇನು ಮಾಡುವದು?"

ಬರಜೂನಿಗೆ ಅಷ್ಟರಲ್ಲಿ ಹಿಂದೆ ಕಾಲ ಸದ್ದು ಕೇಳಿಬಂತು. ಯಾರೋ ಉಬ್ಬಸಪಡುತ್ತ ಓಡಿ ಓಡಿ ಬರುತ್ತಿದ್ದನು.

ಹಿಂಬದಿಗೆ ಹೊರಳಿ ಬರಜೂ ಕೇಳಿದ : "ಏನೋ ಗೌರಾ, ನೀನು ಎತ್ತ ಕಡೆಗೆ ಹೊರಟೆ?"

ಹರಿಪುರದ ಗೌರಾಂಗ ಸೇಣ ಬರಜೂನ ಜೀವದ ಗೆಳೆಯ. ಆತ ಬರಜೂ ಅಣ್ಣನ ಹೆಸರು ಎತ್ತದೆ, ಗಂಟಲಿಗೆ ನೀರು ಇಳಿಸಿದ ದಿನವಿಲ್ಲ. ಅವನಲ್ಲಿ ತಂಟೆ ತಾಪತ್ರಯ, ಜಗಳ-ಜಂಜಡ, ವ್ಯಾಜ್ಯ-ವ್ಯವಹರಣೆ, ಶುಭ ಅಶುಭ ಏನೇ ಆಗಿದ್ದರೂ ಆತ ಬರಜೂ ಅಣ್ಣನನ್ನು ಕರೆಯುತ್ತಿದ್ದ. ಎಂಟು ಹತ್ತು ದಿನಕ್ಕೊಮ್ಮೆ ಬಂದು ಬರಜೂ ಅಣ್ಣನಿಗೆ ಶರಣೆನ್ನದೆ ಅವನ ಜೀವಕ್ಕೆ ಸುಖವೆನಿಸುತ್ತಿದ್ದಿಲ್ಲ. ಬರುವಾಗ ಬರಿಗೈಯಿಂದ ಬರುತ್ತಿದ್ದಿಲ್ಲ. ನಾಲ್ಕೈದು ಬದನೇಕಾಯಿ, ಒಂದೆರಡು ಹಾಲುಗುಂಬಳಕಾಯಿ ತಪ್ಪದೇ ತರುತ್ತಿದ್ದ. ಒಂದು ಒಂದೂವರೆ ತಾಸು ಬರಜೂ ಅಣ್ಣನೊಂದಿಗೆ ಹರಟೆ ಹೊಡೆದು ವೇಳೆ ವಿಪರೀತವಾದರೆ ಅಲ್ಲಿಯೇ ಊಟ ತೀರಿಸಿ ಮನೆಗೆ ಮರಳುತ್ತಿದ್ದ.

ಗೌರಾಂಗ ಅಂದ : "ನಿಮ್ಮ ಮನೆಗೆ ಹೋಗಿಯೇ ನೆಟ್ಟಗೆ ಇಲ್ಲಿಗೆ ಬಂದೆ." ಗೌರಾಂಗನ ಕಣ್ಣೆರೆಡೂ ಬಾತು ಹೋಗಿದ್ದವು. ಕೆಂಪು ಕಾಣುತ್ತಿದ್ದವು. ಮಾತೂ ಸರಿಯಾಗಿ ಬರುತ್ತಿದ್ದಿಲ್ಲ. ನಾಲಗೆ ತತ್ತರಿಸುತ್ತಿತ್ತು.

"ಬರಜಣ್ಣಾ, ನನ್ನದೊಂದು ಮಾತು ಕೇಳಬೇಕು."

ಗೌರಾಂಗನನ್ನು ದಿಟ್ಟಿಸಿ ಬರಜೂ ಕೇಳಿದ : "ಯಾವ ಮಾತೋ ಅದು?"

"ಹೇಳು, ಒಪ್ಪುವಿಯೋ ಹೇಳು. ಆಮೇಲೆಯೇ ಹೇಳುತ್ತೇನೆ."

"ಎಲಾ, ಮೊದಲು ಏನೆಂದು ಹೇಳಲ್ಲ!"

"ಇಲ್ಲ, ಮೊದಲು ಒಪ್ಪುವೆನೆಂದು ನೀನು ಹೇಳು. ಏನು? ಹೇಳುವಿಯಲ್ಲವೇ?" ಗೌರಾನಿಗೆ ಬರಜೂನ ಚಟ ಗೊತ್ತಿತ್ತು. ಅವನನ್ನು ಮೊದಲೇ ಸಿಲುಕಿಸಿ ಹಾಕದಿದ್ದರೆ ಅವನು ಸಿಲುಕುತ್ತಿದ್ದಿಲ್ಲ. ಒಮ್ಮೆ ಬಾಯಿಂದ "ಹಂ" ಎಂದು ಬಂದರೆ ಸರಿ. ಗೌರಾ ಮಕ್ಕಳಂತೆ ಹಟಮಾಡಲು ಆರಂಭಿಸಿದ. "ಇಲ್ಲ, ಇಲ್ಲ, ಮೊದಲು ನೀನೇ ಹೇಳು; ಒಪ್ಪುವಿಯಷ್ಟೇ?"

"ಎಲಾ, ನಾನೇನು ರಾಜಾ ಹರಿಶ್ಚಂದ್ರನಲ್ಲ. ಹೇಳಿದ್ದೆಲ್ಲ ಮುಂದೆ ಪಾಲಿಸಲಿಕ್ಕೆ. ಒಳ್ಳೇದು ಏನು ಹೇಳುವದಿದೆಯೋ ಹೇಳು. ನಿನ್ನ ಮಾತು ಒಪ್ಪಿಕೊಳ್ಳುವೆನು."

ಗೌರಾ ಹಿಗ್ಗಿ ನುಡಿದ : "ಮೊದಲು ಮೂರು ನಾಲ್ಕು ದಿನ ನನ್ನ ಮನೆಯಲ್ಲಿ ಹೋಗಿ ಉಳಿಯೋಣ. ಆಮೇಲೆ ಎಲ್ಲಿಗೆ ಹೋಗುವದಿದೆಯೋ ಹೋಗಬಹುದು. ಬರೇ ನಾಲ್ಕು ದಿನ ಬರಜೂ ಅಣ್ಣಾ, ನಾಲ್ಕು ದಿನಕ್ಕಿಂತ ಒಂದು ಹೊತ್ತು ಹೆಚ್ಚು ಉಳಿಯೆಂದು ನಾನು ಹೇಳುವದಿಲ್ಲ."

ಬರಜೂ ಅಂದ : "ಗೌರಾ, ನಾನೂ ಒಂದು ಮಾತು ಹೇಳುತ್ತೇನೆ."

"ಇಲ್ಲ, ಈಗ ನಾನು ಯಾವ ಮಾತೂ ಕೇಳುವದಿಲ್ಲ. ನೀನು ವಚನ ಕೊಟ್ಟಾಗಿದೆ. ಅದನ್ನು ಪಾಲಿಸು, ಬಿಡು, ನಿನ್ನ ಇಚ್ಛೆ."

ಗೌರಾ ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ. ಮುಂದೆ ಏನೂ ಆಡಲಾರದೇ ಹೋದ.

ಬರಜೂ ಚಿಂತಿಸಿದ : "ಬೇರೆ ಯಾವ ಉಪಾಯವೂ ಇಲ್ಲ." ಹಾರಾಳ ತಾಯಿಗೆ ಅಂದ : "ನಡೆ, ಇದೇ ದಾರಿಯಲ್ಲಿ ಇವರ ಊರು ಹತ್ತುತ್ತದೆ. ಅಲ್ಲಿ ಹೋಗದಿದ್ದರೆ ನಡೆಯುವಂತಿಲ್ಲವೆಂದು ಸ್ಪಷ್ಟ ತೋರುತ್ತದೆ."

ಭಕಡಿ ಅಂದು ಬರಜೂನ ಕಡೆಯಿಂದ ಎಲ್ಲ ಆಸ್ತಿಪಾಸ್ತಿ ವಶಪಡಿಸಿಕೊಂಡ ಕೂಡಲೇ ನಸುಕಿಗೆ ನಾರಪುರದ ಸಂತೆಗೆ ಹೊರಟು ಹೋದ. ನಿಜವಾಗಿಯೂ ಹೀಗೆ ಆಸ್ತಿ ಸೊತ್ತು ಬಿಟ್ಟು ಮಂದಿ ಓಡಿಹೋಗುವರೋ? ನೇತ್ರಮಣಿ ಹೇಳುತ್ತಾಳೆ; ಹರಿಮಿಶ್ರರು ಹೇಳುತ್ತಾರೆ—ಯಾರೂ ಎಂದೂ ಹೀಗೆ ಓಡಿಹೋದದ್ದು ಉಂಟೇ? ಹೀಗೆ ಹಿಂದಾದರೂ ಆದದ್ದುಂಟೇ? ಅಣ್ಣನೊಬ್ಬ ತಮ್ಮನಿಗೆ ಮನೆಬಿಟ್ಟು ಹೊರಟು ಹೋಗಿದ್ದಾನೆಯೋ? ಭಕಡಿ ಬಹಳ ಆಲೋಚನೆ ಮಾಡಿದ. 'ಹಂ, ಹಾಂ ಹೀಗೆ ಆದದ್ದುಂಟು. ಶ್ರೀರಾಮಚಂದ್ರನು ಭರತನಿಗಾಗಿ ರಾಜ್ಯ ಪಟ್ಟ ಬಿಟ್ಟು ಹೊರಟು ಹೋಗಿದ್ದ. ಆದರೆ ಈಗ ಆ ರಾಮನೂ ಇಲ್ಲ. ರಾಮಾಯಣದ ಆ ಕಾಲವೂ ಇಲ್ಲ. ಈಗಿನ ಕಾಲದಲ್ಲಿ ತಮ್ಮನ ಕುತ್ತಿಗೆಯ ಮೇಲೆ ಅಣ್ಣ ಚೂರಿ ಚಲಾಯಿಸುತ್ತಾನೆ. ಇತ್ತೀಚೆಗೆ—ಇದೇ ಆ ದಿನ ದೊಡ್ಡ ಜಮೀನದಾರನ ಮನೆಯಲ್ಲಿ ಸ್ವಲ್ಪ ಸೊತ್ತಿಗಾಗಿ ನಡುರಾತ್ರಿಯಲ್ಲಿಯೇ ಒಬ್ಬ ಸಹೋದರ ಮತ್ತೊಬ್ಬ ಸಹೋದರನಿಗೆ ಅವನ ಹೆಂಡತಿ ಮಕ್ಕಳೊಂದಿಗೆ ಮಲಗಿದಲ್ಲಿಯೇ ಕೊಲೆಮಾಡಿ ಚೆಲ್ಲಿದ. ಇಂಥ ಈ ಕಾಲಮಾನದಲ್ಲಿ ಅಣ್ಣ ತಮ್ಮನ ಬಗ್ಗೆ ಆಸ್ತಿ ಮನೆ ಎಲ್ಲ ಬಿಟ್ಟು ಕೊಟ್ಟು ಹೊರಬಿದ್ದು ಹೋಗುವದು ನಿಜವೇ?' ನೇತ್ರಮಣಿ ಅನ್ನುತ್ತಾಳೆ : 'ಇದೆಲ್ಲ ಹುಸಿ ಗದ್ದರಿಕೆ, ಬರೇ ಠಕ್ಕು.' ಆದರೆ ಅಣ್ಣ ಎಂಥ ಮನುಷ್ಯ ಎಂಬುದು ಇಂದಿನವರೆಗೂ ಭಕಡಿಗೆ ತಿಳಿದು ಬಂದಿದ್ದಿಲ್ಲ. ತುಸು ಹುಂಬ ಆಸಾಮಿ. ಯಾವಾಗ ಏನು ಮಾಡಿ ಬಿಡುವನೋ ಹೇಳುವಂತೆ ಇಲ್ಲ.

ಸಂತೆಯಲ್ಲಿದ್ದರೂ ಭಕಡಿಯ ಮನಸ್ಸು ಸಾಮಾನಿನ ಖರೀದಿಯ ಕಡೆಗೆ ಇದ್ದಿಲ್ಲ. ಅದೇ ಅದೇ ವಿಚಾರದ ಸುಳಿಯಲ್ಲಿ ಸುತ್ತುತ್ತಿದ್ದ.

ಮೊದಲು ಉದ್ಧವಯ್ಯ ಬಂದು ಹೇಳಿದ : "ಬರಜೂ ಮನೆ ಬಿಟ್ಟು ಹೆಂಡತಿ ಮಕ್ಕಳೊಡನೆ ಎಲ್ಲಿಗೋ ಹೊರಟು ಹೋದನಂತೆ. ಹೌದೇ?"

ಇದನ್ನು ಕೇಳಿ ಭಕಡಿ ಮೊದಲಿಗೆ ತಬ್ಬಿಬ್ಬಾದ. ಮನಸ್ಸಿನಲ್ಲಿ ಸುಂಟರ ಗಾಳಿಯೇ ಎದ್ದಿತು. ನಿಜವಾಗಿಯೂ ಅಣ್ಣ ಸರ್ವಸ್ವ ಬಿಟ್ಟು ಹೊರಟು ಹೋದನೇ? ಎಂಥ ಮಾತು ಇದು? ತಿರುಗಿ ಆತ ಬರಲಿಕ್ಕಿಲ್ಲವೇ? ಅತ್ತಿಗೆ ಏಕೆ ಹೋದಳು? ಮೋತಿ ಮತ್ತು ಮಗು ದಾಮು ಅವರು ಏಕೆ ಹೋದರು?

ಛಕಡಿ ಮತ್ತೆ ಕೇಳಿದ : "ಹೀಗೋ? ಜತೆಯಲ್ಲಿ ಮತ್ತು ಯಾರು ಹೋದರು? ಸರಕು ಸಾಮಾನು ಏನಾದರೂ ಸಂಗಡ ಒಯ್ದಿದ್ದಾನೆಯೇ?"

"ಅವನು ದಿಬ್ಬಣ ಹೊರಡಿಸಿಕೊಂಡು ಏನು ಹೋಗಿಲ್ಲ. ಗಂಡ ಮುಂದೆ, ಹೆಂಡತಿ ಹಿಂದೆ; ಅವಳ ಬಗಲಲ್ಲಿ ಮಗು, ಬೆನ್ನಿಗೆ ಕೈಹಿಡಿದ ಮೋತಿ. ಹೀಗೆ ಹೊರಟು ಹೋದರು. ಅದೂ ನಗುನಗುತ್ತ, ಹೀಗೆಲ್ಲಾದರೂ ಆದದ್ದು ಉಂಟೇ?"

"ಒಳ್ಳೇದು, ಈಗ ಅವರು ಎಷ್ಟು ದೂರ ಹೊರಟಿರಬಹುದು? ಎತ್ತ ಕಡೆಗೆ? —ಕಟಕದ ದಾರಿಯಲ್ಲಿ ಹೋದರೇ?"

"ಏಕೆ? ಅವರನ್ನು ತಿರುಗಿ ತರುವ ವಿಚಾರವುಂಟೇ? ಎಷ್ಟೆಲ್ಲ ಜನ ಹೇಳಿ ಹೇಳಿ ಸೋತರು. ಆದರೆ ಯಾರಿಂದಲೂ ಏನೂ ಆಗಲಿಲ್ಲ."

"ಒಳ್ಳೇದು. ಹೀಗೆ ಯಾರೂ ಎಲ್ಲೂ ಮನೆಬಿಟ್ಟು ಓಡಿದ್ದುಂಟೇ?"

"ಅರೇ, ಕಣ್ಣಾರೆ ಕಂಡಿದ್ದು ಆಡಿದ ಮಾತು ಇದು. ಕೇಳಿಲ್ಲವೇ? ನೂರು ಮಂದಿಯ ಕಣ್ಣೆದುರಿಗೆ ಹೊರಟು ಹೋದ, ಮತ್ತೆ ಕೇಳುವದೇನಿದೆ?"

"ಹೊರಟು ಹೋದದ್ದು ಹೋದ, ಆದರೆ ಮುಂದೆ ತಿರುಗಿ ಬರಲಿಕ್ಕಿಲ್ಲವೇ?"

"ಎಲೋ ಒಡಹುಟ್ಟಿದ ತಮ್ಮ ನೀನು, ಒಡನಾಡಿ ಬಾಳಿದವ. ನೀನು ನನಗೆ ಕೇಳುವದೇ?"

ಉದ್ಧವ ಸಂತೆಯ ಖರೀದಿಗೆ ತೊಡಗಿದ. ಛಕಡಿ ಕರೆದ "ಉದ್ಧವಾ, ಸ್ವಲ್ಪ ತಡೆ, ಎಲ್ಲಿಗೆ ಓಡುವಿ? ಇರಲಿ, ಹೋಗುವಾಗ ಅಣ್ಣ ಏನೇನು ಅಂದನೊ?"

ಉದ್ಧವ ಉದ್ಧಟನಾಗಿಯೇ ನುಡಿದ : "ನನಗೆ ಇನ್ನೂ ಬಹಳ ಕೆಲಸವಿದೆ. ಇಲ್ಲಿ ಹರಟೆ ಕೊಚ್ಚುತ್ತಾ ನಿಲ್ಲಲೇ ನಿನ್ನೊಂದಿಗೆ?"

ಛಕಡಿ ಮಿದುವಾಗಿ ಮಾತನಾಡಿದ : "ಉದ್ಧವಾ, ಸ್ವಲ್ಪ ತಡೆಯಪ್ಪ. ಹೇಳು, ಅಣ್ಣ ಹೋಗುವಾಗ ಏನು ಅಂದ? ನನ್ನ ವಿಷಯ ಏನಾದರೂ ಆಡಿದನೇ?"

"ನಾನೇನು ಅಲ್ಲಿಯೇ ಕೇಳುತ್ತ ಕೂತಿದ್ದೇನೋ ಅಥವಾ ಇಲ್ಲಿಯೇ ನಿಂತು ನಿನ್ನ ಮಾತು ಕೇಳುತ್ತ ಕೂಡ್ರಬೇಕೋ? ಅದೋ ಸಂತೆ ಏಳಲು ಬಂದಿದೆ. ನಾನು ಖರೀದಿ ಮಾಡುವದಿದೆ" ಎಂದು ಉದ್ಧವ ನಡೆದೇ ಬಿಟ್ಟ.

ಛಕಡಿ ಬಿಡಲಿಲ್ಲ. ಮತ್ತೆ ಕೂಗಿದ, "ಉದ್ಧವಾ, ಉದ್ಧವಾ ನಿನಗೆ ನಿನ್ನ ಮಗನ ಆಣೆ ಇದೆ. ತುಸು ಹೇಳಿ ಹೋಗು."

ಉದ್ಧವ ಹಿಂದಿರುಗಿ ನೋಡಿದ! 'ಎಂಥ ಮನುಷ್ಯ ಇವನು. ಒಮ್ಮೆ ಹೇಳಿದೆ ನಾನು ಏನೂ ಕೇಳಲಿಲ್ಲವೆಂದು. ಮಗನ ಆಣೆ, ಅಪ್ಪನ ಆಣೆ. ಹೊಳೆಯಲ್ಲಿ ಬಿತ್ತು ಇವನ ಆಣೆ!'

ಭಕಡಿ ನಿರಾಶನಾಗಿ ಮನೆಗೆ ಮರಳಿದ. ಮಿಶ್ರರ ಮಾತು ನೆನಪಿಗೆ ಬಂತು. 'ಈ ಸಂಗತಿಯ ಬಗ್ಗೆ ಚಿಕ್ಕಮಂದಿ ಏನೆಲ್ಲ ಮಾಡಬಹುದು. ಆದರೆ ಅವರೆಲ್ಲ ಏನು ನಮ್ಮ ಕೆಲಸಕ್ಕೆ ಬರುವವರೇ? ಅವರಿಂದ ನಮಗೆ ಏನು ಪ್ರಯೋಜನ?'

ಜಗಲಿ ಕಟ್ಟೆಯ ಮೇಲೆ ಕಾಲಿಟ್ಟು ಭಕಡಿ ನೋಡಿದ—ಮನೆಯೆಲ್ಲ ಶೂನ್ಯ. ತೆಂಗಿನ ಪರಟೆಯಲ್ಲಿ ಮಣ್ಣು ತುಂಬಿಕೊಂಡು ಆಡುತ್ತ-ಕೆಲೆಯುತ್ತ ಕೂತ ಮೋತಿ-ದಾಮರು ಕಣ್ಣಿಗೆ ಬೀಳಲಿಲ್ಲ. ಅಣ್ಣ ನಡು ಒಳದಲ್ಲಿ ಭಾಗವತದ ನಕಲು ಮಾಡುತ್ತ ಇಲ್ಲವೇ ನೂಲು ತೆಗೆಯುತ್ತ ಕೂತಿಲ್ಲ. ಭಕಡಿ ಒಳಗೆ ಹೊಕ್ಕ. ಮನೆ ಅವನಿಗೆ ತಿನ್ನಲಿಕ್ಕೆ ಎದ್ದು ಬಂದಂತೆ ಅನಿಸಿತು. ಯಾವ ದನಿಯೂ ಇಲ್ಲ, ಸದ್ದೂ ಇಲ್ಲ.

ನೇತ್ರಮಣಿ ಮನೆ ಸಿಂಗರಿಸುವುದರಲ್ಲಿ ತೊಡಗಿದ್ದಳು. ಅವಳೀಗ ಈ ಇಡಿ ಮನೆಯ ಸ್ವಾಮಿನಿ. ಅವಳನ್ನು ತಡೆಯುವವರು ಇನ್ನು ಯಾರು? ಮೋರೆಯ ಮೇಲೆ ಸೆರಗು ಎಳೆಕೊಳ್ಳಲು ಹಿರಿ ಮೈದುನನಿಲ್ಲ. ಜಗಳಾಡಲಿಕ್ಕೆ ಹಿರಿಸೊಸೆ ಇಲ್ಲ. ಈಗ ಅವಳು ಮಾಡಿದ್ದೇ ಧೋರಣ, ಕಟ್ಟಿದ್ದೇ ತೋರಣ. ಈಗ ಇಡಿ ಮನೆಗೆ ಅವಳೇ ಸ್ವಾಮಿನಿ.

ಭಕಡಿಯನ್ನು ಕಂಡ ಕ್ಷಣಕ್ಕೆ ನೇತ್ರಮಣಿ ನಗುತ್ತ ಅಂದಳು : "ಈಗ ಶುದ್ಧಿಗೆ ಬಂದಿರಾ—ಮನೆಗೆ ಮರಳಲಿಕ್ಕೆ? ಮನೆಯ ಎಚ್ಚರ ಈಗ ಬಂತೇ? ನಾನು ಒಬ್ಬಳು. ಎಲ್ಲೆಲ್ಲಿ ಏನೇನು ನೋಡಿಕೊಳ್ಳಲಿ? ಇಡಿ ಮನೆಯ ಸಾಮಾನು ಅಲ್ಲಲ್ಲಿ ಹರಡಿಬಿದ್ದಿದೆ."

ನೇತ್ರಮಣಿಯ ಮಾತು ಈ ಹೊತ್ತು ಭಕಡಿಗೆ ಅಂದಗೇಡು ಅನಿಸಿತು. ಅಸಹ್ಯವೆನಿಸಿತು. ಆತ ಮನದಲ್ಲಿಯೇ ಅಂದ : "ನೀನು ನೋಡಿಕೊಳ್ಳದಿದ್ದರೆ ಮತ್ತಾರು ನೋಡಿಕೊಳ್ಳುವರು?" ಹೊರಗೆ ಕೇಳಿದ : "ಒಳ್ಳೇದು, ಅವರೆಲ್ಲ ನಿಜವಾಗಿಯೂ ಹೊರಟು ಹೋದರೇ? ಈಗ ಹಿಂದಿರುಗಲಿಕ್ಕಿಲ್ಲವೇ?"

"ನಡೆ, ಓಡು. ಅವರನ್ನು ತಿರುಗಿ ತಾ." ನೇತ್ರಮಣಿ ಗುಡುಗಿ ಮತ್ತೆ ತನ್ನ ಕೆಲಸದಲ್ಲಿ ತೊಡಗಿದಳು. ಗೆರಶಿ, ಹಗ್ಗ, ಸಿಕ್ಕೆ, ಬೀಸಣಿಗೆ, ಪಿಠಾರೆ ಇವೆಲ್ಲ ಸರಿಯಾಗಿ ಇಡುವವದರಲ್ಲಿ ಮಗ್ನಳಾದಳು.

ಭಕಡಿ ಉಂಡು ಹೊರ ಜಗುಲಿಗೆ ಬಂದ. ಅವನಿಗೆ ಇಡಿ ಮನೆ ಒಳಿತೆನಿಸಲಿಲ್ಲ. ಅಣ್ಣ ಮರಳಲಿಕ್ಕಿಲ್ಲವೇ? ಮರಳಲಿಕ್ಕೇ ಇಲ್ಲವೇ? ಹೋಗಲು ಹೋಗಿಬಿಟ್ಟ. ಆದರೆ ಉಳಿಯುವನೆಲ್ಲಿ? ಜತೆಗೆ ಮಕ್ಕಳು-ಮರಿ ಎಲ್ಲಿಯ ತನಕ ಎಷ್ಟು ದಿನ ಹೊರಗೆ ಉಳಿಯುವರು? ಬರುವ, ಅಣ್ಣ ತಿರುಗಿ ಬಂದೇ ಬರುವ.

ನೇತ್ರಮಣಿ ಅಂದಳು : "ಇದೇನು ಹೀಗೆ? ಒಂದೇ ಸಮ ಶತಪಥ ಹಾಕುತ್ತಿದ್ದೀರಿ. ಅವರು ಮಲಗುವ ಕೋಣೆಯಲ್ಲಿ ಏನೇನು ಇದೆಯೋ; ನಿಮಗೆ ಕೀಲಿ ಕೊಟ್ಟು ಹೋಗಿದ್ದಾರೆ, ಕದ ತೆರೆದು ಎಲ್ಲ ನೋಡಿಕೊಂಡು ಬರುವದಿಲ್ಲವೇಕೆ?"

"ಲೇ, ಏನು ಕಿರಿಕಿರಿ ನಡೆಸಿರುವಿ? ಅವರು ಮನೆ ಮಾರುಬಿಟ್ಟು ಹೋದರು. ಮತ್ತು ಏನು ಹೊತ್ತುಕೊಂಡು ಹೋಗುವದು ಅಷ್ಟೇ ಇದೆ. ಆ ಕೋಣೆಗೆ ಬೀಗ ಹೇಗೂ ಬಿದ್ದಿದೆ. ಮುಂದೆ ಎಂದಾದರೂ ತೆರೆದು ನೋಡಿದರಾಯಿತು!"

"ಅಹಹಾ, ನೋಡಿಯಾರೆ ನೋಡಿ—ಏನು ಬಡಿವಾರದ ಮಾತು ಆಡುತ್ತಾರೆ—ನನ್ನ ಮುಂದೆ? ಅವರು ಹೊರಟು ಹೋದರೆ ನೀವೇಕೆ ಅವರ ಬೆನ್ನಿಗೆ ಓಡಲಿಲ್ಲ?"

"ಅಲ್ಲ ಮತ್ತೆ, ಮನೆಯಿಂದ ಏನಾದರೂ ಅವರು ಹೊತ್ತು ಒಯ್ದಾರೇ? ಇದೀಗ ನೋಡಿ ತನಿಖೆ ಮಾಡಲಿಕ್ಕೆ? ತುಸು ತಾಳಬಾರದೇ?"

"ಏನು ಹೊತ್ತು ಒಯ್ಯುತ್ತಾರೆ? ಗೆರಸಿ, ಹಗ್ಗ, ಹಂಡೆ-ಗಿಂಡಿ, ಹೊತ್ತು ಒಯ್ಯುವವರು ಅವನ್ನೆಲ್ಲ ತೋರಿಸಿಯೇ ಒಯ್ಯುತ್ತಾರೆಯೇ?"

ಭಕಡಿಗೆ ಈ ಮಾತು ಏಕೋ ತೀರ ಕೆಡುಕೆನಿಸಿತು. "ಎಲ್ಲ ಕಾಣಿಸಿ ತೋರಿಸಿ ಒಯ್ದಿದ್ದಾರೆ. ಬಟ್ಟೆ ಬರೆಯ ಗಂಟು, ಉಟ್ಟ ಅರಿವೆ ಅಂಚಡಿ ಎಲ್ಲಿಯೂ ಒಂದು ಪೈ ಕೂಡ ಇಟ್ಟುಕೊಂಡಿದ್ದಿಲ್ಲ. ಪಿಠಾರೆಯಲ್ಲಿ ಐದು ರೂಪಾಯಿ ಮತ್ತು ನಾಲ್ಕಾಣೆ ಚಿಲ್ಲರೆ ಬಿದ್ದಿದೆ. ಒಯ್ದದ್ದು ಏನು? ಹೇಗೆ ಮತ್ತು ಯಾತರಲ್ಲಿ?"

"ನಿಮ್ಮ ಕಣ್ಣಲ್ಲಿ ಬೆರಳಿಟ್ಟು ಆತ ಹೇಳುತ್ತಾನಲ್ಲವೆ?—'ಹೀಗೆ ಈ ರೀತಿ ನಾನು ಒಯ್ಯುತ್ತೇನೆ ಈ ದಾರಿಯಲ್ಲಿ' ಎಂದು. ಈಗ ಸ್ವಲ್ಪ ನೋಡಿಕೊಳ್ಳಿ, ನಿಧಾನಿಸಿರಿ. ಒಂದೆರಡು ದಿನಗಳಲ್ಲಿಯೇ ಕೇಳುವಿರಂತೆ—ಅವರು ಎಲ್ಲೋ ಹೋಗಿ ಹೊಲ ಮನೆ, ತೋಟ ತೋಪು ಮಾಡಿ ಹಚ್ಚಗಿದ್ದಾರೆ ಬೆಚ್ಚಗಿದ್ದಾರೆಂದು. ಸ್ವಲ್ಪ ತಾಳಿರಿ, ಕೇಳುವಿರಂತೆ."

ಭಕಡಿ ತಾಳಿದ. ಒಂದು ದಿನ, ಎರಡು ದಿನ, ಮೂರು ದಿನ. ಎಲ್ಲೂ ಯಾವ ಸುದ್ದಿಯೂ ಇಲ್ಲ. ಜಗಾ ಸೆಟ್ಟಿ ಅಂದ "ಬರಜೂ, ಹರಿಪುರದ ಗೌರಾಂಗ ಸೇಣನ ಮನೆಗೆ ಹೋಗಿದ್ದಾರೆ" ಆದರೆ ಈ ತನಕ ಅಲ್ಲಿಯೇ ಇರಬಹುದೇ? ನಾಲ್ಕು ದಿನ ಅಲ್ಲಿ ಉಳಿಯಬಹುದು. ಇನ್ನೆಷ್ಟು ದಿನ ಉಳಿಯಬಹುದು? ಒಂದು ದಿನ, ಎರಡು ದಿನ, ಮೂರು ದಿನ—ಮೆಲ್ಲಮೆಲ್ಲಗೆ ದಿನದಿನವೂ ಹೆಚ್ಚು ಹೆಚ್ಚು ಶೂನ್ಯವೆನಿಸಿತು. ಮನೆ ನುಂಗಲು ಎದ್ದು ಬಂದಂತೆ ಭಾಸವಾಗಹತ್ತಿತು. ಮನೆಯಲ್ಲಿ ಎಲ್ಲೂ ಭಕಡಿಯ ಚಿತ್ತ ನಿಲ್ಲುತ್ತಿದ್ದಿಲ್ಲ. ಏನೇ ಇರಲಿ ಒಳ್ಳೆ ಅಣ್ಣ ಬರಿದೆ ಮನೆ ಬಿಟ್ಟು ಏಕೆ ಓಡಿಹೋದ? ಭಕಡಿಗೆ ದೆವ್ವ ಬಡಿದಂತೆಯೇ ಆಗಿರಬೇಕು. ಆದರೆ ಅಣ್ಣ ಬೇರೆಯಾಗುವ ಹವ್ಯಾಸವೇ ಬೇಡವೆಂದು ಭಕಡಿಯನ್ನು ತಡೆದಿದ್ದರೆ ಭಕಡಿ ಏನು ಸಿಟ್ಟಾಗುತ್ತಿದ್ದನೇ? ಅದರಿಂದ ಭಕಡಿಗೆ ತನ್ನ ದೋಷವೇ ತೋರಿ ಬರುತ್ತಿತ್ತು.

ಮಧ್ಯಾಹ್ನ ಸಮಯ. ರಣಗುಡುವ ಬಿಸಿಲು ಸುತ್ತಲೂ ಭಣಗುಡುವಂತೆ ಮಾಡಿತ್ತು. ಭಕಡಿ ಮಲಗುವ ಕೋಣೆಯ ಕೀಲಿ ಕೈಗೆತ್ತಿಕೊಂಡ. ಅವನ ಮೈ ಅದೇಕೋ ನಡುಗುತ್ತಿತ್ತು.

ಆ ಕೋಣೆಯನ್ನು ಆತ ಹೇಗೆ ತೆರೆಯಬೇಕು? ಆ ಮನೆಯಲ್ಲಿ ಏನು ಇದೆಯೋ? ನಡು ಹಗಲಲ್ಲಿಯೂ ಭಕಡಿಗೆ ಹೆದರಿಕೆ ಹುಟ್ಟಿತು. ಹಿತ್ತಲ ಬಾಗಿಲಲ್ಲಿ ಮಾವಿನ ಮರದ ಮೇಲೆ ಒಂದು ಪಾರಿವಾಳ ಶಕುನ ನುಡಿಯಿತು. ಚಪ್ಪರದ ಮೇಲೆ ಕಾಗೆ ನಡುನಡುವೆ ಕೂಗುತ್ತಿತ್ತು–ಕಾಂಕಾಂಕಾಂss. ಭಕಡಿಯ ಮನಸ್ಸು ಉದಾಸವಾಗಿತ್ತು. ಅಣ್ಣನ, ತಂದೆ–ತಾಯಿಯ ಒಂದೊಂದೇ ಮಾತು ನೆನಪಾಗ ಹತ್ತಿತ್ತು. ಅವರೆಲ್ಲ ಇದ್ದಾಗ ಮನೆ ಹೇಗೆ ತುಂಬಿತ್ತು! ಈಗ ಹೇಗೆ ಆಗಿಬಿಟ್ಟಿದೆ!

ಯಾರ ಹೊಲ, ಯಾರ ಮನೆ! ಭಕಡಿಗೆ ಯಾವದೂ ತಿಳಿಯದಾಯಿತು. ನಾಲ್ಕು ಕಡೆಗೆ ಕತ್ತಲೆ ಕವಿಯಿತು. ಅವನ ಮನಸ್ಸು ಕುಗ್ಗಿ ಮುಗ್ಗಿ ಹೋಯಿತು.

ಕೋಣೆಯ ಕದ ತೆರೆದು ಭಕಡಿ ನೋಡಿದ. ಎಲ್ಲ ಸಾಮಾನು ಇದ್ದಂತೆಯೇ, ಬಿದ್ದಲ್ಲಿಯೇ ಬಿದ್ದಿವೆ. ಆ ಕೋಣೆಯಲ್ಲಿ ಒಂದು ಪುಟ್ಟ ಪಿಠಾರಿ ಎಲ್ಲಾದರೂ ಮುರಿದು ಬಿದ್ದಿದ್ದರೆ, ಒಂದು ಚಾಪೆ ಹರಿದು ಹೋಗಿದ್ದರೆ, ಗಡಿಗೆ ಹೂಜೆ ಏನಾದರೂ ಕಳೆದು ಹೋಗಿದ್ದರೆ, ಕೋಣೆ ಎಲ್ಲ ಬಕ್ಕಬರಿದಾಗಿ ಕಂಡಿದ್ದರೆ ಭಕಡಿಯ ಜೀವಕ್ಕೆ ಹಾಯೆನಿಸುತ್ತಿತ್ತು. ಆದರೆ ಅಲ್ಲಿ ಒಂದು ಕಡ್ಡಿಯೂ ಕದಲಿದ್ದಿಲ್ಲ. ಎಲ್ಲ ಹೂಜೆ, ಹರವಿ, ಚಾಪೆ, ಪಿಠಾರೆ ಎಲ್ಲ ವಸ್ತು–ಒಡವೆ ಇದ್ದಲ್ಲಿಯೇ ಇದ್ದವು.

ಭಕಡಿ ನಾಲ್ಕು ಕಡೆಗೆ ಅಲೆದಾಡುತ್ತಾ ಸಾಮಾನುಗಳನ್ನು ಮುಟ್ಟಿ ನೋಡುತ್ತ ಕೋಣೆ ಸುತ್ತಿದನು—ಏನೋ ಕಳಕೊಂಡವನಂತೆ. ಅವನ ಕಣ್ಣಿಗೆ ಬಿತ್ತು—ಆ ರಬ್ಬರಿನ ಹಂಸ. ಅದು ಒತ್ತಿದೊಡನೆ "ಚಿಂವ್ ಚಿಂವ್" ಎನ್ನುತ್ತಿತ್ತು. ಭಕಡಿ ಆ ಆಟಿಗೆಯನ್ನು ಎದೆಗೆ ಅವಚಿಕೊಂಡ. ಅವನ ಕಣ್ಣಿನಿಂದ ಸರಸರ ಹನಿಗಳು ಉದುರ ಹತ್ತಿದವು. ಭಕಡೀ, ಭಕಡೀ! ಇಡೀ ಜಾತಿಗೆ ಜಾತಿಯೇ ತಮ್ಮ ತಮ್ಮ ಆಸ್ತಿ ಉತ್ಪನ್ನ ಉಣ್ಣುತ್ತ ಬಿದ್ದಿದೆ. ಇನ್ನು ನಿನ್ನ ಆಸ್ತಿ ಉಣ್ಣುವವರು ಯಾರು? ಭಕಡಿ ಆ ಆಟುಗೆಯನ್ನು ಅಂಗೈಯಲ್ಲಿ ಇಟ್ಟುಕೊಂಡು ಒಮ್ಮೆ ನೋಡಿದ. ಅವನಿಗೆ ಭಾಸವಾಯಿತು—ನಾಲ್ಕು ಮಕ್ಕಳ ನಾಲ್ಕು ಪುಟ್ಟ ಕೈಗಳು ಒಮ್ಮೆಲೆ ಮೇಲಕ್ಕೆ ಚಾಚಿ ನೆಗೆದಾಡುತ್ತಿವೆ—ಆಟಿಗೆ ಸೆಳೆದುಕೊಳ್ಳಲಿಕ್ಕೆ! ಒಂದೇ ಸವನೆ ಕಣ್ಣೀರಕೋಡಿ ಹರಿಯಹತ್ತಿದ್ದರಿಂದ ಆತ ಕುರುಡನಂತೆ ಆದ.

ನೇತ್ರಮಣಿ ಒಮ್ಮೆ ನಕ್ಕು ಭಕಡಿಯ ಕಡೆಗೆ ನೋಡಿದಳು. ಆತ ಒಂದು ಶಬ್ದವನ್ನೂ ಆಡಲಿಲ್ಲ. ಕೂತಲ್ಲಿಯೇ ಕೂತು ಉಳಿದ ಕಣ್ಣಿನಿಂದ ಎಲ್ಲಿಂದಲೋ ಕರಗಿ ಉಕ್ಕಿ ಬಂದಂತೆ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಅವನನ್ನು ಕಂಡು ನೇತ್ರಮಣಿ ಮನಸ್ಸಿನಲ್ಲಿಯೇ ನಕ್ಕಳು—'ಹೆಣ್ಣು ಹೇಡಿ ಹೆಣ್ಣು ಹೇಡಿ, ದೊಡ್ಡ ಅಣ್ಣನ ಅಕ್ಕರೆಯ ಪುತ್ಥಳಿ. ಆಗಲಿ ಒಂದೆರಡು ದಿನ ಹೀಗೆಯೇ ನಡೆಯುವದು. ಆ ಮೇಲೆ ಎಲ್ಲ ಸರಿ ಸರಿಹೋಗುವದು.'

ಭಕಡಿ ಸಂಜೆಗೆ ಅಂಗಡಿಗೆ ಹೋಗಲಿಲ್ಲ. ಕೈಕಾಲು ಮುದುಡಿಕೊಂಡು ಕೂತು ಉಳಿದ, ಹೊರಗೆ ಜಗಲಿಯಲ್ಲಿ. ಸಾಧೋನ ಮುದಿತಾಯಿ ಕೈಯಲ್ಲಿ ಸೌದೆಯ ಎರಡು ಮೂರು ಕೊರಡು ಹಿಡಿದು ತನ್ನ ಚಿಂದಿ ಬಟ್ಟೆಯಲ್ಲಿ ಮರ್ಯಾದೆ ಮುಚ್ಚಿಕೊಳ್ಳಲು ಪೇಚಾಡುತ್ತ ಹರಕು ಸೆರಗು ಮತ್ತೆ ಮತ್ತೆ ಜಗ್ಗಿಕೊಳ್ಳುತ್ತ ಹಾದು ಹೋಗುತ್ತಿದ್ದಳು. ಇಳಿವಯಸ್ಸಿನ ಮುದುಕಿ. ತುಂಬ ಆಯುಷ್ಯ ಪಡೆದು ಮುಗಿಸುತ್ತ ಬಂದ ಹೆಣ್ಣು ಜೀವ. ಈಗ ಅವಳಿಗೆ ಸರಿಯಾಗಿ ಕಾಣಿಸುವದಿಲ್ಲ. ತನ್ನೊಳಗೆ ದೊಡ್ಡಕ್ಕ ಗೊಣಗುತ್ತ ಸಾಗಿದ್ದಾಳೆ. "ಅಯ್ಯೋ ಅಯ್ಯೋ, ಇದೇನು ಮಾಡಿ ಬಿಟ್ಟೆಯೋ. ಪ್ರಾಣಿ ಕೊನೆಗೂ ಇದೇನು ಮಾಡಿಬಿಟ್ಟೆ! ಇದೇ ನಿನ್ನ ಮನದಲ್ಲಿ ಇತ್ತೋ? ಈಗ ಈ ಮನೆ ಹೇಗೆ ಕಾಣಿಸುತ್ತದೆ? ಹೇಗೆ ಶೋಭಿಸುತ್ತದೆ? ಇದು ಯಾರದು, ಏನು ಮಾಡುತ್ತಿದ್ದ ಆತ? ತಲೆ ತಗ್ಗಿಸಿಕೊಂಡು ಸದಾಕಾಲವೂ ಹೀಗೆ ನಡೆಯುವ ಯಾವ ಅಪಶಬ್ದವೂ ಬಾಯಿಂದ ಹೊರಡಲಿಕ್ಕಿಲ್ಲ. ಕದಡಿದ ನೀರಿನಲ್ಲಿ ಕಾಲು ಕೂಡ ತೊಳೆದುಕೊಳ್ಳುತ್ತಿದ್ದಿಲ್ಲ. ಅವನಂಥವ ಇನ್ನಾರು? ಇಡಿ ಊರಲ್ಲಿ ಒಬ್ಬರಾದರೂ ಇದ್ದಾರೆಯೇ?"

"ಪಧಾನ ಮುದುಕಿ ಇಂದು ಬದುಕಿದ್ದರೆ ಹೀಗೆ ಆಗುತ್ತಿತ್ತೇ? ಆ ಪುಣ್ಯಾತ್ಮಳು 'ಬರಜೂ' ಎಂದು ಒಂದು ದಿನವೂ ಹೆಸರೆತ್ತಿ ಕರೆದಿದ್ದಿಲ್ಲ. ಮುದ್ದಿನ ಹಿರಿಮಗ ಹೆಸರೂ ಎತ್ತುತ್ತಿದ್ದಿಲ್ಲ. ಮುದುಕಿಯ ಮಾವನ ಹೆಸರೂ 'ಬರಜೂ' ಎಂದೇ ಇತ್ತು. ಮಾವನ ಹೆಸರು ಎತ್ತುವ ವಾಡಿಕೆ ಇಲ್ಲ. ಆದ್ದರಿಂದ ಮುದುಕಿ ಬರಜೂನನ್ನು 'ನರಜೂ' ಎಂದು ಕರೆಯುತ್ತಿದ್ದಳು." ಸಾಧೋನ ತಾಯಿಯ ಕಣ್ಣಿನ ನೀರೆಲ್ಲ ಬತ್ತಿಹೋಗಿತ್ತು. ಎವೆಗಳು ತುಸು ಒದ್ದೆ ಆದವು. ಮಾಸಿದ ಸೆರಗಿನಿಂದ ಅದನ್ನು ಆ ಮುದುಕಿ ಉದ್ದಲು ತೊಡಗಿದಳು.

ಭಕಡಿ ಹೊರಗೆ ಜಗಲಿಯಲ್ಲಿ ಕೂತಿದ್ದ. ಆತ ಕಳವಳಪಟ್ಟು ಕರುಳೊಳಗೆ ಹಿಚುಕಿದಂತೆ ಆಗಿ ಒಳಗೆ ಹೊಕ್ಕನು, "ಅಣ್ಣಾ ಅಣ್ಣಾ" ಎಂದು ಕೂಗುತ್ತ ಇದೇನು ಅವನಿಗೆ ಹುಚ್ಚೇ ಹಿಡಿಯಿತೇ? ರಾತ್ರಿ ಆಯಿತು. ಭಕಡಿ ಊಟಕ್ಕೆ ಕೂತ. ಕಣ್ಣಿನ ಧಾರೆಯಿಂದ ಬಟ್ಟಲ ಅನ್ನವೆಲ್ಲ ತೊಯ್ಯಿತು. ಅದರ ಕಡೆಗೆ ಅವನ ಲಕ್ಷ್ಯವೇ ಇದ್ದಿಲ್ಲ. ಕೋಣೆಯಲ್ಲಿ ಮಲಗಿದ್ದನು. ನಡುರಾತ್ರಿ ಎದ್ದು ಕೂತ—"ಅಣ್ಣಾ, ಅಣ್ಣಾ" ಎಂದು ಕೂಗುತ್ತ.

ನೇತ್ರಮಣಿ ಏನೇನೋ ಬಡಬಡಿಸುತ್ತಿದ್ದಳು. ಏನೇನೋ ಕೇಳುತ್ತಿದ್ದಳು, ಹೇಳುತ್ತಿದ್ದಳು. ಭಕಡಿ "ಹೌದು ಹೌದು" ಎಂದೆಲ್ಲ ಅದಕ್ಕೆ ಉತ್ತರ ಕೊಡುತ್ತಿದ್ದ. ಆದರೆ ಅವನ ಬುದ್ಧಿ ಸರಿಕೆಲಸ ಮಾಡುತ್ತಿದ್ದಿಲ್ಲ. ಮನಸ್ಸು ಕಂಗೆಟ್ಟಿತ್ತು.

ಮರುದಿನ ಮುಂಜಾವಿಗೇ ನೇತ್ರಮಣಿ ಎದ್ದು ನೋಡಿದಳು. ಭಕಡಿ ಮನೆಯಲ್ಲಿ ಇಲ್ಲ. ಮಧ್ಯಾಹ್ನವಾಯಿತು. ಸಂಜೆ ಆಯಿತು. ಆದರೆ ಆತ ಹೋದನೆಲ್ಲಿ? ನಾಲ್ಕು ಕಡೆಗೆ ಮಂದಿ ಓಡಿದರು. ಹುಡುಕಾಡಿದರು. ಎಲ್ಲೂ ಪತ್ತೆ ಹತ್ತಲಿಲ್ಲ.

ಆತ ಮತ್ತೆ ಎಲ್ಲೂ ಹೋಗಿದ್ದಿಲ್ಲ. ಹರಿಪುರದ ಗೌರಾಂಗ ಸೇಣನ ಮನೆಯ ಮುಂದೆ ಹೋಗಿ ಕೂತಿದ್ದ. ಚಿಗಪ್ಪನನ್ನು ಕಂಡಕೂಡಲೇ ದಾಮ ಒಳಮನೆಗೆ ಓಡಿ ಹೋದನು. ಮತ್ತು ಕೂಗಹತ್ತಿದನು—"ಅಮ್ಮಾ ಅಮ್ಮಾ ಕಾಕಾ ಬಂದಿದ್ದಾನೆ."

ಬರಜೂ ಹೊರಗೆ ಬಂದು ನೋಡಿದ. ಭಕಡಿ ತಲೆತಗ್ಗಿಸಿಕೊಂಡಿದ್ದ.

"ಏನೋ ಇಲ್ಲಿ ಯಾಕೆ ಹೀಗೆ ಕೂತಿರುವಿ? ಬಾ ಒಳಗೆ." ಭಕಡಿಯನ್ನು ಬರಜೂ ಒಳಗೆ ಕರೆದೊಯ್ದನು.

ಮನೆಯೊಳಗೆ ಹೋದಕೂಡಲೇ ಬರಜೂ ಕೇಳಿದ. "ಏಕೆ? ನೀನು ಇಲ್ಲಿ ಹೇಗೆ?"

ಭಕಡಿ ಮೆಲ್ಲಮೆಲ್ಲಗೆ ಅಂದ : "ನಾನೂ ನಿನ್ನ ಜತೆಗೆ ಬರುತ್ತೇನೆ."

"ಎಲ್ಲಿಗೆ?" ಬರಜೂ ಕೇಳಿದ.

"ನೀನು ಎಲ್ಲಿ ಹೋಗುವೆಯೋ ಅಲ್ಲಿಗೆ." ಭಕಡಿಯ ಕಣ್ಣಿಂದ ಟಪಟಪ ಹನಿಗಳು ತೊಟಕ ಹತ್ತಿದವು. "ಛೀ, ಛೀ. ಹೇಡಿಯಲ್ಲೋ ನೀನು ಹೆಣ್ಣು ಹೇಡಿ!"

~*~*~*~

ISBN : 978-93-6183-778-4
9 789361 837784
₹180

ಸಾಹಿತ್ಯ ಅಕಾದೆಮಿ